# ಕರ್ನಾಟಕ ವಿಧಾನ ಪರಿಷತ್ತು

(156ನೇ ಅಧಿವೇಶನ)

ಮಂಗಳವಾರ, 19ನೇ ಆಗಸ್ಟ್ 2025

## ವಿಷಯಾನುಕ್ರಮಣಿಕೆ (INDEX)


01. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

907 – ಕೊಪ್ಪಳ ಜಿಲ್ಲೆಯಲ್ಲಿ 2023-24ನೇ ಸಾಲಿನಿಂದ ಇಲ್ಲಿಯವರೆಗಿನ ಅಕ್ರಮ ಮರಳು ಸಾಗಾಣಿಕೆ ಕುರಿತು.
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)(ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ)

923 – ಹೊಸ ಸಕ್ಕರೆ ಕಾರ್ಖಾನೆ ಕುರಿತು
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಶಿವಾನಂದ ಎಸ್.ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

1207 – ಕೃಷಿ ವಿವಿಗಳ ಮರು ಸಂಘಟಿಸುವ ಕುರಿತು
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

800 – ಕಲಬುರ್ಗಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ
- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಶಿವಾನಂದ ಎಸ್.ಪಾಟೀಲ್(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

798 – ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಲ್ಯಾಟರೈಟ್ ಗಣಿ ಗುತ್ತಿಗೆಗಳ ಬಗ್ಗೆ
- ಶ್ರೀ ವೈ.ಎಂ.ಸತೀಶ್
- ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)

**846 – ಮೈಷುಗರ್ ಕಾರ್ಖಾನೆಯಲ್ಲಿ ಎಥನಾಲ್ ಘಟಕ ಸ್ಥಾಪನೆ ಕುರಿತು**

- ಶ್ರೀ ಮಧು ಜಿ.ಮಾದೇಗೌಡ
- ಶ್ರೀ ಶಿವಾನಂದ ಎಸ್.ಪಾಟೀಲ (ಜವಳಿ, ಕಬ್ಬು, ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

**826 – ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವ ಬಗ್ಗೆ**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**872 – ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸುವ ಕುರಿತು**

- ಶ್ರೀ ಶರಣಗೌಡ ಬಯ್ಯಾಪುರ
- ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**808 – ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಕುರಿತು.**

- ಶ್ರೀ ಭೀಮರಾವ್ ಬಸವರಾಜ್ ಪಾಟೀಲ್
- ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**916 – ನಗರ ಯೋಜನೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಸ್ಥಳ ನಿಯೋಜನೆ ಕುರಿತು**

- ಶ್ರೀ ಟಿ.ಎ. ಶರವಣ
- ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**02, ನಿಯಮ 58 ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು**

**ಅ) ಭಾಷಾ ಅಲ್ಪಸಂಖ್ಯಾತರ ಮೀಸಲು ಕೋಟಾದಡಿ ತುಳು ಭಾಷಾ ಮೆರಿಟ್ ವಿದ್ಯಾರ್ಥಿಗಳ ನೇರವಿಗೆ ಧಾವಿಸುವ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಆ) ಶಿವಮೊಗ್ಗದ ಶರಾವತಿ ಕಣಿವೆಯಲ್ಲಿ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಪಂಪ್ ಸ್ಟೋರೇಜ್ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗಲಿದ್ದು ಪರ್ಯಾಯ ಮಾರ್ಗವನ್ನು ಅನ್ವೇಷಿಸುವ ಕುರಿತು.**

- ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಇ) ರಕ್ತದಾನ ಸಂದರ್ಭದಲ್ಲಿ ರಕ್ತದ ಗುಣಮಟ್ಟದ ಪರೀಕ್ಷೆ ಮತ್ತು ಸೋಂಕುಗಳ ಪತ್ತೆ ಹಚ್ಚಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ಕುರಿತು**

- ಡಾ: ಧನಂಜಯ ಸರ್ಜಿ
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಈ) ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್(ಇವಿಎಂ) ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಮತಕಳವು ಮಾಡಲಾಗುತ್ತಿದೆ ಎನ್ನುವ ಬಗ್ಗೆ.**

– ಶ್ರೀ ಬಿ.ಕೆ.ಹರಪ್ರಸಾದ್
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಉ ರಾಜ್ಯದಲ್ಲಿ ಅಪಹರಣಕ್ಕೆ ಹಾಗೂ ನಾಪತ್ತೆಗೆ ಒಳಗಾಗುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ಕುರಿತು.**

– ಶ್ರೀ ಸಿ.ಟಿ.ರವಿ
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಊ) ರಾಜ್ಯದ ಯುವಜನತೆ ವಿದೇಶಿ ಮದ್ಯ ಮತ್ತು ತಂಬಾಕು ಸೇವನೆಯ ದುಶ್ಚಟಕ್ಕೆ ಬಲಿಯಾಗುವುದನ್ನು ತಡೆಗಟ್ಟಿ ನಶೆ ಮುಕ್ತ ಕರ್ನಾಟಕಕ್ಕೆ ಒತ್ತು ನೀಡುವ ಬಗ್ಗೆ.**

– ಶ್ರೀ ತಿಪ್ಪಣ್ಣಪ್ಪ ಕಮಕನೂರ
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಋ) ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವ ಬಗ್ಗೆ.**

– ಶ್ರೀ ಕೇಶವ ಪ್ರಸಾದ್ ಎಸ್.
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಎ) ಸಿಂಧನೂರ ತಾಲ್ಲೂಕಿನ ಚಿರತನಾಳ ಗ್ರಾಮದ ಹತ್ತಿರದ ಕಿರುಸೇತುವೆ ಕಾಮಗಾರಿ ವಿಳಂಬದ ಬಗ್ಗೆ.**

– ಶ್ರೀ ಬಸನಗೌಡ ಬಾದರ್ಲಿ
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಏ) ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಅಧಿಕಾರಿ, ಸಿಬ್ಬಂದಿಗಳ ಹುದ್ದೆ ಖಾಲಿ ಇರುವುದರಿಂದ ನಿರ್ವಹಣೆ ಕೊರತೆ ಹೆಚ್ಚಾಗಿದ್ದು ಖಾಲಿ ಇರುವ ಹುದ್ದೆಗಳನ್ನು ತುಂಬುವ ಕುರಿತು.**

– ಶ್ರೀ ರಾಮೋಜಿಗೌಡ
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಐ) ಬಿ.ಬಿ.ಎಂ.ಪಿ ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 81ರಷ್ಟು ಬೋಧಕರ ಹುದ್ದೆ ಖಾಲಿ ಇರುವ ಕುರಿತು.**

– ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**03. ವರದಿಗಳನ್ನೊಪ್ಪಿಸುವುದು**

**ಅ) ಕರ್ನಾಟಕ ವಿಧಾನ ಪರಿಷತ್ತಿನ ಭರವಸೆ ಸಮಿತಿಯ 50ನೇ ವರದಿ**
**ಆ) ಕರ್ನಾಟ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 43ನೇ ವರದಿ**
**ಇ) ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 40ನೇ ವರದಿ**
**ಈ) ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 53ನೇ ವರದಿ**

**04. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**05. ಗಮನ ಸೆಳೆಯುವ ಸೂಚನೆ**

**ಅ) ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಿ ಅರ್ಹತೆ ಹೊಂದಿದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಉಂಟಾಗಿರುವ ಕುರಿತು**

- ಡಾ: ಉಮಾಶ್ರೀ
- ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

**06. ವಿಶೇಷ ಸದನ ಸಮಿತಿ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶ ವಿಸ್ತರಿಸುವುದು.**

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

**07. ಗಮನ ಸೆಳೆಯುವ ಸೂಚನೆಗಳು (ಮುಂದುವರೆದಿದ್ದು)**

**ಆ) 1995ರ ನಂತರದಲ್ಲಿ ಸ್ಥಾಪನೆಯಾಗಿರುವ ಕನ್ನಡ ಮಾಧ್ಯಮ ಖಾಸಗಿ ಶಾಲಾ ಕಾಲೇಜುಗಳನ್ನು ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ.**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**08. ಅಭಿನಂದನೆ**

**ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರು 45 ವರ್ಷಗಳ ಸುಧೀರ್ಘ ಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುವ ಕುರಿತು**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಛಲವಾದಿ ಟಿ. ನಾರಾ;ಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್

- ಶ್ರೀ ಐವನ್ ಡಿ'ಸೋಜಾ
- ಶ್ರೀ ಡಿ.ಟಿ. ಶ್ರೀನಿವಾಸ್
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಪುಟ್ಟಣ್ಣ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು)
- ಡಾ॥ ಧನಂಜಯ ಸರ್ಜಿ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ನಸೀರ್ ಅಹ್ಮದ್
- ಶ್ರೀಮತಿ ಬಲ್ಕೀಸ್ ಭಾನು
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಟಿ.ಎ. ಶರವಣ
- ಶ್ರೀ ಕೆ.ಎಸ್.ನವೀನ್
- ಶ್ರೀ ಕಿಶೋರ್ ಕುಮಾರ್ ಪುತ್ತೂರು

**09. ಪ್ರಕಟಣೆಗಳು**

**ಅ) ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶ್ವಪರಂಪರೆ ಹಿರೇಬೆಣಕಲ್ ಪ್ರಾಗೈತಿಹಾಸಿಕ ಛಾಯಾ ಚಿತ್ರಗಳ ಪ್ರದರ್ಶನವನ್ನು ಮುಖ್ಯಮಂತ್ರಿಗಳಿಂದ ಉದ್ಘಾಟನೆ ಹಾಗೂ ಎಲ್ಲಾ ಸದಸ್ಯರುಗಳಿಗೂ ಆಹ್ವಾನದ ಬಗ್ಗೆ.**

**ಆ) ವಿಧಾನಸಭೆಯಿಂದ ಅಂಗೀಕೃತವಾದ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ.**

**10. ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರು 45 ವರ್ಷಗಳ ಸುಧೀರ್ಘ ಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುವ ಕುರಿತು ಮುಂದುವರೆದ ಅಭಿನಂದನಾ ಪ್ರಸ್ತಾವ.**

- ಡಾ: ಎಂ.ಜಿ.ಮುಳೆ
- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
- ಶ್ರೀ ಎಂ. ನಾಗರಾಜು
- ಡಾ॥ ಎಂ.ಆರ್.ಸೀತಾರಾಂ

- ಡಾ॥ ಡಿ.ತಿಮ್ಮಯ್ಯ
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀಮತಿ ಭಾರತಿಶೆಟ್ಟಿ
- ಶ್ರೀ ಎನ್.ರವಿಕುಮಾರ್
- ಶ್ರೀ ಸಿ.ಟಿ.ರವಿ
- ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಆರ್.ಬಿ.ತಿಮ್ಮಾಪೂರ (ಅಬಕಾರಿ ಸಚಿವರು)
- ಶ್ರೀ ಎನ್.ಚಲುವರಾಯಸ್ವಾಮಿ(ಕೃಷಿ ಸಚಿವರು)
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**11. ಕಾರ್ಯದರ್ಶಿಯವರ ವರದಿ**

ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳ ಮಂಡನೆ

**12. ಗಮನ ಸೆಳೆಯುವ ಸೂಚನೆಗಳು (ಮುಂದುವರೆದದ್ದು)**

**ಇ) ಬೆಂಗಳೂರಿನಲ್ಲಿ ಸರ್ಕಾರದಿಂದ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಚಾಲುಕ್ಯ ವೃತ್ತದಲ್ಲಿರುವ ಜಗಜ್ಯೋತಿ ಬಸವೇಶ್ವರ ಪ್ರತಿಮೆಯ ಪಕ್ಕದಲ್ಲಿರುವ ಜವಾಹರಲಾಲ್ ನೆಹರೂ ಪ್ಲಾನಿಟೋರಿಯಂಗೆ ಹೊಂದಿಕೊಂಡಿರುವ ಜಾಗದಲ್ಲಿ ಸ್ಥಾಪಿಸುವ ಬಗ್ಗೆ**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**13. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಪರಿಶಿಷ್ಟ ಜಾತಿ ಅಡಿಯಲ್ಲಿ ಬರುವ ವಿವಿಧ ಸಮುದಾಯಗಳಿಗೆ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸುವ ವಿಚಾರದ ಕುರಿತು.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಸಚೇತಕರು)
- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಆರ್.ಬಿ.ತಿಮ್ಮಾಪೂರ್ (ಅಬಕಾರಿ ಸಚಿವರು)
- ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)

– – –

(766) 19.08.2025/10.10/ಎಸ್‌ಕೆ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

# ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, ದಿನಾಂಕ 19ನೇ ಆಗಸ್ಟ್ 2025**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಾದರು.**

## 01. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಪ್ರಶ್ನೆ ಸಂಖ್ಯೆ: 907

**ಕೊಪ್ಪಳ ಜಿಲ್ಲೆಯಲ್ಲಿ 2023-24ನೇ ಸಾಲಿನಿಂದ ಇಲ್ಲಿಯವರೆಗಿನ ಅಕ್ರಮ ಮರಳು ಸಾಗಾಣಿಕೆ ಕುರಿತು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24 ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳು ವರದಿಯಾಗಿವೆ; ಅವುಗಳಲ್ಲಿ ಎಷ್ಟು ಜನರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ; (ವಿವರಗಳನ್ನು ಒದಗಿಸುವುದು) | ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ 2023-2024 ನೇ ಸಾಲಿನಿಂದ ಈವರೆಗೆ ಅನಧಿಕೃತ ಮರಳು ಸಾಗಾಣಿಕೆಯಿಂದ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರ ಈ ಕೆಳಕಂಡಂತಿವೆ. |
| ಆ) | ಅಕ್ರಮ ಮರಳು ಸಾಗಾಣಿಕೆ ಯಲ್ಲಿ ಆರೋಪಿ ಯಾರು ಎಂಬುದು ಅರಿಯದೇ ಎಷ್ಟು ಪ್ರಕರಣಗಳು ದಾಖಲಾಗಿವೆ; ಆರೋಪಿಗಳನ್ನು ಹುಡುಕಲು ಯಾವ ಕ್ರಮ ಕೈಗೊಳ್ಳಲಾಗಿದೆ: (ವಿವರಗಳನ್ನು ಒದಗಿಸುವುದು) | ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಯ ಮಾಹಿತಿಯಂತೆ 2023 ರಿಂದ 2025ರ ಜುಲೈ ಅಂತ್ಯದವರೆಗೆ ಅಕ್ರಮ ಮರಳು ಸಾಗಾಣಿಕೆ ಯಲ್ಲಿ ಆರೋಪಿ ಯಾರು ಎಂಬುದು ಅರಿಯದೇ ಒಟ್ಟು 75 ಪ್ರಕರಣಗಳನ್ನು ದಾಖಲಿಸಲಾಗಿತ್ತು. ತದನಂತರ, ಸದರಿ ಪ್ರಕರಣಗಳಲ್ಲಿ ತನಿಖೆ ಕೈಗೊಂಡು ಆರೋಪಿತರನ್ನು ಪತ್ತೆ ಹಚ್ಚಲಾಗಿದ್ದು, ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುತ್ತವೆ. ವರ್ಷವಾರು ವಿವರಗಳು ಈ ಕೆಳಕಂಡಂತಿದೆ. |

| ಕ್ರ.ಸಂ | ವರ್ಷ | ಪತ್ತೆ ಹಚ್ಚಿರುವ ಪ್ರಕರಣಗಳ ಸಂಖ್ಯೆ | ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಲಾದ ದಂಡದ ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| 1 | 2023-24 | 348 | 55 | 50.86 |
| 2 | 2024-25 | 149 | 35 | 31.51 |
| 3 | 2025-26 | 92 | 23 | 28.03 |

| ವರ್ಷ | ಆರೋಪಿತರು ನಾಪತ್ತೆ ಯಡಿ ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ಪ್ರಕರಣಗಳ ಪ್ರಸ್ತುತ ಹಂತ |
|---|---|---|---|
| 2023 | 41 | 41 | ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ |
| 2024 | 23 | 23 | |
| 2025 ರ ಜುಲೈ ಅಂತ್ಯಕ್ಕೆ | 11 | 11 | |
| ಒಟ್ಟು | 75 | 75 | |

<table>
<tr>
<td>ಇ)</td>
<td>2023-24 ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಷ್ಟು ಅಕ್ರಮ ಮರಳು ಜಪ್ತಿ ಮಾಡಲಾಗಿರುತ್ತದೆ; ಅದರ ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)</td>
<td>2023-2024 ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಅನಧಿಕೃತ ಮರಳು ದಾಸ್ತಾನಿಗೆ ಸಂಬಂಧಿಸಿದಂತೆ ಜಪ್ತಿಪಡಿಸಿ ಕೊಂಡಿರುವ ಮರಳಿನ ಪ್ರಮಾಣ, ಸಂಗ್ರಹಿಸಲಾಗಿರುವ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ ಸಂ</th><th>ವರ್ಷ</th><th>ಪತ್ತೆ ಹಚ್ಚಿದ ಜಪ್ತು ಪ್ರಕರಣಗಳ ಸಂಖ್ಯೆ</th><th>ಜಪ್ತಿಪಡಿಸಿ ಕೊಂಡ ಮರಳಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ)</th><th>ದಾಖಲಿಸಿರುವ ಪ್ರಕರಣಗಳ ಸಂಖ್ಯೆ</th><th>ಜಪ್ತಿಪಡಿಸಿ ಕೊಂಡ ಮರಳಿನಿಂದ ಸಂಗ್ರಹಿಸಿದ ಮೊತ್ತ (₹ಲಕ್ಷಗಳಲ್ಲಿ )</th></tr>
<tr><td>1</td><td>2023-24</td><td>28</td><td>16189</td><td>28</td><td>37.82</td></tr>
<tr><td>2</td><td>2024-25</td><td>4</td><td>343</td><td>0</td><td>2.41</td></tr>
<tr><td>3</td><td>2025-26</td><td>0</td><td>0</td><td>0</td><td>0</td></tr>
</table>
ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
<tr>
<td>ಈ)</td>
<td>ಅಕ್ರಮ ಮರಳು ಸಾಗಾಣಿಕೆಯಲ್ಲಿ ಪಾಲ್ಗೊಂಡವರ ವಿರುದ್ಧ ಕೈಗೊಂಡಿರುವ ಕ್ರಮಗಳು ಯಾವುವು; (ವಿವರಗಳನ್ನು ಒದಗಿಸುವುದು)</td>
<td>ಅಕ್ರಮ ಮರಳು ಸಾಗಾಣಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳಲ್ಲಿ ದಂಡವನ್ನು ವಿಧಿಸಿ ಸಂಗ್ರಹಿಸಲಾಗಿರುತ್ತದೆ. ದಂಡವನ್ನು ಪಾವತಿಸದೇ ಇರುವ ಪ್ರಕರಣಗಳಲ್ಲಿ ಸಂಬಂಧಪಟ್ಟ ನ್ಯಾಯಾಲಯ / ಪೊಲೀಸ್ ಠಾಣೆಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ವಿವರಗಳನ್ನು ಮೇಲಿನ ಉಪ ಪ್ರಶ್ನೆ "ಅ" ರ ಉತ್ತರದಲ್ಲಿ ನೀಡಲಾಗಿದೆ.</td>
</tr>
<tr>
<td>ಉ)</td>
<td>ಅಕ್ರಮ ಮರಳು ಸಾಗಾಣಿಕೆಯನ್ನು ತಡೆಯಲು ಯಾವ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು)</td>
<td>ಅಕ್ರಮ ಮರಳು ಸಾಗಾಣಿಕೆ/ ಗಣಿಗಾರಿಕೆಗಳನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.<br><br>1. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ, ಮತ್ತು ಉಪವಿಭಾಗಾಧಿಕಾರಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಿ ಸದರಿ ಸಮಿತಿಯಿಂದ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮವಹಿಸಲಾಗುತ್ತಿದೆ.<br><br>2. ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22 ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ 31-Rರ ಉಪ ನಿಯಮ 12 ರಂತೆ ಕ್ರಮ ವಹಿಸಲು ಅಧಿಕಾರ ಪ್ರತ್ಯೋಜಿಸಲಾಗಿರುತ್ತದೆ.</td>
</tr>
</table>

| | | |
|---|---|---|
| | | 3. ಅದರಂತೆ, ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಮರಳು ಸಮಿತಿಯಿಂದ ತಾಲ್ಲೂಕುವಾರು ಚಾಲಿತದಳ ತಂಡವನ್ನು ರಚಿಸಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ. |
| | | 4. Integrated Lease Management System (ILMS) version-II ಜಾರಿಗೊಳಿಸಲಾಗುತ್ತಿದ್ದು, ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನ ಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗುತ್ತಿದೆ. |
| | | 5. ಅನಧಿಕೃತ ಖನಿಜ ಸಾಗಾಣಿಕೆಯನ್ನು ಪತ್ತೆ ಹಚ್ಚಲು ಖನಿಜ ರವಾನೆ ಪರವಾನಿಗೆ ಕಡ್ಡಾಯಗೊಳಿಸಲಾಗಿದ್ದು, ಖನಿಜ ರವಾನೆ ಪರವಾನಿಗೆಗಳನ್ನು ವಿಶೇಷ ರಕ್ಷಣಾತ್ಮಕ ಹಾಳೆಯಲ್ಲಿ ವಿತರಿಸಲಾಗುತ್ತಿದೆ |
| | | 6. ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಖನಿಜ ರಕ್ಷಣಾ ಪಡೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. |
| | | 7. ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು One State One GPS ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಖನಿಜ ಸಾಗಾಣಿಕಾ ವಾಹನಗಳು GPS ಅಳವಡಿಸಿಕೊಂಡು ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಸಾಗಾಣಿಕೆ ಮಾಡುವುದನ್ನು ಕಡ್ಡಾಯಗೊಳಿಸಿದೆ. |
| | | 8. ಉನ್ನತ ಶ್ರೇಣಿಯ ಹಳ್ಳ/ ನದಿಗಳ ಪಾತ್ರಗಳಲ್ಲಿ ಮರಳು ಬ್ಲಾಕ್ ಗಳನ್ನು ಗುರುತಿಸಿ ಟೆಂಡರ್ ಮೂಲಕ ವಿಲೇಪಡಿಸಲು ಕ್ರಮ ವಹಿಸಲಾಗಿರುತ್ತದೆ. |

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ 2023-24 ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳು ವರದಿಯಾಗಿವೆ ಎಂಬ ಬಗ್ಗೆ ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಸಂಗ್ರಹಿಸಲಾದಂತಹ ದಂಡದ ಮೊತ್ತವನ್ನು ಕೂಡ ಹೇಳಿದ್ದಾರೆ. ಈಗ ನಡೆಯುವಂತಹ ಅಕ್ರಮ ಮರಳು ಗಣಿಗಾರಿಕೆಗೆ ದಂಡವನ್ನು ಸಂಗ್ರಹ ಮಾಡಬೇಕಾದರೆ, ಕಡಿಮೆ ತೋರಿಸಿದ್ದಾರೆ ಎಂಬ ಭಾವನೆ ನನಗೆ ಬರುತ್ತದೆ. ಏಕೆಂದರೆ, ಇಲ್ಲಿ ಪ್ರತಿಯೊಂದು ಗಣಿಗಾರಿಕೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅಕ್ರಮವಾಗಿ ಒಬ್ಬ ವ್ಯಕ್ತಿ ಒಂದು

ಪರವಾನಿಗೆಯನ್ನು ತೆಗೆದುಕೊಂಡ ಮೇಲೆ ಒಂದು ಬಾರಿ ಸಾಗಾಣಿಕೆ ಮಾಡುವುದಿಲ್ಲ. ಅವರು ಹಲವಾರು ಬಾರಿ ಟ್ರಿಪ್‌ಗಳನ್ನು ಹಾಗೆಯೇ ಒಡೆಯುತ್ತಿರುತ್ತಾರೆ. ಆದರೆ ಸಿಕ್ಕಿ ಬೀಳುವಂತಹ ಪರಿಸ್ಥಿತಿ ಬಂದಾಗ, ಏನಾಗುತ್ತದೆ ಎಂದರೆ, ಒಳಗೆಲ್ಲ ಬಹಳ ಕೈಚಳಕಗಳು ನಡೆಯುತ್ತಿರುತ್ತವೆ. ಕಳೆದ ದಿನಗಳಲ್ಲಿ ನಾವು ಪ್ರತಿಭಟನೆ ಕೂಡ ಮಾಡಿದ್ದೇವೆ. ಅಲ್ಲಿ ಹೋಗಿ ನೋಡಿದಾಗ, ನಿಜವಾಗಿಯೂ ಇಲ್ಲಿ ಇರುವಂತಹ ಹೋಲಿಕೆ ಮತ್ತು ಅಲ್ಲಿ ನಡೆಯುತ್ತಿರುವಂತಹ ಹೋಲಿಕೆ ಬೇರೆನೇ ಇತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅಕ್ರಮ ಮರಳು ಗಣಿಗಾರಿಕೆಯಿಂದಾಗಿ ಒಂದು ಕಾಲದಲ್ಲಿ ರೂ.500 ರಿಂದ ರೂ.1,000 ಗೆ ಸಿಗುವಂತಹ ಮರಳು ಇವತ್ತು ರೂ.5,000 ಗಳವರೆಗೂ ದಾಟಿ ಹೋಗಿ ಆಗಿದೆ. ದೊಡ್ಡ ಲಾರಿ ಟಿಪ್ಪರ್‌ಗಳಲ್ಲಿ ಮರಳನ್ನು ತೆಗೆದುಕೊಂಡು ಬೇರೆ ಕಡೆಗಳಲ್ಲಿ ಸಾಗಿಸುವಂತಹ ಕೆಲಸವಾಗುತ್ತಿದೆ. ಹೀರೆಹಳ್ಳ ಪಕ್ಕದಲ್ಲಿಯೇ ಇದೆ. ಅಲ್ಲಿ ನಡೆಯುವಂತಹ ಮರಳು ಗಣಿಗಾರಿಕೆಯನ್ನು ನೋಡಿದಾಗ, ಕಳ್ಳತನದಿಂದ ಮಾಡಿದ ಮರಳನ್ನು ಒಂದು ಸುತ್ತ ಜಾಲಿಯಿದ್ದು, ಅದರ ನಡುವೆ ಅದನ್ನು ಸಂಗ್ರಹ ಮಾಡುತ್ತಾರೆ. ಪರವಾನಿಗೆ ತೆಗೆದುಕೊಂಡಿದ್ದು ಒಂದಾದರೆ, ಒಡೆಯುವಂತಹ ಟ್ರಿಪ್‌ಗಳು ಜಾಸ್ತಿ ಇರುತ್ತವೆ. ಹೀಗಾಗಿ ನಾವು ಪ್ರತಿಭಟನೆ ಮಾಡಿದಾಗ, royalty ವಿಚಾರವಾಗಿ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತದೆ ಎಂದು ತಿಳಿದುಕೊಂಡು ನಾವು ಮೊನ್ನೆ ಮಾನ್ಯ ಆಯುಕ್ತರು ಮತ್ತು ಎಸ್.ಪಿ. ಅವರ ಗಮನಕ್ಕೆ ತೆಗೆದುಕೊಂಡು ಹೋದಾಗ, ಇದು ಸಂಪೂರ್ಣ ಕಡಿಮೆಯಾಗಿದೆ. ಆದರೆ ಸರ್ಕಾರಕ್ಕೆ ಬರುವಂತಹ ತೆರಿಗೆಗೆ ಮಾತ್ರ ಬಹಳ ಹೊಡೆತ ಬೀಳುತ್ತಿದೆ. ಅಕ್ರಮ ಮರಳು ಸಾಗಾಣಿಕೆಯಲ್ಲಿ ಆರೋಪಿ ಯಾರು ಎಂಬುದು ಅರಿಯದೇ ಎಷ್ಟು ಪ್ರಕರಣಗಳು ದಾಖಲಾಗಿವೆ; ಇದು ಸಂಪೂರ್ಣವಾಗಿ ನನಗೆ ಅಯೋಮಯ ಎನಿಸುತ್ತದೆ. ಏಕೆಂದರೆ, ಮರಳನ್ನು ಅಕ್ರಮವಾಗಿ ಯಾವ ವ್ಯಕ್ತಿಗಳು ಸಾಗಾಣಿಕೆ ಮಾಡುತ್ತಾರೆ ಎಂಬುದು ಗೊತ್ತಿರುತ್ತದೆ. ಅವರು ಪರವಾನಿಗೆ ತೆಗೆದುಕೊಂಡಿರುತ್ತಾರೆ, ಅವರು ಕೂಡ ಇದ್ದಾರೆ. ಈ ವ್ಯಕ್ತಿಗಳು ಯಾರು ಎಂಬುದು ಜಗಜ್ಜಾಹೀರು ಆಗಿರುತ್ತದೆ. ಪೊಲೀಸ್ ಇಲಾಖೆಗೂ ಮತ್ತು ಅಲ್ಲಿರುವಂತಹ ಎಲ್ಲಾ ನಾಯಕರಿಗೂ ಯಾರು ಎಂಬುದು ಗೊತ್ತಿದೆ. ನನ್ನ ಮುಂದಿನ ಪ್ರಶ್ನೆ ಏನೆಂದರೆ, 2023-24ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಷ್ಟು ಅಕ್ರಮ ಮರಳು ಜಪ್ತಿ ಮಾಡಲಾಗಿರುತ್ತದೆ; ...

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕ್‌ರವರೇ, ತಾವು ಪ್ರಶ್ನೆಯನ್ನು ಓದಬೇಡಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಮಾತ್ರ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕ್‌ರವರೇ, ತಾವೇ ಪ್ರಶ್ನೆಯನ್ನು ಕೊಟ್ಟಿದ್ದೀರಾ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಆಯಿತು. 2023-24ನೇ ಸಾಲಿನಲ್ಲಿ ಪತ್ತೆ ಹಚ್ಚಿ ಜಪ್ತು ಪ್ರಕರಣಗಳ ಸಂಖ್ಯೆ 28, ಜಪ್ತಿ ಮಾಡಿ ವಶ ಪಡಿಸಿಕೊಂಡ ಮರಳಿನ ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ) 16189, ದಾಖಲಿಸಿರುವ ಪ್ರಕರಣಗಳ ಸಂಖ್ಯೆ 28, ಜಪ್ತಿ ಮಾಡಿ ವಶ ಪಡಿಸಿಕೊಂಡ ಮರಳಿನಿಂದ ಸಂಗ್ರಹಿಸಿದ ಮೊತ್ತ (ಲಕ್ಷಗಳಲ್ಲಿ) 37.82 ಎಂಬುದು ಉತ್ತರದಲ್ಲಿ ಇದೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಹಾಗೂ ಅಲ್ಲಿನ

ವಾಸ್ತವ ಸಂಗತಿ ಒಂದಕ್ಕೊಂದು tally ಆಗುತ್ತಿಲ್ಲ. ಇಲ್ಲಿ ಅಂಕಿ-ಸಂಖ್ಯೆಗಳು ಇವೆ. ಆದರೆ ಅಲ್ಲಿ ಆಗುವಂತಹ ಮರಳು ಗಣಿಗಾರಿಕೆ ಅಕ್ರಮದಲ್ಲಿ ಹೊಂದಾಣಿಕೆಯಾಗದಿರುವಂತಹದ್ದು ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

(ಮುಂದು)

(767) 19.08.2025 10.20 TCH-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು) (ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕೆಲವೊಮ್ಮೆ ಸ್ಥಳೀಯವಾಗಿ ದಂಡ ವಿಧಿಸತಕ್ಕಂಥದ್ದು ಸ್ವಲ್ಪ ಕಡಿಮೆಯಾಗುತ್ತಿದೆ. ಕೆಲವರು ಒಂದು ಲೋಡ್ ಲೆಕ್ಕ ತೆಗೆದುಕೊಂಡು 4 ಲೋಡ್ ಮರಳು ಸಾಗಿಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಅದಕ್ಕೆ direction ಕೊಟ್ಟಿದ್ದೇವೆ. ಮಾನ್ಯ ಸಚಿವರು ಹೇಳುವುದಕ್ಕೆ ಬಂದಿಲ್ಲ. ಆದರೆ ಈ ವಿಚಾರಲ್ಲಿ meeting ಮಾಡಿ ಇಲಾಖೆಯ Secretary ಹಾಗೂ Directors ಗೆ State ನಿಂದ squad ಅನ್ನು ಕಳುಹಿಸಲಾಗುವುದು. ಮಾನ್ಯ ಸದಸ್ಯರೆಲ್ಲಾ ಫೋನ್ ಮಾಡಿದ ನಂತರ ಅಲ್ಲಿ ಸ್ವಲ್ಪ ಬಿಗಿ ಮಾಡುವಂತಹ ಪ್ರಯತ್ನ ಮಾಡಿದ್ದಾರೆ. ಇನ್ನೂ ಬಿಗಿ ಮಾಡಿ ಯಾವುದೇ ದಂಡವನ್ನು ಸರ್ಕಾರಕ್ಕೆ loss ಆಗದಂತೆ ಕಟ್ಟಿಕೊಳ್ಳುವಂಥ ಪ್ರಯತ್ನ ಮಾಡುತ್ತೇವೆ. ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ 75. ಅಂದರೆ ಸಿಕ್ಕಿಹಾಕಿಕೊಳ್ಳುತ್ತೇವೆಂದು ಲಾರಿಗಳನ್ನೆಲ್ಲಾ ಬಿಟ್ಟು ಓಡಿ ಹೋಗಿಬಿಡುವುದು. ಡ್ರೈವರ್ ಓಡಿ ಹೋಗುವುದು, ಈ ರೀತಿಯ ಕೇಸ್‌ಗಳಿವೆ. ಅಷ್ಟಕ್ಕೂ ಕೇಸ್ ಹಾಕಲಾಗಿದೆ. ಅದು ಆದನಂತರ ಯಾರದ್ದು ಏನು ಎಂದು ಗೊತ್ತಾಗುತ್ತದೆ. ಅದಕ್ಕೋಸ್ಕರವೇ ಕೇಸ್ ಹಾಕಿರುವುದು. ಯಾರ್ಯಾರು ಲಾರಿಗಳನ್ನು ದಾರಿಯಲ್ಲೇ ಬಿಟ್ಟು ಓಡಿ ಹೋಗಿರುತ್ತಾರೋ ಅವರನ್ನು seize ಮಾಡಿ case ಹಾಕಿ ದಂಡ ಹಾಕಿದ್ದಾರೆ. ಇನ್ನು ಮುಂದೆ state squad ಅನ್ನು ಸ್ವಲ್ಪ ಹೆಚ್ಚು ಸಂಖ್ಯೆ ಮಾಡಿ ಎಲ್ಲಾ ಕಡೆಗಳಲ್ಲಿ ಓಡಾಡತಕ್ಕಂಥಕ್ಕೆ ವಾಹನಗಳಿಗೆ GPS (Global Positioning System) fix ಮಾಡಲಾಗಿದೆ. ರಾಜ್ಯದಿಂದಲೇ, Integrated Lease Management System (ILMS) ನಲ್ಲಿ ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು 'One State One GPS' ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಹಾಗಾಗಿ ರಾಜ್ಯದಲ್ಲೂ ಕೂಡ ಇವರು ನಮಗೆ identify ಆಗುವುದರಿಂದ ಇನ್ನುಮುಂದೆ ಆ ರೀತಿಯ ಲೋಪಗಳು ಆಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಹೆಚ್ಚಿನ ಕ್ರಮ ವಹಿಸುತ್ತೇವೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಅವರು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಮತ್ತು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚನೆ ಮಾಡಿದ್ದಾರೆ. ಮರಳು ಸಾಗಾಣಿಕೆ ನಿಯಂತ್ರಣ ಆಗಬೇಕಾದಂತಹ ಸಂದರ್ಭದಲ್ಲಿ ಅಲ್ಲಿಯವರೆಗೂ ಹೋಗುವುದೇ ಇಲ್ಲ. ಅನಧಿಕೃತವಾಗಿ ಹಿಡಿದಿರತಕ್ಕಂಥ

ಟ್ರಾಕ್ಟರ್‌ಗಳನ್ನು ಬಿಟ್ಟು ಹೋಗಿರುತ್ತಾರೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಅವರು ಟ್ರಾಕ್ಟರ್‌ಗಳನ್ನು ಬಿಟ್ಟು ಹೋಗುವುದೇ ಇಲ್ಲ, ಅದನ್ನು ತೆಗೆದುಕೊಂಡೇ ಹೋಗುತ್ತಾರೆ. ಅಲ್ಲೆಲ್ಲಾ ಶಾಮೀಲು ಇರುತ್ತಾರೆ, ಅವರಿಗೆ ಹೋಗುವುದು ಹೋಗುತ್ತದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಎರಡನೆಯದಾಗಿ, ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆಗೆ ತೆಗೆದುಕೊಂಡು ಹೋಗತಕ್ಕಂಥ ಕೆಲಸವೇ ಆಗುತ್ತಿಲ್ಲ. ಏಕೆಂದರೆ ಅಲ್ಲಿ ಕೇಸ್ಲಾಪುರ ಎಂಬ ಒಂದು ಗ್ರಾಮ ಇದೆ. ಅಲ್ಲಿ ಸಂಪೂರ್ಣವಾಗಿ ಹಳ್ಳದ ದಂಡೆಯಲ್ಲಿ ಇರತಕ್ಕಂಥ ಹೊಲಗಳು. ಮಧ್ಯರಾತ್ರಿ ಒಬ್ಬರು ರೈತ ನನಗೆ ಫೋನ್ ಮಾಡಿ, ಮೇಡಂ 3 ತಿಂಗಳು ಸ್ವಲ್ಪ ಮರಳು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಲಿ. ಏಕೆಂದರೆ ಹೊಲದಲ್ಲಿ ಬೆಳೆಗಳನ್ನು ಬೆಳೆಯಲಾಗಿದೆ. ಮರಳನ್ನು ಅಗೆದಂತೆಲ್ಲಾ ಬೆಳೆ ಹಾಳಾಗಿ ಪಸಲು ಹೋಗುತ್ತದೆ. 3 ತಿಂಗಳ ಕಾಲ ಸ್ವಲ್ಪ ಸುಮ್ಮನೆ ಇರುವುದಕ್ಕೆ ಹೇಳಿ. ನಾನು ತಮ್ಮ ಹತ್ತಿರ request ಮಾಡಿಕೊಳ್ಳುತ್ತೇನೆಂದು ಹೇಳಿದರು. ಅಲ್ಲಿರತಕ್ಕಂಥ ಗ್ರಾಮೀಣ ಪೊಲೀಸ್ ಠಾಣೆಗೆ ಫೋನ್ ಮಾಡಿದೆನು. ಆದರೆ ಯಾವ ಕೆಲಸಗಳು ಆಗಲಿಲ್ಲ. ಅವರು ಮಾಡುವ ಕೆಲಸವನ್ನೇ ಮಾಡಿದರು. ಆದರೆ ಅಲ್ಲಿ ಹೋಗತಕ್ಕಂಥ ಟ್ರಾಕ್ಟರ್‌ಗಳು ಮತ್ತು ಲಾರಿಗಳನ್ನು ನೋಡಿದಾಗ ನಿಜವಾಗಲೂ ಕೂಡ ಆ ಊರು ಅಪಾಯದ ಮಟ್ಟದಲ್ಲಿದೆ. ಅವರನ್ನು ಬಿಡಿಸಲು ಹೋದಾಗ ಅವರು ಕಲ್ಲುಗಳನ್ನು ಬೀಸಿ ಹೊಡೆಯುವುದು ಮತ್ತು ಅಕ್ರಮವಾಗಿ ಅವರ ಮೇಲೆ ಹಲ್ಲೆ ಮಾಡತಕ್ಕಂಥ ಕೆಲಸ ಆಗುತ್ತಿದೆ. ಹೀಗಿರುವಾಗ ರಾತ್ರಿ ನಡೆದಿರತಕ್ಕಂಥದ್ದು ಬೆಳಗ್ಗೆ ಆಗುವುದರೊಳಗೆ ಮತ್ತೆ ಒಂದು ಮಟ್ಟಕ್ಕೆ ತಂದುಬಿಟ್ಟಿರುತ್ತಾರೆ. ಹೀಗಾಗಿ, ಜಿಲ್ಲಾಧಿಕಾರಿಗಳಿಗೆ ಮತ್ತು ಎಸ್.ಪಿ.ಯವರಿಗೆ ಯಾರಿಗೂ ಈ ವಿಷಯ ಹೋಗುವುದೇ ಇಲ್ಲ. ಏಕೆಂದರೆ, ಅಲ್ಲಿರತಕ್ಕಂಥವರು ಎಲ್ಲರೂ ಕೂಡ ಹಾಗಲಕಾಯಿ ಮತ್ತು ಬೇವಿನ ಕಾಯಿಗಳೇ ಆಗಿದ್ದಾರೆ.

**ಶ್ರೀ ಎನ್. ಚೆಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ನಿರ್ದೇಶಕರು ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರಿಗೆ ಫೋನ್ ಮಾಡಿ, ಇವರ ಹತ್ತಿರ ಮಾಹಿತಿ ತೆಗೆದುಕೊಂಡು ಅದರ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಈಗ ಈ ಸದನದ ಗಮನಕ್ಕೆ ತರುವುದೇನೆಂದರೆ, ನಾನು ಬೆಳಗ್ಗೆ 10.15 ಕ್ಕೆ ಪ್ರಶ್ನೋತ್ತರ ಪ್ರಾರಂಭ ಮಾಡಿದ್ದೇನೆ. ಬೆಳಗ್ಗೆ 11.30 ಗಂಟೆಗೆ ಮುಗಿಸುತ್ತೇನೆ. ನೀವು ಯಾರು ಹೆಚ್ಚು ಸಮಯ ತೆಗೆದುಕೊಳ್ಳುತ್ತೀರಿ ಎಂದು ನಾನು ಎಲ್ಲಾ ಬರೆದುಕೊಂಡಿರುತ್ತೇನೆ. ನಾನು ಬೆಳಗ್ಗೆ 11.30 ಗಂಟೆಗೆ ಪ್ರಶ್ನೋತ್ತರ stop ಮಾಡುತ್ತೇನೆ. ಉಳಿದವರ ಕತೆ ನನಗೆ ಗೊತ್ತಿಲ್ಲ. ನಾನು ಬೆಲ್ ಮಾಡಿದಾಗ ಕುಳಿತುಕೊಳ್ಳಬೇಕು.

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಪಟ್ಟಿ**

01 ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಮತ್ತು ಮಜರಾಯಿ ಸಚಿವರು,
02 ಶ್ರೀ ಸತೀಶ್ ಜಾರಕಿಹೋಳಿ, ಮಾನ್ಯ ಲೋಕೋಪಯೋಗಿ ಮತ್ತು ಬಂದರು ಸಚಿವರು,
03 ಶ್ರೀ ಎನ್. ಚೆಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು,
04 ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು,
05 ಶ್ರೀ ಡಿ.ಸುಧಾಕರ್, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು,
06 ಶ್ರೀ ಸಂತೋಷ್ ಎಸ್.ಲಾಡ್, ಮಾನ್ಯ ಕಾರ್ಮಿಕ ಸಚಿವರು,
07 ಶ್ರೀ ಕೆ.ವೆಂಕಟೇಶ್, ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು,
08 ಶ್ರೀ ಮಂಕಾಳ ಎಸ್. ವೈದ್ಯ, ಮಾನ್ಯ ಮೀನುಗಾರಿಕೆ, ಬಂದರು, ಒಳನಾಡು ಜಲ ಸಾರಿಗೆ ಸಚಿವರು
09 ಶ್ರೀ ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

**ಪ್ರಶ್ನೆ ಸಂಖ್ಯೆ: 901**

**ಸಭಾಪತಿಯವರು:-** ಶ್ರೀ ರಾಮೋಜಿಗೌಡರವರೇ, ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ ಇದೆ. ನನಗೆ ಉತ್ತರ ಬೇಡ. ಕೊನೆಪಕ್ಷ ನನಗೆ 2 ನಿಮಿಷ ಕಾಲ ಮಾತನಾಡಲು ಅವಕಾಶ ಕೊಡಬೇಕು.

**895**

(ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ.ಗೌಡರವರು ಗೈರು ಹಾಜರಿರುತ್ತಾರೆ)

## ಪ್ರಶ್ನೆ ಸಂಖ್ಯೆ: 923
## ಹೊಸ ಸಕ್ಕರೆ ಕಾರ್ಖಾನೆ ಕುರಿತು

**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 923
2. ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.08.2025
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಅನುಮತಿ ನೀಡಲು ಇರುವ ಷರತ್ತುಗಳೇನು; (ವಿವರ ನೀಡುವುದು) | 2022-23, 2023-24 ಮತ್ತು 2024-25ನೇ ಸಾಲುಗಳಲ್ಲಿ ಒಟ್ಟು 8 ಸಕ್ಕರೆ ಕಾರ್ಖಾನೆಗಳು ಹೊಸದಾಗಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿರುತ್ತವೆ. ಕಾರ್ಖಾನೆವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ಕಾರ್ಖಾನೆವಾರು ಹೆಸರು | ಪ್ರಾರಂಭಿಸಿದ ವರ್ಷ |
|---|---|---|
| 1 | ಕೆ.ಪಿ.ಆರ್ ಶುಗರ್ & ಅಪರಲ್ಸ್ ಲಿ., ಚಿಣಮಗೇರಿ-ಚೌಡಾಪುರ ಗ್ರಾಮ, ಅಫಜಲ್‌ಪುರ ತಾಲ್ಲೂಕು ಕಲಬುರಗಿ ಜಿಲ್ಲೆ | 2022-23 |
| 2 | ಇಂಡಿಯನ್ ಕೇನ್ ಪವರ್ ಲಿ., ಘಟಕ ಅಳಗವಾಡಿ ಬೀರೇಶ್ವರ ಶುಗರ್ಸ್ ಅಳಗವಾಡಿ ಗ್ರಾಮ, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ | 2023-24 |
| 3 | ಮೆಲ್ಬ್ರೋ ಶುಗರ್ಸ್ ಪ್ರೈ ಲಿ., ಶಿರೂರು, ಬಾಗಲಕೋಟೆ ತಾಲ್ಲೂಕು & ಜಿಲ್ಲೆ | |
| 4 | ವಿ.ಐ.ಎನ್.ಪಿ ಡಿಸ್ಟಿಲರೀಸ್ & ಶುಗರ್ಸ್ ಲಿ., ಕೋಣನಕೇರಿ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ | |
| 5 | ಶ್ರೀ ಬಸವೇಶ್ವರ ಶುಗರ್ಸ್ ಲಿ., ಬಳ್ಳಿಗೇರಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 2024-25 |
| 6 | ಇನಾಂದಾರ್ ಶುಗರ್ ಲಿ., ಹಿರೇಕೊಪ್ಪ - ಮರಕುಂಬಿ ಗ್ರಾಮ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ | |
| 7 | ಜಿ.ಎಂ. ಶುಗರ್ಸ್ ಅಂಡ ಎನರ್ಜಿ ಲಿ., ಯುನಿಟ್-2, ಚಟ್ನಹಳ್ಳಿ, ರಟ್ಟೀಹಳ್ಳಿ, ತಾಲ್ಲೂಕು, ಹಾವೇರಿ ಜಿಲ್ಲೆ | |
| 8 | ಐ.ಸಿ.ಪಿ.ಎಲ್ ಧ್ಯಾನಯೋಗಿ ಶ್ರೀ ಶಿವಕುಮಾರ್ ಸ್ವಾಮೀಜಿ ಶುಗರ್ಸ್ ಹಿರೇಬೇವನೂರು, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | |

ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧ ಪ್ರಮುಖವಾಗಿ ಈ ಕೆಳಕಂಡ ಮಾನದಂಡಗಳನ್ನು ಪಾಲಿಸಬೇಕಾಗಿರುತ್ತದೆ.

1. ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳದಿಂದ 15 ಕಿ.ಮೀ ಸುತ್ತಳತೆಯ ಅಂತರದಲ್ಲಿ ಯಾವುದೇ ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲವೆಂದು ರಾಜ್ಯ ಸರ್ಕಾರದಿಂದ ಅಂತರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
2. ಕೇಂದ್ರ ಸರ್ಕಾರದಿಂದ IEM ಪಡೆಯುವುದು ಮತ್ತು ಕೇಂದ್ರ ಸರ್ಕಾರಕ್ಕೆ ಒಂದು ಕೋಟಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಸಲ್ಲಿಸತಕ್ಕದ್ದು.

............2

| | | |
|---|---|---|
| | | **3.** ಕೇಂದ್ರ ಸರ್ಕಾರದಿಂದ "ಹೊಸ ಸಕ್ಕರೆ ಕಾರ್ಖಾನೆ" ಎಂದು ಆದೇಶ ಪಡೆಯುವುದು.<br>**4.** ಕರ್ನಾಟಕ ಉದ್ಯೋಗ ಮಿತ್ರ ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ (SHLCC) ಯಿಂದ ಯೋಜನೆಗೆ ಕಡ್ಡಾಯವಾಗಿ ಅನುಮೋದನೆ ಪಡೆಯುವುದು.<br>**5.** ರಾಜ್ಯ ಸರ್ಕಾರದಿಂದ ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ ಆದೇಶವನ್ನು ಕಡ್ಡಾಯವಾಗಿ ಪಡೆಯುವುದು.<br>**6.** ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯಿಂದ Environmental Clearance ಕಡ್ಡಾಯವಾಗಿ ಪಡೆಯುವುದು.<br>**7.** ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿಯಿಂದ Consent For Establishment (CFE) ಮತ್ತು Consent For Operations (CFO) ಕಡ್ಡಾಯವಾಗಿ ಪಡೆಯುವುದು.<br>**8.** ಜಲಸಂಪನ್ಮೂಲ ಇಲಾಖೆಯಿಂದ ಕಾರ್ಖಾನೆಗೆ ಅಗತ್ಯವಿರುವ ನೀರನ್ನು ಬಳಕೆ ಮಾಡಲು ಕಡ್ಡಾಯವಾಗಿ Water Permission ಪಡೆಯುವುದು.<br>**9.** ಇಂಧನ ಇಲಾಖೆಯಿಂದ ಸಹ ವಿದ್ಯುತ್ ಘಟಕ ಸ್ಥಾಪಿಸಲು ಮತ್ತು ವಿದ್ಯುತ್ ಸರಬರಾಜು ಮಾಡುವ ಸಂಬಂಧ ಅನುಮತಿ ಕಡ್ಡಾಯವಾಗಿ ಪಡೆಯುವುದು.<br>**10.** ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ಕಡ್ಡಾಯವಾಗಿ ಕಬ್ಬು ಅರೆಯುವ ಪರವಾನಗಿಯನ್ನು ಪಡೆಯುವುದು. |
| **(ಆ)** | ಬಾಗಲಕೋಟೆ ಜಿಲ್ಲೆಯ ರನ್ನ ಸಕ್ಕರೆ ಕಾರ್ಖಾನೆಯನ್ನು ಲೀಸ್‌ಗೆ ನೀಡಲಾಗಿದೆಯೇ;<br>ಯಾರಿಗೆ, ಯಾವಾಗ ಯಾವ ಷರತ್ತಿಗೊಳಪಟ್ಟು ಯಾವ ರೀತಿಯಲ್ಲಿ ಲೀಸ್ ನೀಡಲಾಗಿದೆ; ಬಿಡ್ ಕರೆದು ನೀಡಿದ್ದಲ್ಲಿ ಯಾವಾಗ ಬಿಡ್ ಕರೆಯಲಾಯಿತು; ಯಾವ ಮಾರ್ಗಸೂಚಿಗಳ ಅನ್ವಯ ಬಿಡ್ ಕರೆಯಲಾಯಿತು; (ವಿವರ ನೀಡುವುದು) | ದಿನಾಂಕ:04.07.2024ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿದಂತೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ-ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" (As Is Where Is Basis) ಖಾಸಗಿಯವರಿಗೆ ಗುತ್ತಿಗೆ ನೀಡುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸೇವೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಟೆಂಡರ್ ಕರೆಯಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:16.07.2024ರಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ. ಟೆಂಡರ್ ಕರೆಯುವ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಅದರಂತೆ, ಕರ್ನಾಟಕ ಸಾರ್ವಜನಿಕ ಸೇವೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ದಿನಾಂಕ:22.07.2024ರಂದು ರಾಜ್ಯಾದ್ಯಂತ "ವಿಜಯ ಕರ್ನಾಟಕ" ಕನ್ನಡ ದಿನಪತ್ರಿಕೆ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್" ಆಂಗ್ಲ ದಿನಪತ್ರಿಕೆಗಳಲ್ಲಿ ಮತ್ತು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿಯೂ ಸಹ ಟೆಂಡರ್ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. |

....3

-3-

| | | |
|---|---|---|
| | | ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ- ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ "ಇದ್ದಲ್ಲಿ - ಇದ್ದಂತೆಯೇ" (As Is Where Is Basis) ಮೆ.ಬೀಳಗಿ ಶುಗರ್ಸ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ರೂ.471.00 ಕೋಟಿಗಳ ಮೊತ್ತಕ್ಕೆ ಗುತ್ತಿಗೆ ನೀಡಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ: 10.10.2024ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡ ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| **(ಇ)** | ಸದರಿ ಕಾರ್ಖಾನೆಯ ಸಂಪೂರ್ಣ ಸಾಲಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಸಾಲ ಮರುಪಾವತಿಯ ಹೊಣೆಗಾರಿಕೆ ಸರ್ಕಾರದ್ದೋ ಅಥವಾ ಗುತ್ತಿಗೆದಾರರದ್ದೋ; (ಸಮಗ್ರ ಮಾಹಿತಿ ನೀಡುವುದು) | ಟೆಂಡರ್ ಡಾಕ್ಯುಮೆಂಟಿನ ಷರತ್ತು ಸಂಖ್ಯೆ:34 ಮತ್ತು 36 ರನ್ವಯ ಗುತ್ತಿಗೆ ಪೂರ್ವದಲ್ಲಿ ಕಾರ್ಖಾನೆಯು ಹೊಂದಿರುವ ಸಾಲಗಳು ಅಂದರೆ ಹಣಕಾಸು ಸಂಸ್ಥೆಗಳ/ ಬ್ಯಾಂಕುಗಳ/ ಸರ್ಕಾರದ ಸಾಲಗಳು, ಪಾವತಿಸಲು ಬಾಕಿ ಇರುವ ತೆರಿಗೆಗಳು ಸೇರಿದಂತೆ ಎಲ್ಲಾ ಸಾಲ ಮತ್ತು ಜವಾಬ್ದಾರಿಗಳಿಗೆ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯು ಹೊಣೆಗಾರಿಕೆಯಾಗಿರುತ್ತದೆ. ಸದರಿ ಸಾಲ ಮತ್ತು ಜವಾಬ್ದಾರಿಗಳಿಗೆ ಗುತ್ತಿಗೆದಾರರು ಜವಾಬ್ದಾರಿಯಾಗಿರುವುದಿಲ್ಲ. |
| **(ಈ)** | ಸದರಿ ಕಂಪನಿಯ ಸಾಲವನ್ನು ಯಾವ ಕಾಲ ಮಿತಿಯಲ್ಲಿ ತೀರಿಸಲಾಗುವುದು; ಹಾಗೂ ಯಾರು ತೀರಿಸುತ್ತಾರೆ? (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಸಿಐ 214 ಸಿಓಎಫ್ 2020, ದಿನಾಂಕ:10.10.2024ರ ಷರತ್ತು ಸಂಖ್ಯೆ:5ರಲ್ಲಿ "ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಬ್ಯಾಂಕುಗಳ/ಹಣಕಾಸು ಸಂಸ್ಥೆಗಳ /ಸಂಬಂಧಪಟ್ಟವರ ಸಭೆ ನಡೆಸಿ, ಗುತ್ತಿಗೆದಾರರು ಪಾವತಿಸುವ ಮುಂಗಡ ಹಣ (Upfront amount) ಹಾಗೂ ವಾರ್ಷಿಕ ಗುತ್ತಿಗೆ ಮೊತ್ತ ಮತ್ತು ಮುದ್ದತ ಠೇವಣಿ (Fixed Deposit) ಯಿಂದ ಬರುವ ಬಡ್ಡಿಯ ಮೊತ್ತವನ್ನು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲೂಕು, ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಯ ಬಾಕಿಯಿರುವ ಸಾಲ ಮತ್ತು ಹೊಣೆಗಾರಿಕೆಗಳನ್ನು ಆದ್ಯತೆಯನುಸಾರ (Pari-passu basis) ತೀರುವಳಿ ಮಾಡಲು ಹಾಗೂ ಕಾರ್ಖಾನೆಯ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಕ್ರಮವಹಿಸತಕ್ಕದ್ದು." ಎಂದು ಸೂಚಿಸಲಾಗಿರುತ್ತದೆ.<br><br>ಗುತ್ತಿಗೆದಾರರು ಪಾವತಿಸುವ ಒಟ್ಟು ರೂ.471.00 ಕೋಟಿಗಳ ಗುತ್ತಿಗೆ ಮೊತ್ತದಿಂದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಸಾಲ ಮತ್ತು ಹೊಣೆಗಾರಿಕೆಗಳನ್ನು 30 ವರ್ಷಗಳ ಅವಧಿಯಲ್ಲಿ ತೀರುವಳಿ ಮಾಡಬೇಕಾಗಿರುತ್ತದೆ. |

**ಸಂಖ್ಯೆ :** ಸಿಐ 232 ಸಿಓಎಫ್ 2025

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಲ್ಲಿ ಪ್ರಶ್ನೆ ಕೇಳಿದ್ದೆನು. ಈಗ ಟೆಂಡರ್ ಆಗಿವುದೇ ಬೇರೆ. ಆದರೆ upload ಆಗಿರುವುದೇ ಬೇರೆ. ಹೀಗಿದ್ದಂತಹ ಸಂದರ್ಭದಲ್ಲಿ ಬಹಳಷ್ಟು ಜನ ಆ ಟೆಂಡರ್‌ನಲ್ಲಿ ಕೂಡ ಭಾಗವಹಿಸಲಿಲ್ಲ. ಟೆಂಡರ್ ಕರೆದಾಗ ಒಬ್ಬರು ಮಾತ್ರ apply ಮಾಡಿದ್ದಾರೆ. ಸ್ವಲ್ಪ ಹೆಚ್ಚಿನ ಜನರು ಆ ಟೆಂಡರ್‌ನಲ್ಲಿ ಭಾಗವಹಿಸುವ ಹಾಗೆ ಮಾಡುವುದಕ್ಕೆ ಏನು ಸಮಸ್ಯೆ ಎಂದು ಮಾನ್ಯ ಸಚಿವರಲ್ಲಿ ನಾನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ & ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಾನು ಬಹಳ ಸವಿಸ್ತಾರವಾಗಿ ಉತ್ತರವನ್ನು ಒದಗಿಸಿದ್ದೇನೆ. ಮೊದಲು ಹಿಂದಿನ ಸರ್ಕಾರ ಕೊನೆಯ ಗಳಿಗೆಯಲ್ಲಿ ಟೆಂಡರ್ ಕರೆಯುತ್ತದೆ. ನಾವು ಮೊದಲು ಏನು 8 ರಿಂದ 10 ಶುಗರ್ ಫ್ಯಾಕ್ಟರಿಗಳನ್ನು lease ಗೆ ಕೊಟ್ಟಿದ್ದೇವೆ. ಆ total conditions ಅನ್ನು modify ಮಾಡಿ ಈ ಟೆಂಡರ್ ಕರೆದಿದ್ದಾರೆ. ಹಿಂದಿನ ಸರ್ಕಾರ ಸುಮಾರು 30 ವರ್ಷಕ್ಕೆ ಮಾತ್ರ ಒಂದು ಸಕ್ಕರೆ ಕಾರ್ಖಾನೆಯನ್ನು lease ಗೆ ಕೊಟ್ಟಿದ್ದಾರೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ, ಹಿಂದಿನ ಸರ್ಕಾರ 40 ವರ್ಷ ಮಾಡಿ lease ಗೆ ಕರೆಯುತ್ತಾರೆ. ಈ 40 ವರ್ಷ lease ಮಾಡಿ ಟೆಂಡರ್ ಕರೆದ ನಂತರ ಆ ಸಂದರ್ಭದಲ್ಲಿ ಒಬ್ಬರು ಮಾತ್ರ ಟೆಂಡರ್ ಹಾಕಿರುತ್ತಾರೆ. ಅವರು ಸುಮಾರು ರೂ. 340 ಕೋಟಿಗಳಿಗೆ ಹಾಕುತ್ತಾರೆ. ಆದರೆ condition ನಲ್ಲಿ 40 ವರ್ಷ ಹಾಕುತ್ತಾರೆ. ಆದರೆ upfront payment ಗೂ ಕಡಿಮೆ ಹಣವನ್ನು ನಮೂದಿಸುತ್ತಾರೆ. ಆ ಹಿನ್ನೆಲೆಯಲ್ಲಿ ಅವರು ಅದನ್ನೂ ಕೂಡ ತೆಗೆದುಕೊಳ್ಳುವುದಿಲ್ಲ. ಅವರು ಕೂಡ ಮತ್ತೆ tender conditions ಅನ್ನು modify ಮಾಡುವುದಕ್ಕೆ ಕೇಳುತ್ತಾರೆ. ನಂತರ ಎರಡನೆಯವರಾದ ಶ್ರೀಮತಿ ಗಿರಿಜಾ ರಾಮಣ್ಣ ಎಂಬುವರನ್ನು ಕರೆಯುತ್ತಾರೆ. ಅವರು ಏನು ಟೆಂಡರ್ ಹಾಕಿರುತ್ತಾರೋ ಅದಕ್ಕಿಂತಲೂ ಇವರು ಕಡಿಮೆ ಮೊತ್ತ ರೂ. 320 ಕೋಟಿಗಳು ಕೋಟ್ ಮಾಡುತ್ತಾರೆ. ಅವರು ರೂ.340 ಕೋಟಿಗಳಿಗೆ ಕೋಟ್ ಮಾಡುತ್ತಾರೆ. ಇವರು ರೂ. 320 ಕೋಟಿಗಳು quote ಮಾಡುತ್ತಾರೆ. ಮತ್ತೆ ಅಲ್ಲಿ tender conditions ಎಲ್ಲಾ modify ಮಾಡುತ್ತಾರೆ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, 3ನೇ ಬಾರಿಗೆ ಟೆಂಡರ್ ಕರೆದು ನಾವು 40 ವರ್ಷ ಇದ್ದ condition ಅನ್ನು 30 ವರ್ಷಕ್ಕೆ ಇಳಿಸುತ್ತೇವೆ. ಮತ್ತೆ, upfront amount ಅನ್ನು ರೂ. 371 ಕೋಟಿಗಳಿಗೆ ಕೊಟ್ಟಿದ್ದೇವೆ. ಈ ಹಿಂದೆ ನಾವೇನು 8 ರಿಂದ 10 ಶುಗರ್ ಫ್ಯಾಕ್ಟರಿಗಳನ್ನು ಕೊಟ್ಟಿದ್ದೇವೆ. ಅವೆಲ್ಲಾ ಸುಮಾರು 30 ವರ್ಷಕ್ಕೆ ಮಾತ್ರ ಕೊಟ್ಟಿದ್ದೇವೆ. ಒಬ್ಬರು ಮಾತ್ರ ಒಂದು ಕಾರ್ಖಾನೆಯನ್ನು 40 ವರ್ಷಕ್ಕೆ ತೆಗೆದುಕೊಂಡಿದ್ದಾರೆ. ಅವರ ಹೆಸರನ್ನು ನಾನು ಹೇಳುವ ಅವಶ್ಯಕತೆ ಇಲ್ಲ. ಈ ಹಿನ್ನೆಲೆಯಲ್ಲಿ ಈ ಟೆಂಡರ್ ಮೊತ್ತ ಕೂಡ ಜಾಸ್ತಿಯಾಗಿದೆ. ಇದರ ಜೊತೆಗೆ ನಾವೇನು ಸಾಲ ತೀರುವಳಿ ಮಾಡಬೇಕು. ಈ ಕಾರ್ಖಾನೆ ಮೇಲೆ ರೂ.340 ಕೋಟಿ ಸಾಲ ಇದೆ. ಅದರಲ್ಲಿ ಕಬ್ಬು arrears ಕೊಡುವುದು ಇರುತ್ತದೆ. ಅಲ್ಲಿ ನೌಕರರಿಗೆ payment ಕೂಡ ಮಾಡಿರುವುದಿಲ್ಲ. 30 ವರ್ಷದಲ್ಲಿ ಅವೆಲ್ಲಾ ತೀರಿಸುವ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥವರು ಯಾರಿದ್ದಾರೋ ಅಂಥವರಿಗೆ ಮಾತ್ರ ಈ ಟೆಂಡರ್

ಕೊಡಬೇಕು. ಈ ಹಿಂದೆ ಏನು tender conditions ಇದೆಯೋ ಅದಕ್ಕೆ ಇದು mete out ಆಗುತ್ತದೆ ಎನ್ನತಕ್ಕಂಥ ಹಿತಾಸಕ್ತಿಯಿಂದ ಟೆಂಡರ್ ಕರೆಯುತ್ತೇವೆ. ಆ ಸಂದರ್ಭದಲ್ಲಿ ಇಬ್ಬರು ಟೆಂಡರ್ ಕೋಟ್ ಮಾಡುತ್ತಾರೆ. ಆದರೆ ಒಬ್ಬರು ಬರುವುದಿಲ್ಲ, ಇನ್ನೊಬ್ಬರು ಬರುತ್ತಾರೆ. ಆ ಹಿನ್ನೆಲೆಯಲ್ಲಿ ನಾವು ಇವರಿಗೆ ಕೊಟ್ಟಿದ್ದೇವೆ. ಮತ್ತೆ ಇದು ಎಲ್ಲರಿಗಿಂತಲೂ ಒಳ್ಳೆಯ ಟೆಂಡರ್. ಏಕೆಂದರೆ ಸುಮಾರು 40 ವರ್ಷ ಕೊಟ್ಟರೂ ಕೂಡ ಅವರು ತೀರುವಳಿ ಮಾಡದೇ ಇರತಕ್ಕಂಥ ಸ್ಥಿತಿ ಇರುತ್ತದೆ. ಈಗ ಇಲ್ಲಿ 30 ವರ್ಷಕ್ಕೆ ಕೊಟ್ಟು, ಅವರಿಗಿಂತಲೂ ರೂ.30 ಕೋಟಿಗಳನ್ನು ಹೆಚ್ಚಿಗೆ quote ಮಾಡಿ ಈ ಟೆಂಡರ್ ಕೊಟ್ಟಿದ್ದೇವೆ. ನಾನು ತಮಗೆ ಇನ್ನೊಂದು ವಿಚಾರವನ್ನು ಹೇಳಬೇಕಾಗುತ್ತದೆ. ಒಂದು ಕಾರ್ಖಾನೆ ಒಂದು-ಎರಡು ವರ್ಷಗಳ ಕಾಲ defunct ಆಗಿ ನಿಂತರೆ ಅದು scrap ಆಗುತ್ತದೆ. ಅದು ಆಗಬಾರದು ಎನ್ನತಕ್ಕಂಥ ಉದ್ದೇಶದಿಂದ ಕೊಟ್ಟಿದ್ದೇವೆ. ಹಿಂದಿನ ಸರ್ಕಾರ ಮಾಡಿರತಕ್ಕಂಥ ನಿರ್ಣಯ ಯಾವುದು mete out ಆಗದೇ ಇರುವುದರಿಂದ ನಮ್ಮ ಸರ್ಕಾರ ಬಂದಾಗ ಈ ಒಂದು ಉತ್ತಮ ನಿರ್ಣಯ ತೆಗೆದುಕೊಂಡು ಕಾರ್ಖಾನೆಯನ್ನು lease ಗೆ ಕೊಟ್ಟಿದ್ದೇವೆ. ಒಂದುವೇಳೆ ಮಾನ್ಯ ಎನ್.ರವಿಕುಮಾರ್ ರವರಿಗೆ ಏನಾದರೂ doubt ಇದ್ದಲ್ಲಿ detail ಆಗಿ ನಿಮಗೆ ಬೇಕಾದರೆ tender documents ಮತ್ತು ಅದರ ಎಲ್ಲಾ details furnish ಮಾಡಲಾಗುವುದು.

**ಶ್ರೀ ಎನ್.ರವಿಕುಮಾರ್:-** ಈಗ ಒಬ್ಬರೇ ಟೆಂಡರ್ ಕರೆದಿದ್ದಾರೆ. ಸುಮಾರು ಅಲ್ಲಿ ಸುಮಾರು ರೂ. 471 ಕೋಟಿಗಳಷ್ಟು ಸಾಲ ಇದೆ. ಇಂತಹ ಸಂದರ್ಭದಲ್ಲಿ ಈಗ ಆ ಸಕ್ಕರೆ ಕಾರ್ಖಾನೆಯಲ್ಲಿರುವಂತಹ ಸಿಬ್ಬಂದಿಗಳಿಗೆ salary ಕೊಡಬೇಕು. ಈಗ ಇರುವಂತಹ ಸಾಲಕ್ಕೆ ಬಡ್ಡಿ ಕಟ್ಟಬೇಕು. Electricity bill ಕಟ್ಟಬೇಕು ಮತ್ತು ದಿನನಿತ್ಯದ ಖರ್ಚುಗಳನ್ನು ನೋಡಬೇಕು. ಇವೆಲ್ಲಾ ಇರತಕ್ಕಂಥ ಸಂದರ್ಭದಲ್ಲಿ open tenderನಲ್ಲಿ ಹೆಚ್ಚಿನ ಜನರು ಭಾಗವಹಿಸುವ ರೀತಿ ಮಾಡಿದರೆ ಸ್ವಲ್ಪ ಹೆಚ್ಚಿಗೆ ಹಣ ಇರತಕ್ಕಂಥವರು ಇದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿದೆ. ಈಗ ಇಷ್ಟೊಂದು ದೊಡ್ಡ ಮೊತ್ತದ ಸಾಲ ಇರುವುದರಿಂದ ಇದನ್ನು mete out ಮಾಡುವುದು ಹೇಗೆ? ಇದನ್ನು ಲಾಭದಾಯಕವಾದ factory ಮಾಡುವುದು ಹೇಗೆ? ಈ ಸಂಬಂಧವಾಗಿ ಇನ್ನು ಸ್ವಲ್ಪ ಆಲೋಚನೆ ಮಾಡಬೇಕಾಗಿತ್ತು ಎನ್ನುವಂಥದ್ದು ನನ್ನ ಕಳಕಳಿಯ ವಿನಂತಿ.

(ಮುಂದು)

(768)19.8.2025/10.30/ಎಂ.ಎಂ-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್ (ಮುಂದು):-**

ಅದಕ್ಕೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಸಲ re-bid ಮಾಡುವುದಕ್ಕೆ ಸಾಧ್ಯವೇ? ಏಕೆಂದರೆ, ರೂ. 1 ಕೋಟಿಗಿಂತ ಹೆಚ್ಚಿನ ಮೊತ್ತ ಇದ್ದಂತಹ ಸಂದರ್ಭದಲ್ಲಿ re-bid ಮಾಡಬಹುದು. ಹಾಗೂ ಇದು ನಷ್ಟದಲ್ಲಿಯೇ ನಡೆಯುತ್ತಿದೆ. ಆ ಫ್ಯಾಕ್ಟರಿ ಲಾಭದಾಯಕವಾಗಿಯಂತೂ ನಡೆಯುತ್ತಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಕಾರ್ಖಾನೆಗಳೂ ವಿಶೇಷವಾಗಿ ಲಾಭದಲ್ಲಿ ನಡೆಯುವಂತಹವು ಪ್ರೈವೇಟ್ ಕಾರ್ಖಾನೆಗಳು. ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಏನಾಗುತ್ತದೆಂದರೆ ಬಹುತೇಕ ಈಗ ನಾವು ಬಂದ ಮೇಲೆ ಎಂದು ಹೇಳುವುದಿಲ್ಲ. ನೀವಿದ್ದಾಗ ಕೂಡ 8-10 ಕಾರ್ಖಾನೆಗಳು ಸಹಕಾರಿ ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿ ನಡೆಯುತ್ತಿದ್ದವು. ದುರ್ದೈವವಶಾತ್, ಇಲ್ಲಿ ಏನಾಗಿದೆಯೆಂದರೆ, ಮೊದಲ ಟೆಂಡರ್‌ದಾರರು ಮೊದಲು 315 ಕೋಟಿ ರೂಪಾಯಿಗಳಿಗೆ quote ಮಾಡುತ್ತಾರೆ. ನಿರಾಣಿ ಅವರದ್ದು ಇದ್ದಾಗ. ಆಮೇಲೆ 330 ಕೋಟಿ ರೂಪಾಯಿಗಳಿಗೆ ಬರುತ್ತಾರೆ. ಈಗ ನಾವು ಕೊಟ್ಟಿರುವುದು 471 ಕೋಟಿ ರೂಪಾಯಿಗಳಿಗೆ. ಇದರಲ್ಲಿ ನಾವು ಎಲ್ಲಾ ಷರತ್ತುಗಳನ್ನು ಹಾಕಿ ಈ ಕಾರ್ಖಾನೆಯನ್ನು ಲೀಸ್ ಮೇಲೆ ಕೊಟ್ಟಿದ್ದೇವೆ. ಬ್ಯಾಂಕಿನ ಸಾಲ ತೀರುವಳಿ ಮಾಡಬೇಕು, ರೈತರ ಹಣ ಏನಾದರೂ ಬಾಕಿ ಉಳಿದಿದ್ದರೆ ಅದನ್ನು ಮುಟ್ಟಿಸಬೇಕು. ಜೊತೆಗೆ ಅಲ್ಲಿರುವಂತಹ ನೌಕರರಿಗೆ ವೇತನ ಕೂಡ ಕೊಡಬೇಕು ಮತ್ತು 40 ವರ್ಷ ಇದ್ದಂತಹ ಲೀಸ್ ಅವಧಿಯನ್ನು 30 ವರ್ಷಕ್ಕೆ ಇಳಿಸಿದ್ದೇವೆ. 30 ವರ್ಷದಲ್ಲಿಯೇ, as it is condition ನಲ್ಲಿ ಕಾರ್ಖಾನೆಯನ್ನು ಪುನಃ ಸರ್ಕಾರಕ್ಕೆ ಹಸ್ತಾಂತರ ಮಾಡಬೇಕು. 30 ವರ್ಷದೊಳಗೆ ಶೇ.100 ರಷ್ಟು ತೀರಿಸುತ್ತಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಚಿವರೇ, ನಾನು ಇದನ್ನು ಒಪ್ಪಿಕೊಂಡೆ. ನೀವು fair ಆಗಿಯೇ ಹೇಳಿದ್ದೀರಿ. 471 ಕೋಟಿ ರೂಪಾಯಿಗಳ ಸಾಲ ಇದೆ. 30 ವರ್ಷ ಲೀಸ್ ಅವಧಿ ಇದೆ. 30 ವರ್ಷದೊಳಗಡೆ 471 ಕೋಟಿ ರೂಪಾಯಿಗಳ ಸಾಲ ತೀರಿಸಬೇಕು. 471 ಕೋಟಿ ರೂಪಾಯಿಗಳಿಗೆ ಪ್ರತಿ ದಿನವೂ ಬಡ್ಡಿ ಹೆಚ್ಚಾಗುತ್ತಿದೆ. ಅದನ್ನೆಲ್ಲಾ ತೀರಿಸಿ ಸಿಬ್ಬಂದಿಗೆ ವೇತನ ಕೊಟ್ಟು ಇದನ್ನೆಲ್ಲವನ್ನೂ ಮಾಡುವುದು ಹೇಗೆ?

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಬಡ್ಡಿ ಮತ್ತು ಅಸಲನ್ನು ತೀರಿಸುವಂತಹ ಜವಾಬ್ದಾರಿ ಸರ್ಕಾರದ್ದಲ್ಲ. ಯಾರು ಲೀಸ್ ಮೇಲೆ ತೆಗೆದುಕೊಂಡಿರುತ್ತಾರೆ ಅವರದ್ದು. ಷೆಡ್ಯೂಲ್ ಹಾಕಿ 25 ವರ್ಷವಲ್ಲ 30 ವರ್ಷದಲ್ಲಿ ಆ ಸಾಲವನ್ನು ತೀರಿಸಬೇಕಾಗುತ್ತದೆ.

**ಶ್ರೀ ಎನ್. ರವಿಕುಮಾರ್:-** ಯಾವ ಲೀಸ್‌ನಲ್ಲಿ ಅಷ್ಟು ಭಾರ ಹೊರುವುದಕ್ಕೆ ಸಾಧ್ಯವಿದೆ?

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಅವರು ಈಗ ಅಗ್ರಿಮೆಂಟ್ ಮಾಡಿದ್ದಾರೆ, 30 ಕೋಟಿ ರೂಪಾಯಿಗಳ upfront payment ಮಾಡಿದ್ದಾರೆ. ನಿಮಗೆ ಮತ್ತಿನ್ನೇನು ಬೇಕು? ಆ ಷೆಡ್ಯೂಲ್‌ಗಳು ನನ್ನ ಹತ್ತಿರ ಇದೆ. ನಿಮಗೆ ಬೇಕಾದರೆ ತೀರಿಸುತ್ತಿದ್ದಾರೆಂದು 'on record' ನಾನು ಹೇಳುತ್ತಿದ್ದೇನೆ. ಬಾಂಡ್ ಮೇಲೆ ಅಗ್ರಿಮೆಂಟ್ ಮಾಡಿ ಕೊಟ್ಟಿದ್ದಾರೆ. ನಾನು ಇನ್ನೇನು ಕೊಡಬೇಕು?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ಕೆಲಸ ಮಾಡಿ. ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಶಿವಾನಂದ ಪಾಟೀಲ:-** ತೀರಿಸುವುದು ಅವನ ಜವಾಬ್ದಾರಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಸಾಲವನ್ನು ಈಗಿನ ಪರಿಸ್ಥಿತಿಯಲ್ಲಿ mete out ಮಾಡುವುದಕ್ಕೆ ಸಾಧ್ಯವಿಲ್ಲ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಆಯಿತು ಬರೆದುಕೊಡಿ. ಈಗ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆ.

**ಶ್ರೀ ಶರಣಗೌಡ ಬಯ್ಯಾಪುರ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರಿಸಲು ನಗರಾಭಿವೃದ್ಧಿ ಸಚಿವರು ಇಲ್ಲ.

**ಸಭಾಪತಿಯವರು:–** ಭೀಮರಾವ್ ಬಸವರಾಜ ಪಾಟೀಲರು ಗೈರು ಹಾಜರಿ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರೇ, ನಿಮ್ಮ ಪ್ರಶ್ನೆ ಕೃಷಿ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ತೋಟಗಾರಿಕೆ ವಿಶ್ವವಿದ್ಯಾಲಯದ ಬಗ್ಗೆ ಪ್ರಶ್ನೆ ಕೇಳಿದ್ದೆ. ಇದು ವರ್ಗಾವಣೆಯಾಗುವ ಅವಶ್ಯಕತೆ ಇಲ್ಲ.

**ಸಭಾಪತಿಯವರು:–** ಮಾನ್ಯ ಕೃಷಿ ಸಚಿವರೇ, ಉತ್ತರ ಹೇಳುತ್ತೀರಾ?

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಏನೂ ವಿಚಾರ ಗೊತ್ತಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸಮಗ್ರ ವಿಶ್ವವಿದ್ಯಾಲಯವನ್ನಾಗಿ ಮಾಡುವುದಕ್ಕೆ;

**ಸಭಾಪತಿಯವರು:–** ಮಾನ್ಯ ನಿರಾಣಿಯವರೇ, ಇಲ್ಲಿ ಉತ್ತರ ಕೊಡುವುದಕ್ಕೆ ಯಾರೂ ಇಲ್ಲ.

**ಶ್ರೀ ಎನ್. ಚಲುವರಾಯಸ್ವಾಮಿ:–** ಮಾನ್ಯ ಸಭಾಪತಿಯವರೇ, ಕೇಳಿದರೆ ಬೇಕಾದರೆ ಹೇಳುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೇ, ಕೃಷಿ ಮಂತ್ರಿಗಳ ವ್ಯವಸ್ಥೆಯಿಂದ ಇದು ಆದದ್ದು ಎಂದು ನಮಗೆಲ್ಲರಿಗೂ ಗೊತ್ತಾಗಿದೆ. ದಯಮಾಡಿ ಇದನ್ನು ಪರಿಹಾರ ಮಾಡಬೇಕು.

**ಶ್ರೀ ಎನ್. ಚಲುವರಾಯಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದೇನು ಪ್ರಶ್ನೆ ಕೇಳಲಿ, ನಾನು ಉತ್ತರ ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ನಿರಾಣಿಯವರೇ, ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ: 1207**

**ಕೃಷಿ ವಿವಿಗಳ ಮರು ಸಂಘಟಿಸುವ ಕುರಿತು**

**(ಸರ್ಕಾರದಿಂದ ಲಿಖಿತ ಉತ್ತರವನ್ನು ಮಂಡಿಸಿರುವುದಿಲ್ಲ.)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವ ಪ್ರಶ್ನೆ ತೋಟಗಾರಿಕೆ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯದಲ್ಲಿ ಪ್ರಥಮವಾಗಿ 2008ರಲ್ಲಿ ಪ್ರಾರಂಭವಾಗಿದೆ. ಅತ್ಯಂತ ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಸಂಶೋಧನೆಯನ್ನು ಮಾಡಿ ಆ ಭಾಗದಲ್ಲಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ 24 ಕಾಲೇಜುಗಳನ್ನು ಸ್ಥಾಪನೆ ಮಾಡಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಇವತ್ತು ಸಮಗ್ರ ಕೃಷಿ ವಿಶ್ವವಿದ್ಯಾಲಯವನ್ನು ಮಾಡಬೇಕು, ಅದನ್ನು ಮಂಡ್ಯ ಜಿಲ್ಲೆಯಲ್ಲಿಯೇ ಪ್ರಾರಂಭ ಮಾಡಬೇಕೆನ್ನುವ ವಿಚಾರದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಪ್ರತ್ಯೇಕವಾಗಿ ಇರುವಂತಹದ್ದು, ಅದನ್ನು ಸಮಗ್ರ ವಿಶ್ವವಿದ್ಯಾಲಯವಾಗಿ ಮಾಡುವುದಕ್ಕೆ ಆ ಭಾಗದ ಜನರು, ಜನಪ್ರತಿನಿಧಿಗಳು ಮತ್ತು ರೈತರ ವಿರೋಧವಿದೆ. ಹಾಗಾಗಿ ಅದನ್ನು ಸಮಗ್ರ ಮಾಡಬಾರದೆನ್ನುವಂತಹ ಬೇಡಿಕೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ಹಾಗಾಗಿ ಕಳೆದ ಅಧಿವೇಶನದಲ್ಲಿ ಏನು ಉತ್ತರ ಕೊಟ್ಟಿದ್ದರೆಂದರೆ, ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸಮಗ್ರ ವಿಶ್ವವಿದ್ಯಾಲಯ ಎಂದು ಮಾಡುವುದನ್ನು ಕೈ ಬಿಟ್ಟಿದ್ದೇವೆ ಎಂದು ವಿಧೇಯಕದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ವಿಧೇಯಕದ ಬಗ್ಗೆ ಉತ್ತರವನ್ನೂ ಕೊಟ್ಟಿದ್ದಾರೆ. ಇದನ್ನು ಕೈ ಬಿಟ್ಟಿದ್ದೇವೆ ಎಂದು ತಿದ್ದುಪಡಿ ವಿಧೇಯಕವನ್ನು ಎರಡೂ ಸದನದಲ್ಲಿ ಮಂಡನೆ ಮಾಡಿ ಅನುಮೋದನೆಯನ್ನು ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲದೇ ಮಾರ್ಚ್ ತಿಂಗಳ 15ನೇ ತಾರೀಖಿನಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೂಡ ಸಮಗ್ರ ವಿಶ್ವವಿದ್ಯಾಲಯದಿಂದ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಕೈ ಬಿಡಲಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತದನಂತರ ದಿನಾಂಕ 25.3.2025ರಂದು ಸಮಗ್ರ ವಿಶ್ವವಿದ್ಯಾಲಯ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ ನಿವೃತ್ತ ಐ.ಎ.ಎಸ್. ಅಧಿಕಾರಿಯಾದ ಶ್ರೀ ವಿಜಯ ಭಾಸ್ಕರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ರಾಜ್ಯದ ತುಂಬಾ ಸುತ್ತಾಡಿಸಿದ್ದಾರೆ. ಅವರು ವರದಿಯನ್ನು ಕೂಡ ಕೊಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ವರದಿ ಪ್ರಕಾರ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸಮಗ್ರ ವಿಶ್ವವಿದ್ಯಾಲಯವನ್ನಾಗಿ ಮಾಡುತ್ತಾರೆ ಎಂಬ ಮಾಹಿತಿ ನಮಗೆ ಬಂದಿದೆ. ಮಾನ್ಯ ಸಚಿವರು ಸಮಗ್ರ ವಿಶ್ವವಿದ್ಯಾಲಯ ಮಾಡುವುದಿಲ್ಲ ಎಂದು ಸದನದಲ್ಲಿ ಮಾತು ಕೊಟ್ಟಿದ್ದಾರೆ ಮತ್ತು ಸಚಿವ ಸಂಪುಟದಲ್ಲಿಯೂ ಹೇಳಿದ್ದಾರೆ. ಸಚಿವ ಸಂಪುಟದಲ್ಲಿ ಹೇಳಿದ ನಂತರವೂ ಇದನ್ನು ಮಾಡುತ್ತಾರೆ ಎಂದರೆ ಇದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಕೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದರ ಬಗ್ಗೆ ನಾನು ಕೂಡ ನಿಮ್ಮ ಜೊತೆ ಮಾತನಾಡಿದ್ದೇನೆ.

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಸಹ ಇದರ ಬಗ್ಗೆ ಕೇಳಿದ್ದಿರಿ, ನಾನು ತಮಗೂ ಹೇಳಿದ್ದೇನೆ. ಶ್ರೀ ವಿಜಯ ಭಾಸ್ಕರ್ ನೇತೃತ್ವದಲ್ಲಿ ಮಾಡಿರುವ ಸಮಿತಿಯಿಂದ ನಮಗೆ

ಇನ್ನೂ ವರದಿ ಬಂದಿಲ್ಲ. ಕಂಪ್ಲೀಟ್ ಆಗಿದೆ, ಅಸೆಂಬ್ಲಿ ಮುಗಿದ ನಂತರ ಬಂದು ವರದಿ ಕೊಡುತ್ತೇನೆಂದು ಹೇಳಿದ್ದಾರೆ. ವರದಿ ಕೊಟ್ಟಮೇಲೆ ಅದನ್ನು ಮಂಡಿಸಿದಾಗ ಅದರ ವಿಚಾರವನ್ನು ವಿವರವಾಗಿ ಹೇಳುತ್ತೇವೆ. ನಿಮ್ಮ ಭಾವನೆಗಳೇನಿವೆ, ಯಾವುದೇ ಕಾರಣಕ್ಕೂ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಮುಚ್ಚುವುದಾಗಲೀ, ಬೇರೆ ಮರ್ಜ್ ಮಾಡುವುದಾಗಲೀ ಪ್ರಶ್ನೆ ಇಲ್ಲ ಎಂದು ಅವತ್ತೂ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ. ಈ ತಪ್ಪು ಮಾಹಿತಿಯನ್ನು ನಿಮಗಷ್ಟೇ ಅಲ್ಲ, ನಮ್ಮ ಮಂತ್ರಿಗಳಿಗೂ, ಕೆಲವು ಎಂ.ಎಲ್.ಎ. ಗಳಿಗೂ ಕೊಟ್ಟಿದ್ದಾರೆ. ಅವರಿಗೆ ಹೇಳಿ, ಸ್ವಲ್ಪ ಗಂಭೀರವಾಗಿ, ಸಮಾಧಾನವಾಗಿ ಇರಿ. ನಾವೆಲ್ಲಾ ಅಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್‌ನಲ್ಲಿದ್ದೇವೆ, ಮಂತ್ರಿಗಳು ಅಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್‌ನಲ್ಲಿಯೇ ಉತ್ತರ ಕೊಟ್ಟಿದ್ದಾರೆ. ಇದನ್ನು ಮರ್ಜ್ ಮಾಡುವ ಪ್ರಶ್ನೆಯೂ ಇಲ್ಲ, ಮುಚ್ಚುವ ಪ್ರಶ್ನೆಯೂ ಇಲ್ಲ ಎಂದು ತಿಳಿಸಿ. ಅದೆಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ಸಭಾಪತಿಯವರಿಗೂ ನಾನು ಹೇಳಿದ್ದೇನೆ. ಬೇರೆ ಕಡೆ ಇದನ್ನು ಡಿಲೀಟ್ ಸಹ ಮಾಡುವುದಿಲ್ಲ, ಸಮಾಧಾನವಾಗಿ ಇರಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಸಚಿವರಿಗೆ ಒಂದೇ ಪ್ರಶ್ನೆ ಕೇಳುತ್ತೇನೆ, ಇದು ಸುಳ್ಳು ಮಾಹಿತಿ ಅಲ್ಲ, ಈ ವರದಿ ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:–** ಮಾನ್ಯ ನಿರಾಣಿಯವರೇ, ಮಾನ್ಯ ಸಚಿವರು ಮಾಡುವುದಿಲ್ಲ ಎಂದು ಹೇಳಿದ್ದಾರೆ ಮುಗಿಯಿತಲ್ಲವೇ?

**ಶ್ರೀ ಎನ್. ಚಲುವರಾಯಸ್ವಾಮಿ:–** ಪತ್ರಿಕೆಯಲ್ಲಿ ಬಂದದ್ದಕ್ಕೆಲ್ಲಾ ನಾವು ಉತ್ತರ ಕೊಡಬೇಕೆಂದರೆ ನಾವು ಏನು ಮಾಡೋಣ? ನಾನು ನಿಮ್ಮ ಮುಂದೆ ಹೇಳಿರುವುದು ಸರಿಯೆ ಅಥವಾ ಪತ್ರಿಕೆಯಲ್ಲಿ ಬಂದಿರುವುದು ಸರಿಯೇ ಹೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಚಿವರೇ, ಮಾಡುವುದಿಲ್ಲ ಎಂದು ಹೇಳಿದ್ದೀರಿ ತಮಗೆ ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ನಿರಾಣಿಯವರೇ, ಕುಳಿತುಕೊಳ್ಳಿ.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೇ, ನಮ್ಮ ಒತ್ತಾಯ ಇದೆ . . .

**ಶ್ರೀ ಎನ್. ಚಲುವರಾಯಸ್ವಾಮಿ:–** ವರದಿ ಬಂದ ಮೇಲೆ ಏನೇನು ಬಂದಿದೆ ಎಂದು ಚರ್ಚೆ ಮಾಡೋಣ ಬಿಡಿ. ಈಗೇತಕ್ಕೆ? ಇನ್ನೂ ವರದಿಯೇ ಬಂದಿಲ್ಲ.

**ಸಭಾಪತಿಯವರು:–** ಇನ್ನು ಇದರ ಬಗ್ಗೆ ಯಾವುದೇ ರೀತಿಯ ಚರ್ಚೆ ಮಾಡುವ ಹಾಗಿಲ್ಲ. ಮಾನ್ಯ ಸಚಿವರು ಇದ್ದ ಪರಿಸ್ಥಿತಿಯಲ್ಲಿಯೇ ಮುಂದುವರೆಯುತ್ತದೆಂದು ಹೇಳಿದ್ದಾರೆ ಸಾಕಲ್ಲವೇ? ಇನ್ನೇನು ಬೇಕು?

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆ ಅದಲ್ಲ, dilute ಮಾಡುವುದಕ್ಕೆ ಹೊರಟಿದ್ದಾರಲ್ಲಾ ಸಮಿತಿ ಮುಂದೆ; ಹಿಂದೆ ಎರಡು ಸಲ dilute ಮಾಡುವುದಕ್ಕೆ ಹೊರಟಿದ್ದರು ಎನ್ನುವುದು ಆಗಿದೆ. ಅದು ನಮ್ಮ ಭಾವನೆ.

**ಸಭಾಪತಿಯವರು:–** ಅವರು ಮಾಡುವುದಿಲ್ಲ.

**ಶ್ರೀ ಎನ್. ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ವರದಿ ಬಂದ ಮೇಲೆ ಎರಡೂ ಸದನದಲ್ಲಿ ವಿವರವಾಗಿ ಚರ್ಚೆ ಮಾಡುತ್ತೇವೆ ಆಗ ಅದರ ಬಗ್ಗೆ ಏನಾದರೂ ಬೆಳಕು ಚೆಲ್ಲಲಿ.

**ಸಭಾಪತಿಯವರು:-** ಈಗ ಶ್ರೀ ಟಿ.ಎ. ಶರವಣರವರ ಪ್ರಶ್ನೆ. ಇದಕ್ಕೆ ಉತ್ತರ ಯಾರು ಹೇಳುತ್ತಾರೆ? ಸಚಿವರು ಇಲ್ಲದಿದ್ದರೆ ಹೇಗೆ? ಸಚಿವರು ಸದನಕ್ಕೆ ಬರಬೇಕು. ಆಗ ಬರುತ್ತಾರೆ ಈಗ ಬರುತ್ತಾರೆ ಎಂದರೆ ಹೇಗೆ? ಇಬ್ಬರು ಸಚಿವರು ಮಾತ್ರ ಇದ್ದಾರೆ. ಏನು ಮಾಡಬೇಕು?

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕಡ್ಡಾಯವಾಗಿ ಸಚಿವರುಗಳು ಇರಬೇಕೆಂದು ಸಭಾಪತಿಗಳ ಪೀಠದಿಂದ ಆದೇಶವಾದರೂ ಸಚಿವರುಗಳೇ ಇಲ್ಲಿ ಕಾಣಿಸುತ್ತಿಲ್ಲ. ನನ್ನ ಪ್ರಶ್ನೆಗೆ ಯಾರು ಉತ್ತರ ಕೊಡುತ್ತಾರೆ ಅದನ್ನಾದರೂ ಹೇಳಿ.

**ಸಭಾಪತಿಯವರು:-** ಮಾನ್ಯ ಮುಖ್ಯಸಚೇತಕರೇ, ಸದನವನ್ನು ಹತ್ತು ನಿಮಿಷಗಳ ಕಾಲ adjourn ಮಾಡುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಸಚಿವರು ಬರುತ್ತಿದ್ದಾರೆ. ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಸಚಿವರು ಬರಬೇಕಲ್ಲವೇ? ಬೇರೆ ಏತಕ್ಕೆ ತೆಗೆದುಕೊಳ್ಳಬೇಕು? ಮಂತ್ರಿಗಳು ಇಲ್ಲಿಗೆ ಬರಬೇಕು. ಮಾನ್ಯ ಸಿ.ಟಿ. ರವಿಯವರೇ, ನಿಮ್ಮ ಪ್ರಶ್ನೆ ತೋಟಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ತಾವು ಆ ಪ್ರಶ್ನೆಯನ್ನು ಗಮನಿಸಿ, ಆ ಪ್ರಶ್ನೆಯನ್ನು 100 ಪರ್ಸೆಂಟ್ ತೋಟಗಾರಿಕೆ ಇಲಾಖೆಗೇ ಕೇಳಿದ್ದೇನೆ.

**ಸಭಾಪತಿಯವರು:-** ನೀವು ಪ್ರಶ್ನೆ ಕೇಳಿದ್ದೀರಿ, ನಾನು ಕರೆದಿದ್ದೇನೆ, ಅವರು ವರ್ಗಾವಣೆಯಾಗಿದೆ ಎಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ತೋಟಗಾರಿಕೆ ಇಲಾಖೆಗೆ ಬಿಟ್ಟು ಬೇರೆ ಇಲಾಖೆಗೆ ಏನನ್ನೂ ಕೇಳಿಯೇ ಇಲ್ಲ.

**ಸಭಾಪತಿಯವರು:-** ಈಗ ನಾನು ಏನು ಮಾಡಬೇಕೆಂದು ಹೇಳಿ. ನಾನು ನಿಸ್ಸಹಾಯಕನಾಗಿದ್ದೇನೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯನ್ನು ಸಚಿವರು ಬಂದ ಮೇಲೆ ತೆಗೆದುಕೊಳ್ಳುತ್ತೀರಲ್ಲವೇ?

**ಸಭಾಪತಿಯವರು:-** ಆಯಿತು. ಈಗ ಶ್ರೀ ಸುನಿಲ್ ವಲ್ಯಾಪುರ್‌ರವರ ಪ್ರಶ್ನೆ, ಅವರು ಗೈರುಹಾಜರಾಗಿದ್ದಾರೆ.

(ಮುಂದು)

(769) 19.08.2025 10.40 ಹೆಚ್‌ವಿ.ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಾವು "ನೀವು ಸರಿಯಾಗಿ ನಡೆದುಕೊಳ್ಳುತ್ತಿಲ್ಲ; ನೀವು ಸರಿಯಾಗಿ ನಡೆದುಕೊಳ್ಳದೇ ಹೋದರೇ, ನಡೆಯುವುದೇ ಬೇರೆ" ಎಂದು ಆಗಾಗ ಹೇಳುತ್ತೀರಿ. ನಡೆಯುವುದು ಬೇರೆ ಎನ್ನುವುದು ಯಾವುದೋ ನಮಗೆ ಇನ್ನೂ ಅರ್ಥವಾಗಿಲ್ಲ. ಅದು ಏನು ಮಾಡುತ್ತೀರೋ ನಮಗೆ ಗೊತ್ತಿಲ್ಲ.

**ಸಭಾಪತಿಯವರು:-** ಆ ರೀತಿ ಸುಮ್ಮನೆ ಹೇಳುತ್ತಿರುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಸದನಕ್ಕೆ ಬರದೇ ಇರುವಾಗ ತಾವು ಏತಕ್ಕೋಸ್ಕರ "ನಡೆಯುವುದೇ ಬೇರೆ" ಎನ್ನುವ ಮಾತನ್ನು ಹೇಳುವುದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಈಗ ನಾನು ಏನು ಮಾಡಲಿ? ಅವರಿಗೂ ಹೇಳಬೇಕೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಆಯಾಯ ದಿನ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾಗಿರುವ ಮಂತ್ರಿಗಳು ಸದನಕ್ಕೆ ಬರದೇ ಇರುವಾಗ, "ಮುಂದಿನ ಬಾರಿ ಸದನಕ್ಕೆ ಬರದೇ ಇದ್ದರೇ ನಡೆಯುವುದೇ ಬೇರೆ" ಎಂದು ಅವರಿಗೂ ಹೇಳಿ.

**ಸಭಾಪತಿಯವರು:-** ಏನು ನಡೆಯಬೇಕು ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಏನು ನಡೆಯುತ್ತದೆ ಎನ್ನುವುದನ್ನೇ ತಾವು ಹೇಳಬೇಕಾಗಿದೆ. ತಾವು ಮನಸ್ಸಿನಲ್ಲಿಟ್ಟುಕೊಂಡು ಬಾಯಲ್ಲಿ"ನಡೆಯುವುದೇ ಬೇರೆ" ಎಂದು ಹೇಳಿದರೆ, ನಮಗೆ ಯಾವ ರೀತಿ ಅರ್ಥವಾಗಬೇಕು?

**ಶ್ರೀ ಸಿ.ಟಿ.ರವಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾಪತಿಯವರಿಗೆ ಈ ಸದನದಲ್ಲಿ ಸುಮಾರು 47 ವರ್ಷಗಳ ಅನುಭವಾಗಿದೆ. ಅದು ಯಾರಿಗೆ ಏನು ಹೇಳಬೇಕೆನ್ನುವುದನ್ನು ಅವರಿಗೆ ಕಲಿಸಿಕೊಟ್ಟಿದೆ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ನಾನು ನಿಮ್ಮಷ್ಟು ಬುದ್ಧಿವಂತನಲ್ಲ, ಅಷ್ಟು ಮಾತ್ರ ಹೇಳಬಹುದು. ಈಗ ಮುಂದಿನ ಪ್ರಶ್ನೆ ಶ್ರೀ ಜಗದೇವ್ ಗುತ್ತೇದಾರ್ ಅವರದು.

## ಪ್ರಶ್ನೆ ಸಂಖ್ಯೆ: ೮೦೦

## ಕಲಬುರ್ಗಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; | ಹೌದು.<br><br>2021-22ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯ ಘೋಷಣೆಯಲ್ಲಿ ದೇಶಾದ್ಯಂತ 07 Prime Minister Mega integrated Textile Region and Apparel Park (PM-MITRA) ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಘೋಷಿಸಲಾಗಿರುತ್ತದೆ. |
| ಆ) | ಜವಳಿ ಪಾರ್ಕ್ ಯಾವಾಗ ಪ್ರಾರಂಭಿಸಲಾಗುವುದು; ಹಾಗೂ ಯಾವಾಗ ಮುಕ್ತಾಯಗೊಳಿಸಲಾಗುವುದು; | ಈಗಾಗಲೇ PM-MITRA Park Karnataka Ltd ಎಂಬ ಎಸ್.ಪಿ.ವಿ. ಅನ್ನು ದಿನಾಂಕ:27-03-2024 ರಂದು ನೋಂದಾಯಿಸಲಾಗಿರುತ್ತದೆ. ಸದರಿ ಜವಳಿ ಪಾರ್ಕ್‌ನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ DBFOT (Design, Build, Finance, Operate and Transfer) ಮಾದರಿಯಲ್ಲಿ ಸ್ಥಾಪಿಸಲು Master Developer ಆಯ್ಕೆಗಾಗಿ ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ಗಳನ್ನು ರಾಜ್ಯ ಕಾನೂನು ಇಲಾಖೆಯ ಅನುಮೋದನೆಯೊಂದಿಗೆ ಜವಳಿ ಮಂತ್ರಾಲಯ, ಭಾರತ ಸರ್ಕಾರ, National Industrial Corridor Development Corporation (NICDC) ನಿಗಮಕ್ಕೆ ದಿನಾಂಕ:11-07-2025 ರಂದು ಸಲ್ಲಿಸಲಾಗಿದೆ. NICDC ಮೂಲಕ ಕೇಂದ್ರ PPPAC ಸಮಿತಿ ಸಭೆಯ ಅನುಮೋದನೆಗೆ ಬಾಕಿ ಇರುತ್ತದೆ. ರಾಜ್ಯ Environmental Clearance (EC) ಪಡೆಯುವ ಕುರಿತು ಈಗಾಗಲೇ ಪರವೇಶ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, ಅನುಮೋದನೆಗೆ ಬಾಕಿ ಇರುತ್ತದೆ. ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ನಂತರ ಮುಂದಿನ ಕ್ರಮಕೈಗೊಳ್ಳಬೇಕಾಗಿದೆ. |
| ಇ) | ಜವಳಿ ಪಾರ್ಕ್ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು; ಹಾಗೂ ಇದುವರೆಗೆ ಅದಕ್ಕೆ ಮೀಸಲಿಟ್ಟಿರುವ ಮೊತ್ತವೆಷ್ಟು; | ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್ ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು ದಿನಾಂಕ:17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಸರ್ಕಾರದ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ:03-10-2024 ರಲ್ಲಿ ಮಂಜೂರಾತಿಯನ್ನು ನೀಡಿದೆ. |

| | | |
|---|---|---|
| | | PM-MITRA ಪಾರ್ಕ್‌ನ್ನು ಅನುಷ್ಠಾನಗೊಳಿಸಲು ಯೋಜನಾ ಮೊತ್ತ ರೂ.1826.00 ಕೋಟಿಗಳನ್ನು ಅಂದಾಜಿಸಲಾಗಿರುತ್ತದೆ. ಸದರಿ ಮೊತ್ತವನ್ನು Master Developer ರವರು ಹೂಡಿಕೆ ಮಾಡಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಿದ ನಂತರ ಕೇಂದ್ರ ಸರ್ಕಾರದಿಂದ ರೂ.500.00 ಕೋಟಿಗಳನ್ನು (ರೂ.300.00+200.00 ಕೋಟಿಗಳು) 02 ಹಂತಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುದಾನ ಒದಗಿಸಲಾಗುವುದು. |
| ಈ) | ಜವಳಿ ಪಾರ್ಕ್ ನಿರ್ಮಾಣಕ್ಕಾಗಿ ಜಾಗವನ್ನು ಮೀಸಲಾಗಿಟ್ಟಿದೆಯೇ; ಇಟ್ಟಿದ್ದರೆ ಎಷ್ಟು ಜಾಗವನ್ನು ಮೀಸಲಾಗಿಟ್ಟಿದೆ; | ಕಲಬುರಗಿ ಜಿಲ್ಲೆಯ, ಕಲಬುರಗಿ ತಾಲ್ಲೂಕಿನ ನದಿಸಿನ್ನೂರು ಹಾಗೂ ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 1000 ಎಕರೆ ಜಮೀನನ್ನು ರಾಜ್ಯ ಸರ್ಕಾರವು PM-MITRA Park Karnataka Ltd ಎಸ್.ಪಿ.ವಿಗೆ ಸಾಂಕೇತಿಕ ದರದಲ್ಲಿ 99 ವರ್ಷಗಳ ಅವಧಿಗೆ ದಿನಾಂಕ:22.10.2024 ರಂದು ಹಸ್ತಾಂತರಿಸಲಾಗಿರುತ್ತದೆ. |
| ಉ) | ಜವಳಿ ಪಾರ್ಕ್ ನಿರ್ಮಾಣಕ್ಕೆ ಕೇಂದ್ರದಿಂದ ದೊರೆಯಬೇಕಾದ ಸೌಲಭ್ಯಗಳಿಗಾಗಿ ಹಾಗೂ ಅನುಮೋದನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಈಗಾಗಲೇ PM-MITRA Park Karnataka Ltd ಎಂಬ ಎಸ್.ಪಿ.ವಿ. ಅನ್ನು ದಿನಾಂಕ:27-03-2024 ರಂದು ನೋಂದಾಯಿಸಲಾಗಿರುತ್ತದೆ. ಸದರಿ ಜವಳಿ ಪಾರ್ಕ್‌ನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ DBFOT (Design, Build, Finance, Operate and Transfer) ಮಾದರಿಯಲ್ಲಿ ಸ್ಥಾಪಿಸಲು Master Developer ಆಯ್ಕೆಗಾಗಿ ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ಗಳನ್ನು ರಾಜ್ಯ ಕಾನೂನು ಇಲಾಖೆಯ ಅನುಮೋದನೆಯೊಂದಿಗೆ ಜವಳಿ ಮಂತ್ರಾಲಯ, ಭಾರತ ಸರ್ಕಾರ, National Industrial Corridor Development Corporation (NICDC) ನಿಗಮಕ್ಕೆ ದಿನಾಂಕ:11-07-2025 ರಂದು ಸಲ್ಲಿಸಲಾಗಿದೆ. NICDC ಮೂಲಕ ಕೇಂದ್ರ PPPAC ಸಮಿತಿ ಸಭೆಯ ಅನುಮೋದನೆಗೆ ಬಾಕಿ ಇರುತ್ತದೆ. ರಾಜ್ಯ Environmental Clearance (EC) ಪಡೆಯುವ ಕುರಿತು ಈಗಾಗಲೇ ಪರವೇಶ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, ಅನುಮೋದನೆಗೆ ಬಾಕಿ ಇರುತ್ತದೆ. ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ನಂತರ ಮುಂದಿನ ಕ್ರಮಕೈಗೊಳ್ಳಬೇಕಾಗಿದೆ. |

**ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ PM- MITRA (Mega Integrated Textile Region and Apparel Park) ಜವಳಿ ಪಾರ್ಕ್‌ನ್ನು ಸ್ಥಾಪಿಸಲು ಈ ಸರ್ಕಾರ ಘೋಷಣೆ ಮಾಡಿದೆ ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಈ ಉದ್ದೇಶಕ್ಕಾಗಿ ಆ ಭಾಗದಲ್ಲಿ ಸುಮಾರು ಒಂದು ಸಾವಿರ ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಈ ಯೋಜನೆಯನ್ನು ಅನುಷ್ಠಾನಗೊಳಸಲು 1,826 ಕೋಟಿ ರೂಪಾಯಿಗಳ ವೆಚ್ಚವನ್ನು ಅಂದಾಜಿಸಲಾಗಿದೆ. ಆದರೆ, ಇದನ್ನು ಅಭಿವೃದ್ಧಿಪಡಿಸಲು ಸುಮಾರು 390 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಈ ಪಾರ್ಕ್ ನಿರ್ಮಾಣಕ್ಕಾಗಿ ಒಂದು ಸಾವಿರ ಎಕರೆ ಜಮೀನು ಸ್ವಾಧೀನ

ಪಡಿಸಿಕೊಂಡಿರುವುದರಿಂದ ಅಲ್ಲಿನ ರೈತರಿಗೆ ಬಹಳ ಸಮಸ್ಯೆಯಾಗಿದೆ. ಇದರಿಂದ ಅಲ್ಲಿನ ರೈತರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಗೋವಾ ಮತ್ತು ಮುಂಬೈನಂತಹ ಬೇರೆ ರಾಜ್ಯಗಳಿಗೆ ಗುಳೆ ಹೋಗುತ್ತಿದ್ದಾರೆ. ರೈತರು ಈ ರೀತಿ ಗುಳೆ ಹೋಗುವುದನ್ನು ತಪ್ಪಿಸಲು ಸರ್ಕಾರ ತ್ವರಿತಗತಿಯಲ್ಲಿ ಈ ಪಾರ್ಕ್ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಬೇಕೆನ್ನುವುದು ನನ್ನ ಮನವಿಯಾಗಿದೆ. ಇದನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಸಮಯಬೇಕಾಗುತ್ತದೆ ಎನ್ನುವುದಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಕೊಡಬೇಕಾಗಿದೆ.

**ಶ್ರೀ ಶಿವಾನಂದ ಎಸ್.ಪಾಟೀಲ್(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಇಡೀ ದೇಶದಲ್ಲಿ 07 PM- MITRA ಜವಳಿ ಪಾರ್ಕ್‌ವನ್ನು ಸ್ಥಾಪಿಸಲು ಘೋಷಣೆ ಮಾಡಲಾಗಿದೆ. ಇದರಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೂ ಒಂದು PM- MITRA ಜವಳಿ ಪಾರ್ಕ್ ಸಿಕ್ಕಿರುವುದು ನಮ್ಮ ಸುದೈವವೆಂದು ನಾನು ಭಾವಿಸುತ್ತೇನೆ. PM- MITRA ಜವಳಿ ಪಾರ್ಕ್‌ಗೆ ಕೊಟ್ಟಿರುವ ಜಮೀನನ್ನು ಇವತ್ತು ತೆಗೆದುಕೊಂಡಿರುವುದಲ್ಲ. ಬಹಳ ವರ್ಷಗಳ ಹಿಂದೆ ಸೋಲಾರ್ ಪಾರ್ಕ್ ನಿರ್ಮಾಣಕ್ಕಾಗಿ ಸರ್ಕಾರ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ 3,000 ಎಕರೆ ಜಮೀನಿನಲ್ಲಿ 1,000 ಎಕರೆ ಜಮೀನನ್ನು ಮಾತ್ರ PM- MITRA ಜವಳಿ ಪಾರ್ಕ್ ನಿರ್ಮಾಣಕ್ಕಾಗಿ ಕೊಡಲಾಗಿದೆ. ಈ ಪಾರ್ಕ್ ನಿರ್ಮಾಣ ಪೂರ್ಣಗೊಳ್ಳುವುದಕ್ಕೆ ಕನಿಷ್ಠ 5 ರಿಂದ 10 ವರ್ಷಗಳು ಬೇಕಾಗುತ್ತದೆ. ಈಗಾಗಲೇ PM- MITRA ಪಾರ್ಕ್ ಕರ್ನಾಟಕ ಲಿಮಿಟೆಡ್ ಎಂಬ ಎಸ್.ಪಿ.ವಿ., ಅನ್ನು ಮಾಡಿಕೊಂಡು ಆ Consultant ನ್ನು PM- MITRA ಜವಳಿ ಪಾರ್ಕ್‌ಗೆ ಹಣವನ್ನು ವ್ಯಯ ಮಾಡಬೇಕಾಗುತ್ತದೆ. ಇಂದಿನ ಅಂದಾಜಿನ ಪ್ರಕಾರ ಈ ಪಾರ್ಕ್ ನಿರ್ಮಾಣಕ್ಕೆ ಸುಮಾರು 1,850 ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯ ಮಾಡಬೇಕಾಗುತ್ತದೆ. ಇದು ಸಂಪೂರ್ಣವಾಗಿರುವ ಅಂಕಿಅಂಶವಲ್ಲ. ಇದನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಖಾಸಗಿಯವರು ಹಣವನ್ನು ಹೂಡಬೇಕಾಗುತ್ತದೆ. ಇದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹ ತಲಾ 500 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಈ ಎಲ್ಲ ಹಣ ಹೂಡಿಕೆಯಾದ ಮೇಲೆ PM- MITRA ಜವಳಿ ಪಾರ್ಕ್‌ನ್ನು ಪ್ರಾರಂಭ ಮಾಡಲಾಗುತ್ತದೆ. ಇದು Integrated Park ಆಗಿರುವುದರಿಂದ ಇದು ಸಣ್ಣ ಯೋಜನೆಯಲ್ಲ. ಇಡೀ ರಾಜ್ಯಕ್ಕೆ ಅಷ್ಟೇ ಅಲ್ಲ ದೇಶಕ್ಕೆ ಮಾದರಿಯಾಗಿರುವಂತಹ ಯೋಜನೆಯಾಗಿದೆ. ಕಲಬುರಗಿಯಲ್ಲಿ PM-MITRA ಜವಳಿ ಪಾರ್ಕ್ ಪ್ರಾರಂಭವಾದರೆ, ಸುಮಾರು ಒಂದು ಲಕ್ಷ ಜನರಿಗೆ ಉದ್ಯೋಗಾವಕಾಶಗಳು ದೊರೆಯಲ್ಲಿದೆ. ಇವತ್ತು ಯಾರ್ನ್‌ನಿಂದ ಹಿಡಿದು ಜಿನ್ನಿಂಗ್, ಪ್ರೆಸ್ಸಿಂಗ್ ಮಾಡಿ, ವೀವಿಂಗ್ ಮಾಡಿ ಡೈಯಿಂಗ್ ಮಾಡಿ ಬಟ್ಟೆ ತಯಾರು ಮಾಡುವಂತಹ Integrated Park ಕಾರ್ಖಾನೆಯಾಗಿದೆ. ಇದನ್ನು ಪೂರ್ಣಗೊಳಿಸುವುದಕ್ಕೆ ಕನಿಷ್ಠ 5 ರಿಂದ 10 ವರ್ಷಗಳಾಗುತ್ತವೆ. ಕೇಂದ್ರ ಸರ್ಕಾರದ ಜೊತೆಗೆ ನಾವು ಒಡಂಬಡಿಕೆ ಮಾಡಿಕೊಂಡು ಯಾವಯಾವ ಹಂತದಲ್ಲಿ ಏನೇನು ಮಾಡಬೇಕು ಆ ಪ್ರಕ್ರಿಯೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಈಗಾಗಲೇ PM-MITRA Park Karnataka Limited ಎಂಬ ಎಸ್.ಪಿ.ವಿ., ಅನ್ನು ನೋಂದಾಯಿಸಿ,

ಗುತ್ತಿಗೆದಾರರನ್ನು ನೇಮಕಾತಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗಿದೆ. ಇವತ್ತು ಕೆ.ಕೆ.ಆರ್.ಡಿ.ಬಿ., ಯಿಂದ ಸುಮಾರು 390 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮೀಸಲಾಗಿಡಲಾಗಿದೆ. ಸಮಯಕ್ಕೆ ಅನುಸಾರವಾಗಿ ಈ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಜಗದೇವ್ ಗುತ್ತೇದಾರ್:-** ಸನ್ಮಾನ್ಯ ಸಭಾಪತಿಯವರೇ, ಸುಮಾರು 3,000 ಎಕರೆ ಜಮೀನಿನಲ್ಲಿ 1,000 ಎಕರೆ ಜಮೀನನ್ನು ಈ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ನಿರಂತರವಾಗಿ ರೈತರು ಗುಳೆ ಹೋಗುತ್ತಿದ್ದಾರೆ. ಆದಷ್ಟು ತ್ವರಿತವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮುತುವರ್ಜಿ ವಹಿಸಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಿ, ಅಲ್ಲಿನ ರೈತರು ಗುಳೆ ಹೋಗುವುದನ್ನು ತಪ್ಪಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಶಿವಾನಂದ ಎಸ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಖಂಡಿತವಾಗಿ ನಾವು ಈ ನಿಟ್ಟಿನಲ್ಲಿ ಕ್ರಮ ವಹಿಸುತ್ತೇವೆ.

## ಪ್ರಶ್ನೆ ಸಂಖ್ಯೆ: 798

## ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಲ್ಯಾಟರೈಟ್ ಗಣಿ ಗುತ್ತಿಗೆಗಳ ಬಗ್ಗೆ

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್‌ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಲ್ಯಾಟರೈಟ್ ಗಣಿಗೆ ಸಂಬಂಧಿಸಿದಂತೆ ನೀಡಲಾದ ಕಲ್ಲುಗಣಿ ಗುತ್ತಿಗೆಗಳೆಷ್ಟು; (ಪಟ್ಟಿಯನ್ನು ಒದಗಿಸುವುದು)</td><td>ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 32ರಡಿ ಖಾಸಗಿ/ ಪಟ್ಟಾ ಜಮೀನುಗಳಲ್ಲಿ ಲ್ಯಾಟರೈಟ್ ಗಣಿಗಾರಿಕೆಗೆ ಲೈಸನ್ಸ್‌ಗಳನ್ನು ನೀಡಿದ್ದು, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಗಣಿ ಲೈಸನ್ಸ್‌ಗಳ ವಿವರ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಲೈಸೆನ್ಸ್‌ಗಳ ಸಂಖ್ಯೆ</th></tr>
<tr><td>1</td><td>ದಕ್ಷಿಣ ಕನ್ನಡ</td><td>19</td></tr>
<tr><td>2</td><td>ಬೆಳಗಾವಿ</td><td>02</td></tr>
</table>
ವಿವರಗಳನ್ನು ಅನುಬಂಧ- 01ರಲ್ಲಿ ನೀಡಿದೆ.</td></tr>
<tr><td>ಆ)</td><td>ಕಾರ್ಯನಿರ್ವಹಿಸುತ್ತಿರುವ ಈ ಎಲ್ಲಾ ಕಲ್ಲುಗಣಿ ಗುತ್ತಿಗೆಗಳಲ್ಲಿ ಪರಿಸರ ಸಂರಕ್ಷಣಾ ಯೋಜನೆಯನ್ನು ಸಲ್ಲಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆಯೇ;</td><td>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-8(1-A) ರಂತೆ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್‌ಗಳ ಮಂಜೂರಾತಿಗೆ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಪರಿಸರ ಅನುಮತಿ ಪತ್ರ ಸಲ್ಲಿಕೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.<br><br>➢ ಅನುಮೋದಿತ ಕ್ವಾರಿಯಿಂಗ್ ಪ್ಲಾನ್‌ನಲ್ಲಿ ಪರಿಸರ ಸಂರಕ್ಷಣಾ ಯೋಜನೆಯು (Environmental Management Plan) ಸಹ ಒಳಗೊಂಡಿದ್ದು, ಸದರಿ ಕ್ವಾರಿಯಿಂಗ್ ಪ್ಲಾನ್‌ನಲ್ಲಿ ನಮೂದಿಸಿರುವ ಪರಿಸರ ಸಂರಕ್ಷಣಾ ಕ್ರಮಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಜಾರಿ ಮಾಡುವ ಪರಿಸರ ಅನುಮತಿ ಪತ್ರದಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಗುತ್ತಿಗೆ/ಲೈಸೆನ್ಸ್‌ದಾರರಿಂದ ಕ್ರಮಕೈಗೊಳ್ಳಲಾಗುತ್ತಿದೆ.</td></tr>
</table>

| | | |
|---|---|---|
| ಇ) | ಏಪ್ರಿಲ್-2020 ರಿಂದ ಇಲ್ಲಿಯವರೆಗೆ ರದ್ದಾಗಿರುವ ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ಲ್ಯಾಟರೈಟ್ ಗಣಿಗೆ ಸಂಬಂಧಿಸಿದಂತೆ ನೀಡಲಾದ ಕಲ್ಲುಗಣಿ ಗುತ್ತಿಗೆಗಳೆಷ್ಟು; (ಪಟ್ಟಿಯನ್ನು ಒದಗಿಸುವುದು) | ಏಪ್ರಿಲ್-2020 ರಿಂದ ಇಲ್ಲಿಯವರೆಗೆ ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ರದ್ದುಪಡಿಸಿರುವ ಲ್ಯಾಟರೈಟ್ ಗಣಿ ಗುತ್ತಿಗೆಗಳ ವಿವರ ಕೆಳಕಂಡಂತಿದೆ:<br><br>ಕ್ರ. ಸಂ. \| ಜಿಲ್ಲೆ \| ರದ್ದುಪಡಿಸಿರುವ ಗುತ್ತಿಗೆ/ ಲೈಸೆನ್ಸ್‌ಗಳ ಸಂಖ್ಯೆ<br>1 \| ದಕ್ಷಿಣ ಕನ್ನಡ \| 01<br>2 \| ಬೆಳಗಾವಿ \| 02<br><br>ವಿವರಗಳನ್ನು ಅನುಬಂಧ- 02 ರಲ್ಲಿ ನೀಡಲಾಗಿದೆ. |
| ಈ) | ರದ್ದಾಗಿರುವ ಈ ಎಲ್ಲಾ ಕಲ್ಲುಗಣಿ ಗುತ್ತಿಗೆಗಳಲ್ಲಿ ಗಣಿ ಸಮಾಪನಾ ಯೋಜನೆಯನ್ನು ಜಾರಿಗೆ ತರಲಾಗಿದೆಯೇ; ಹಾಗಿದ್ದಲ್ಲಿ, ರದ್ದು ಮಾಡಿರುವ ಕಲ್ಲುಗಣಿ ಗುತ್ತಿಗೆಗಳಿಗೆ ಪರಿಸರ ಸಂರಕ್ಷಣಾ ಯೋಜನೆ ಮತ್ತು ಗಣಿ ಸಮಾಪನಾ ಯೋಜನೆಯ ಎಲ್ಲಾ ಷರತ್ತುಗಳನ್ನು ಪಾಲಿಸಲಾಗುತ್ತಿದೆಯೇ? | ➢ ಗುತ್ತಿಗೆ/ಲೈಸೆನ್ಸ್ ಮಂಜೂರಾತಿ ಪ್ರಕರಣಗಳಲ್ಲಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್‌ನಲ್ಲಿ ಪರಿಸರ ಸಂರಕ್ಷಣಾ ಯೋಜನೆಯು (Environmental Management Plan) ಮತ್ತು ಗಣಿ ಸಮಾಪನಾ ಯೋಜನೆಯು ಒಳಗೊಂಡಿರುತ್ತದೆ. ಸದರಿ ಕ್ವಾರಿಯಿಂಗ್ ಪ್ಲಾನ್ ನಲ್ಲಿ ನಮೂದಿಸಿರುವ ಪರಿಸರ ಸಂರಕ್ಷಣಾ ಕ್ರಮಗಳು ಹಾಗೂ ಗಣಿ ಸಮಾಪ್ತಿಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಅನುಷ್ಠಾನಗೊಳಿಸಲು, ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಜಾರಿ ಮಾಡುವ ಪರಿಸರ ಅನುಮತಿ ಪತ್ರದಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿದ್ದು, ಅದರಂತೆ ಗುತ್ತಿಗೆ / ಲೈಸೆನ್ಸ್‌ದಾರರು ಕ್ರಮಕೈಗೊಳ್ಳಬೇಕಾಗಿದೆ. ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ (SEIAA)ರವರು ಅನುಷ್ಠಾನದ ಬಗ್ಗೆ ಪರಿಶೀಲಿಸಿ ಕ್ರಮವಹಿಸಬೇಕಾಗಿದೆ.<br>➢ ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಒಟ್ಟು 03 ಲ್ಯಾಟರೈಟ್ ಗಣಿ ಲೈಸನ್ಸ್‌ಗಳನ್ನು ರದ್ದುಪಡಿಸಲಾಗಿರುತ್ತದೆ. ಅವುಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ 01 ಗಣಿ ಗುತ್ತಿಗೆ ಲೈಸನ್ಸ್‌ಗೆ ಅನುಮೋದಿಸಿರುವ ಕ್ವಾರಿಯಿಂಗ್ ಪ್ಲಾನ್‌ನಲ್ಲಿ ಗಣಿ ಸಮಾಪನಾ ಯೋಜನೆಯು ಒಳಗೊಂಡಿರುತ್ತದೆ. ಲೈಸನ್ಸ್‌ದಾರರು ಗಣಿ ಸಮಾಪನಾ ಯೋಜನೆಯಂತೆ ಅನುಷ್ಠಾನಗೊಳಿಸಿ ಅನುಸರಣಾ ವರದಿ ಸಲ್ಲಿಸಲು ಲೈಸೆನ್ಸ್ ದಾರರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br>➢ ಬೆಳಗಾವಿ ಜಿಲ್ಲೆಯ 02 ಗಣಿ ಗುತ್ತಿಗೆ ಲೈಸನ್ಸ್‌ಗಳ ಅವಧಿ ಮುಕ್ತಾಯ ಪೂರ್ವದಲ್ಲಿ ನಿಲಂಬನೆಗೊಳಿಸಿರುವ/ ರದ್ದುಪಡಿಸಿರುವ ಕ್ರಮದ ವಿರುದ್ಧ ಮಾನ್ಯ ಉಚ್ಛನ್ಯಾಯಾಲಯ ಬೆಂಗಳೂರುದಲ್ಲಿ ರಿಟ್ ಅರ್ಜಿ ಸಂಖ್ಯೆ- 4235/2023 ಮತ್ತು 18786/2022 ರಲ್ಲಿ ಪ್ರಶ್ನಿಸಿದ್ದು, ಪ್ರಕರಣವು ವಿಚಾರಣೆಯಲ್ಲಿರುತ್ತದೆ. ಆದ್ದರಿಂದ ಗಣಿ ಸಮಾಪನಾ ಯೋಜನೆಯನ್ನು ಲೈಸನ್ಸ್‌ದಾರರು ಅನುಷ್ಠಾನಗೊಳಿಸಿರುವುದಿಲ್ಲ. |

ಸಿಐ -ಎಂಎಂಎನ್/214/2025

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಪ್ರಶ್ನೆ ಕೇಳುವುದಕ್ಕೂ ಮೊದಲು ಅಧಿಕಾರಿಗಳ ನಡವಳಿಕೆ ಯಾವ ರೀತಿ ಇರುತ್ತದೆ ಎನ್ನುವುದಕ್ಕೆ ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ನಾನು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಪಡೆದುಕೊಳ್ಳಲು ಪತ್ರವನ್ನು ನೀಡಲು ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಹೋಗಿದ್ದೆ, ಆಗ ಅಲ್ಲಿದ್ದ ಅಧಿಕಾರಿ ನನಗೆ ಕೈ ತೋರಿಸಿ, "Hello, come here" ಎಂದು ಹೇಳುತ್ತಾರೆ. ಇಷ್ಟು casual ಆಗಿ ಇರುವಂತಹ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ, ಯಾರು ನಿಷ್ಠಾವಂತರಾಗಿದ್ದಾರೆ, ಅವರನ್ನು ಇಲ್ಲಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕಾರಣವೇನೆಂದರೆ, he is very inefficient. ಮಾರ್ಚ್ ತಿಂಗಳಾದ ಮೇಲೆ ನಾನು ನಾಲ್ಕು ಪತ್ರಗಳನ್ನು ಕೊಟ್ಟಿದ್ದೇನೆ. ಇಲ್ಲಿಯವರೆವಿಗೂ ನನಗೆ ಒಂದೇ ಒಂದು ಉತ್ತರವನ್ನು ಕಳುಹಿಸಿಕೊಟ್ಟಿಲ್ಲ.

**ಸಭಾಪತಿಯವರು:-** ಆ ಅಧಿಕಾರಿ ಯಾರು?

**ಶ್ರೀ ವೈ.ಎಂ.ಸತೀಶ್:-** ಸನ್ಮಾನ್ಯ ಸಭಾಪತಿಯವರೇ, ಆ ಅಧಿಕಾರಿಯ ಹೆಸರು ಗಿರೀಶ್ ಎಂದು. ನಾಲ್ಕು ಪತ್ರಗಳನ್ನು ಕೊಟ್ಟಿದ್ದರೂ ಅವರು ಒಂದು ಪತ್ರಕ್ಕೂ ಉತ್ತರವನ್ನು ನೀಡಿಲ್ಲ. ಅದಕ್ಕಾಗಿಯೇ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅವರು ಉತ್ತರವನ್ನು ಕೊಟ್ಟಿದ್ದರೇ ನಾನು ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ, ಕಾರ್ಯ ನಿರ್ವಹಿಸದೇ ಇರುವಂತಹ ಮತ್ತು ಲ್ಯಾಪ್ಸ್ ಆಗಿರುವಂತಹ ಲ್ಯಾಟರೈಟ್ ಕಲ್ಲು ಗಣಿಗಳ ಗುತ್ತಿಗೆಗಳ ಸಂಖ್ಯೆ ಎಷ್ಟು ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ನಾನು ಇದನ್ನು illegal laterite mining ಎಂದು ಕರೆಯುವುದಿಲ್ಲ. ನಾನು ಇದನ್ನು ಸರಳವಾಗಿ violations of minor mineral concession rules ಎಂದು ಕರೆಯುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ರೂಪದ ಉತ್ತರವನ್ನು ನೋಡಿದರೆ, ರೂಲ್ 15ಎ ಅನ್ನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ರೂಲ್ 15ಎ "ಎರಡು ಎಕರೆಗಿಂತ ಕಡಿಮೆ ಇರುವಂತಹ ಪ್ರಕರಣಗಳಿಗೆ ಕ್ವಾರಿ ಲೀಸ್ ಕೊಡಬಾರದು" ಎಂದು ಹೇಳುತ್ತದೆ. ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ರೂಪದ ಉತ್ತರದಲ್ಲಿನ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ:01 ಮತ್ತು 04ನೇ ಪ್ರಕರಣಗಳಲ್ಲಿ ಒಂದು ಎಕರೆ ಇರುವಂತಹವುಗಳಿಗೂ quarry leases ನೀಡಲಾಗಿದೆ. ಇದನ್ನೆಲ್ಲ ನಾನು ಪಾಯಿಂಟ್‌ಔಟ್ ಮಾಡಿ ನಿರ್ದೇಶಕರಿಗೆ ಪತ್ರವನ್ನು ಬರೆದಿದ್ದೆ. ಆ ಪತ್ರದಲ್ಲಿ "ನಾನು ನಿಮ್ಮ ಮೇಲಾಗಲೀ ಅಥವಾ ನಿಮ್ಮ ಅಧಿಕಾರಿಗಳ ಮೇಲಾಗಲೀ ಆರೋಪ ಮಾಡುತ್ತಿಲ್ಲ. ಈ ವ್ಯವಸ್ಥೆಯನ್ನು ಸರಿಪಡಿಸಿ" ಎಂದು ಮನವಿ ಮಾಡಿದ್ದೆ. ಆದರೂ ಸಹ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳು, it is environmentally sensitive area ಆಗಿವೆ. ಕಲ್ಲು ಗಣಿಗಾರಿಕೆಯ ಪರವಾನಗಿಯ ಅವಧಿ ಮುಗಿದ ಮೇಲೆ ಅಥವಾ ರದ್ದುಪಡಿಸಿದ್ದರೆ

they are supposed to do environmental management plan on the regular basis and mine closure plan after it closes. ಎಷ್ಟು ಪ್ರಕರಣಗಳಲ್ಲಿ environmental management plan ಅನ್ನು ಇಂಪ್ಲಿಮೆಂಟ್ ಮಾಡಿಸಲಾಗಿದೆ, ಎಷ್ಟು quarry leases which have been closed ಅದಕ್ಕೆ mine closure plan ಮಾಡಲಾಗಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ಬಳಿ ಇರುವಂತಹ ಮಾಹಿತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 11 quarry leases ಮುಕ್ತಾಯಗೊಂಡಿವೆ, 19 quarry leases ಮಾತ್ರ ಕಾರ್ಯನಿರ್ವಹಿಸುತ್ತಿವೆ. ಬೆಳಗಾವಿ ಜಿಲ್ಲೆಯಲ್ಲಿ 28 quarry leasesಗಳು ಮುಕ್ತಾಯಗೊಂಡಿವೆ, 02 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಮಾನ್ಯ ಸಚಿವರು ಅದೇ ಮಾಹಿತಿಯನ್ನು ನೀಡಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಮುಕ್ತಾಯಗೊಂಡಿರುವ 28 quarry leasesಗಳು mine closure plan ಮಾಡಿದ್ದಾರೆಯೇ ಇಲ್ಲವೇ? ಯಾರು mine closure plan ಅನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕ್ವಾರಿ ಗುತ್ತಿಗೆದಾರರು ಒಂದು ಮೂರು ವರ್ಷಗಳಿಗೆ ಲೀಸ್ ತೆಗೆದುಕೊಂಡು ಆ ಮೂರು ವರ್ಷದಲ್ಲಿ ಅದನ್ನು ಖಾಲಿ ಮಾಡಿ ಹೋಗುತ್ತಾರೆ. ಅದಕ್ಕೆ environmental measures ಇರುವುದಿಲ್ಲ. Environmental protection or mine closure plan ಮಾಡಿರುವುದಿಲ್ಲ. Who is the monitoring agency to ensure that this is implemented. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡಿಲ್ಲ. ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ SEIAA (State Environment Impact Assessment Authority) ಎಂದು ಕೊಟ್ಟಿದ್ದಾರೆ. ಅದರ ಅರ್ಥವೇನೆಂದು ನನಗೆ ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಅಧಿಕಾರಿ ಯಾರೆಂದು ನೋಡಿ. ಶಾಸಕರ ಜೊತೆಗೆ ಆ ರೀತಿ ವರ್ತಿಸಿರುವವರ ಮೇಲೆ ತಕ್ಷಣವೇ ಕ್ರಮ ತೆಗೆದುಕೊಳ್ಳಿ. ಈ ರೀತಿ ಮಾಡುವುದು ಸರಿಯಲ್ಲ, ಇದನ್ನು ಗಂಭೀರವಾಗಿ ಪರಿಗಣಿಸಿ.

**ಶ್ರೀ ಚೆಲುವರಾಯಸ್ವಾಮಿ(ಕೃಷಿ ಸಚಿವರು(ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿದ ಮೇಲೆ ಇದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ಸಂಬಂಧಪಟ್ಟ ಮಂತ್ರಿಗಳು ಬಂದ ಮೇಲೆ ಕಾರ್ಯದರ್ಶಿಗಳ ಮೂಲಕ ಅವರಿಗೆ ಏನು ನಿರ್ದೇಶನವನ್ನು ನೀಡಬೇಕು ಅದನ್ನು ನೀಡಲಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಇಂತಹ ಅಧಿಕಾರಿಗಳನ್ನು ಒಂದು ಬಾರಿ ಸಸ್ಪೆಂಡ್ ಮಾಡಿಸಿದರೆ, ಬೇರೆಯವರಿಗೂ ಸಹ ಭಯ ಬರುತ್ತದೆ. ನಾವು ಏನೂ ಕ್ರಮ ಜರುಗಿಸದೇ ಹೋದರೆ, ಇದೇ ರೀತಿ ಆಗುತ್ತದೆ. (ಮುಂದು)

(770) 19.8.2025 10.50 ಪಿಕೆ:ಎಂಡಿ

**ಶ್ರೀ ಎನ್. ಚಲುವರಾಯಸ್ವಾಮಿ(ಮುಂದು)**

ಮಾನ್ಯ ಸಭಾಪತಿಗಳೆ, ಮಾನ್ಯ ವಿಧಾನಸಭಾಧ್ಯಕ್ಷರು, ಎಲ್ಲಾ ಶಾಸಕರನ್ನು ಎಂಎಲ್‌ಸಿ ಮತ್ತು ಮಂತ್ರಿಗಳನ್ನು ಕರೆದು, ಈ ವಿಚಾರದಲ್ಲಿ ಸುದೀರ್ಘ ಚರ್ಚೆ ಮಾಡಿ, ಏನೇನು ಸರಳೀಕರಣ ಮಾಡಬೇಕು; ಏನೇನು ಉಲ್ಲಂಘನೆಯಾಗಿದೆ ಅದನ್ನು ಸರಿಪಡಿಸಬೇಕು ಎನ್ನುವುದರ ಬಗ್ಗೆ 15 ದಿವಸಗಳಲ್ಲಿ 2 ಮೀಟಿಂಗ್‌ಗಳನ್ನು ಮಾಡಿದ್ದಾರೆ. ಒಂದು ತಿಂಗಳಲ್ಲಿ ಪ್ರಸ್ತಾಪಿಸಿದ ಸಮಸ್ಯೆಗಳು ಬಗೆಹರಿಯುತ್ತದೆ. ವಿಧಾನಸಭೆಯಲ್ಲೂ ಈ ಕುರಿತು ಪ್ರಶ್ನೆ ಹಾಕಿದ್ದರು. ವಿಧಾನಸಭಾಧ್ಯಕ್ಷರೇ ಈ ಕುರಿತು ಮೀಟಿಂಗ್ ಮಾಡಿ ಅಭಿಪ್ರಾಯ ತೆಗೆದುಕೊಂಡಿದ್ದಾರೆ. ಈಗ ಪ್ರೊಸಿಜರ್ ಮಾಡುವಂಥದ್ದು ಆಗುತ್ತಿದೆ. ಇನ್ನು ಒಂದು ತಿಂಗಳಲ್ಲಿ ಈ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ.

**ಶ್ರೀ ವೈ.ಎಂ.ಸತೀಶ್:-** ಈ ಕುರಿತು ನೀವು ಮೀಟಿಂಗ್ ಮಾಡುವಾಗ ನಮ್ಮನ್ನೂ ಸಹ ಕರೆದರೆ, ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ.

**ಶ್ರೀ ಎನ್. ಚಲುವರಾಯಸ್ವಾಮಿ:-** ಪ್ರೊಸೀಜರ್ ಕಂಪ್ಲೀಟ್ ಮಾಡುವುದಕ್ಕೆ ಮುಂಚಿತವಾಗಿ ಈ ಕುರಿತು ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಲೇ ಸೂಚನೆ ಕೊಡುತ್ತೇನೆ. ಮೀಟಿಂಗ್ ನಡೆಯುವಾಗ ನಿಮ್ಮನ್ನೂ ಕರೆದು ನಿಮ್ಮ ಅಭಿಪ್ರಾಯ ತೆಗೆದುಕೊಂಡು ಮುಂದುವರೆಯಬೇಕೆಂದು ಹೇಳುತ್ತೇನೆ.

## ಪ್ರಶ್ನೆ ಸಂಖ್ಯೆ: 846

## ಮೈಷುಗರ್ ಕಾರ್ಖಾನೆಯಲ್ಲಿ ಎಥನಾಲ್ ಘಟಕ ಸ್ಥಾಪನೆ ಕುರಿತು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2024-25ರ ಆಯವ್ಯಯದಲ್ಲಿ ಘೋಷಿಸಿದಂತೆ, ಮಂಡ್ಯದ ಮೈಷುಗರ್ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲು ಸ್ಥಳ ಗುರುತಿಸಲಾಗಿದೆಯೇ; ವಿಸ್ತೀರ್ಣ ಹಾಗೂ ಯೋಜನಾ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು) | ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸಲು ಹಾಗೂ ಸರ್ಕಾರದ ಅನುದಾನ, ಇತರೆ ಮೂಲಗಳು ಹಾಗೂ ಕಾರ್ಖಾನೆಯ Asset Monetisation ಮೂಲಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಎಂದು 2024-25ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:327ರಲ್ಲಿ ಘೋಷಿಸಲಾಗಿರುತ್ತದೆ.<br>ಸದರಿ ಘೋಷಣೆಯ ಅನುಷ್ಠಾನದ ಸಂಬಂಧ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ - ಈ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನು ಪಡೆಯಲಾಗಿದೆ. ಸದರಿ ವರದಿಯಲ್ಲಿ ಈ ಕೆಳಕಂಡ ಅಂಶಗಳ ಕುರಿತು ಪ್ರಸ್ತಾಪಿಸಲಾಗಿರುತ್ತದೆ.<br>**Part – A:-** ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಪ್ರಸ್ತುತ ಇರುವ 5,000 ಟಿ.ಸಿ.ಡಿ ಸಾಮರ್ಥ್ಯದ ಸಕ್ಕರೆ ಸಂಸ್ಕರಣಾ ಘಟಕಗಳು / ಬಾಯ್ಲಿಂಗ್ ಹೌಸ್‌ನ ಬಹಳಷ್ಟು ಘಟಕಗಳು ಹಳೆಯ ತಂತ್ರಜ್ಞಾನವನ್ನು ಹೊಂದಿರುವುದರಿಂದ ಮತ್ತು ಕೆಲವು ಕಟ್ಟಿರುವುದರಿಂದ ಎಲೆಕ್ಟ್ರಿಕಲ್ ಮೋಟಾರ್ ಹೆಚ್.ಪಿ. ಅಪ್ ಗ್ರೇಡ್ ಮಾಡುವ ಪ್ರಕ್ರಿಯೆ ಹೊರತುಪಡಿಸಿ 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರಗಳನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ ಎಂದು ಸದರಿ ಯಂತ್ರೋಪಕರಣಗಳ ಅಳವಡಿಕೆಯ ಒಟ್ಟಾರೆ ಅಂದಾಜು ವೆಚ್ಚ ರೂ.59.80 ಕೋಟಿಗಳಾಗುತ್ತವೆ ಎಂದು ವರದಿಸಿರುತ್ತಾರೆ.<br>**Part – B:-** 5,000 ಟಿ.ಸಿ.ಡಿ ಹೊಸ ಘಟಕದ ಸ್ಥಾಪನೆಯೊಂದಿಗೆ 100 TPH, 67kg/cut pressur ನ ಹೊಸ ಬಾಯ್ಲರ್‌ನ ಹಾಗೂ ಪ್ರಸ್ತುತ ಇರುವ ಒಂದು ಬಾಯ್ಲರ್ ರಿಪೇರಿ ನಿರ್ವಹಣೆ ಮಾಡಲು ಒಟ್ಟಾರೆ ಯೋಜನಾ ವೆಚ್ಚ ಮತ್ತು Pre-operative ವೆಚ್ಚವನ್ನು ಸೇರಿ ಅಂದಾಜು ರೂ.288.00 ಕೋಟಿಗಳಾಗುತ್ತದೆ ಎಂದು ಹಾಗೂ ಮುಂದಿನ ಹಂಗಾಮುಗಳಲ್ಲಿ ಕಬ್ಬಿನ ಲಭ್ಯತೆಯನ್ನು ಪರಿಗಣಿಸಿ ಈ ಯೋಜನೆಯನ್ನು ಅನುಷ್ಠಾನ ಮಾಡುವ ಕುರಿತು ಪರಿಶೀಲಿಸಬಹುದಾಗಿದೆ ಎಂದು ವರದಿಸಿರುತ್ತಾರೆ.<br>**Part – C:-** ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 80 ಕೆ.ಎಲ್.ಪಿ.ಡಿ ಸಾಮರ್ಥ್ಯದ ಕಾಕಂಬಿ ಆಧಾರಿತ ಎಥೆನಾಲ್ ಘಟಕವನ್ನು ಅಳವಡಿಸುವುದಾಗಿ ಹಾಗೂ ಸದರಿ ಸಾಮರ್ಥ್ಯದ ಘಟಕದಲ್ಲಿ ಜ್ಯೂಸ್ ಬಳಕೆ ಮಾಡಿದಲ್ಲಿ 120 ಕೆ.ಎಲ್.ಪಿ.ಡಿ ಉತ್ಪಾದನೆಗೆ ಹೊಂದಾಣಿಕೆಯಾಗುತ್ತದೆ ಎಂದು ಈ ಘಟಕದ ಸ್ಥಾಪನೆಗೆ ಅಂದಾಜು ವೆಚ್ಚ ರೂ.116.00 ಕೋಟಿಗಳಾಗಿರುತ್ತದೆ ಎಂದು ವರದಿಸಿರುತ್ತಾರೆ.<br>ಮೇಲ್ಕಂಡ ವಿಸ್ತೃತ ಯೋಜನಾ ವರದಿಯ ಹಿನ್ನೆಲೆಯಲ್ಲಿ ದಿನಾಂಕ:20.11.2024ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ. |

| | | |
|---|---|---|
| | | 1. ಪರಿಷ್ಕೃತ ವಿಸ್ತೃತ ಯೋಜನಾ ವರದಿಯಲ್ಲಿನ Part – A ಮತ್ತು Part-C ಗಳನ್ನು ಮಾತ್ರ ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಸಂಬಂಧ, ಎಲೆಕ್ಟ್ರಿಕಲ್ ಮೋಟಾರ್ ಹೆಚ್.ಪಿ. ಅಪ್‌ಗ್ರೇಡ್ ಮಾಡುವ ಪ್ರಕ್ರಿಯೆ ಹೊರತುಪಡಿಸಿ 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಒಟ್ಟಾರೆ ಅಂದಾಜು ವೆಚ್ಚ ರೂ.59.80 ಕೋಟಿಗಳು ಮತ್ತು 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕದ ಸ್ಥಾಪನೆಯ ಒಟ್ಟಾರೆ ಅಂದಾಜು ವೆಚ್ಚ ರೂ.116.00 ಕೋಟಿಗಳನ್ನು ಸೇರಿ ಒಟ್ಟು ರೂ.175.80 ಕೋಟಿಗಳ ಪ್ರಸ್ತಾವನೆಯನ್ನು ಒಪ್ಪಲು ಮತ್ತು ಇದರಲ್ಲಿ ರೂ.100.00 ಕೋಟಿಗಳ ಸಹಾಯಾನುದಾನವನ್ನು ರಾಜ್ಯ ಸರ್ಕಾರದಿಂದ ಒದಗಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ನಂತರ ಸಚಿವ ಸಂಪುಟ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.<br>2. OMC / ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ/ನೆರವು ಪಡೆದು ಉಳಿದ ರೂ.75.80 ಕೋಟಿಗಳ ಸಂಪನ್ಮೂಲವನ್ನು ಕ್ರೋಢೀಕರಿಸಲು ತೀರ್ಮಾನಿಸಲಾಯಿತು.<br>3. ಉಳಿದಂತೆ, ಕಬ್ಬಿನ ಲಭ್ಯತೆಯನ್ನು ಆಧರಿಸಿ, ಹೊಸ ಬಾಯ್ಲರ್ ಘಟಕದ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದಿನ ದಿನಗಳಲ್ಲಿ ಪರಿಗಣಿಸುವ ಕುರಿತಂತೆ ಚರ್ಚಿಸಿ, ಪ್ರಸ್ತುತ ವಿಸ್ತೃತ ಯೋಜನಾ ವರದಿಯ Part-B ರಲ್ಲಿನ ಶಿಫಾರಸ್ಸನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.<br>ಮೇಲ್ಕಂಡ ಸಭೆಯಲ್ಲಿ, ಹೊಸ ಬಾಯ್ಲರ್ ಘಟಕದ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದೂಡಲುತೀರ್ಮಾನಿಸಿರುವುದರಿಂದ ಪ್ರಸ್ತುತ ಕಾರ್ಖಾನೆಯಲ್ಲಿ ಇರುವ 5,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಸುವ ಘಟಕವನ್ನು ಆಧುನೀಕರಣಗೊಳಿಸುವ ಮತ್ತು ಪ್ರಸ್ತುತ ಕಾರ್ಖಾನೆಯ ಆವರಣದಲ್ಲಿಯೇ 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. |
| (ಆ) | ಮೈಷುಗರ್ ಕಾರ್ಖಾನೆಯಲ್ಲಿ 'ಎಥೆನಾಲ್ ಘಟಕ' ಸ್ಥಾಪನೆ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; | ದಿನಾಂಕ:20.11.2024ರ ಸಭೆಯಲ್ಲಿ ತೀರ್ಮಾನಿಸಿದಂತೆ 5,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಸುವ ಘಟಕವನ್ನು ಆಧುನೀಕರಣಗೊಳಿಸುವ ಮತ್ತು 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕ ಸ್ಥಾಪಿಸುವ ಯೋಜನೆಗೆ ರಾಜ್ಯ ಸರ್ಕಾರದಿಂದ ರೂ.100.00 ಕೋಟಿಗಳ ಆರ್ಥಿಕ ನೆರವನ್ನು ಒದಗಿಸುವ ಮತ್ತು ಉಳಿದ ರೂ.75.80 ಕೋಟಿಗಳನ್ನು ದಿ ಮೈಸೂರು ಷುಗರ್ ಕಂಪನಿಯು OMC / ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ/ನೆರವು ಪಡೆಯುವ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ:26.12.2024ರ ಟಿಪ್ಪಣಿಯಲ್ಲಿ, ದಿನಾಂಕ:08.07.2020 ರಂದು ನಡೆದಿದ್ದ ಸಚಿವ ಸಂಪುಟ ಉಪಸಮಿತಿಯ ಶಿಫಾರಸ್ಸಿನ ಮೇರೆಗೆ ಕಬ್ಬು ಅರೆಯುವ ಘಟಕವನ್ನು ಎಲ್.ಆರ್.ಒ.ಟಿ ಆಧಾರದ ಮೇಲೆ ಕಾರ್ಯಗತಗೊಳಿಸಲು ಮತ್ತು ಎಥೆನಾಲ್ ಘಟಕವನ್ನು ಪಿ.ಪಿ.ಪಿ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಅಭಿಪ್ರಾಯಿಸಿರುತ್ತದೆ. ಮುಂದಿನ ಕ್ರಮದ ಬಗ್ಗೆ ಪರಿಶೀಲನೆಯಲ್ಲಿದೆ. |

...3

-3-

| | | |
|---|---|---|
| (ಇ) | ಮೈಷುಗರ್ ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ ಕಾರ್ಯಾರಂಭಗೊಂಡ ನಂತರದಿಂದ ಈವರೆವಿಗೂ ಉತ್ಪಾದಿಸಲಾದ ವಿದ್ಯುತ್ ಪ್ರಮಾಣ ಎಷ್ಟು; ಇದರಲ್ಲಿ ಮಾರಾಟ ಮಾಡಲಾದ ವಿದ್ಯುತ್ ಪ್ರಮಾಣ ಹಾಗೂ ಗಳಿಸಿದ ಲಾಭ ಎಷ್ಟು; (ವರ್ಷವಾರು ವಿವರ ನೀಡುವುದು) | ದಿ ಮೈಸೂರು ಷುಗರ್ ಕಂಪನಿಯಲ್ಲಿ 2023-24ರಲ್ಲಿ 12,21,000 ಯೂನಿಟ್‌ನ್ನು ಉತ್ಪಾದಿಸಿ, 4,93,200 ಯೂನಿಟ್‌ಗಳನ್ನು ಚೆಸ್ಕಾಂಗೆ ರಫ್ತು ಮಾಡಲಾಗಿದ್ದು ಇದರ ಮೊತ್ತ ರೂ.29,14,812.00 ಆಗಿರುತ್ತದೆ. 2024-25ನೇ ಸಾಲಿನಲ್ಲಿ 1,57,30,000 ಯೂನಿಟ್ ವಿದ್ಯುತ್ ಉತ್ಪಾದಿಸಿದ್ದು, 71,83,440 ಯೂನಿಟ್ ವಿದ್ಯುತ್ ಅನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ರಫ್ತು ಮಾಡಲಾಗಿರುತ್ತದೆ. ರಫ್ತು ಮಾಡಿದ 71,83,440 ಯೂನಿಟ್ಗಳ ಮೊತ್ತ ರೂ.4,33,87,977 ಗಳಾಗಿರುತ್ತದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಪಾವತಿಸಬೇಕಾದ ವಿದ್ಯುತ್ ಬಿಲ್ ಬಾಕಿಗೆ ಈ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿರುತ್ತದೆ. |
| (ಈ) | ಮೈಷುಗರ್ ಒಡೆತನದಲ್ಲಿ ಎಷ್ಟು ಎಕರೆ ಭೂಮಿ ಇದೆ; ಈ ಪೈಕಿ ಎಷ್ಟು ಎಕರೆ ಭೂಮಿ ಒತ್ತುವರಿಯಾಗಿದೆ; ಯಾವ್ಯಾವ ಸರ್ವೇ ನಂಬರುಗಳಲ್ಲಿ ಭೂಮಿ ಒತ್ತುವರಿಯಾಗಿದೆ: ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು: | ಮೈಸೂರು ಸಕ್ಕರೆ ಕಂಪನಿಯ ಒಡೆತನದಲ್ಲಿ 235.10 ¼ ಎಕರೆ ಗುಂಟೆ ಜಮೀನಿರುತ್ತದೆ. ಈ ಪೈಕಿ ಎಷ್ಟು ಜಮೀನು ಒತ್ತುವರಿಯಾಗಿರುತ್ತದೆ ಎಂಬ ಬಗ್ಗೆ ಹಾಗೂ ಯಾವ ಸರ್ವೇ ನಂಬರ್‌ಗಳಲ್ಲಿ ಜಮೀನು ಒತ್ತುವರಿಯಾಗಿರುತ್ತದೆ ಎಂಬ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. |
| (ಉ) | ಡಿಸ್ಟಿಲರಿ ಘಟಕವನ್ನು ಮತ್ತೆ ಆರಂಭಿಸಲು ಉದ್ದೇಶಿಸಲಾಗಿದೆಯೇ? | ಮೈಸೂರು ಸಕ್ಕರೆ ಕಂಪನಿಯಲ್ಲಿ ಪ್ರಸ್ತುತ ಇರುವ ಡಿಸ್ಟಿಲರಿ ಘಟಕದ ಟೆಕ್ನಾಲಾಜಿ ಬಹಳ ಹಳೆಯದಾಗಿರುವುದರಿಂದ ಹಾಗೂ ಯಂತ್ರೋಪಕರಣಗಳು ಹಾಳಾಗಿರುವುದರಿಂದ ಸದರಿ ಡಿಸ್ಟಿಲರಿ ಘಟಕವನ್ನು ಪ್ರಸ್ತುತ ಪುನರ್ ಆರಂಭಿಸುವ ಉದ್ದೇಶವಿರುವುದಿಲ್ಲ. |

**ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಮಂಡ್ಯ ಸಕ್ಕರೆ ಕಾರ್ಖಾನೆ ಭಾವನಾತ್ಮಕವಾಗಿ ಇರುವಂತಹ ಒಂದು ಸಕ್ಕರೆ ಕಾರ್ಖಾನೆಯಾಗಿದೆ. ಕರ್ನಾಟಕದಲ್ಲಿ ಯಾವುದೂ ಕೂಡ ಸರ್ಕಾರಿ ಸಕ್ಕರೆ ಕಾರ್ಖಾನೆ ಇಲ್ಲ. ಇದ್ದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಮುಚ್ಚಿ ಹೋಗಿವೆ. ಆದರೆ ಇದೊಂದನ್ನು ಮಂಡ್ಯ ರೈತರು ಮತ್ತು ಮಂಡ್ಯದ ಜನ ಪ್ರತಿನಿಧಿಗಳು ಉಳಿಸಿಕೊಂಡು ಬಂದಿದ್ದಾರೆ. ಇದರ ವಿಸ್ತರಣೆ ಮಾಡಬೇಕೆಂದು ನಮ್ಮ ಮುಖ್ಯ ಮಂತ್ರಿಗಳು ಅದಕ್ಕೆ ಚಾಲನೆ ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಮೀಸಲು ಇಟ್ಟಿದ್ದಾರೆ. ಆದರೆ, ಕ್ರಿಯೆಯನ್ನು ಕಾರ್ಯಗತ ಮಾಡುವಲ್ಲಿ ಸರ್ಕಾರ ಇನ್ನೂ ಪ್ರಯತ್ನ ಮಾಡುತ್ತಿಲ್ಲ ಎನ್ನುವುದು ನನ್ನ ಭಾವನೆ. ಇದನ್ನು ಅಭಿವೃದ್ಧಿಪಡಿಸಲು ರೂ. 463 ಕೋಟಿ ಬೇಕು ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದು ತುಂಬಾ ಜಾಸ್ತಿಯಾಯಿತು ಎಂದು ನನಗನಿಸುತ್ತಿದೆ. ಇವತ್ತು ಎಥೆನಾಲ್ ಘಟಕ ಸ್ಥಾಪನೆ ಮಾಡಲು ರೂ.116 ಕೋಟಿ ಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಅದು ಜಾಸ್ತಿ ಎನ್ನುವುದು ನನ್ನ ಭಾವನೆಯಾಗಿದೆ. 1 ಕೆ.ಎಲ್.ಪಿ.ಡಿ ಗೆ ರೂ. 1.00 ಕೋಟಿ ಆಗಬಹುದು ಎಂದು ಅಂದಾಜು ಇದೆ. 80 ಕೆ.ಎಲ್.ಪಿ.ಡಿ ಗೆ ರೂ. 116 ಕೋಟಿ ಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಈ ಶುಗರ್ ಫ್ಯಾಕ್ಟರಿಯಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಬಾಕಿ ಎಷ್ಟಿದೆ ಎಂದು ಅವರು ಹೇಳಲಿಲ್ಲ. ವಿದ್ಯುತ್ತೇನು ಉತ್ಪಾದನೆ ಆಗುತ್ತಿದೆಯೋ ಅದರ ದುಡ್ಡು ಬಂದಿಲ್ಲ. ಅದನ್ನು

ಚಾಮುಂಡೇಶ್ವರಿ ವಿದ್ಯುತ್ ನಿಗಮಕ್ಕೆ ಪಾವತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಎಷ್ಟು ಬಾಕಿ ಇದೆ ಎನ್ನುವುದನ್ನು ಅವರು ಹೇಳುತ್ತಿಲ್ಲ.

**ಶ್ರೀ ಶಿವಾನಂದ ಎಸ್.ಪಾಟೀಲ (ಜವಳಿ, ಕಬ್ಬು, ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಮಾನ್ಯ ಮಧು ಮಾದೇಗೌಡರು ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಏಕೆಂದರೆ, ಈ ಕಾರ್ಖಾನೆ 2019-20, 2020-21ರಲ್ಲಿ ಸ್ಥಗಿತವಾಗಿತ್ತು. ಆದರೆ, 2022-23ರ ಕೊನೆ ಘಳಿಗೆಯಲ್ಲಿ ಇದನ್ನು ಮತ್ತೆ ಪ್ರಾರಂಭ ಮಾಡುವ ಪ್ರಯತ್ನ ಮಾಡಲಾಯಿತು. ದುರ್ದೈವವಶಾತ್ ಆ ಸಂದರ್ಭದಲ್ಲಿ ಪ್ರಾರಂಭ ಮಾಡಿದರೂ ಕೂಡ ಕೇವಲ 3% ರಿಕವರಿಯಿಂದ ಕಾರ್ಖಾನೆ ಪ್ರಾರಂಭವಾಯಿತು; ಹಾನಿ ಕೂಡ ಆಯಿತು. ಪುನಃ 2024-25ರಲ್ಲಿ ನಮ್ಮ ಸರ್ಕಾರ ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ರೂ. 50 ಕೋಟಿಯನ್ನು ಈ ಕಾರ್ಖಾನೆಗೆ ಬಿಡುಗಡೆ ಮಾಡಿದರು. ಅದೇರೀತಿ ಹಿಂದಿನ ಎಲ್ಲಾ ಮುಖ್ಯಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿದ್ದರು. ಸರ್ಕಾರದಿಂದ ಸುಮಾರು ರೂ. 640 ಕೋಟಿ ಹಣವನ್ನು ಈ ಕಾರ್ಖಾನೆಗಾಗಿ ಪಡೆದುಕೊಂಡಿದ್ದೀರಿ. ಈ ಹಣದಲ್ಲಿ ನಾವು ಹೊಸ 3 ಕಾರ್ಖಾನೆಗಳನ್ನು ಸ್ಥಾಪನೆ ಮಾಡಬಹುದಾಗಿತ್ತು. ರೂ. 50 ಕೋಟಿ ಕೊಟ್ಟಮೇಲೆ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಮೊದಲು 2023-24ರಲ್ಲಿ ಕೇವಲ ಮೂರುವರೆ ಪರ್ಸೆಂಟ್ ರಿಕವರಿ ಇದ್ದದ್ದು, 2024-25 ರಲ್ಲಿ ಆ ಪ್ರಮಾಣ ಜಾಸ್ತಿಯಾಗಿ ಹೆಚ್ಚು-ಕಡಿಮೆ 7% ರಿಕವರಿ ಮಾಡಿದ್ದೇವೆ. ಸದ್ಯ ಈಗ ರೂ. 50 ಸಾವಿರ ಟನ್ ಕ್ರಷಿಂಗ್ ಆಗಿದೆ. ಇವತ್ತು 8% ರಿಕವರಿ ಇದೆ. ಜೊತೆಗೆ ಕೋಜನರೇಷನ್ ಕೂಡ ಸಂಪೂರ್ಣ ಸ್ಥಗಿತವಾಗಿತ್ತು. ನಾವು ಬಂದು ಪ್ರಾರಂಭ ಮಾಡಿದೆವು. ಮೊದಲನೆ ಬಾರಿಗೆ, ಇತಿಹಾಸದಲ್ಲಿ ಕೋಜನರೇಷನ್ ಪ್ರಾರಂಭವಾಗಿದ್ದು ನಮ್ಮ ಸರ್ಕಾರ ಬಂದಮೇಲೆ ಎಂದು ಹೇಳಬೇಕಾಗುತ್ತದೆ. 7 ಲಕ್ಷ ಯುನಿಟ್‌ಗಳನ್ನು ಉತ್ಪಾದಿಸಿ ಕೆಇಬಿಗೆ ಸರಬರಾಜು ಮಾಡಿದ್ದೇವೆ; ಅದರಿಂದ ರೂ. 4.50 ಕೋಟಿ ಆದಾಯ ಬಂದಿದೆ. ನಮ್ಮ ಸರ್ಕಾರ ಬಂದಮೇಲೆ, statutory dues, ಕಾರ್ಪೋರೇಷನ್ ಟ್ಯಾಕ್ಸ್ ಏನು ಕಟ್ಟಿರಲಿಲ್ಲ; ಅದನ್ನೂ ಕಟ್ಟಿಸಿದ್ದೇವೆ. ಅದರ ಜೊತೆಗೆ ಕೆಇಬಿ ತಾವೇನು ರೂ. 70 ಕೋಟಿ ಕೊಡಬೇಕಾಗುತ್ತೋ ಅದರಲ್ಲಿ ರೂ. 30 ಕೋಟಿಯನ್ನು ಮನ್ನಾ ಮಾಡಿಸಿದ್ದೇವೆ. ಬಾಕಿ ಹಣವನ್ನು ತೀರಿಸುವ ಪ್ರಯತ್ನ ಮಾಡುತ್ತಿದ್ದೇವೆ. ತಾವು ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದು ಆಲೋಚನೆ ಮಾಡಿದ್ದೀರಿ. ಅದನ್ನು ಹೊಸದಾಗಿ ಎಲ್ಲೂ ಮಾಡುತ್ತಿಲ್ಲ; ಅದೇ ಜಾಗದಲ್ಲೇ ಮಾಡಬೇಕಾಗುತ್ತದೆ. ಅದರಲ್ಲಿ Boiling House ಮಾಡಿದರೆ ಸುಮಾರು 6000 ಟನ್ ಕ್ರಷಿಂಗ್ ಮಾಡಬಹುದು. ಆದರೆ, ಹಿಂದಿನ ಮುಖ್ಯಮಂತ್ರಿಗಳು ಈ ಕಾರ್ಖಾನೆಗೆಂದು ರೂ. 140 ಕೋಟಿ ಕೊಟ್ಟಾಗ ಅದು ದುರುಪಯೋಗವಾಗಿತ್ತು. ಈಗ ಅದರ ತನಿಖೆಯನ್ನೂ ಮಾಡುತ್ತಿದ್ದೇವೆ. ನಾವು ಕೇವಲ ರೂ. 50 ಕೋಟಿ ಕೊಟ್ಟು Boiling House ಮಾಡಿದರೆ 6000 ಟನ್ ತನಕ ಕ್ರಷಿಂಗ್ ಮಾಡಬಹುದು. ಈ ನಿಟ್ಟಿನಲ್ಲಿ ಆದಷ್ಟು ಬೇಗ ಕ್ರಮಕೈಗೊಳ್ಳುತ್ತೇವೆ.

**ಶ್ರೀ ಎನ್.ಚ ಲುವರಾಯ ಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಮಾತನಾಡುತ್ತಾ, ರೂ. 50 ಕೋಟಿ, ರೂ. 10 ಕೋಟಿ ಕೊಟ್ಟಿರುವುದು, ವಿದ್ಯುತ್ ಬಿಲ್ ಮನ್ನಾ ಮಾಡಿಸಿರುವುದು ಮತ್ತು ನಿಂತಿದ್ದ ಕಾರ್ಖಾನೆಯನ್ನು ಪ್ರಾರಂಭಿಸಿರುವುದರ ಬಗ್ಗೆ ಹೇಳಿದರು. ಇಡೀ ಮಂಡ್ಯ ಜಿಲ್ಲೆಯಲ್ಲಿರುವ ಎಲ್ಲಾ ಖಾಸಗಿ ಶುಗರ್ ಫ್ಯಾಕ್ಟರಿಗಳು ಒಂದು ತಿಂಗಳ ನಂತರ ಪೇಮೆಂಟ್ ಕೊಡುತ್ತಾರೆ. ನಮ್ಮ ಮೈಸೂರು ಶುಗರ್ ಕಾರ್ಖಾನೆ 15 ದಿವಸಕ್ಕೆ ಪೇಮೆಂಟ್ ಕೊಡುತ್ತಿದೆ. ಈಗ 8% ರಿಕವರಿ ಕೂಡ ಬಂದಿದೆ. ಬಾಯ್ಲರ್ ಒಂದನ್ನು ಮಾಡಿ, ಅದನ್ನು ಒಂದು ಹಂತಕ್ಕೆ ತರಲು ಮಾನ್ಯ ಸಚಿವರು ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಎಲ್ಲಾ ಶಾಸಕರು ಈ ಇಲಾಖೆಗೆ ಮತ್ತು ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ.

**ಶ್ರೀ ಮಧು ಜಿ.ಮಾದೇಗೌಡ:-** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ಜಿಲ್ಲಾ ಉಸ್ತುವಾರಿ ಶಾಸಕರನ್ನು ಮತ್ತು ಮಾನ್ಯ ಶಿವಾನಂದ ಪಾಟೀಲರವರನ್ನು ನಾವು ಅಭಿನಂದಿಸುತ್ತೇವೆ. ನಮ್ಮ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ 230 ಎಕರೆ ಜಮೀನು ಇದೆ. ಅದರಲ್ಲಿ ಸಾಕಷ್ಟು ಒತ್ತುವರಿ ಕೂಡ ಆಗಿದೆ. ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಕೂಡ ಒಂದು ಪತ್ರಿಕಾಗೋಷ್ಠಿ ಮಾಡಿ, ಆಗಿರುವ ಒತ್ತುವರಿಯನ್ನು ಬಿಡಿಸಬೇಕಿದೆ ಎಂದು ಹೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಿಸ್ಟಿಲರಿ ಘಟಕವನ್ನು ಪ್ರಾರಂಭ ಮಾಡುವುದಿಲ್ಲ ಎನ್ನುವ ಮಾತನ್ನು ಸಚಿವರು ಹೇಳಿದ್ದಾರೆ. ಮಾನ್ಯ ಸಭಾಪತಿಗಳೆ, ಹಿಂದೆ, ಡಿಸ್ಟಿಲರಿ ಬಹಳ ಪ್ರಸಿದ್ಧಿಯನ್ನು ಪಡೆದಿತ್ತು. ಆರ್ಮಿಯವರಿಗೂ ಕೂಡ ಈ ಡಿಸ್ಟಿಲರಿಯಿಂದ ಸಪ್ಲೆ ಮಾಡುತ್ತಿದ್ದರು. ಆದ್ದರಿಂದ ಡಿಸ್ಟಿಲರಿಯನ್ನು ಪ್ರಾರಂಭ ಮಾಡಿದರೆ ಸಕ್ಕರೆ ಕಾರ್ಖಾನೆಗೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಶಿವಾನಂದ ಎಸ್.ಪಾಟೀಲ:-** ಮಾನ್ಯ ಸಭಾಪತಿಗಳೆ, ಅಲ್ಲಿ ಜಾಗ ಒತ್ತುವರಿ ಆಗಿರುವುದು ನಿಜ. ಒತ್ತುವರಿ ಜಾಗದ ಸರ್ವೆ ಮಾಡಬೇಕೆಂದು ಈಗಾಗಲೇ ಕಾರ್ಖಾನೆ ಅಧ್ಯಕ್ಷರು ಎರಡು-ಮೂರು ಮೀಟಿಂಗ್ ಮಾಡಿ, ಈ ನಿಟ್ಟಿನಲ್ಲಿ ಆದೇಶ ಮಾಡಿದ್ದಾರೆ. ಆದಷ್ಟು ಬೇಗ ಒತ್ತುವರಿ ಆಗಿರುವುದನ್ನು ತೆರವುಗೊಳಿಸುವ ಕ್ರಮಕೈಗೊಳ್ಳುತ್ತೇವೆ. ಒಂದು ಕಾಲದಲ್ಲಿ ಮಂಡ್ಯ ಮೈಶುಗರ್ ಇಂಡಸ್ಟ್ರಿ 300 ದಿವಸ ನಡೆಯುತ್ತಿತ್ತು. ಆದರೆ ಈಗ 3 ತಿಂಗಳು ಕೂಡ ನಡೆಯುತ್ತಿಲ್ಲ. ಇದು ಏಷ್ಯಾದಲ್ಲೇ ಸ್ಥಾಪನೆಯಾದ ಮೊದಲ ಸಕ್ಕರೆ ಕಾರ್ಖಾನೆಯಾಗಿದೆ. ಇಷ್ಟು ದಿವಸ ಅದು ಸ್ಥಗಿತವಾಗಿತ್ತು. ಡಿಸ್ಟಲರಿಯನ್ನು 2ನೇ ಹಂತದಲ್ಲಿ ಮಾಡುತ್ತೇವೆ. ಮೊದಲನೆ ಹಂತದಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಇರುವ 6000 ಟನ್ ಕ್ರಷಿಂಗ್ ಮೆಷಿನನ್ನು ಉಪಯೋಗ ಮಾಡುವುದಕ್ಕಾಗುತ್ತಿಲ್ಲ; Boiling House ಮಾಡಿದರೆ 6000 ಟನ್ ಕ್ರಷಿಂಗ್ ಮಾಡಬಹುದು. ಇದನ್ನು ಮಾಡಿ ಕೋಜನರೇಷನ್ ಇಂಪ್ರೂವ್ ಮಾಡುತ್ತೇವೆ. ಜೊತೆಗೆ ಡಿಸ್ಟಲರಿ ಮಾಡುವ ಪ್ರಯತ್ನ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಸೂರಜ್ ರೇವಣ್ಣನವರು ಸದನದಲ್ಲಿ ಗೈರು ಹಾಜರಿದ್ದರು)

## ಪ್ರಶ್ನೆ ಸಂಖ್ಯೆ: 826

## ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವ ಬಗ್ಗೆ

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯು ಅಸಮರ್ಪಕ ಜೋಡಣೆಯಿಂದ ಸೇರಿದಂತೆ ಬಾವಿಗಳ ಕುಡಿಯುವ ನೀರು, ಮಾಲಿನ್ಯ ಉಂಟಾಗಿದ್ದು, ಇದನ್ನು ತಡೆಯಲು ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಮಂಗಳೂರು ಮಹಾನಗರ ಪಾಲಿಕೆಗೆ ವಿಶೇಷ ಅನುದಾನ ನೀಡಲು ಸರ್ಕಾರದ ಮುಂದೆ ಯೋಜನೆ ಇದೆಯೇ; (ವಿವರ ನೀಡುವುದು)</td><td rowspan="2">ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಕೆಯುಐಡಿಎಫ್‌ಸಿ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br><br>1) ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ (ಜಲಸಿರಿ) ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.316.50 ಕೋಟಿಗಳ ಮೊತ್ತದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಒಟ್ಟು 131.65 ಕಿ.ಮೀ ಒಳಚರಂಡಿ ಕೊಳವೆ ಜಾಲ, ಜಪ್ಪಿನಮೊಗರು ವೆಟ್‌ವೆಲ್, ತಿರುವೇಲ್ ವೆಟ್‌ವೆಲ್, ಎಸ್.ಇ.ಜೆಡ್ ಪ್ರದೇಶ ಹಾಗೂ ಕೋಡಿ ಕೆರೆ ಬಳಿ ಒಟ್ಟು 4 ವೆಟ್‌ವೆಲ್‌ಗಳು, ಪಂಪಿಂಗ್ ಮಷಿನರಿ ಹಾಗೂ ಕೋಡಿಕೆರೆ ಬಳಿ 1.5 ಎಂ.ಎಲ್.ಡಿ ತ್ಯಾಜ್ಯ ನೀರು ಶುದ್ಧೀಕರಣಾಗಾರ ಇತ್ಯಾದಿ ಕಾಮಗಾರಿಗಳನ್ನು ದಿನಾಂಕ:-31-05-2026ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ವಿವರವನ್ನು <u>ಅನುಬಂಧ-1ರಲ್ಲಿ ನೀಡಲಾಗಿದೆ.</u><br><br>2) ಮಂಗಳೂರು ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 5 ಸಿಎಸ್‌ಎಸ್ 2023 (ಭಾ-3), ದಿನಾಂಕ-30-11-2023 ರನ್ವಯ ಒದಗಿಸಲು ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ನಿಯೋಜಿಸಲಾಗಿರುವ ಯೋಜನಾ ಸಮಾಲೋಚಕರಾದ ಮೆ/ಇಜಿಐಎಸ್ ಇಂಡಿಯಾ ಕನ್ಸಲ್ಟಿಂಗ್ ಇಂಜಿನೀಯರ್ಸ್ ಪ್ರೈ.ಲಿ. ರವರು ನಗರ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಅನುದಾನಕ್ಕೆ ಅನುಗುಣವಾಗಿ ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಿದ್ದು</td></tr>
<tr><td>ಆ)</td><td>ಪ್ರಸ್ತುತ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು: (ವಿವರ ನೀಡುವುದು);</td></tr>
</table>

| | | |
|---|---|---|
| | | ವಿಸ್ತೃತ ಯೋಜನಾ ವರದಿಯಲ್ಲಿ ಹಾನಿಗೊಳಗಾಗಿರುವ ಪೈಪ್ ಲೈನ್ ದುರಸ್ತಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚನಾಡಿಯಲ್ಲಿ ಪ್ರಸ್ತುತ ಇರುವ 8.75 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು SBR Technology ಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ 20 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಸದರಿ ತ್ಯಾಜ್ಯ ನೀರನ್ನು, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮಾಡಿ ಸದರಿ ವೆಟ್ ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವಂತ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲಾಗಿದೆ.<br><br>ಸದರಿ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮತಿ ನೀಡಲಾಗಿರುತ್ತದೆ. ಅದರಂತೆ ಟೆಂಡರ್ ಆಹ್ವಾನಿಸಿ, ಸದರಿ ಕಾಮಗಾರಿಗೆ M/s NBM Infratech Pvt. Ltd ರವರನ್ನು ಗುತ್ತಿಗೆದಾರರನ್ನಾಗಿ ನೇಮಿಸಲಾಗಿದ್ದು, ಸ್ವೀಕೃತ ಪತ್ರವನ್ನು ನೀಡಲಾಗಿರುತ್ತದೆ.<br><br>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ:<br>15ನೇ ಹಣಕಾಸು ಯೋಜನೆಯಡಿಯಲ್ಲಿ ಕಂಡತ್ ಪಳ್ಳಿ ವೆಟ್ ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |
| ಇ) | ಈ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು ಶುದ್ಧೀಕರಿಸದೆ ವಿತರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಲ್ಕು ನೀರು ಶುದ್ಧೀಕರಣಾ ಘಟಕಗಳಿದ್ದು, (ತುಂಬೆರಲ್ಲಿ 81.7MLD & 80MLD) (ಬೆಂದೂರು-1) ಮತ್ತು (ಪಣಂಬೂರು-1) ನೀರು ಶುದ್ಧೀಕರಣ ಘಟಕಗಳಾಗಿರುತ್ತವೆ. |

| | | |
|---|---|---|
| | | ಇರುವ 8.75 ಎಂ.ಎಲ್.ಡಿ ಮತ್ತು ಬಜಾಲ್ ಪ್ರದೇಶ ಬಳಿ ಇರುವ 20 ಎಂ.ಎಲ್.ಡಿ ಸಂಸ್ಕರಣಾ ಘಟಕಗಳ ಮೇಲ್ದರ್ಜೆಗೇರಿಸುವ, ಅತ್ತಾವರದಲ್ಲಿ ಹೊಸ ವೆಟ್‌ವೆಲ್ ನಿರ್ಮಾಣ ಮತ್ತು ಪಾಲಿಕೆಯ ವ್ಯಾಪ್ತಿಯಲ್ಲಿನ ಹಾನಿಗೊಂಡ 8.5 ಕಿ.ಮೀ ಹಳೆಯ ಮುಖ್ಯ ಒಳಚರಂಡಿ ಕೊಳವೆ ಮಾರ್ಗದ ಮರು ನಿರ್ಮಾಣದ ಕಾಮಗಾರಿಗಳನ್ನು ರೂ.40.00 ಕೋಟಿಗಳ ಜಲಶುದ್ಧಿ ಅಭಿಯಾನದಲ್ಲಿ ಅನುಷ್ಠಾನಗೊಳಿಸುವ ಮೂಲಕ ತ್ಯಾಜ್ಯ ನೀರನ್ನು ಶುದ್ಧೀಕರಿಸಲು ಕ್ರಮವಹಿಸಲಾಗುತ್ತಿದೆ. ಕಾಮಗಾರಿಯ ಅನುಷ್ಠಾನಗೊಳಿಸಲು ಗುತ್ತಿಗೆದಾರರಿಗೆ ಸ್ವೀಕೃತ ಪತ್ರವನ್ನು ನೀಡಲಾಗಿರುತ್ತದೆ. |
| ಉ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆ ಜಾರಿಗೆ ತರಲು ಎಷ್ಟು ಸಮಯ ತಗಲುವುದು: ಈ ಯೋಜನೆ ಯಾವ ಹಂತದಲ್ಲಿದೆ: (ವಿವರ ನೀಡುವುದು); | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ(ಜಲಸಿರಿ)ದಡಿ ರೂ. 316.51 ಕೋಟಿಗಳ ಮೊತ್ತದಲ್ಲಿ ಎಂಟು (8) ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಲ್ಲಿ ಐದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ ಮೂರು (3) ಕಾಮಗಾರಿಗಳನ್ನು ಡಿಸೆಂಬರ್-2025 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಅದೇ ರೀತಿ, ರೂ. 675.51 ಕೋಟಿಗಳ ಮೊತ್ತದಲ್ಲಿ ಮೂರು (3) ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಅವುಗಳಲ್ಲಿ ಒಂದು (1) ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಎರಡು ಕಾಮಗಾರಿಗಳನ್ನು ಡಿಸೆಂಬರ್-2026 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಗಳನ್ನು ವಿವರಗಳನ್ನು **ಅನುಬಂಧ-1 ಮತ್ತು 2 ರಲ್ಲಿ ನೀಡಲಾಗಿದೆ** |
| ಊ) | ಕುಡಿಯುವ ನೀರು ಸರಬರಾಜಿನಿಂದ ಪನಗರಪಾಲಿಕೆಗೆ ಬರುವ ಆದಾಯ ಎಷ್ಟು; ತಗಲುವ ವೆಚ್ಚ ಎಷ್ಟು; ಎಷ್ಟು ಮನೆಗಳಿಗೆ ಉಚಿತವಾಗಿ ನೀರನ್ನು ಪೂರೈಸಲಾಗುತ್ತಿದೆ? (ವಿವರ ನೀಡುವುದು) | ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರು ಸರಬರಾಜಿನಿಂದ ಮಹಾನಗರ ಪಾಲಿಕೆಗೆ ಬರುವ ಆದಾಯ ಮತ್ತು ವೆಚ್ಚದ ವಿವರ ಈ ಕೆಳಕಂಡಂತಿದೆ. |

**(ರೂ.ಕೋಟಿಗಳಲ್ಲಿ)**

| ಕ್ರ. ಸಂ | ವರ್ಷ | ಆದಾಯ | ವೆಚ್ಚ |
|---|---|---|---|
| 1 | 2020-21 | 22.81 | 21.91 |
| 2 | 2021-22 | 28.99 | 16.24 |
| 3 | 2022-23 | 32.80 | 14.92 |
| 4 | 2023-24 | 30.24 | 18.75 |
| 5 | 2024-25 | 33.02 | 21.67 |

| | | |
|---|---|---|
| | | ಸದರಿ ಘಟಕಗಳಿಗೆ ಕೈಪಿಡಿಗಳಂತೆ ಆಲಮ್, ಕ್ಲೋರಿನ್, ಸುಣ್ಣ ರಸಾಯಿನಿಕಗಳನ್ನು ಬಳಸಿ ನೀರನ್ನು ಶುದ್ಧಗೊಳಿಸಲಾಗುತ್ತಿದೆ.<br><br>81.7MLD ಘಟಕವು 1970ರಲ್ಲಿ ಸ್ಥಾಪಿತವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 159 ಪಿಆರ್ ಜೆ 2023 ದಿನಾಂಕ:02.01.2024 ರಂತೆ ಅಡ್ಯಾರ್ ನಲ್ಲಿ 125 MLD ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ನೇತ್ರಾವತಿ ನದಿ ನೀರು ಸೇರಿದಂತೆ ಪಾಲಿಕಾ ವ್ಯಾಪ್ತಿಯ ವಿವಿಧ ಪಂಪ್‌ಹೌಸ್‌ಗಳು ಹಾಗೂ ಪ್ರತಿ ಹದಿನೈದು ದಿನಗಳಿಗೊಮ್ಮೆ 60 ವಾರ್ಡ್‌ಗಳ ಆಯ್ದ ಪ್ರದೇಶಗಳಲ್ಲಿ ಮಂಗಳೂರಿನ ಸರಕಾರಿ ಫಿಶರೀಸ್ ಕಾಲೇಜಿನ ಪ್ರಯೋಗಾಲಯದಲ್ಲಿ (total coliform, faecal coliform) ಗುಣಮಟ್ಟ ಪರೀಕ್ಷಿಸಿ ವರದಿ ದಾಖಲಿಸಲಾಗುತ್ತದೆ.<br><br>ಇದಲ್ಲದೆ ಮಂಗಳೂರಿನ ಬೆಂದೂರ್‌ವೆಲ್ ನೀರು ಶುದ್ಧೀಕರಣ ಘಟಕದಲ್ಲಿ ದಿನಾಂಕ 03.08.2023 ರಿಂದ ನೂತನ ಪ್ರಯೋಗಾಲ ಅಭಿವೃದ್ಧಿ ಪಡಿಸಿದ್ದು, ಈ ಪ್ರಯೋಗಾಲಯದಲ್ಲಿ CPHEEO ಮಾರ್ಗಸೂಚಿ ಅನುಸಾರ ನೀರಿನ ಗುಣಮಟ್ಟ ಪರೀಕ್ಷಿಸಿ, ನೀರಿನ ವಿತರಣೆ ಮಾಡಲಾಗುತ್ತದೆ. |
| ಈ) | ಒಳಚರಂಡಿ ನೀರು ನೇತ್ರಾವತಿ ನಂದಿನಿ ಕಂಡೇವು ನದಿಗಳಿಗೆ ಹರಿದು ಮಾಲಿನ್ಯಗೊಂಡಿರುವುದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಕೆಯುಐಡಿಎಫ್‌ಸಿ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br><br>1. ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ(ಜಲಸಿರಿ)ದಡಿ ನೇತ್ರಾವತಿ, ನಂದಿನಿ ಕಂಡೇವು ನದಿಗಳ ಪ್ರದೇಶಗಳ ವ್ಯಾಪ್ತಿಯಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.316.50 ಕೋಟಿಗಳ ಮೊತ್ತದಲ್ಲಿ 131.65 ಕಿ.ಮೀ ಒಳಚರಂಡಿ ಕೊಳವೆಯನ್ನು ಅಳವಡಿಸುವ ಮೂಲಕ ತ್ಯಾಜ್ಯ ನೀರನ್ನು ಹಾಲಿಯಿರುವ ಸಂಸ್ಕರಣಾ ಘಟಕಗಳಿಗೆ ಸಾಗಿಸಿ ಶುದ್ಧೀಕರಿಸಲು ಕ್ರಮವಹಿಸಲಾಗಿದ್ದು, ಯೋಜನೆಯು ಪ್ರಗತಿಯಲ್ಲಿರುತ್ತದೆ. ಮಾಹಿತಿಯನ್ನು **ಅನುಬಂಧ-1 ರಲ್ಲಿ ನೀಡಲಾಗಿದೆ**<br><br>2. ಜಲಶುದ್ಧಿ ಅಭಿಯಾನ (ಬಳಸಿದ ನೀರು ನಿರ್ವಹಣೆ)ಯಡಿ ನೇತ್ರಾವತಿ, ನಂದಿನಿ ಕಂಡೇವು, ಗುರುಪುರ ನದಿ ವ್ಯಾಪ್ತಿಯ ಪ್ರದೇಶಗಳ ವ್ಯಾಪ್ತಿಯಲ್ಲಿ NGT ಅನುದಾನದಡಿಯಲ್ಲಿ ಪಚ್ಚನಾಡಿ ಪ್ರದೇಶ ಬಳಿ |

| | | |
|---|---|---|
| | | ಮುಂದುವರೆದು, ಮಂಗಳೂರು ಮಹಾನಗರ ಪಾಲಿಕೆಯ ನಡವಳಿ ದಿನಾಂಕ:25.07.1992ರ ಠರಾವು ನಿರ್ಣಯದಂತೆ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲಾ ಸರಕಾರಿ ಶಾಲೆಗಳು, ವಿದ್ಯಾರ್ಥಿ ನಿಲಯಗಳು, ದೇವಸ್ಥಾನ, ಯಾವುದೇ ಆದಾಯದ ಮೂಲವಿರದ ಭಜನಾ ಮಂದಿರಗಳು, ಚರ್ಚ್‌ಗಳು, ಇಎಸ್‌ಐ ಆಸ್ಪತ್ರೆ, ಮತ್ತು ಇತರ ಸರಕಾರಿ ಆಸ್ಪತ್ರೆಗಳು, ಪಶು ವೈದ್ಯ ಶಾಲೆಗಳು, ನಿರ್ಗತಿಕ ಮಕ್ಕಳನ್ನು ಸಂರಕ್ಷಿಸುವ ಧರ್ಮಾರ್ಥ ಸಂಸ್ಥೆಗಳು, ಅನಾಥಾಲಯಗಳು, ಅಂಗವಿಕಲ ಮತ್ತು ಬುದ್ಧಿ ಮಾಂಧ್ಯರ ರಕ್ಷಣಾ ಗೃಹಗಳು ಹಾಗೂ ಮಂಗಳೂರು ಮಹಾನಗರಪಾಲಿಕೆಯ ಸಿಬ್ಬಂದಿಗಳ ಸ್ವಂತ ವಾಸದ ಮನೆಗಳಿಗೆ ಸಂಪೂರ್ಣ ಉಚಿತವಾಗಿ ನೀರನ್ನು ಪೂರೈಸಲಾಗುತ್ತಿದೆ. ಪ್ರಸ್ತುತ 141 ಮನೆಗಳಿಗೆ ಉಚಿತವಾಗಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 164 ಪಿಆರ್‌ಜೆ 2025

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಉತ್ತರ ಕೊಟ್ಟಿದ್ದಾರೆ ಆದರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ತಾಳೆ ಆಗುತ್ತಿಲ್ಲ. ಒಳಚರಂಡಿ, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಬಗ್ಗೆ ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. That's all ongoing programmes. ನಾನು, ಮಂಗಳೂರು ಮಹಾನಗರ ಪಾಲಿಕೆಗೆ ವಿಶೇಷ ಅನುದಾನ ನೀಡಲು ಸರ್ಕಾರದ ಮುಂದೆ ಏನಾದರೂ ಯೋಜನೆ ಇದೆಯೇ, ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದೇನೆ. 250 ಕಿ.ಮೀ.ಗೆ ಸಂಬಂಧಪಟ್ಟಂತೆ ಹಿಂದೆ ಹಾಕಿದಂತಹ Under Ground Drainage ಏನಿದೆ ಅದನ್ನು stoneware type ಮತ್ತು ಕೆಂಪುಕಲ್ಲಿನಿಂದ ಮಾಡಿರುವಂತಹ drainage pits ಆಗಿದೆ. ಈಗ ಅವೆಲ್ಲಾ ಕರಗಿ ಹೋಗಿ ಈಗ ಕೊಳಚೆ ನೀರು ಪೈಪ್‌ಗಳಿಂದ ಹೋಗಬೇಕಾದುದು ಇವತ್ತು ತೋಟಗಳಿಗೆ ಹೋಗುತ್ತಿದೆ, ರಸ್ತೆಯ ಮೇಲೆ ಹೋಗುತ್ತಿದೆ.

(ಮುಂದು)

(771) 19-8-2025 11.00 ಡಿಎಸ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ರಸ್ತೆಗಳಲ್ಲಿ ಹೋಗುತ್ತಿದೆ ಮತ್ತು ಅದರ ಪರಿಣಾಮವಾಗಿ ನಗರಪಾಲಿಕೆಯ ಒಳಗೆ ಇರುವಂತಹ ಎಲ್ಲಾ ಬಾವಿಗಳ ನೀರು ಕೆಟ್ಟು ಹೋಗಿದೆ. ನೀರು ಬಾವಿಗಳಲ್ಲಿ ಮಾತ್ರ ಕೆಟ್ಟು ಹೋಗಿಲ್ಲ, ನೇತ್ರಾವತಿ ಮತ್ತು ಕಂಡೇವು ನದಿ ನೀರು ಕೆಟ್ಟು ಹೋಗಿದೆ. ಇದರ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್.ಜಿ.ಟಿ.) ದವರು ಬಂದು ಬಹಳಷ್ಟು ನಗರಪಾಲಿಕೆಗಳ ಮೇಲೆ ಕೇಸ್ ಹಾಕಿದ್ದಾರೆ. ನಾನು ಸಚಿವರಿಗೆ ಏನು ಕೇಳುತ್ತಿದ್ದೇನೆಂದರೆ, 250 ಕಿ.ಮೀ. ಒಳಚರಂಡಿ ಏನಿದೆ ಅದನ್ನು ದುರಸ್ತಿ ಮಾಡುವುದಕ್ಕೆ ಈಗಾಗಲೇ ನಗರಪಾಲಿಕೆಯಿಂದ ಡಿ.ಪಿ.ಆರ್. ಅನ್ನು ಮಾಡಿ ಕಳುಹಿಸಿದ್ದಾರೆ. ಅದಕ್ಕೆ 1,250 ಕೋಟಿ ರೂಪಾಯಿಗಳು ಬೇಕು. ಆ ಹಣವನ್ನು ಯಾವುದಾದರೂ ಮೂಲದಿಂದ ಕೊಡಿ. ಇಲ್ಲದಿದ್ದರೆ ನಗರಪಾಲಿಕೆ ಸಾಲ ತೆಗೆಯುವುದಕ್ಕಾದರೂ ನೀವು ಅವಕಾಶ ಮಾಡಿಕೊಡಿ ಎಂದು ನಾವು ಕೇಳಿದ್ದೇವೆ. ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ, ನಗರಪಾಲಿಕೆಯಲ್ಲಿ ಶೇಕಡ 40 ರಷ್ಟು ಜನರಿಗೆ ಒಳಚರಂಡಿ ವ್ಯವಸ್ಥೆಯನ್ನು ಕೊಟ್ಟಿಲ್ಲ. ಇನ್ನೂ ಪಿಟ್‌ಗಳ ಮೂಲಕ ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಹಾಗಾಗಿ ಶೇಕಡ 40 ರಷ್ಟು ಜನರಿಗೆ ನೀರು ತೋಡುನಲ್ಲಿ ಹರಿಯುವುದನ್ನು ನಿಲ್ಲಿಸಬೇಕು ಮತ್ತು ಈ ವಾಸನೆಯನ್ನು ಜನರಿಗೆ ತಡೆದುಕೊಳ್ಳುವುದಕ್ಕಾಗುತ್ತಿಲ್ಲ. ಈ ನೀರು ತೋಡಿನಲ್ಲಿ ಹೋಗಿ ಬಾವಿಯ ನೀರು ಹಾಳಾಗುವುದು ಮಾತ್ರವಲ್ಲ, ನೀರಿಗೆ ಕಾಲು ಇಟ್ಟರೆ ಆಸ್ಪತ್ರೆಗೆ ಹೋಗುವುದು ಗ್ಯಾರಂಟಿ, ಆ ನೀರು ಅಷ್ಟು ಕೊಳಕಾಗಿದೆ. ಅಷ್ಟು ವ್ಯವಸ್ಥೆ ಹಾಳಾಗಿದೆ. ಹಾಗಾಗಿ ಇದನ್ನು ಮಾನ್ಯ ಸಚಿವರು ಕನ್ಸಿಡರ್ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದರೂ ನಾನು ಅವರಿಗೆ

ವಿವರಣೆಯನ್ನು ಕೊಡುತ್ತೇನೆ. ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ (ಜಲಸಿರಿ) ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.316.50 ಕೋಟಿಗಳ ಮೊತ್ತದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಒಟ್ಟು 131.65 ಕಿ.ಮೀ. ಒಳಚರಂಡಿ ಕೊಳವೆ ಜಾಲ, ವೆಟ್ ವೆಲ್, ಇವೆಲ್ಲಾ ಆಗುತ್ತಿವೆ. ಈ ಕಾಮಗಾರಿಗಳನ್ನು ದಿನಾಂಕ 31-05-2026ಕ್ಕೆ ಪೂರ್ಣಗೊಳಿಸಲಾಗುವುದು.

ಮಾನ್ಯ ಸದಸ್ಯರು ಎನ್.ಜಿ.ಟಿ. ಬಗ್ಗೆ ಕೇಳಿದ್ದಾರೆ, ಈಗಾಗಲೇ ಮಂಗಳೂರು ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಪರಿಹಾರ ನಿಧಿಯಡಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನವನ್ನು ಸರ್ಕಾರದ ಆದೇಶ ದಿನಾಂಕ 30-11-2023 ರನ್ವಯ ಒದಗಿಸಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಮಾಡುತ್ತಿದ್ದೇವೆ. ಈ ಯೋಜನೆಗೆ ಡಿ.ಪಿ.ಆರ್. ಅನ್ನು ಮಾಡಿದ್ದೇವೆ. ಸದರಿ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಸದರಿ ಕಾಮಗಾರಿಗೆ M/s.NBM Infratech Pvt. Ltd., ರವರನ್ನು ಗುತ್ತಿಗೆದಾರರನ್ನಾಗಿ ನೇಮಕ ಮಾಡಿದ್ದೇವೆ. 15ನೇ ಹಣಕಾಸು ಯೋಜನೆಯಡಿಯಲ್ಲಿ ಕಂಡತ್ ಪಳ್ಳಿ ವೆಟ್ ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಗೆ ನಾವು ಟೆಂಡರ್ ಅನ್ನು ಕರೆದಿದ್ದೇವೆ.

ಇದು ಯು.ಜಿ.ಡಿ. ಸಮಸ್ಯೆ, ಕುಡಿಯುವ ನೀರಿನ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ಕುಡಿಯುವ ನೀರಿಗೆ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಲ್ಕು ನೀರು ಶುದ್ಧೀಕರಣ ಘಟಕಗಳಿದ್ದು, ತುಂಬೆ, ಬೆಂದೂರು, ಪಣಂಬೂರು, ಇಲ್ಲಿ ಶುದ್ಧೀಕರಣ ಘಟಕಗಳು ಇವೆ. ಸುಮಾರು 8.75 ಎಂ.ಎಲ್.ಡಿ. ಮತ್ತು ಬಜಾಲ್ ಪ್ರದೇಶ ಬಳಿ ಇರುವ 20 ಎಂ.ಎಲ್.ಡಿ. ಸಂಸ್ಕರಣಾ ಘಟಕಗಳನ್ನು ಈಗಾಗಲೇ ಮೇಲ್ದರ್ಜೆಗೇರಿಸಿದ್ದೇವೆ. ಈ ಕಾಮಗಾರಿಗಳನ್ನು ರೂ.40.00 ಕೋಟಿಗಳ ಜಲಶುದ್ಧಿ ಅಭಿಯಾನದಲ್ಲಿ ಈ ಕೆಲಸವನ್ನು ಮಾಡಿದ್ದೇವೆ. ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಅದಕ್ಕೂ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆ ಜಾರಿಗೆ ತರಲು ಎಷ್ಟು ಸಮಯ ತಗಲುವುದು ಎಂದು ಮಾನ್ಯ ಐವನ್ ಡಿ'ಸೋಜಾರವರು ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ನಾವು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ (ಜಲಸಿರಿ)ದಡಿ ರೂ.316.51 ಕೋಟಿಗಳ ಮೊತ್ತದಲ್ಲಿ 8 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ. ಅದರಲ್ಲಿ 5 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಡಿಸೆಂಬರ್-2025ಕ್ಕೆ ಉಳಿದ 3 ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಅದೇ ರೀತಿ ರೂ.675.51 ಕೋಟಿಗಳ ಮೊತ್ತದಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇವರು ಹೇಳಿರುವ ಮೊತ್ತಕ್ಕಿಂತ ಜಾಸ್ತಿಯಾಯಿತು.

ರೂ.675.51 ಕೋಟಿ ಮೊತ್ತದಲ್ಲಿ 3 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದ್ದೇವೆ. ಅವುಗಳಲ್ಲಿ ಒಂದು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಎರಡು ಕಾಮಗಾರಿಗಳನ್ನು ಡಿಸೆಂಬರ್-2026ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕುಡಿಯುವ ನೀರು ಸರಬರಾಜಿನಿಂದ ಮಹಾನಗರಪಾಲಿಕೆಗೆ ಬರುವ ಆದಾಯ ಎಷ್ಟು; ತಗಲುವ ವೆಚ್ಚ ಎಷ್ಟು ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರು ಸರಬರಾಜಿನಿಂದ ಮಹಾನಗರ ಪಾಲಿಕೆಗೆ 2020-21 ರಲ್ಲಿ 22 ಕೋಟಿ 81 ಲಕ್ಷ ರೂಪಾಯಿಗಳ ಆದಾಯ ಬಂದಿದೆ. 21 ಕೋಟಿ 91 ಲಕ್ಷ ರೂಪಾಯಿಗಳ ವೆಚ್ಚವಾಗಿದೆ. 2024-25ರಲ್ಲಿ 33 ಕೋಟಿ 2 ಲಕ್ಷ ರೂಪಾಯಿಗಳ ಆದಾಯ ಬಂದಿದೆ. 21 ಕೋಟಿ 67 ಲಕ್ಷ ರೂಪಾಯಿಗಳ ವೆಚ್ಚವಾಗಿದೆ.

ಒಳಚರಂಡಿ ನೀರು ನೇತ್ರಾವತಿ, ನಂದಿನಿ, ಕಂಡೇವು ನದಿಗಳಿಗೆ ಹರಿದು ಮಾಲಿನ್ಯಗೊಂಡಿರುವುದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದನ್ನು ಸರಿ ಮಾಡಬೇಕೆಂದು ಹಲವಾರು ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಎಡಿಬಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮದಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.316.50 ಕೋಟಿಗಳ ಮೊತ್ತದಲ್ಲಿ 131.65 ಕಿ.ಮೀ. ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ ಇದರ ಬಗ್ಗೆ ಮೊದಲೇ ಹೇಳಿದ್ದೇನೆ. ಅವರು ಕೇಳಿರುವ ಪ್ರಶ್ನೆಯನ್ನೇ ಮತ್ತೆ ರಿಪೀಟ್ ಮಾಡಿ ಕೇಳಿದ್ದಾರೆ. ಎನ್.ಜಿ.ಟಿ. ಅನುದಾನದಲ್ಲಿ ಈ ಕೆಲಸಗಳನ್ನೆಲ್ಲಾ ಮಾಡುತ್ತಿದ್ದೇವೆ. ಈ ಭಜನ ಮಂದಿರಗಳು, ಚರ್ಚ್‌ಗಳು, ಇಎಸ್‌ಐ ಆಸ್ಪತ್ರೆಗಳು ಮತ್ತು ಇತರ ಸರ್ಕಾರಿ ಆಸ್ಪತ್ರೆಗಳು, ಮಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿಗಳ ಸ್ವಂತ ವಾಸದ ಮನೆಗಳಿಗೆ ಸಂಪೂರ್ಣ ಉಚಿತವಾಗಿ ನೀರನ್ನು ಪೂರೈಸಲಾಗುತ್ತಿದೆ. ಆದ್ದರಿಂದ ನಾವು ಸಮಾಜ ಸೇವೆಯ ಕೆಲಸಗಳನ್ನು ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಐವನ್ ಡಿಸೋಜಾರವರು ಏನು ಹೇಳಿದ್ದಾರೆ, ಒಳಚರಂಡಿ ವ್ಯವಸ್ಥೆಗೆ ನಾವು ಕೆಲಸ ಮಾಡುತ್ತಿದ್ದೇವೆ. ಕುಡಿಯುವ ನೀರಿಗೂ ಸುಮಾರು 640 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಶೇಕಡ 35 ರಷ್ಟು ಜನರಿಗೆ ಮಹಾನಗರ ಪಾಲಿಕೆಯವರು ಒಳಚರಂಡಿ ವ್ಯವಸ್ಥೆಯನ್ನು ಒದಗಿಸಿ ಕೊಡಲಿಲ್ಲ. ಎಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ ಅಲ್ಲಿ 250 ಕಿ.ಮೀ.ಗಳಲ್ಲಿ 50 ವರ್ಷ ಹಳೆಯದಾದ ಒಳಚರಂಡಿಯಲ್ಲಿ ಪೈಪ್‌ಗಳನ್ನು ಅಳವಡಿಸಲಾಗಿದೆ. Stoneware ಪೈಪ್‌ಗಳು, ಕಲ್ಲಿನಿಂದ ಕಟ್ಟಿರುವಂತಹ ಡ್ರೈನೇಜ್ ಕಂಬಿಗಳು ಅವೆಲ್ಲಾ ಇವತ್ತು ಮಣ್ಣು ಹಿಡಿದು ಹೋಗಿವೆ. ಒಳಚರಂಡಿಯಲ್ಲಿ ಲೋಡ್ ಜಾಸ್ತಿಯಾದಾಗ ಹೋಗುವುದು ಬಿಟ್ಟು ಅದು ತೋಡುಗಳಿಗೆ ಹೋಗುತ್ತದೆ. ಎಲ್ಲಿ ನೀರು ಹರಿಯಬೇಕಾಗಿತ್ತೋ ಅಲ್ಲಿ ಒಳಚರಂಡಿ ನೀರು ಹರಿಯುತ್ತಿದೆ. ವಾಸನೆ ಬರುತ್ತಿದೆ, ಬಾವಿ ನೀರು ಹಾಳಾಗಿದೆ, ನದಿಗಳ ನೀರು ಹಾಳಾಗಿದೆ. ಹಾಗಾಗಿ ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ,

ಏನಾದರೂ ಮಾಡಿ ಒಳಚರಂಡಿ ವ್ಯವಸ್ಥೆಯನ್ನು ಸರಿ ಮಾಡಲು 1,250 ಕೋಟಿ ರೂಪಾಯಿಗಳ ಡಿ.ಪಿ.ಆರ್. ಇಲಾಖೆಯ ಮುಂದೆ ಇದೆ. ಮಾನ್ಯ ಸಚಿವರು ಹಣ ಕೊಡಬೇಕು ಅಥವಾ ಸಾಲ ಮಾಡುವುದಕ್ಕಾದರೂ ವ್ಯವಸ್ಥೆ ಮಾಡಿಕೊಟ್ಟು ಮಂಗಳೂರು ಮಹಾನಗರ ಪಾಲಿಕೆ ಒಳಚರಂಡಿ ಸರಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಿ ಎಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್.ಸುರೇಶ:-** ಮಾನ್ಯ ಸಭಾಪತಿಯವರೇ, 1,200 ಕೋಟಿ, 1,300 ಕೋಟಿ ರೂಪಾಯಿಗಳನ್ನು ಮಹಾನಗರ ಪಾಲಿಕೆಗೆ ಸಾಲ ಕೊಡುವುದಕ್ಕೆ ಅನುಮತಿ ಕೊಡುವಂಥದ್ದು ಇಲ್ಲ. 1,200 ಕೋಟಿ ರೂಪಾಯಿಗಳೇನು ಸಣ್ಣ ಮೊತ್ತವಲ್ಲ. ಈಗಾಗಲೇ 300-400 ಕೋಟಿ ರೂಪಾಯಿಗಳ ಕೆಲಸವನ್ನು ಮಾಡುತ್ತಿದ್ದೇವೆ. ಮುಂದಿನ ದಿವಸಗಳಲ್ಲಿ missing lines ಏನಾದರೂ ಇದ್ದರೆ ಅಲ್ಲಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ತನಿಖೆ ಮಾಡಿ ಅದರ ಬಗ್ಗೆ ಏನಾದರೂ ಅವಶ್ಯಕತೆ ಇದ್ದರೆ ಮಾಡುವಂತಹ ಕೆಲಸವನ್ನು ಮಾಡತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಗಳೂರಿಗೆ ಭೇಟಿ ಕೊಟ್ಟು ರಿವ್ಯೂ ಮೀಟಿಂಗ್ ಅನ್ನು ಮಾಡಲಿ. ಇದರ ಬಗ್ಗೆ ಸಭೆ ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ಬೇಡಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್.ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ಹೋಗುತ್ತಿರುತ್ತೇನೆ.

## ಪ್ರಶ್ನೆ ಸಂಖ್ಯೆ: 872

## ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಸುವ ಕುರಿತು

| ಕ್ರ. ಸಂ. | ಕೋರಿರುವ ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಮುದಗಲ್ ಪಟ್ಟಣಕ್ಕೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.44.79 ಕೋಟಿಗಳ ಅನುದಾನವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಸರ್ಕಾರದ ಆದೇಶ ಸಂಖ್ಯೆ: ನಅಇ 381 ಪಿ.ಆರ್.ಜೆ 2017 ದಿನಾಂಕ:15.12.2017 ರಲ್ಲಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣದಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 9 ಪಟ್ಟಣಗಳ ಯೋಜನೆಯಡಿ ಕುಡಿಯುವ ನೀರು ಸರಬರಾಜು ಉನ್ನತೀಕರಣ ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆಯಾಗಿರುತ್ತದೆ.<br>• ಈ ಯೋಜನೆಗೆ ರೂ.34.96 ಕೋಟಿಗಳ ಅಂದಾಜು ಮೊತ್ತದಲ್ಲಿ ಶೇ.50 ರಷ್ಟು ಸರ್ಕಾರದ ಅನುದಾನ ಹಾಗೂ ಶೇ. 50 ರಷ್ಟು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು. |
| ಆ) | ನಿಗದಿಪಡಿಸಿದ ಅನುದಾನದಲ್ಲಿ ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು; | • ಈ ಯೋಜನೆಗೆ ರೂ.34.96 ಕೋಟಿಗಳ ಅಂದಾಜು ಮೊತ್ತದಲ್ಲಿ ಶೇ.50 ರಷ್ಟು ಸರ್ಕಾರದ ಅನುದಾನ ಹಾಗೂ ಶೇ.50 ರಷ್ಟು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು.<br>• ನಿಗದಿಪಡಿಸಿದ ಅನುದಾನದಲ್ಲಿ ಈವರೆಗೆ ರೂ.6.62 ಕೋಟಿಗಳನ್ನು ಬಿಡುಗಡೆ ಮಾಡಿ ವೆಚ್ಚ ಮಾಡಲಾಗಿದ್ದು, ಮಾರುಕಟ್ಟೆ ಸಾಲ ಪಡೆಯಲು ಸಾಧ್ಯವಾಗದ ಕಾರಣ ಬಾಕಿ ಅನುದಾನ ಲಭ್ಯವಿರುವುದಿಲ್ಲ. |
| ಇ) | ಬಾಕಿ ಉಳಿದಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; (ಸಂಪೂರ್ಣ ಮಾಹಿತಿ ಒದಗಿಸುವುದು) | • ಮುದಗಲ್ ಪಟ್ಟಣದ ಕಾಮಗಾರಿಗಾಗಿ ರೂ.31.29 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಗುತ್ತಿಗೆದಾರರಾದ ಮೇ\|\| ಎ.ಎಸ್.ಆರ್ ಇಂಜಿನಿಯರಿಂಗ್ ಮತ್ತು ಪ್ರಾಜೆಕ್ಟ್ಸ್ ಲಿಮಿಟೆಡ್, ಹೈದ್ರಾಬಾದ್ ರವರಿಗೆ ಟೆಂಡರ್ ಮುಖಾಂತರ ದಿನಾಂಕ:07.03.2018 ರಂದು ವಹಿಸಿಕೊಡಲಾಗಿತ್ತು.<br>• ಸದರಿ ಕಾಮಗಾರಿಯನ್ನು ದಿನಾಂಕ:07.03.2018 ರಂದು ಪ್ರಾರಂಭಿಸಲಾಗಿದ್ದು, 18 ತಿಂಗಳೊಳಗೆ (06.09.2019) ಪೂರ್ಣಗೊಳಿಸಬೇಕಾಗಿತ್ತು. ಆದರೆ ಕೋವಿಡ್ ಹಾಗೂ ಗುತ್ತಿಗೆದಾರರ ವಿಳಂಭ ದೋರಣೆಯಿಂದ ಕೇವಲ ಶೇ. 27% ರಷ್ಟು ಪ್ರಗತಿಯ ಕಾರಣ (ರೂ.6.62 ಕೋಟಿ ವೆಚ್ಚ) ಮುದಗಲ್ ಪಟ್ಟಣದ ಗುತ್ತಿಗೆಯನ್ನು ಜುಲೈ 2023 ರಂದು ರದ್ದುಪಡಿಸಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮುದಗಲ್ ಪುರಸಭೆಗೆ ಹಸ್ತಾಂತರಿಸಲಾಗಿರುತ್ತದೆ. |
| ಈ) | ಸದರಿ ಕುಡಿಯುವ ನೀರಿನ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | |

| | | |
|---|---|---|
| | | • ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ದಿನಾಂಕ:23.01.2024 ರ ಹಿಂಬರಹದನ್ವಯ ಅಮೃತ್ 2.0 ಅಡಿ ಹಾಗೂ ಕಾಸ್ಟ್ & ರಿಸ್ಕ್ ಮೊತ್ತದಡಿ ಕೈಗೆತ್ತಿಕೊಳ್ಳಲು ಸೂಚನೆ ನೀಡಲಾಗಿದ್ದು, ಆ ಪ್ರಕಾರ ಕ್ರಮ ಜರುಗಿಸಲು 7ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.<br>• ಅಮೃತ್ 2.0 ಅಡಿ ಬಾಕಿ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಇರುವುದಿಲ್ಲ.<br>• ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಯ ಸ್ವಂತ ಸಂಪನ್ಮೂಲದಿಂದ ಹಾಗೂ ಮೂಲ ಗುತ್ತಿಗೆದಾರರ ಕಾಸ್ಟ್ & ರಿಸ್ಕ್ ಮೊತ್ತದಿಂದ (ಈ ಕುರಿತು ರಾಯಚೂರು ಜಿಲ್ಲಾಧಿಕಾರಿಗಳಿಗೆ Risk & Cost ಮೊತ್ತವನ್ನು Arrears of land revenue ಆಗಿ ವಸೂಲಿ ಮಾಡಲು ಕೋರಲಾಗಿದೆ) ಬಾಕಿ ಕಾಮಗಾರಿಗಳನ್ನು ಪುನರ್ ಪ್ರಾರಂಭಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಪುರಸಭೆಗೆ ತಿಳಿಸಲಾಗಿದೆ.<br>• ದಿನಾಂಕ:07.03.2018 ರಿಂದ 25.03.2024 ರವರೆಗೆ ಕೆಯುಐಡಿಎಫ್‌ಸಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆ ಕೈಗೊಳ್ಳುತ್ತಿರುವುದರಿಂದ ಇತರೆ ಕುಡಿಯುವ ನೀರು ಯೋಜನೆಯಲ್ಲಿ (ಅಮೃತ್-2.0 ಜೆ.ಜೆ.ಎಂ) ಅವಕಾಶ ದೊರೆಯಲಿಲ್ಲವಾದ್ದರಿಂದ ಕಾಮಗಾರಿ ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಿ ಅನುಮತಿ ನೀಡಿದ್ದಲ್ಲಿ, ಉಳಿದ ಕಾಮಗಾರಿಗೆ ಹೊಸದಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಯೋಜನಾ ನಿರ್ದೇಶಕರು, ವರದಿ ಮಾಡಿರುತ್ತಾರೆ.<br>• ಈಗಾಗಲೇ ರದ್ದುಮಾಡಿರುವ ಗುತ್ತಿಗೆದಾರರಿಂದ Risk & Cost ಮೊತ್ತವನ್ನು Arrears of land revenue ಆಗಿ ವಸೂಲಿ ಮಾಡಿ ಬಾಕಿ ಕಾಮಗಾರಿಗಳನ್ನು ಪುರಸಭೆ ವತಿಯಿಂದ ಪುನರ್ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸವಿಸ್ತಾರವಾಗಿ ಒದಗಿಸಿ ಕೊಟ್ಟಿದ್ದಾರೆ. ಆದರೆ, 2017 ರಲ್ಲಿ ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅನುಮೋದನೆಗೊಂಡು 2018 ರಲ್ಲಿ ಕೆಲಸ ಪ್ರಾರಂಭವಾಗಿರುತ್ತದೆ. ಶೇಕಡ 50 ರಷ್ಟು ಸರ್ಕಾರದ ಅನುದಾನ, ಶೇಕಡ 50 ರಷ್ಟು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಆ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದು. ಆದರೆ ದುರ್ದೈವವಶಾತ್ 2018ರಲ್ಲಿ ಪ್ರಾರಂಭವಾದ ಕೆಲಸ 2019 ರಲ್ಲಿ

ಮುಗಿಯಬೇಕಾಗಿತ್ತು. ಆದರೆ, ಕೇವಲ 6.27 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು ಶೇಕಡ 27 ರಷ್ಟು ಕೆಲಸ ಮಾಡಿ 2023 ರವರೆಗೂ ಕಾಮಗಾರಿಯಲ್ಲಿ ಯಾವುದೇ ಪ್ರಗತಿ ಕಾಣಲಿಲ್ಲ. ಆಗ ಸರ್ಕಾರ ಅದನ್ನು risk and cost ಮಾಡಿ ಟೆಂಡರ್ ಅನ್ನು ರದ್ದುಗೊಳಿಸಿತು. ರದ್ದುಗೊಳಿಸಿದ ಮೇಲೆ ಇಲ್ಲಿಯವರೆಗೆ ಅದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. 30,000 ಜನಸಂಖ್ಯೆ ಹೊಂದಿರುವಂತಹ ಮುದಗಲ್ ಪಟ್ಟಣಕ್ಕೆ ಇವತ್ತು 14 ದಿವಸಗಳಿಗೊಮ್ಮೆ ನೀರು ಕೊಡುವಂತಹ ವ್ಯವಸ್ಥೆ ನಡೆದಿದೆ.

(ಮುಂದು)

(772) 19/08/2025 11:10 ಎಸ್‌ಪಿಆರ್/ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣಗೌಡ ಬಯ್ಯಾಪುರ(ಮುಂದು):-**

25 ವರ್ಷಗಳ ಹಿಂದೆ ಅಂದಿನ ಜನಸಂಖ್ಯೆಗೆ ಅನುಗುಣವಾಗಿ ಪೈಪ್‌ಲೈನ್‌ಗಳನ್ನು ಮಾಡಲಾಗಿತ್ತು. ಅದು 25 ವರ್ಷಗಳ ಹಿಂದಿನ ಹಳೆಯ ಪೈಪ್‌ಲೈನ್ ಆಗಿರುವುದರಿಂದ ಅದು ಎರಡ್ಮೂರು ದಿನಗಳಿಗೊಮ್ಮೆ ಅಲ್ಲಲ್ಲಿ ತುಕ್ಕು ಹಿಡಿದು, ಅದು ಒಡೆದು ಹೋಗಿ ನೀರು ಸೋರಿಕೆಯಾಗುತ್ತಿದೆ. ಹೀಗಾಗಿ ಅಲ್ಲಿ 14 ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿದ್ದಾರೆ. ಇದಕ್ಕೆ ಯಾವುದೇ ಅನುದಾನವಿಲ್ಲ ಎಂಬುದಾಗಿ ಸಚಿವರು ತಿಳಿಸಿದ್ದಾರೆ. ರಿಸ್ಕ್ ಅಂಡ್ ಕಾಸ್ಟ್ ಮೊತ್ತದಲ್ಲಿ ಇದನ್ನು ಮಾಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ರಿಸ್ಕ್ ಅಂಡ್ ಕಾಸ್ಟ್ ಮೊತ್ತದಲ್ಲಿ ಇದನ್ನು ಯಾವ ರೀತಿಯಾಗಿ ಮಾಡಲಾಗುತ್ತದೆ ಎಂಬುದರ ಬಗ್ಗೆ ಸಚಿವರು ತಿಳಿಸಬೇಕು. ರಿಸ್ಕ್ ಅಂಡ್ ಕಾಸ್ಟ್ ಮೊತ್ತ ಎಂದರೆ ಉಳಿದ ಕೆಲಸಕ್ಕೆ ಎಷ್ಟು ಮೊತ್ತ ಹೆಚ್ಚಾಗುತ್ತದೆ ಅದನ್ನು ಮಾತ್ರವೇ ಗುತ್ತಿಗೆದಾರರಿಂದ ವಸೂಲಿ ಮಾಡಬಹುದು. ಆದರೆ, ರಿಸ್ಕ್ ಅಂಡ್ ಕಾಸ್ಟ್ ಮೊತ್ತದಲ್ಲಿ ಇದನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿದ್ದೇವೆ; ಹೀಗಾಗಿ ಇದನ್ನು ಅವರು ಮಾಡುತ್ತಾರೆ ಎಂಬುದಾಗಿ ಸಚಿವರು ಉತ್ತರಿಸಿದ್ದಾರೆ. ಇದನ್ನು ಜಿಲ್ಲಾಧಿಕಾರಿಗಳು ಹೇಗೆ ಮಾಡಲು ಸಾಧ್ಯವಾಗುತ್ತದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಹೀಗಾಗಿ ಸರ್ಕಾರವು ಏನಾದರೂ ಮಾಡಿ ಇದಕ್ಕೆ ಇತಿಶ್ರೀಯನ್ನು ಹಾಡಲೇಬೇಕು. ಸಚಿವರು ಈ ಕೆಲಸವನ್ನು ಮಾಡಿಕೊಟ್ಟರೆ, ಅಲ್ಲಿನ ಮೂವತ್ತು ಸಾವಿರ ಜನರು ನಿಮ್ಮ ಹೆಸರನ್ನು ಕೊಂಡಾಡುತ್ತಾರೆ. ಇದನ್ನು ಯಾವಾಗ ಮಾಡುತ್ತೀರಿ ಎಂದು ಸಚಿವರು ಸದನಕ್ಕೆ ತಿಳಿಸಬೇಕು.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೆ, ಇದು ಬಹಳ ಹಳೆಯ ಸಮಸ್ಯೆಯಾಗಿದೆ. 2017 ರಲ್ಲಿ ಸುಮಾರು 44.79 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಲಿಂಗಸಗೂರು ತಾಲ್ಲೂಕಿನ ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಟೆಂಡರ್ ಪ್ರಕ್ರಿಯೆಯೂ ಸಹ ಆಗಿರುತ್ತದೆ. ಈ ಯೋಜನೆಯನ್ನು 50:50 ರ ಅನುಪಾತದಲ್ಲಿ ತೆಗೆದುಕೊಳ್ಳಲಾಗಿತ್ತು. ಇದಕ್ಕೆ ಶೇಕಡಾ 50 ರಷ್ಟು ಅನುದಾನವನ್ನು ಸರ್ಕಾರವು ನೀಡಲು ಸಿದ್ಧವಾಗಿತ್ತು. ಇನ್ನುಳಿದ ಶೇಕಡಾ 50 ರಷ್ಟು ಹಣವನ್ನು ಸಾಲದ ಮೂಲಕ ಪಡೆಯಬೇಕು ಎಂಬುದಾಗಿ

ಯೋಚಿಸಲಾಗಿತ್ತು. ಆದರೆ, ಕಾರಣಾಂತರಗಳಿಂದ ಸದರಿ ಯೋಜನೆಗೆ ಸಾಲ ದೊರೆಯಲಿಲ್ಲ. ಆದಾಗ್ಯೂ ಸಹ ಸರ್ಕಾರ ನೀಡಿದ ಅನುದಾನದಲ್ಲಿಯೇ ಕೆಲಸವನ್ನು ಪ್ರಾರಂಭಿಸಲಾಗಿದೆ. ಸುಮಾರು 6.62 ಕೋಟಿ ರೂಪಾಯಿಗಳ ಮೊತ್ತದ ಕೆಲಸವನ್ನು ಮಾಡಿ, ನೀರು ಸರಬರಾಜು ಮಾಡುವ ಕೆಲಸವನ್ನು ಮಾಡಿದ್ದೇವೆ. ಗುತ್ತಿಗೆದಾರರಾದ ಮೆ॥ ಎ.ಎಸ್.ಆರ್. ಇಂಜಿನಿಯರಿಂಗ್ ಮತ್ತು ಪ್ರಾಜೆಕ್ಟ್ಸ್ ಲಿಮಿಟೆಡ್‌ನವರು ಕೆಲಸವನ್ನು ಮಾಡಿಲ್ಲ. ಅದೇ ಸಮಯದಲ್ಲಿಯೇ ಕೋವಿಡ್-19 ಸಾಂಕ್ರಾಮಿಕ ಕಾಯಿಲೆಯು ವ್ಯಾಪಕವಾಗಿ ಹರಡಿತ್ತು. ನಂತರದಲ್ಲಿ ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸದೇ ಹೊರಟು ಹೋದರು. ಹೀಗಾಗಿ ಅಲ್ಲಿಗೆ ಕೆಲಸವು ಸ್ಥಗಿತಗೊಂಡಿತು. ಸರಿಯಾದ ಸಮಯದಲ್ಲಿ ಕೆಲಸವನ್ನು ಪೂರ್ಣಗೊಳಿಸಿಲ್ಲ ಎನ್ನುವ ಕಾರಣದಿಂದಾಗಿ ನಂತರದಲ್ಲಿ ಸದರಿ ಗುತ್ತಿಗೆದಾರರಿಗೆ ನೀಡಲಾಗಿದ್ದ ಟೆಂಡರ್ ಅನ್ನು ರದ್ದುಗೊಳಿಸಲಾಯಿತು. ಇದು, ಕೋವಿಡ್-19 ಮತ್ತು ಯೋಜನೆಗೆ ಸಾಲ ಸಿಗದೇ ಇರುವ ಮೂರು ಕಾರಣಗಳೂ ಇಲ್ಲಿವೆ. 6.62 ಕೋಟಿ ರೂಪಾಯಿಗಳ ವೆಚ್ಚದ ಕೆಲಸವನ್ನು ಅಲ್ಲಿ ಮಾಡಿ, ನಂತರದಲ್ಲಿ ಅಲ್ಲಿನ ಪುರಸಭೆಗೆ ಈ ಯೋಜನೆಯನ್ನು ಹಸ್ತಾಂತರಿಸಲಾಗಿದೆ. ಇಷ್ಟು ಮೊತ್ತದ ಕಾಮಗಾರಿಯಿಂದಾಗಿ ಅಲ್ಲಿ ನೀರು ಸರಬರಾಜು ಆಗುತ್ತಿದೆ. ಆದರೆ, ಈ ಸಂಬಂಧ ನಮ್ಮ ಇಲಾಖೆಯವರು ಏನು ಹೇಳುತ್ತಿದ್ದಾರೆ ಎಂದರೆ, ಆ ಸಮಯದಲ್ಲಿ ಅಮೃತ-2 ಯೋಜನೆಯು ಬಂದಿತು. ಈ ಕಾಮಗಾರಿಯ ಕೆಲಸವನ್ನು ಮುಂಚಿತವಾಗಿಯೇ ತೆಗೆದುಕೊಂಡಿದ್ದರಿಂದ ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅದರಲ್ಲಿ ಸೇರಿಸಲಾಗಲಿಲ್ಲ. ಇದರಿಂದಾಗಿ ತಾಂತ್ರಿಕ ಸಮಸ್ಯೆಗಳಾದವು. ಪ್ರಸ್ತುತ ಇಲಾಖೆಯಲ್ಲಿ ಅನುದಾನವಿಲ್ಲ. ರಿಸ್ಕ್ ಅಂಡ್ ಕಾಸ್ಟ್ ಮೊತ್ತ ಎಷ್ಟು ಆಗುತ್ತದೆಯೋ ಅದನ್ನು ಗುತ್ತಿಗೆದಾರರಿಂದ ವಸೂಲಿ ಮಾಡಬೇಕು. ನಂತರದಲ್ಲಿ ಸ್ಥಳೀಯ ಪುರಸಭೆಯಿಂದ ಅನುದಾನವನ್ನು ಸೇರಿಸಿ ಈ ಕೆಲಸವನ್ನು ಮಾಡಬೇಕೆಂದು ಇಲಾಖಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ನನ್ನ ಪ್ರಕಾರ ಇದೂ ಸಹ ಕಷ್ಟದ ಕೆಲಸವಾಗಿದೆ. ಇಷ್ಟೊಂದು ಮೊತ್ತ ಪುರಸಭೆಯವರ ಬಳಿ ಇಲ್ಲ ಎನ್ನುವ ಸಂಗತಿಯೂ ಸಹ ನಮಗೆ ತಿಳಿದಿದೆ. ಸದರಿ ಯೋಜನೆಯ ಕಾಮಗಾರಿಯು ಅರ್ಧಂಬರ್ಧ ಆಗಿ ಕೆಲಸವು ಸ್ಥಗಿತಗೊಂಡಿದೆ. ಗುತ್ತಿಗೆದಾರರಿಂದ ಎಷ್ಟು ಹಣ ವಸೂಲಿ ಮಾಡಲಾಗುತ್ತದೆಯೋ, ಆ ನಂತರದಲ್ಲಿ ಸ್ಥಳೀಯ ಪುರಸಭೆಯಿಂದ ಒಂದಿಷ್ಟು ಹಣ ತೆಗೆದುಕೊಂಡು ಹೊಂದಾಣಿಕೆ ಮಾಡಿ ಕೆಲಸ ಮಾಡಬೇಕಾಗಿದೆ. ಇದಲ್ಲದೇ, ಈ ವಿಚಾರವಾಗಿ ನಾನು ಆರ್ಥಿಕ ಇಲಾಖೆಯೊಂದಿಗೂ ಸಹ ಪತ್ರ ವ್ಯವಹಾರ ಮಾಡುತ್ತೇನೆ. ಆರ್ಥಿಕ ಇಲಾಖೆಯ ಸಹಕಾರವನ್ನು ಪಡೆದುಕೊಂಡು ಆದಷ್ಟು ಶೀಘ್ರದಲ್ಲಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ.

**ಸಭಾಪತಿಯವರು:-** ಈ ವಿಚಾರದಲ್ಲಿ ಸಚಿವರು ಮುತುವರ್ಜಿಯನ್ನು ವಹಿಸಬೇಕು.

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 6.62 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೀರು ಸರಬರಾಜು ಮಾಡಲಾಗುತ್ತಿದ್ದುದೆ ಎಂಬ ತಪ್ಪು ಮಾಹಿತಿ ಸಚಿವರಿಗೆ ಇದೆ. ಸದರಿ ಮೊತ್ತದಲ್ಲಿ ಮುದಗಲ್ ಪಟ್ಟಣಕ್ಕೆ ಒಂದು ಹನಿ ನೀರೂ ಸರಬರಾಜು ಆಗಿರುವುದಿಲ್ಲ. ಆ ಮೊತ್ತದಲ್ಲಿ ಕೇವಲ

ಪೈಪ್‌ಗಳನ್ನು ಮಾತ್ರವೇ ಖರೀದಿಸಿರುತ್ತಾರೆ. ಹೊಸ ಟ್ಯಾಂಕ್ ನಿರ್ಮಿಸುವುದಾಗಿ ಹೇಳಿ ಈ ಹಿಂದೆ ಅಲ್ಲಿ ಇದ್ದ ನೀರಿನ ಟ್ಯಾಂಕ್ ಅನ್ನೂ ಸಹ ಒಡೆದು ಹಾಕಿರುತ್ತಾರೆ. 25 ವರ್ಷಗಳ ಹಿಂದೆ ಯೋಜನೆ ಮಾಡಲಾಗಿತ್ತು. ಈ ಮೊದಲು ಮದರ್ ಟ್ಯಾಂಕ್‌ಗೆ ನೀರು ಬಂದು, ಅಲ್ಲಿಂದ ಇನ್ನುಳಿದ ಎಲ್ಲಾ ಟ್ಯಾಂಕುಗಳಿಗೆ ನೀರು ಸರಬರಾಜು ಆಗುತ್ತಿತ್ತು. ಆದರೆ ಈಗ ಆ ಟ್ಯಾಂಕ್ ಇಲ್ಲ. ಹೀಗಾಗಿ ಈಗ ಮದರ್ ಟ್ಯಾಂಕ್ ಇಲ್ಲದಿರುವ ಕಾರಣಕ್ಕಾಗಿ ಸಣ್ಣ ಸಣ್ಣ ಟ್ಯಾಂಕುಗಳಿಗೆ ನೀರು ತುಂಬಿಸಿ ಸರಬರಾಜು ಮಾಡಬೇಕೆಂದರೆ, ಬಹಳಷ್ಟು ಕಷ್ಟವಾಗುತ್ತಿದೆ. 6.62 ಕೋಟಿ ರೂಪಾಯಿಗಳ ವೆಚ್ಚದಿಂದಾಗಿ ಮುದಗಲ್ ಪಟ್ಟಣಕ್ಕೆ ಒಂದು ಹನಿ ನೀರು ಬಂದಿರುವುದಿಲ್ಲ. ಆದರೆ ಸಚಿವರು ರಿಸ್ಕ್ ಅಂಡ್ ಕಾಸ್ಟ್ ಮೊತ್ತ ಎಂಬುದಾಗಿ ಹೇಳುತ್ತಿದ್ದು, ಇದನ್ನು ವಸೂಲಿ ಮಾಡಿದಲ್ಲಿ ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗುತ್ತಾರೆ. ಈ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲು ಸಾಧ್ಯವೇ ಇಲ್ಲ. ಇದನ್ನು ನಾನು ಎಲ್ಲಿ ಬೇಕಾದರೂ ಬರೆದು ಕೊಡಲು ಸಿದ್ಧನಿದ್ದೇನೆ. ಏಕೆಂದರೆ ಇದರಲ್ಲಿ ಇಲಾಖೆಯ ನೂರಾರು ತಪ್ಪುಗಳಿವೆ. ಈಗ್ಗೆ ನಾಲ್ಕು ವರ್ಷದ ಹಿಂದೆ ಇದೇ ವಿಚಾರವಾಗಿ ನಾನು ಗುತ್ತಿಗೆದಾರರೊಂದಿಗೂ ಸಹ ಮಾತನಾಡಿದ್ದೇನೆ. ಇದು ಯಾವುದೇ ಕಾರಣದಲ್ಲಿಯೂ ಆಗದ ಪರಿಸ್ಥಿತಿಯಲ್ಲಿದೆ ಎಂದು ಅವರು ತಿಳಿಸಿದರು. ಝುಸರ್ಕಾರ ಮನಸ್ಸು ಮಾಡಿದರೆ ಮಾತ್ರವೇ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತದೆ ಎಂಬುದಾಗಿಯೂ ಸಹ ಅವರು ತಿಳಿಸಿದರು. ಒಂದು ವೇಳೆ ಗುತ್ತಿಗೆದಾರರಿಂದ ರಿಸ್ಕ್ ಅಂಡ್ ಕಾಸ್ಟ್ ಹಣ ವಸೂಲಿ ಮಾಡಿದಲ್ಲಿ ಅದು ಸುಮಾರು 6-7 ಕೋಟಿ ರೂಪಾಯಿಗಳಷ್ಟು ಹಣ ಬರಬಹುದು. ಇದಕ್ಕಿಂತಲೂ ಹೆಚ್ಚಿನ ಹಣ ವಸೂಲಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ 6-7 ಕೋಟಿ ರೂಪಾಯಿಗಳ ಮೊತ್ತದಲ್ಲಿ ಸರ್ಕಾರವು ಯಾವ ರೀತಿಯಾಗಿ ಮುದಗಲ್ ಪಟ್ಟಣಕ್ಕೆ ನೀರು ಸರಬರಾಜುಝು ಮಾಡಲು ಸಾಧ್ಯವಾಗುತ್ತದೆ ಎಂದು ನಾನು ಪ್ರಶ್ನಿಸುತ್ತೇನೆ. ಹೀಗಾಗಿ ಸಚಿವರು ದಯಮಾಡಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡಬೇಕು. ನಾವು ಈಗಾಗಲೇ ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಿಯೋಗದ ಮೂಲಕ ಮುಖ್ಯಮಂತ್ರಿಗಳನ್ನು, ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಹಾಗೂ ಇಲಾಖಾ ಸಚಿವರನ್ನೂ ಸಹ ಭೇಟಿ ಮಾಡಿದ್ದೇವೆ. ಹೀಗಾಗಿ ನಾನು ಸಚಿವರಲ್ಲಿ ಕೈಯ್ಯನ್ನು ಮುಗಿದು ಬೇಡಿಕೊಳ್ಳುತ್ತಿದ್ದೇನೆ. ಈ ಯೋಜನೆಯನ್ನು ಪೂರ್ಣಗೊಳಿಸದೇ ಹೋದರೆ, ಮುಂದಿನ ದಿನಮಾನಗಳಲ್ಲಿ ನಾವೇ ಹೆದ್ದಾರಿಗಳನ್ನು ಬಂದ್ ಮಾಡಿ ಮುಷ್ಕರ ಹೂಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇಲಾಖೆಯ ಸಚಿವರು ದಕ್ಷರಾಗಿದ್ದು, ಅವರು ಮನಸ್ಸನ್ನು ಮಾಡಿದರೆ ಈ ಯೋಜನೆಯು ಸಂಪೂರ್ಣವಾಗಿ ಪೂರ್ಣಗೊಳ್ಳುತ್ತದೆ ಎನ್ನುವ ವಿಶ್ವಾಸವು ನನಗೆ ಇದೆ. ಮುಂದಿನ ಅಧಿವೇಶನದ ಸಮಯದೊಳಗೆ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರೆ, ಅಲ್ಲಿನ ಜನರು ಸಚಿವರಿಗೆ ಬಹಳವಾಗಿ ಕೃತಜ್ಞರಾಗಿರುತ್ತಾರೆ.

**ಶ್ರೀ ಬಿ.ಎಸ್.ಸುರೇಶ:-** ಮಾನ್ಯ ಸಭಾಪತಿಯವರೆ, ರಸ್ತೆಗೆ ಇಳಿದು ಮುಷ್ಕರ ಹೂಡುವ ಅವಶ್ಯಕತೆ ಇಲ್ಲ. ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹೇಳಿಸಿ, ಈ ವಿಚಾರವಾಗಿ ಅವರೊಂದಿಗೆ ಮಾತನಾಡಿ ಆದಷ್ಟು ಶೀಘ್ರದಲ್ಲಿ ಈ ಕೆಲಸವನ್ನು ಮಾಡಿಕೊಡುತ್ತೇವೆ ಎಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಯಬಯಸುತ್ತೇನೆ.

**ಸಭಾಪತಿಯವರು:-** ಆದಷ್ಟು ಶೀಘ್ರದಲ್ಲಿ ಈ ಕೆಲಸವನ್ನು ಮಾಡಿಕೊಡಿ.

## ಪ್ರಶ್ನೆ ಸಂಖ್ಯೆ: ೮೦೮

## ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಕುರಿತು

| | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆ ಹುಮನಾಬಾದ್ ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಹಾಗೂ ರಾಜೇಶ್ವರ ಗ್ರಾಮ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ರವರಿಂದ ಸ್ವೀಕೃತವಾದ ದಾಖಲೆಗಳನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಬೀದರ್ ಜಿಲ್ಲೆಯ ಹುಮನಾಬಾದ್ ಪುರಸಭೆಯಿಂದ ನಗರಸಭೆಯನ್ನು ರಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಿ, ಸಹಮತಿ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿರುತ್ತದೆ.<br><br>ಪ್ರಸ್ತುತ ರಾಜೇಶ್ವರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನು ರಚಿಸುವುದಕ್ಕಾಗಿ ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ರವರು ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಸಲ್ಲಿಸಿದ್ದು, ಪ್ರಸ್ತುತ ನಿರ್ದೇಶನಾಲಯದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಆ | ಸರ್ಕಾರ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸದಿರಲು ಕಾರಣವೇನು (ಮಾಹಿತಿ ನೀಡುವುದು); | ರಾಜೇಶ್ವರ ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನು ರಚಿಸುವುದಕ್ಕೆ ಸಂಬಂಧಿಸಿದಂತೆ- ಒಂದು ಗ್ರಾಮ ಪಂಚಾಯಿತಿ/ನಗರ ಸ್ಥಳೀಯ ಸಂಸ್ಥೆಗಳಿಂದ ಪುರಸಭೆಯನ್ನು ರಚಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ-3 ರನ್ವಯ ಈ ಕೆಳಕಂಡ ಮಾನದಂಡವನ್ನು ಅನುಸರಿಸಲಾಗುತ್ತದೆ:<br>2011 ರ ಜನಗಣತಿಯನ್ವಯ-<br>a) ಆ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರುವುದು;<br>b) ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 1,500 ಕ್ಕಿಂತ ಕಡಿಮೆ ಇಲ್ಲದಿರುವುದು;<br>c) ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ |
| ಇ | ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಯಾವಾಗ ಕ್ರಮಕೈಗೊಳ್ಳುವುದು (ಮಾಹಿತಿ ನೀಡುವುದು)? | |

| | | |
|---|---|---|
| | | ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು;<br>d) ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ 50% ಕ್ಕಿಂತ ಕಡಿಮೆ ಇಲ್ಲದಿರುವುದು.<br><br>ರಾಜೇಶ್ವರ ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನು ರಚಿಸಲು ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ರವರಿಂದ ಸ್ವೀಕೃತವಾಗುವ ದಾಖಲೆಗಳನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಸರ್ಕಾರಕ್ಕೆ ಅರ್ಹ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಮೇಲ್ತಿಳಿಸಿರುವ ಮಾನದಂಡದನ್ವಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಪರಿಶೀಲಿಸಲು ಅವಕಾಶವಿರುತ್ತದೆ. |

**ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಸಚಿವರು ಉತ್ತರಿಸಿದ್ದಾರೆ. ಕಳೆದ ಮಾರ್ಚ್ ತಿಂಗಳಿನ ಅಧಿವೇಶನದಲ್ಲಿಯೂ ಸಹ ನಾನು ಈ ಪ್ರಶ್ನೆಗಳನ್ನು ಕೇಳಿದ್ದೆನು. ಆಗ ಮುಂಬರುವ ದಿನಗಳಲ್ಲಿ ಮಾಡಿಕೊಡುವುದಾಗಿ ಸಚಿವರು ತಿಳಿಸಿದ್ದರು. ಇತ್ತೀಚೆಗೆ ಅಂದರೆ ದಿನಾಂಕ 07/08/2025 ರಂದು ನಾಲ್ಕು ಪಂಚಾಯಿತಿ ಹಾಗೂ ಪುರಸಭೆಗಳನ್ನು ಮಾಡಿದ್ದಾರೆ; ಹೀಗಾಗಿ ನಾನು ಸಚಿವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ನನ್ನ ಆಶಯವೇನೆಂದರೆ, ಇದೇ ರೀತಿಯಾಗಿ ಬೀದರ್ ಜಿಲ್ಲೆಯ ಹುಮನಾಬಾದ್ ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಹಾಗೂ ರಾಜೇಶ್ವರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಬೇಕು. ಅದೇ ರೀತಿಯಾಗಿ ಮನ್ನಾಏಖೆಳ್ಳಿ ಮತ್ತು ಕಮಠಾಣಾ ಗ್ರಾಮಗಳನ್ನೂ ಸಹ ಮೇಲ್ದರ್ಜೇಗೇರಿಸಬೇಕೆಂದು ನಾನು ಕಳೆದ ಅಧಿವೇಶನದ ಸಂದರ್ಭದಲ್ಲಿ ಪ್ರಸ್ತಾಪಿಸಿದೆನು. ಆದರೆ, ಸಚಿವರು ಇದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಸಚಿವರು ತಿಳಿಸಬೇಕು.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಕಳೆದ ಅಧಿವೇಶನದಲ್ಲಿಯೂ ಸಹ ಇದೇ ವಿಷಯವಾಗಿ ಪ್ರಶ್ನೆಯನ್ನು ಕೇಳಿದ್ದರು. ಈಗಲೂ ಸಹ ಅದೇ ಪ್ರಶ್ನೆಯನ್ನು ಕೇಳಿದ್ದಾರೆ. ಬೀದರ್ ಜಿಲ್ಲೆಯ ಹುಮನಾಬಾದ್ ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಹಾಗೂ ರಾಜೇಶ್ವರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂದು ಸದಸ್ಯರು ಕೇಳಿದ್ದಾರೆ. ಇವುಗಳನ್ನು ಮೇಲ್ದರ್ಜೆಗೇರಿಸಬೇಕು ಎಂದರೆ ಇದರಲ್ಲಿ ಎರಡ್ಮೂರು ಷರತ್ತುಗಳಿರುತ್ತವೆ. ಅಲ್ಲಿನ ಜನಸಂಖ್ಯೆ, ಪ್ರದೇಶ ಇವುಗಳ ವಿಚಾರವಾಗಿ ಕಡತ ಚಲನೆಯಲ್ಲಿ ಸ್ವಲ್ಪ ವಿಳಂಬವಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳ ವರದಿ ಬಂದು ಒಂದು ತಿಂಗಳ ಅವಧಿಯಾಗಿದೆ. ಹುಮನಾಬಾದ್ ಇದಕ್ಕೆ ಸಂಬಂಧಿತ ಕಡತವು ಈಗಾಗಲೇ ಆರ್ಥಿಕ ಇಲಾಖೆಗೆ

ಹೋಗಿದೆ. ರಾಜೇಶ್ವರ ಇದಕ್ಕೆ ಸಂಬಂಧಿತ ಕಡತವು ಪರಿಶೀಲನಾ ಹಂತದಲ್ಲಿದ್ದು, ಇದು ಎರಡು ಕಡೆಗಳಲ್ಲಿ ಹೋಗಬೇಕಾಗಿದೆ. ಅಂದರೆ ಆರ್ಥಿಕ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಆ ನಂತರದಲ್ಲಿ ಇದನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಿ, ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ.

**ಶ್ರೀ ಭೀಮರಾವ್ ಬಸವರಾಜ್ ಪಾಟೀಲ್:-** ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆಯ ಹುಮನಾಬಾದ್ ಪಟ್ಟಣದ ಜನಸಂಖ್ಯೆಯು ಈಗಾಗಲೇ 62,000 ದಷ್ಟಿದೆ. ಸರ್ಕಾರದ ಪ್ರಕಾರ ದಿನಾಂಕ 17/03/2025 ರಲ್ಲಿ ಇದನ್ನು ಮಂಡಿಸಲಾಗಿದ್ದು, ಸಚಿವರು ಈ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಇವರೇ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಹೀಗಾಗಿ ಇದನ್ನು ಮಾಡಿಕೊಡಿತ್ತಾರೆ ಎಂಬ ಹೆಚ್ಚಿನ ವಿಶ್ವಾಸ ನನಗೆ ಇದೆ. ಈ ಹಿಂದೆ ಶ್ರೀ ಈಶ್ವರ ಖಂಡ್ರೆಯವರು ಪೌರಾಡಳಿತ ಸಚಿವರಾಗಿದ್ದಾಗ, ಹಳ್ಳಿಖೇಡ (ಬಿ) ಇಲ್ಲಿನ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮಾಡಿಕೊಟ್ಟರು. ಹೀಗಾಗಿ ಇಂದಿನವರೆಗೂ ಸಹ ಅವರನ್ನು ನೆನಸಲಾಗುತ್ತಿದೆ. ಅದೇ ರೀತಿಯಾಗಿ ತಾವೂ ಸಹ ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದೀರಿ. ಅವರ ಕ್ಷೇತ್ರದಲ್ಲಿ ಬರುವ ಕಮಠಾಣಾ ಮತ್ತು ಅದರ ದಕ್ಷಿಣಕ್ಕೆ ಬರುವ ಬನ್ನಹಳ್ಳಿ ಗ್ರಾಮಗಳನ್ನೂ ಸಹ ಮೇಲ್ದರ್ಜೆಗೇರಿಸಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸುತ್ತೇನೆ. ಮುಂದುವರೆದು, ಅದನ್ನು ಯಾವಾಗ ಮಾಡಲಾಗುತ್ತದೆ ಎನ್ನುವ ಮಾಹಿತಿಯನ್ನು ಸದನಕ್ಕೆ ತಿಳಿಸುವಂತೆ ಕೋರುತ್ತೇನೆ.

(ಮುಂದು)

(773)19-08-2025/11-20/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀ ಭೀಮರಾವ್ ಬಸವರಾಜ ಪಾಟೀಲ್ ರವರಿಗೆ ಕಾಳಜಿ ಇದೆ. ನನಗೆ ಒಂದು ಬಾರಿ ಹುಮ್ನಾಬಾದ್‌ನ ರಾಜಶೇಖರ್‌ರವರು ಸೇರಿದಂತೆ ಎಲ್ಲರೂ ಅಂದರೆ ಅಲ್ಲಿನ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸಿ.ಎಂ.ಸಿ. ಸದಸ್ಯರುಗಳನ್ನು ಕರೆಸಿ, ನನ್ನ ಜೊತೆ ಒಂದು ಸಲ ಸಭೆಯನ್ನು ಮಾಡಿದರು. ಆದರೂ ಸಹ ಇದು ಜನಗಣತಿ 2011ರಲ್ಲಿ ಜನಗಣತಿಯಾಗಿದ್ದು, ಅಲ್ಲಿಂದ ಇಲ್ಲಿಯವರೆಗೆ ಜನಗಣತಿಯಾಗಿರುವುದಿಲ್ಲ. 2011 ಜನಗಣತಿ ಪ್ರಕಾರ ಜನಸಂಖ್ಯೆ ಸ್ವಲ್ಪ ಕಡಿಮೆ ಇದೆ. ಅದರೂ ಸಹ ಇದರ ವಿಚಾರವಾಗಿ ನನಗೆ ಕಡತ ಬಂದಿದ್ದು, ಅದು ಈಗಾಗಲೇ ಆರ್ಥಿಕ ಇಲಾಖೆಯಲ್ಲಿ ಇದೆ. ಅಲ್ಲಿಂದ ಬಂದ ಮೇಲೆ ನಾನು 100% ಈ ಒಂದು ಕೆಲಸವನ್ನು ಮಾಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಭೀಮರಾವ್ ಬಸವರಾಜ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಈ ಕೆಲಸವನ್ನು ಯಾವಾಗ ಮಾಡುತ್ತಾರೆಂದು ದಿನಾಂಕವನ್ನಾದರೂ ಹೇಳಿದರೆ ಅನುಕೂಲವಾಗುತ್ತದೆ. ಏಕೆಂದರೆ, ನನ್ನ ಕ್ಷೇತ್ರದ ಜನರು ಈ ವಿಚಾರವಾಗಿ ಪದೇ ಪದೇ ನನ್ನನ್ನು ಕೇಳುತ್ತಿರುತ್ತಾರೆ. ನಿಮ್ಮದೇ ಪಕ್ಷದ ಮಂತ್ರಿ ಇರುವಾಗ ಏತಕ್ಕೆ ಮಾಡಲಿಲ್ಲವೆಂದು ಕಳೆದ ಅಧಿವೇಶನದ ಸಮಯದಲ್ಲಿ ಕೇಳಿದ್ದಾರೆ. ತಾವು ಈ ವಿಚಾರವಾಗಿ ಈಗಾಗಲೇ 4-5 ಕಡೆಗಳಲ್ಲಿ ಕೆಲಸಗಳನ್ನು ಮಾಡಿದ್ದು, ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಅವುಗಳ ಜೊತೆಯಲ್ಲಿ ನಮ್ಮದೂ ಸಹ ಮಾಡಬೇಕಾಗಿತ್ತು. ಈ ವಿಚಾರವನ್ನು ತಾವು ಕ್ಯಾಬಿನೆಟ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ. ಆದ್ದರಿಂದ, ಈ ಕೆಲಸವನ್ನು ಯಾವಾಗ ಮಾಡುತ್ತೀರಿ, ಎಂದು ಹೇಳಬೇಕು. ಏಕೆಂದರೆ, 2024 ರ ಜನಗಣತಿಯಲ್ಲಿ ಹುಮ್ನಾಬಾದ್‌ನಲ್ಲಿ 62,000 ಜನಸಂಖ್ಯೆ ಇದೆ ಎನ್ನುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇನೆ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಈ ಸಂಬಂಧ ಕಡತ ಆರ್ಥಿಕ ಇಲಾಖೆಯಲ್ಲಿ ಇದೆ. ಕಡತ ಬಂದಾಗ ಮಾಡಿಕೊಡುತ್ತೇವೆ.

**ಸಭಾಪತಿಯವರು:-** ಬೇಗ ಕಡತವನ್ನು ತರಿಸಿಕೊಂಡು ಮಾಡಿಕೊಡಿ.

## ಪ್ರಶ್ನೆ ಸಂಖ್ಯೆ 916

## ನಗರ ಯೋಜನೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಸ್ಥಳ ನಿಯೋಜನೆ ಕುರಿತು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಟಿ.ಸಿ.ಪಿ. 1961 ರ ಕಲಂ 4(k) ರಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ನಗರ ಯೋಜನೆಯಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ಇರದ ಅಧಿಕಾರಿಯನ್ನು ಸ್ಥಳ ನಿಯುಕ್ತಿಗೊಳಿಸಬೇಕಾಗಿದ್ದು, ನಿಜವೇ; | ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4(k) ರ ಉಪ ಕಲಂ (10)(b) ರಲ್ಲಿ ಈ ಕೆಳಕಂಡಂತೆ ಉದ್ಧರಿಸಿದೆ.<br><br>(b) The Director of Town and Country Planning or the officers authorized by him not below the rank of Assistant Director of Town Planning, who must be a holder of Bachelor's degree or Master's degree in Town Planning, may prepare village or settlement extension plans sought by the Central or the State Government departments or Board, authority or body constituted by or under any law and owned or controlled by the state or the Central Government as mandated for areas notified for any State or Central Government schemes, where local planning area is not declared".<br><br>ಅದರಂತೆ, ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಘೋಷಿಸದೇ ಇರುವ ಕಚೇರಿಗಳಿಗೆ ನಗರ ಯೋಜನೆಯಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ಇರದ ಅಧಿಕಾರಿಯನ್ನು ಮೇಲ್ಕಂಡ ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿರುವ ಕೆಲಸಗಳನ್ನು ನಿರ್ವಹಿಸಲು ಅಂದರೆ **To prepare village or settlement extension plans sought by the Central or the State Government departments or Board, authority or body constituted by or under any law and owned or controlled by the state or the Central Government** ಉದ್ದೇಶಕ್ಕೆ ಪ್ರಾಧಿಕರಿಸಬೇಕಾಗಿರುತ್ತದೆ. |
| ಆ) | ಸರ್ಕಾರದ ಅಧಿಸೂಚನೆ ಸಂ: ನಅಇ 26 ನಯೋಸೇ 2022, ದಿ:11-04-2022 ರಲ್ಲಿ ಮುಂಬಡ್ತಿ ನೀಡಿರುವ ಕೆಲವು ಅಧಿಕಾರಿಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 4(ಐ), (ಕೆ) ರಂತೆ ನಿರ್ದಿಷ್ಟಪಡಿಸಿರುವ ಹುದ್ದೆಗಳಿಗೆ ನಿಯೋಜಿಸಲು ಸ್ಥಳ ನಿಯುಕ್ತಿಗೊಳಿಸಲು | ಪ್ರಸ್ತುತ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ವೃಂದದಲ್ಲಿ 170 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 130 ಹುದ್ದೆಗಳು ಭರ್ತಿಯಾಗಿದ್ದು, 40 ಹುದ್ದೆಗಳು ಖಾಲಿ ಇರುತ್ತವೆ.<br><br>ಖಾಲಿ ಹುದ್ದೆಗಳ ಪೈಕಿ 07 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುತ್ತದೆ. |

| | | |
|---|---|---|
| | ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ 24 ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.<br><br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ 11.04.2025 ರಲ್ಲಿ "ದಿನಾಂಕ:28.10.2024 ರಿಂದಲೇ ಅನ್ವಯವಾಗುವಂತೆ ನೇರ ನೇಮಕಾತಿಗಾಗಿ ಅಥವಾ ಬ್ಯಾಕ್ ಲಾಗ್ ಹುದ್ದೆಗಳ ಭರ್ತಿಗಾಗಿ ಯಾವುದೇ ಹೊಸ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಸೂಚಿಸಿರುತ್ತದೆ".<br><br>ಅದರಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಪ್ರಸ್ತಾಪಿಸಿರುವ ನೇರ ನೇಮಕಾತಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ.<br><br>ಆದ್ದರಿಂದ, ಆಡಳಿತಾತ್ಮಕ ಮತ್ತು ಸಾರ್ವಜನಿಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ, ಪ್ರಸ್ತುತ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಇಲಾಖೆಯಲ್ಲಿ ಲಭ್ಯವಿರುವ ಅಧಿಕಾರಿಗಳ ಸೇವೆಯನ್ನು ಬಳಸಿಕೊಂಡು ಅರ್ಹ ಅಧಿಕಾರಿಗಳು ಲಭ್ಯವಾಗುವವರೆಗೆ ತಾತ್ಕಾಲಿಕ ವ್ಯವಸ್ಥೆ ಎಂಬ ಷರತ್ತು ವಿಧಿಸಿ ಪ್ರಭಾರ ವ್ಯವಸ್ಥೆ ಹಾಗೂ ಸ್ಥಳನಿಯುಕ್ತಿ ಆದೇಶಗಳನ್ನು ಹೊರಡಿಸಲಾಗುತ್ತಿದೆ. |
| ಇ) | ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸಹಾಯಕ ನಿರ್ದೇಶಕರ ದರ್ಜೆಗಿಂತ ಕೆಳಹಂತದ ಅಧಿಕಾರಿಗಳಾದ ನಗರ ಯೋಜಕರುಗಳನ್ನು ಪ್ರಭಾರದಲ್ಲಿರಿಸಿರುವುದು ಹಾಗೂ ನಗರ ಯೋಜನೆಯಲ್ಲಿ ಸ್ನಾತಕ ಪದವಿ ಅಥವಾ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿಲ್ಲದ ಅಧಿಕಾರಿಗಳನ್ನು ತಾತ್ಕಾಲಿಕ ವ್ಯವಸ್ಥೆ ಎಂಬ ಷರತ್ತು ವಿಧಿಸಿ ಅರ್ಹ ಅಧಿಕಾರಿಗಳು ಲಭ್ಯವಿದ್ದಾಗಲೂ ಸಹ ನಿಯಮಾಬಾಹಿರ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ) | ಬಂದಿದ್ದಲ್ಲಿ ಈ ರೀತಿಯಾಗಿ ಕಾಯ್ದೆ ಉಲ್ಲಂಘಿಸಿ ವರ್ಗಾವಣೆ / ಸ್ಥಳ ನಿಯುಕ್ತಿ / ಪ್ರಭಾರ ವ್ಯವಸ್ಥೆ ಕಲ್ಪಿಸಲಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು ಹಾಗೂ ಈ ರೀತಿಯ ಕಾನೂನು ಬಾಹಿರ ಕ್ರಮಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು? (ಸಂಪೂರ್ಣ ವಿವರ ನೀಡುವುದು) | |

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 916 ಎಂದು ಬಂದಿತ್ತು, ಅಂದರೆ, ಇದು 916 ಚಿನ್ನದ ಹಾಗೆ pure ಆಗಿರುತ್ತದೆ ಎಂದು ನಾನು ಭಾವಿಸಿದ್ದೆ. ಆ ಪ್ರಶ್ನೆಗೆ ಉತ್ತರ ಕೂಡ pure ಆಗಿ ಬರುತ್ತದೆ ಎಂದು ನನಗೆ ವಿಶ್ವಾಸ ಇತ್ತು. ಆದರೆ, ನಮ್ಮ ಸಚಿವರೇ ನನಗೆ ಬೆಳಗಾವಿ ಅಧಿವೇಶನದಲ್ಲಿಯೇ ಭರವಸೆ ಕೊಟ್ಟಿದ್ದಾರೆ. ಆದರೆ, ಆ ಒಂದು ಭರವಸೆಯನ್ನು ಇಲ್ಲಿಯವರೆಗೆ ಈಡೇರಿಸಿರುವುದಿಲ್ಲ. ಅಲ್ಲಿಯೂ ಕೂಡ ನನ್ನದೇ ಪ್ರಶ್ನೆಯಾಗಿತ್ತು. ನೋಡಿ ಕಲಂ 4(k) ಉಲ್ಲಂಘನೆ ಮಾಡಿರುವಂತಹದ್ದು ನನಗೆ ನಿಮ್ಮ ಅನುಬಂಧದಲ್ಲಿ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಯಾರು ಯಾರಿಗೆ ಏನೇನು ಮಾಡಿದ್ದೀರಿ ಎಂದು ನನ್ನ ಹತ್ತಿರ ಪೂರ್ಣವಾದ ಮಾಹಿತಿ ಇದೆ. ನೀವು ಉತ್ತರದಲ್ಲಿ ಏನು ಹೇಳಲಿಲ್ಲ. ಆದರೆ, ಅನುಬಂಧದಲ್ಲಿ ಕೆಲವು ವಿಚಾರಗಳನ್ನು ತಾವು ತೋರಿಸಿದ್ದೀರಿ. ನಾನು ಕೇಳುತ್ತಿರುವಂತಹದ್ದು ಈ ಒಂದು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 4(k) ಏನಿದೆ, ಅದನ್ನು ಇನ್ನು

ಏತಕ್ಕೆ ಜಾರಿಗೆ ತಂದಿಲ್ಲ? ಅದರಲ್ಲಿ ಇರತಕ್ಕಂತಹದ್ದನ್ನು ಸರ್ಕಾರ ಯಾವ ರೀತಿಯಲ್ಲಿ ಅಧಿಕಾರಿಗಳನ್ನು ನಿಯೋಜನೆ ಮಾಡುತ್ತಿದ್ದೀರಿ, ಇವತ್ತು ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆಯೇ, ಪ್ರಮಾಣಿಕ ಅಧಿಕಾರಿಗಳು ಯಾರು ಇದ್ದಾರೆ, ಅನುಭವಸ್ಥರು ಯಾರು ಇದ್ದಾರೆ, ಅದಕ್ಕೆ ಅರ್ಹರು ಯಾರು ಇದ್ದಾರೆ, ಅಂತಹವರನ್ನು ನಿಯೋಜನೆ ಮಾಡುವುದನ್ನು ಬಿಟ್ಟು ಬೇರೆ ಬೇರೆ ಜೂನಿಯರ್ಸ್‌ಗೆ ಅವಕಾಶವನ್ನು ಕೊಡುತ್ತಿದ್ದೀರಿ. ನಿಜವಾದ ಫಲಾನುಭವಿಗಳಿಗೆ ನಿಮ್ಮ ಇಲಾಖೆ ವತಿಯಿಂದ ಏನು ಕೆಲಸ ಆಗಬೇಕು, ಅದು ಆಗುತ್ತಿಲ್ಲ. ಅದರ ಬಗ್ಗೆ ನನ್ನ ಕಳಕಳ ಇದೆ. ಮತ್ತೆ, ತಾವು ಈ ನಗರಾಭಿವೃದ್ಧಿ ಯೋಜನೆಯಲ್ಲಿ ಒಂದು ನಗರಾಭಿವೃದ್ಧಿ ಅಧಿಸೂಚನೆಯನ್ನು ದಿನಾಂಕ11-12-2022ರಂದು ಹೊರಡಿಸಿದ್ದೀರಿ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 4(k) ಏನಿದೆ, ಅದನ್ನು ಅಳವಡಿಸಿಕೊಳ್ಳಲೇಬೇಕು. ಅದನ್ನು ಮುಂಬಡ್ತಿ ಸಂದರ್ಭದಲ್ಲಿಯೇ ಆಗಲಿ ಅಥವಾ ನಿಯೋಜನೆ ಮಾಡುವಂತಹ ಸಂದರ್ಭದಲ್ಲಿಯೇ ಆಗಲಿ,..

**ಸಭಾಪತಿಯವರು:-** ನೀವು ಪ್ರಶ್ನೆಯನ್ನು ಓದಬೇಡಿ, ಪ್ರಶ್ನೆಯನ್ನು ಕೇಳಿ.

**ಶ್ರೀ ಶರವಣ ಟಿ.ಎ:-** ನಾನು ಪ್ರಶ್ನೆಯನ್ನು ಓದುತ್ತಿಲ್ಲ, ಇದರಲ್ಲಿ ಏನು ನಿಯಮ ಇದೆ ಎಂದು ಹೇಳಿ ನಿಯಮದ ಬಗ್ಗೆ ಅವರಿಗೆ ತಿಳುವಳಿಕೆ ಮೂಡಿಸುತ್ತಿದ್ದೇನೆ. ಅವರೇ ಹೇಳಿದ್ದಾರೆ. ನೋಡಿ, ಈ ಹಳ್ಳಿಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ಸಚಿವರು ಗಮನಿಸಬೇಕು. ಶ್ರೀಮಾನ್ ಸುರೇಶ್‌ರವರೆ, ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ನೀವು ಬುದ್ಧಿವಂತರಿದ್ದೀರಿ,

**ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಶ್ರೀಯುತ ಶರವಣ ರವರು ನನ್ನ ಸ್ನೇಹಿತರಿದ್ದು, ಅವರು ನನಗೆ ಸಲಹೆಯನ್ನು ಕೊಡಲಿ ಎಂದು ಹೇಳುತ್ತಿದ್ದೇನೆ. ಏತಕ್ಕೆ ಅವರು ಕೋಪ ಮಾಡಿಕೊಳ್ಳಬೇಕು?

**ಶ್ರೀ ಶರವಣ ಟಿ.ಎ:-** ಒಳ್ಳೆಯದಾಯಿತು. ನೀವು ಯಾವಾಗಲೂ ನಮ್ಮ ಸಲಹೆಯನ್ನು ಸ್ವೀಕಾರ ಮಾಡುತ್ತೀರಿ. ಧನ್ಯವಾದಗಳು. ಇಲ್ಲಿ ಏನಾಗುತ್ತದೆ ಎಂದರೆ ನೀವು cluster plan ಎಂದು ಮಾಡುತ್ತೀರಿ, ಅದರಲ್ಲಿ ಏನಾಗಬೇಕು, ಇಲ್ಲಿಯವರೆಗೆ ಏನೂ ಆಗುತ್ತಿಲ್ಲ. ಆ ಕಾರ್ಯಗಳು ನಡೆಯುತ್ತಿಲ್ಲ. ಅದಕ್ಕೆ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಅಲ್ಲಿ ಇರುವುದಿಲ್ಲ. ಅದರ ಕಡೆ ಗಮನಹರಿಸಬೇಕು.

**ಸಭಾಪತಿಯವರು:-** ಸಚಿವರು ಉತ್ತರ ಹೇಳಿದ ಮೇಲೆ ತಾವು ಮಾತನಾಡಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಶರವಣ ಟಿ.ಎ. ರವರು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 4(k) ಪ್ರಕಾರ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ನಗರ ಯೋಜನೆಯಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ

ಪಡೆದಿರುವವರನ್ನು ಮಾತ್ರ ಹಾಕಬೇಕೆನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ಹೌದು. ಇದು ನಮ್ಮ ಕೆ.ಟಿ.ಸಿ.ಪಿ. ಆಕ್ಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವವರನ್ನು ಮಾತ್ರ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ಹಾಕಬೇಕೆಂದು ಇದೆ. ಆದರೆ, ಈ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಘೋಷಿಸದಿರುವ ಕಚೇರಿಗಳಲ್ಲಿ ನಗರ ಯೋಜನೆಯಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದಂತಹ ಅಧಿಕಾರಿಗಳನ್ನು ಹಾಕಬೇಕೆಂದು ನಿಯಮ ಇದೆ. ಅದನ್ನೇ ನಾವು ಈ ಕೆ.ಟಿ.ಸಿ.ಪಿ. ಆಕ್ಟ್‌ನಲ್ಲಿ ಏನಿದೆ, ಅದರ ಪ್ರಕಾರವೇ ನಾವು ಮಾಡಬೇಕಾಗಿದೆ. ಇಲ್ಲಿ ಶ್ರೀ ಶರವಣ ಟಿ.ಎ ರವರು ಹೇಳಿರುವ ಪ್ರಕಾರ ಅಷ್ಟೊಂದು ಹುದ್ದೆಗಳ ಕೊರತೆ ಇರುತ್ತವೆ. ಎಲ್ಲಾ ಜಾಗಗಳಲ್ಲೂ ಈ ದರ್ಜೆಗೆ ಸಿಮೀತವಾಗಿರುವಂತಹದ್ದು, ಸುಮಾರು 170 ಹುದ್ದೆಗಳಿವೆ. ಆದರೆ, ಈಗ 170 ಜನರು ಇರುವುದಿಲ್ಲ. ಅದಕ್ಕೋಸ್ಕರ ನಾವು ಕೆಳ ಹಂತದಲ್ಲಿರುವವರನ್ನು ಇನ್‌ಚಾರ್ಜ್ ಆಗಿ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ಇನ್‌ಚಾರ್ಜ್ ಆಗಿ ಮಾಡಿರುವವರಿಗೂ 40-50 ಸಂಖ್ಯೆಯಲ್ಲಿ ನಾವು ಅವರಿಗೆ ರಜೆಯನ್ನು ಕೊಟ್ಟು ಈ ಸ್ನಾತಕೋತ್ತರ ಪದವಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನಾವು ಅದಕ್ಕೂ ಸಹ ಅವರುಗಳನ್ನು ತರಬೇತಿಗೆ ಕಳುಹಿಸುತ್ತಿದ್ದೇವೆ. ಆದ್ದರಿಂದ, ಈ ಹುದ್ದೆಗಳಿಗೆ ಅವರುಗಳನ್ನು ಹಾಕಿದ್ದೇವೆ. ಮತ್ತೆ ನೇರ ನೇಮಕಾತಿಗೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಯಲ್ಲಿ ಕೇಳಿದ್ದೇವೆ. 7 ಹುದ್ದೆಗಳನ್ನು ನಾವು ನೇರವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿ ಆರ್ಥಿಕ ಇಲಾಖೆಗೆ ಕಡತವನ್ನು ಕಳುಹಿಸಿಕೊಟ್ಟಿದ್ದೇವೆ. ಅವರು ಅಲ್ಲಿಂದ ನಮಗೆ ಶಿಫಾರಸ್ಸು ಮಾಡಿದ ತಕ್ಷಣ ಆ 7 ಹುದ್ದೆಗಳನ್ನು ನಾವು ಭರ್ತಿ ಮಾಡುತ್ತೇವೆ. ಮತ್ತೆ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸಹಾಯಕ ನಿರ್ದೇಶಕರ ದರ್ಜೆಗಿಂತಹ ಕೆಳಹಂತದ ಅಧಿಕಾರಿಗಳು ನಗರ ಯೋಜಕರುಗಳನ್ನು ಈ ಜಾಗಕ್ಕೆ ಹಾಕುತ್ತಿದ್ದೀರಿ ಎಂದು ಮಾನ್ಯ ಶಾಸಕರ ಪ್ರಶ್ನೆಯಾಗಿದೆ. ಇದು ನಿಜ. ಮಾನ್ಯ ಸಭಾಪತಿಯವರೆ. ನಮಗೆ shortage of hands ಇರುವುದರಿಂದ ಯಾರು ನಮ್ಮಲ್ಲಿ ನುರಿತ ನಗರ ಯೋಜಕರು ಇದ್ದಾರೆ, ಅವರುಗಳನ್ನು ತಾತ್ಕಾಲಿಕವಾಗಿ ಅಲ್ಲಿ ಹಾಕಲಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಖಾಯಂ ಆಗಿ ಹಾಕಿರುವುದಿಲ್ಲ, ಕೊರತೆ ಇದೆ ಎಂದು ಹೇಳಿ ಅಲ್ಲಿಗೆ ಹಾಕಿರುವುದಾಗಿದೆ. ಮತ್ತೆ ಕೆಲವು ಸಹಾಯಕ ನಿರ್ದೇಶಕರುಗಳು ನೀವು ಹೇಳಿರುವ ಪ್ರಕಾರ ಇದ್ದಾರೆ. ಆದರೆ, ಹಲವಾರು ಜನರ ಮೇಲೆ ಇಲಾಖಾ ವಿಚಾರಣೆ ಇರುತ್ತದೆ. ಲೋಕಾಯುಕ್ತ ವಿಚಾರಣೆ ಇದೆ, ಅವರೆಲ್ಲರೂ ಆ ಒಂದು ಜಾಗಕ್ಕೆ ಯೋಗ್ಯರಾಗಿರುವುದಿಲ್ಲ. ಅವರುಗಳು ಮತ್ತೆ ಅಲ್ಲಿಗೆ ಹೋಗಿ ಮತ್ತೆ ಅದೇ ತಪ್ಪನ್ನು ಮಾಡುತ್ತಾರೆಂದು ಹೇಳಿ ಅಂತಹವರ ಪೈಕಿ ಕೆಲವರಿಗೆ ಆ ಜಾಗವನ್ನು ಕೊಟ್ಟಿರುವುದಿಲ್ಲ. ಅವರನ್ನು ಕಾಯಲಿಕ್ಕೆ ಇಟ್ಟಿದ್ದೇವೆ. ಆದ್ದರಿಂದ, ಆರ್ಥಿಕ ಇಲಾಖೆಯಿಂದ ಹುದ್ದೆಗಳನ್ನು ತುಂಬಲಿಕ್ಕೆ ನಮಗೆ ಸಹಮತಿಯನ್ನು ಬಂದ ತಕ್ಷಣ

ಖಾಲಿ ಇರುವಂತಹ ಹುದ್ದೆಗಳು ಏನಿವೆ, ಅವುಗಳನ್ನು ಸಹ ತುಂಬಲಿಕ್ಕೆ ಪ್ರಯತ್ನ ಪಡುತ್ತೇವೆ. ಮತ್ತೆ ಯಾರು ನಗರ ಯೋಜಕರುಗಳು ಇದ್ದಾರೆ, ಅವರುಗಳಿಗೆ ತರಬೇತಿಗೆ ಕಳುಹಿಸಿ ಅವರಿಗೂ ಸಹ ಸ್ನಾತಕೋತ್ತರ ಪದವಿಯನ್ನು ತೆಗೆದುಕೊಳ್ಳುವಂತೆ ಮಾಡುತ್ತೇವೆ. ಆದ್ದರಿಂದ, ಕೆಳ ಹಂತದ ಅಧಿಕಾರಿಗಳನ್ನು ಇಲ್ಲಿ ಹಾಕುವಂತಹ ಅವಶ್ಯಕತೆ ಇರುವುದಿಲ್ಲ. ಏಕೆಂದರೆ, ನಗರ ಯೋಜನೆ ಉಪ ನಿರ್ದೇಶಕರುಗಳೆಂದರೆ ಯೋಜನೆ ಮಂಜೂರು ಮಾಡುವವರಾಗಿರುತ್ತಾರೆ. ಅವರು ನುರಿತ ವ್ಯಕ್ತಿಗಳೇ ಆಗಿರಬೇಕು. ನಗರ ಯೋಜಕರುಗಳೆಲ್ಲರೂ ಬಿ.ಇ. ಮತ್ತು ಡಿಪ್ಲೋಮಾ ಓದಿಕೊಂಡು ಬಂದಿರುವರಾಗಿರುತ್ತಾರೆ. ಹೀಗಾಗಿ, ಅವರಗಳಿಗೂ ಸಹ ತರಬೇತಿಯನ್ನು ಕೊಟ್ಟು ಇಂತಹ ಅಧಿಕಾರಿಗಳ ಜಾಗದಲ್ಲಿ ಹಾಕುತ್ತೇವೆ. ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಕಡಿಮೆ ಸಂಖ್ಯೆ ಇದ್ದು, ಆ ಸಂಖ್ಯೆ ಪೂರ್ಣವಾದ ಮೇಲೆ ಎಲ್ಲರಿಗೂ ಸ್ನಾತಕೋತ್ತರ ಪದವಿ ಮತ್ತು ಅದಕ್ಕೆ ಮೇಲ್ಪಟ್ಟಂತೆ ಇರುವಂತಹ, ಅರ್ಹತೆ ಇರುವಂತಹವರಿಗೆ ಈ ನಗರ ಮತ್ತು ಗ್ರಾಮಾಂತರ ಯೋಜನೆಗೆ ನಾವು ನಿಯೋಜನೆ ಮಾಡುತ್ತೇವೆ.

**ಶ್ರೀ ಶರವಣ ಟಿ.ಎ.:–** ನಾನು ತಮ್ಮ ಕಳಕಳಿಯನ್ನು ಮೆಚ್ಚುತ್ತೇನೆ. ತಾವು ಹೇಳಿದ್ದೀರಿ, ಯೋಜನಾಬದ್ಧ ನಗರವನ್ನು ರಚನೆ ಮಾಡಬೇಕೆಂದು ಹೇಳಿದ್ದೀರಿ. ಆ ನಗರವನ್ನು ರಚನೆ ಮಾಡಬೇಕಾಗಿದ್ದರೆ ನೀವು ಎಲ್ಲಾ 'ತಾತ್ಕಾಲಿಕ' ಎಂದು ಹೇಳಿ ವರ್ಗಾವಣೆ ಅದೇಶದಲ್ಲಿ ಕೂಡ ಹೇಳಲಾಗಿದೆ. 'ತಾತ್ಕಾಲಿಕ' ಎಂದು ಕೊಟ್ಟಾಗ ಆ ಅಧಿಕಾರಿ ಎಲ್ಲಿಂದ ಕೆಲಸ ಮಾಡುತ್ತಾರೆ? ಅವರು ಯಾವ ಬದ್ಧತೆಯನ್ನು ಇಟ್ಟುಕೊಂಡು, ಅವರು ಯಾವಾಗ ನಮ್ಮನ್ನು ಕೆಲಸದಿಂದ ತೆಗೆಯುತ್ತಾರೆಂದು ಹೇಳಿ ಅವರು ಆತಂಕದಲ್ಲಿಯೇ ಕೆಲಸ ನಿರ್ವಹಿಸುತ್ತಾ ಇರುತ್ತಾರೆ. ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ನಿಮಗೆ ಏನು ಕಷ್ಟ ಇದೆ? ಹಿಂದಿನ ಅಧಿವೇಶನದಲ್ಲಿ ಈ ವಿಚಾರವಾಗಿ ನೀವೇ ಭರವಸೆಯನ್ನು ಕೊಟ್ಟಿದ್ದೀರಿ, ಇದೇ ಸದನದಲ್ಲಿ ಹೇಳಿದ್ದೀರಿ. ಏನು ಹೇಳಿದಿರಿ ಎಂದರೆ ಕಲಂ 4(k) ಮತ್ತು ಸೆಕ್ಷನ್ 17ರ ಅಡಿಯಲ್ಲಿ ನಿಯಮಗಳನ್ನು ಅತಿ ಶೀಘ್ರವಾಗಿ ನಾನು ಜಾರಿಗೆ ತರುತ್ತೇನೆಂದು ನೀವೇ ಹೇಳಿದ್ದೀರಿ. ಆದರೆ, ಇಲ್ಲಿಯವರೆಗೆ ಅದರ ಕಡೆ ಗಮನಹರಿಸಿರುವುದಿಲ್ಲ. ಯಾವಾಗ ಜಾರಿಗೆ ತರುತ್ತೀರಿ ಎಂದು ಅದನ್ನಾದರೂ ಮತ್ತೊಂದು ಬಾರಿ ಹೇಳಿಬಿಡಿ. ನಿಮ್ಮ ಮಾತಿಗೆ, ನಿಮ್ಮ ಕಮಿಟ್‌ಮೆಂಟ್‌ಗೆ ನೀವು ಬದ್ಧರಾಗಬೇಕು. ಅದು ಆಗಿಲ್ಲ. ಅಮೇಲೆ ಇದು ಏನಾಗುತ್ತಿದೆ ಎಂದರೆ ಬಹಳ ಕಡೆ ಈ ಕೆಲಸ ಮಾಡಲಿಕ್ಕೆ ಹಿರಿಯ ಅಧಿಕಾರಿಗಳು ಬೇಕಾಗುತ್ತದೆ. ಯಾವುದೇ ಯೋಜನೆ ಮಾಡಬೇಕೆಂದರೂ ಸಹ ಹಿರಿಯ ಅಧಿಕಾರಿಗಳು ಇಲ್ಲವೆಂದರೆ ತಾತ್ಕಾಲಿಕವಾಗಿ ಬರುವುದು, ಎಲ್ಲೆಲ್ಲಿಯೋ ಬೇರೆ ಬೇರೆ ಕಡೆಯಿಂದ ಬರುತ್ತಾರೆ, ಅವರುಗಳನ್ನು ಲೋಕೋಪಯೋಗಿ ಇಲಾಖೆಯಿಂದ ತೆಗೆದುಕೊಳ್ಳುತ್ತಿರೋ ಅಥವಾ ಬೇರೆ ಕಡೆಯಿಂದ ತೆಗೆದುಕೊಳ್ಳುತ್ತೀರೋ ಅದು ನಿಮಗೆ ಬಿಟ್ಟ ವಿಚಾರ. ನೀವು ಅವರುಗಳನ್ನು ತೆಗೆದುಕೊಳ್ಳುತ್ತೀರಿ, ಆದರೆ, ಅವರುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ಅವರುಗಳಿಗೆ ಅಂದರೆ ಜೂನಿಯರ್ಸ್‌ಗೆ

ಅನುಭವ ಸಹ ಇರುವುದಿಲ್ಲ. ಅದಕ್ಕೋಸ್ಕರ ಕೂಡಲೇ ಕಲಂ 4(k) ಮತ್ತು ಸೆಕ್ಷನ್ 17ರ ಅಡಿಯಲ್ಲಿನ ನಿಯಮಗಳನ್ನು ಯಾವಾಗ ಜಾರಿಗೆ ತರುತ್ತೀರಿ, ಅದನ್ನು ನನಗೆ ಹೇಳಬಿಡಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೆ, ಈ 4(k) ರೆಗ್ಯುಲೇಷನ್ ಬಗ್ಗೆ ಕೇಳಿದರು. ನಾವು 4(k) ರೆಗ್ಯುಲೇಷನ್ ಅನ್ನು ನಾವು ಜಾರಿಗೆ ತರುತ್ತಿದ್ದೇವೆ. ಈ ವಿಚಾರ ಪ್ರಸ್ತುತ ನಮ್ಮ ಮುಂದೆ ಇದೆ. ಅದನ್ನು ಮಾಡುತ್ತೇವೆ. ಇದಕ್ಕೆ ತಕ್ಕಂತೆ ರೂಲ್ಸ್ ಅನ್ನು 2025 ರಲ್ಲಿ ನಾವು ನೋಟಿಫೈ ಮಾಡಿದ್ದೇವೆ. ಆದಷ್ಟು ಶೀಘ್ರವಾಗಿ ಈ 4(k) ರೆಗ್ಯುಲೇಷನ್ ಅನ್ನು ನಾವು ಆಕ್ಟ್ ಮಾಡುತ್ತೇವೆ.

(ಮುಂದು.)

(774) 19.08.2025 11.30 ಎಸ್‌ವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)**:- ಮಾನ್ಯ ಸಭಾಪತಿಯವರೇ, 19ನೇ ಮಾರ್ಚ್ 2025, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 123 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

## 02. ನಿಯಮ 58 ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ:- ಭಾಷಾ ಅಲ್ಪಸಂಖ್ಯಾತರ ಮೀಸಲು ಕೋಟಾದಡಿ ತುಳು ಭಾಷಾ ಮೆರಿಟ್ ವಿದ್ಯಾರ್ಥಿಗಳ ನೇರವಿಗೆ ಧಾವಿಸುವ ಕುರಿತು.**

***

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ಕರಾವಳಿಯಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಇಲ್ಲ ಎಂಬ ಕೊರಗಿನ ಮಧ್ಯೆಯೇ ಈಗಿರುವ ಖಾಸಗಿ ಕಾಲೇಜುಗಳಲ್ಲಿ ಎಂಬಿಬಿಎಸ್ ಪ್ರವೇಶಕ್ಕೆ ಅವಕಾಶವಿದ್ದ "ತುಳು ಕೋಟಾ" ಸೀಟುಗಳ ಸಂಖ್ಯೆ ಗಣನೀಯ ಕುಸಿತ ಕಂಡಿವೆ. ಕರಾವಳಿಯ ತುಳು ಭಾಷಿಕ ಎಂಬಿಬಿಎಸ್ ಗೆ ಮೆರಿಟ್ ವಿದ್ಯಾರ್ಥಿಗಳಿಗೆ 'ತುಳು ಕೋಟಾ" ದಡಿ ಪ್ರವೇಶ ಪಡೆಯಲು ಅನೂಕೂಲ ಆಗುತ್ತಿತ್ತು. ಕಳೆದ ವರ್ಷ 2 ಮಡಿಕಲ್ ಕಾಲೇಜಿನಲ್ಲಿ ತುಳು ಕೋಟಾದಲ್ಲಿ 144 ಸೀಟು ಲಭ್ಯವಿತ್ತು. ಅದರೆ, ಈ ವರ್ಷ 1 ಮೆಡಿಕಲ್ ಕಾಲೇಜಿನಲ್ಲಿ 73 ಸೀಟಿಗೆ ಮಾತ್ರ ಮಿತಿಗೊಳಿಸಲಾಗಿದೆ.

ವಿದ್ಯಾಸಂಸ್ಥೆ ಆರಂಭಿಸುವಾಗ 'ತುಳು ಭಾಷಾ ಅಲ್ಪಸಂಖ್ಯಾತರ ಸಂಸ್ಥೆ" ಎಂದು ಅನುಮತಿ ಪಡೆದಿದ್ದರೆ ಅವರು ವಿದ್ಯಾರ್ಥಿಗಳ ಸೀಟು ಹಂಚಿಕೆ ಸಂದರ್ಭದಲ್ಲಿ ತುಳುಭಾಷಿಕ ವಿದ್ಯಾರ್ಥಿಗಳಿಗೆ "ಮೆರಿಟ್" ಆಧಾರದಲ್ಲಿ ಕಡಿಮೆ ಮೊತ್ತಕ್ಕೆ ಸೀಟು ನೀಡಬೇಕು. ಇದರಂತೆ ಕರಾವಳಿ ಭಾಗದಲ್ಲಿ 5 ಮೆಡಿಕಲ್ ಕಾಲೇಜುಗಳಲ್ಲಿ 250ಕ್ಕೂ ಅಧಿಕ ಸೀಟುಗಳು ತುಳು ಭಾಷಿಕ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕಕ್ಕೆ ಮರಿಟ್ ಆಧಾರದಲ್ಲಿ ಸಿಗುತ್ತಿತ್ತು. ಅದರೆ ಈಗ ಕೇವಲ 1 ಕಾಲೇಜಿನಲ್ಲಿ ಮಾತ್ರ ತುಳು ಕೋಟಾದಡಿಯಲ್ಲಿದೆ.

ಶಿಕ್ಷಣ ಸಂಸ್ಥೆಗಳು ಪರಿಗಣಿತ ವಿಶ್ವವಿದ್ಯಾನಿಲಯದ ಸ್ವರೂಪ ಪಡೆದ ಬಳಿಕ "ತುಳು ಭಾಷಾ ಅಲ್ಪಸಂಖ್ಯಾತ ಸಂಸ್ಥೆ" ಎಂಬುದನ್ನು ಕೈಬಿಟ್ಟಿದ್ದಾರೆ. ಪರಿಗಣಿತ ವಿಶ್ವವಿದ್ಯಾನಿಲಯ ಅದ ಬಳಿಕ ಅವರದ್ದೇ ನಿಯಮಾವಳಿಗಳ ಅನ್ವಯ. ಹಾಗಾಗಿ ತುಳು ಕೋಟಾ ಸಂಖ್ಯೆ ಕಡಿಮೆಯಾಗಿದೆ. ಕರಾವಳಿಯ ಮೆಡಿಕಲ್ ಕಾಲೇಜುಗಳು ಆರಂಭದಲ್ಲಿ ತುಳು ಕೋಟಾ ಸೀಟು ನೀಡುತ್ತಿತ್ತು. ಇದರಿಂದ ನೂರಾರು ಮಕ್ಕಳಿಗೆ ಅನುಕೂಲವಾಗುತ್ತಿತ್ತು. ಆದರೆ, ಈಗ ಕಾಲೇಜು ಸೀಟು ಸಂಖ್ಯೆ ಕಡಿಮೆಯಾಗಿದೆ. ಮುಂದೆ ಈಗ ಇರುವ ಸೀಟು ಕೈ ತಪ್ಪಲಿದೆ ಎಂಬ ಆತಂಕ ತುಳು ಭಾಷಿಕರದ್ದು. ಎಂಬಿಬಿಎಸ್ ಪ್ರವೇಶಕ್ಕೆ ತುಳು ಕೋಟಾ ಸಿಗಬೇಕಿದ್ದರೆ ಆ ವಿದ್ಯಾರ್ಥಿಯು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಮಾತೃಭಾಷೆ ಕಾಲಂನಲ್ಲಿ ತುಳು ಎಂದು ಉಲ್ಲೇಖಿಸಿರಬೇಕು. ಅದನ್ನು ಡಿಡಿಪಿಐ ಅವರು ಅನುಮೋದಿಸಿರಬೇಕು. ಇದರಂತೆ ಎಂಬಿಬಿಎಸ್ ಪ್ರವೇಶಕ್ಕೂ ಮುನ್ನ ಸಂಬಂಧಪಟ್ಟ ಕಾಲೇಜಿನಲ್ಲಿ "ತುಳು ಕೋಟಾ" ಅಯ್ಕೆ ಮಾಡಿದ್ದರೆ ಮರಿಟ್ ಅರ್ಹತೆ ಆಧಾರದಲ್ಲಿ ಸೀಟು ದೊರೆಯುತ್ತಿತ್ತು.

ಪರಿಗಣಿತ ವಿಶ್ವವಿದ್ಯಾನಿಲಯವಾಗಿ ಮಾರ್ಪಾಡಾದ ಬಳಿಕ ಭಾಷಾ ಅಲ್ಪಸಂಖ್ಯಾತರ ಮೀಸಲು ಕೋಟಾದಲ್ಲಿ ಸೀಟು ಕೊಡಬೇಕೆಂಬ ನಿದರ್ಶನವಿಲ್ಲ ಎಂದು ಕಾಲೇಜುಗಳು ಹೇಳುತ್ತಿವೆ. ಹಾಗಾಗಿ ಶೀಘ್ರವಾಗಿ ಸರಕಾರ ಮಧ್ಯೆ ಪ್ರವೇಶಿಸಿ ಸೂಕ್ತ ನಿಯಮಗಳನ್ನು ರೂಪಿಸಿ, ತುಳು ಭಾಷಾ ಮೆರಿಟ್ ವಿದ್ಯಾರ್ಥಿಗಳ ನೆರವಿಗೆ ಧಾವಿಸಬೇಕಾಗಿರುವ ಸಾರ್ವಜನಿಕ ಮಹತ್ವವುಳ್ಳ ವಿಷಯದ ಬಗ್ಗೆ ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ಶಿವಮೊಗ್ಗದ ಶರಾವತಿ ಕಣಿವೆಯಲ್ಲಿ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಪಂಪ್ ಸ್ಟೋರೇಜ್ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗಲಿದ್ದು ಪರ್ಯಾಯ ಮಾರ್ಗವನ್ನು ಅನ್ವೇಷಿಸುವ ಕುರಿತು.**

***

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು

ಪಂಪ್ ಸ್ಟೋರೇಜ್ ಪಶ್ಚಿಮಘಟ್ಟಕ್ಕೆ ಮಾರಕ" ಎಂಬ ಶೀರ್ಷಿಕೆಯಡಿ ಸರ್ಕಾರ ಶರಾವತಿ ಕಣಿವೆಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ 2000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಸಾರ್ವತ್ರಿಕವಾಗಿ ಶರಾವತಿ ಭಾಗದ ಹೊನ್ನಾವರ ತಾಲ್ಲೂಕಿನ ಎಲ್ಲ ಗ್ರಾಮ ಪಂಚಾಯಿತಿಗಳು, ಹಲವು ಪರಿಸರವಾದಿಗಳು, ಜನಪ್ರತಿನಿಧಿಗಳು ವಿರೋಧಿಸುತ್ತಿದ್ದರೂ ಸರ್ಕಾರ ಕಿವಿಗೊಡದೆ ಯೋಜನೆಯನ್ನು ಅನುಷ್ಠಾನಗೊಳಸಲು ಮುಂದಾಗಿರುವ ವಿಚಾರ 'ವಿಜಯವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ಪಶ್ಚಿಮಘಟ್ಟ ಮತ್ತು ಬಯಲು ಸೀಮೆ ಈ ಎರಡು ಹಸಿರು ಒಡಲಿಂದ ಜನರೊಂದಿಗೆ ಬೆರೆತುಹೋಗಿದೆ. ಹಸಿರುಕಾನನ ಹೊದ್ದು ಮಲಗಿರುವ ಈ ಪ್ರದೇಶ ಹಲವು ವಿದ್ಯುತ್ ಯೋಜನೆಗಳ ಹೊಡೆತದಿಂದ ಕಮರಿಹೋಗಿದೆ.

ಹಾಲಿ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಅಂದಾಜು 10,000 ಸಾವಿರ ಕೋಟಿ ರೂಪಾಯಿಗಳ ಪಂಪ್ ಸ್ಟೋರೇಜ್ ಯೋಜನೆ ಸುಮಾರು 133 ಎಕರೆ ಪ್ರದೇಶವನ್ನು ಬಲಿ ತೆಗೆದುಕೊಳ್ಳುತ್ತಿದ್ದು ಅಂದಾಜು 16,000 ಸಾವಿರ ಮರಗಳು ಆಯುಷ್ಯ ಕಳೆದುಕೊಳ್ಳಲಿವೆ. ಈ ಪ್ರದೇಶ ಭಾವನಾತ್ಮಕವಾಗಿ ಜನರೊಂದಿಗೆ ಬೆಸೆದುಕೊಂಡಿದ್ದು, ಈ ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ಕೇಂದ್ರ ಅರಣ್ಯ ಸಚಿವಾಲಯವು ರಾಜ್ಯ ಸರ್ಕಾರದಿಂದ ವಿವರಣೆ ಕೇಳಿರುವುದು ಸರಿಯಾದ ಕ್ರಮವಾಗಿದೆ. ಯೋಜನೆಯಲ್ಲಿ ಒಳಗೊಳ್ಳುವ ಪ್ರಮುಖ ಅಂಶಗಳನ್ನು ಮರೆಮಾಚಿರುವುದು ತಿಳಿದುಬಂದಿದ್ದು, ಸಾವಿರಾರು ಮರ ಕಡಿಯುವುದನ್ನು ತಪ್ಪಿಸಲು ಪರ್ಯಾಯ ಮಾರ್ಗಗಳನ್ನು ಅನ್ವೇಷಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿರುವ ಸೂಚನೆಯನ್ನು ಪಾಲಿಸುವಂತೆಯೂ ಕೇಂದ್ರವು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ಪರಿಸರಕ್ಕೆ ಮಾರಕವಾದ ಇಂತಹ ಯೋಜನೆಗಳನ್ನು ಕೈಬಿಟ್ಟು ತಮಿಳುನಾಡು ಹಾಗೂ ಇತರೆ ರಾಜ್ಯಗಳಲ್ಲಿ ಕೇಂದ್ರ ಸಹಾಯಧನದೊಂದಿಗೆ ನಿರ್ಮಿಸಿರುವ ಭೂಗತ ಪವರ್ ಸ್ಟೋರೇಜ್ ಅಥವಾ ಸ್ಮಾರ್ಟ್ ಗ್ರಿಡ್ ಮುಂತಾದ ಆಧುನಿಕ ಪರಿಸರಸ್ನೇಹಿ ಪರ್ಯಾಯ ಕ್ರಮಗಳನ್ನು ನಮ್ಮಲ್ಲೂ ಅಳವಡಿಸಿ, ಮತ್ತೊಂದು ಪರಿಸರ ವಿರೋಧಿ ಚಳುವಳಿ, ಹೋರಾಟ ಆಗುವುದನ್ನು ಸರ್ಕಾರ ತಪ್ಪಿಸಬೇಕೆಂದು ಮಾನ್ಯ ಇಂಧನ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:- ರಕ್ತದಾನ ಸಂದರ್ಭದಲ್ಲಿ ರಕ್ತದ ಗುಣಮಟ್ಟದ ಪರೀಕ್ಷೆ ಮತ್ತು ಸೋಂಕುಗಳ ಪತ್ತೆ ಹಚ್ಚಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ಕುರಿತು.**

***

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. "ಇಂದಿನ ಸಮಾಜದಲ್ಲಿ ದಾನಕ್ಕಿಂತ ದೊಡ್ಡದಿಲ್ಲ. ದಾನಮಾಡಿ ಕೆಟ್ಟವರಿಲ್ಲ, ಅದರಲ್ಲೂ ರಕ್ತದಾನಕ್ಕಿಂತ ಶ್ರೇಷ್ಠದಾನ ಮತ್ತೊಂದಿಲ್ಲ" ಎಂಬ ಮಾತು ಪ್ರಚಲಿತವಾಗಿರುವ ಸಂದರ್ಭದಲ್ಲಿ "ದಾನ ಕೊಟ್ಟ ರಕ್ತದಲ್ಲಿ ಹೆಚ್.ಐ.ವಿ. ಪರೀಕ್ಷೆ ವೇಳೆ ಹೆಪಟೈಟಿಸ್, ಮಲೇರಿಯಾದಂತ ಗಂಭೀರ ಸೋಂಕು ದೃಢ ಎಂಬ ಶೀರ್ಷಿಕೆಯಡಿ ವಿಜಯವಾಣಿ ಪತ್ರಿಕೆಯ ವರದಿ ಅತ್ಯಂತ ಕಳವಳ ಉಂಟುಮಾಡುವುದರೊಂದಿಗೆ ಆತಂಕವನ್ನೂ ಸೃಷ್ಟಿಸಿದೆ.

ವಿಜಯವಾಣಿ ಪತ್ರಿಕೆಯು ಗಂಬೀರ ಪ್ರಕರಣದ ಕೂಲಂಕಷ ವರದಿ ಪ್ರಕಟಿಸಿದ್ದು ವರ್ಷದಿಂದ ವರ್ಷಕೆ ದೇಶದಾದ್ಯಂತ ರೋಗಿಗಳಿಗೆ ಅಗತ್ಯವಿರುವ ರಕ್ತದ ಕೊರತೆ ಹೆಚ್ಚಳವಾಗುತ್ತಿದ್ದು, ಪ್ರತಿ ಒಂದು ನಿಮಿಷಕ್ಕೆ ಜಗತ್ತಿನಲ್ಲಿ 1,000 ಜನಕ್ಕೆ ಹಾಗೂ ಭಾರತದಲ್ಲಿ ಒಂದು ನಿಮಿಷಕ್ಕೆ, 50 ಜನರಿಗೆ ರಕ್ತದ ಅವಶ್ಯಕತೆ ಇದೆ. ಪ್ರತಿ ಒಂದು ನಿಮಿಷಕ್ಕೆ ಜಗತ್ತಿನಾದ್ಯಂತ 12 ಜನ ರಕ್ತದ ಕೊರತೆಯಿಂದ ಸಾವನ್ನಪ್ಪುತ್ತಿರುವ ಗಂಭೀರ ಸಮಸ್ಯೆ ಒಂದೆಡೆಯಾದರೆ ಇನ್ನೊಂದೆಡೆ ರಕ್ತದಾನ ಶಿಬಿರಗಳಲ್ಲಿ ಸಂಗ್ರಹವಾದ ರಕ್ತದಲ್ಲಿ ಪರೀಕ್ಷೆ ವೇಳೆ ಹೆಚ್.ಐ.ವಿ ಹೆಪಟೈಟಿಸ್, ಮಲೇರಿಯಾದಂತಹ ಸೋಂಕು ಪತ್ತೆಯಾಗಿ 2024-25ರಲ್ಲಿ ಸಂಗ್ರಹಿತ 44,776 ಯೂನಿಟ್ ರಕ್ತ ವ್ಯರ್ಥವಾಗಿದೆ.

ರಾಜ್ಯದಲ್ಲಿ 230 ರಕ್ತನಿಧಿ ಕೇಂದ್ರಗಳು, 43 ಸರ್ಕಾರಿ ರಕ್ತನಿಧಿ ಕೇಂದ್ರ, 108 ಖಾಸಗಿ ಕೇಂದ್ರಗಳೂ ಸೇರಿದಂತೆ ಕೆಲವೊಂದು ಸ್ವತಂತ್ರ ಮತ್ತು ರೆಡ್ ಕ್ರಾಸ್ ರಕ್ತನಿಧಿ ಕೇಂದ್ರಗಳಿದ್ದು, ಅನೇಕ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತವೆ. ಹೀಗೆ ಆಯೋಜನೆ ಆಗುವ ರಕ್ತದಾನ ಶಿಬಿರಗಳಲ್ಲಿ ದಾನಿಗಳ ಆರೋಗ್ಯ ತಪಾಸಣೆ ಇಲ್ಲದೇ ಸಂಗ್ರಹಿಸಲಾಗುವ ರಕ್ತವನ್ನು ರೋಗಿಗಳಿಗೆ ನೀಡುವಾಗ ದೇಶದಲ್ಲಿ 2018-19ರಲ್ಲಿ ಒಂದು ಆರ್.ಟಿ.ಐ. ವರದಿಯ ಉಲ್ಲೇಖದಲ್ಲಿ 1,342 ಜನರಿಗೆ ಹೆಚ್.ಐ.ವಿ. ಸೋಂಕಿತ ರಕ್ತ ನೀಡಿರುವುದು ದೃಢಪಟ್ಟಿರುವ ಅಂಶ ಅತ್ಯಂತ ಕಳವಳಕಾರಿಯಾಗಿದೆ.

ರಾಜ್ಯದ ಅಂಕಿ ಅಂಶದ ಪ್ರಕಾರ 2024-25ರಲ್ಲಿ 44,776 ಯೂನಿಟ್, 2023-24ರಲ್ಲಿ 37,906 ಯೂನಿಟ್, 2022-23ರಲ್ಲಿ 43,857 ಯೂನಿಟ್ ರಕ್ತಗಳಲ್ಲಿ ಸೊಂಕು ಪತ್ತೆಯಾಗಿ ಅಂತಹ ರಕ್ತವನ್ನು ಡಿಸ್‌ಕಾರ್ಡ್ ಮಾಡಲಾಗಿದೆ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಿಗೆ ನನ್ನ ಮನವಿಯೆನೆಂದರೇ ರಕ್ತವನ್ನು ದಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ರಕ್ತದ ಗುಣಮಟ್ಟದ ಪರೀಕ್ಷೆ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಯಾಕೆಂದರೆ ಒಬ್ಬ ಹೆಚ್.ಐ.ವಿ. ಸೋಂಕಿತನ ರಕ್ತದಲ್ಲಿ ಸೋಂಕು ದೃಢಪಡುವುದು ಆ ವ್ಯಕ್ತಿಗೆ ಸೋಂಕು ತಗುಲಿ ಕನಿಷ್ಠ 2 ರಿಂದ 4 ವಾರಗಳ ನಂತರವಾಗಿರುವುದರಿಂದ ಅ ಸಮಯದ ಒಳಗೆ ಸೋಂಕಿತ ವ್ಯಕ್ತಿ ರಕ್ತ ನೀಡಿದಲ್ಲಿ

ಅದನ್ನು ಹೇಗೆ ಪತ್ತೆಹಚ್ಚಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಹಾಗೆಯೇ ಹೆಪಟೈಟಿಸ್, ಮಲೇರಿಯಾದಂತಹ ಸೋಂಕುಗಳ ಪತ್ತೆಯಲ್ಲೂ ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಕುರಿತು ಆರೋಗ್ಯ ಇಲಾಖೆ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್(ಇವಿಎಂ) ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಮತಕಳವು ಮಾಡಲಾಗುತ್ತಿದೆ ಎನ್ನುವ ಬಗ್ಗೆ.**

***

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ಎಲೆಕ್ಟ್ರಾನಿಕ್ ವೋಟಿಂಗ್ ಮಷಿನ್ (ಇವಿಎಂ) ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಮತಕಳವು ಮಾಡಲಾಗುತ್ತಿದ್ದು ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದ್ದು, ಪಾರದರ್ಶಕ ಚುನಾವಣಾ ವ್ಯವಸ್ಥೆ ಜಾರಿಗೆ ತರುವ ಮೂಲಕ ಈ ಅಕ್ರಮವನ್ನು ತಡೆಗಟ್ಟಬೇಕೆಂದು ವೋಟ್ ಫಾರ್ ಡೆಮಾಕ್ರಸಿ ಸಂಸ್ಥೆಯ ಸದಸ್ಯರೊಂದಿಗೆ “ಎದ್ದೇಳು ಕರ್ನಾಟಕ” ಸಂಘಟನೆ ಆಯೋಜಿಸಿದ್ದ ದುಂಡುಮೇಜಿನ ಸಂವಾದದಲ್ಲಿ ಮೂಡಿಬಂದ ಅಭಿಪ್ರಾಯದ ಕುರಿತಂತೆ “ಪ್ರಜಾವಾಣಿ” ದಿನಪತ್ರಿಕೆಯು ದಿನಾಂಕ:17.08.2025 ’ಇವಿಎಂ ದುರ್ಬಳಕೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ’ ಶಿರೋನಾಮೆಯಡಿ ವರದಿ ಪ್ರಕಟಿಸಿರುತ್ತದೆ.

2024ರಲ್ಲಿ ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣಾ ನಡೆದಾಗ ಸಂಜೆ 5 ಗಂಟೆಗೆ ಶೇ.58.22 ರಷ್ಟು ಮತದಾನವಾಗಿತ್ತು. ಆದರೆ ಶೇ.66.05 ರಷ್ಟು ಮತದಾನವಾಗಿದೆ ಎಂದು ಮಧ್ಯರಾತ್ರಿ ಘೋಷಿಸಲಾಯಿತು. ಹೆಚ್ಚುವರಿಯಾಗಿ 48 ಲಕ್ಷ ಮತಗಳು ಎಲ್ಲಿಂದ ಸೇರ್ಪಡೆಯಾದವು ಎನ್ನುವುದು ಸಂವಾದದಲ್ಲಿ ಕಂಡುಬಂದ ಪ್ರಶ್ನೆಯಾಗಿರುತ್ತದೆ. ಅಲ್ಲಿ ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಗಳು 3,000ದ ಮತಗಳ ಅಂತರದಿಂದ 25 ಕ್ಷೇತ್ರಗಳಲ್ಲಿ, 5,000 ಮತಗಳ ಅತರದಿಂದ 39 ಕ್ಷೇತ್ರಗಳಲ್ಲಿ 10,000 ಮತಗಳ ಅಂತರದಿಂದ 69 ಕ್ಷೇತ್ರಗಳಲ್ಲಿ ರಾತ್ರೋರಾತ್ರಿ ಗೆಲವು ಪಡೆದಿರುವುದನ್ನು ಪ್ರತಿಪಾದಿಸಿರುತ್ತಾರೆ. ಲೋಕಸಭೆ ಚುನಾವಣೆಗೆ ಹೋಲಿಸಿದರೆ, ವಿಧಾನಸಭೆ ಚುನಾವಣೆ ಸಂದರ್ಭದಲ್ಲಿನ ಮತದಾರರ ಸಂಖ್ಯೆ ಹೆಚ್ಚಳದ ಬಗ್ಗೆ ಚುನಾವಣಾಧಿಕಾರಿಗಳು ಉತ್ತರಿಸಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಇದೇ ರೀತಿ ಮುಂಬರುವ ಬಿಹಾರದ ಚುನಾವಣೆಯಲ್ಲಿ ನಡೆಯಲಿದೆ ಎನ್ನುವ ಆತಂಕ ಎದುರಾಗಿದ್ದು, ಬಿಜೆಪಿ ಮತ್ತು ಅದರ ಮೈತ್ರಿಯನ್ನು ಬೆಂಬಲಿಸದ ಸಮುದಾಯಗಳ ಮತದಾರರನ್ನೇ ಮತದಾರರ ಪಟ್ಟಿಯಿಂದ ಬಿಜೆಪಿ ತೆಗೆದುಹಾಕುತ್ತಿದೆ ಎಂದು ಆರೋಪಿಸಿರುತ್ತಾರೆ. ಚುನಾವಣಾ ಆಯೋಗದ ಕ್ರಮವನ್ನು ಸದನ ಖಂಡಿಸಬೇಕೆಂದು ಹಾಗೂ ಈ ಸಂಬಂಧ ಸರ್ಕಾರ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(775) 19-08-2025 (11.40) ಕೆಜಿ:ವಿಕೆ (ಸಭಾಪತಿಯವರ ಉಪಸ್ಥಿತಿ)

**ಉ) ವಿಷಯ:- ರಾಜ್ಯದಲ್ಲಿ ಅಪಹರಣಕ್ಕೆ ಹಾಗೂ ನಾಪತ್ತೆಗೆ ಒಳಗಾಗುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ಕುರಿತು.**

- - -

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮೇಲ್ಕಂಡ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. 'ಉದಯವಾಣಿ' ದಿನಪತ್ರಿಕೆಯಲ್ಲಿ "ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ 1,500 ಮಕ್ಕಳು ನಾಪತ್ತೆ, ಈ ಪೈಕಿ ಹೆಣ್ಣು ಮಕ್ಕಳೇ ಅಧಿಕ, ಇನ್ನೂ 1,336 ಮಂದಿ ಸುಳಿವಿಲ್ಲ, ಕಿಡ್ನಾಪ್‌ನಲ್ಲಿ ಬೆಂಗಳೂರು ನಂ-1" ಎಂಬ ಶಿರೋನಾಮೆಯಡಿಯಲ್ಲಿ ಪ್ರಕಟವಾಗಿರುವ ವರದಿಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ 14 ಸಾವಿರಕ್ಕೂ ಅಧಿಕ ಮಕ್ಕಳ ಅಪಹರಣವಾಗಿದೆ. ಅದರಲ್ಲೂ ಅಪಹರಣಕ್ಕೆ ಒಳಗಾದವರು ಮತ್ತು ಕಾಣೆಯಾದವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚಿರುವುದು ಆತಂಕದ ವಿಷಯವಾಗಿದೆ. ಆಟ-ಪಾಠಗಳಲ್ಲಿ ತೊಡಗಿಸಿಕೊಂಡು ದೇಶದ ಭವಿಷ್ಯದ ಪ್ರಜೆಗಳಾಗಿ ಜೀವನ ರೂಪಿಸಿಕೊಳ್ಳಬೇಕಿರುವ ಮಕ್ಕಳ ಅಪಹರಣ ಹಾಗೂ ನಾಪತ್ತೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿದ್ದು, ಅಪಹರಣಗೊಂಡಿರುವ ಮಕ್ಕಳ ಪೈಕಿ 1,336 ಪ್ರಕರಣಗಳು ನಿಗೂಢವಾಗಿಯೇ ಉಳಿದಿವೆ.

ನಾಪತೆಯಾದ ಮಕ್ಕಳ ಪೈಕಿ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಪಹೃತ 10,792 ಹೆಣ್ಣು ಮಕ್ಕಳಲ್ಲಿ 1,003 ಹೆಣ್ಣು ಮಕ್ಕಳು ಎಲ್ಲಿದ್ದಾರೆ ಎಂಬ ಸಣ್ಣ ಸುಳಿವೂ ಸಹ ಇದುವರೆಗೂ ಸಿಕ್ಕಿಲ್ಲ. ಇದು ಹೆಣ್ಣಮಕ್ಕಳ ಪಾಲಕರನ್ನು ಆತಂಕಕ್ಕೀಡು ಮಾಡಿದೆ. ಜೊತೆಗೆ 333 ಗಂಡು ಮಕ್ಕಳು ಕೂಡ ಇನ್ನೂ ಪತ್ತೆಯಾಗಿಲ್ಲ. ರಾಜ್ಯ ಪೋಲೀಸರು ವಿವಿಧ ತಾಂತ್ರಿಕ ಆಯಾಮಗಳಲ್ಲಿ ಹುಡುಕಿದರೂ 1,336 ಮಕ್ಕಳನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಅಪಹರಣ, ನಾಪತ್ತೆ, ಮಕ್ಕಳ ಕಳ್ಳಸಾಗಣೆ ಸೇರಿ ವಿವಿಧ ಕಾರಣಗಳಿಂದ ಮಕ್ಕಳು ಸಾಮಾನ್ಯವಾಗಿ ನಾಪತ್ತೆಯಾಗುತ್ತಾರೆ. ಮಕ್ಕಳನ್ನು ವೇಶ್ಯಾವಾಟಿಕೆಗೆ ತಳ್ಳುವುದು, ಮಕ್ಕಳ ಅಂಗಾಂಗ ಮಾರಾಟ, ಮನೆ ಕೆಲಸಕ್ಕೆ ಬಳಸಿಕೊಳ್ಳುವ ದೊಡ್ಡ ಜಾಲವೇ ಇದೆ.

ಸರ್ಕಾರ ಕೂಡಲೆ ನಾಪತ್ತೆ ಅಥವಾ ಅಪಹರಣಕ್ಕೆ ಒಳಗಾದ ಮಕ್ಕಳ ಕುರಿತು ಜಿಲ್ಲಾ ಮಟ್ಟದಲ್ಲಿ ಮಕ್ಕಳ ಸರ್ವೆ ಮಾಡಬೇಕು. ಪತ್ತೆಹಚ್ಚಲು ಸಾಧ್ಯವಾಗದ ಪ್ರಕರಣಗಳನ್ನು ಶೀಘ್ರವಾಗಿ ಪತ್ತೆ ಹಚ್ಚಲು ಕ್ರಮಕೈಗೊಳ್ಳಬೇಕು ಮತ್ತು ಮಕ್ಕಳ ಅಪಹರಣ ಮತ್ತು ನಾಪತ್ತೆ ಪ್ರಕರಣಗಳನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಗ್ರಹಿಸುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗುವುದು.

**ಊ) ವಿಷಯ:- ರಾಜ್ಯದ ಯುವಜನತೆ ವಿದೇಶಿ ಮದ್ಯ ಮತ್ತು ತಂಬಾಕು ಸೇವನೆಯ ದುಶ್ಚಟಕ್ಕೆ ಬಲಿಯಾಗುವುದನ್ನು ತಡೆಗಟ್ಟಿ ನಶೆ ಮುಕ್ತ ಕರ್ನಾಟಕಕ್ಕೆ ಒತ್ತು ನೀಡುವ ಬಗ್ಗೆ.**

- - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿದ್ದೇನೆ. ಅದಕ್ಕೆ ತಾವು ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಸಾಂಪ್ರದಾಯಿಕ ದೇಶಿ ಮದ್ಯ ಮತ್ತು ಬೀಡಿಗಳನ್ನು ತ್ಯಜಿಸಿ ವಿದೇಶಿ ಮದ್ಯ ಮತ್ತು ಜರಿಯುವ ತಂಬಾಕಿನತ್ತ ಯುವಜನತೆ ಮುಖ ಮಾಡಿರುವ ಬಗ್ಗೆ ದಿನಾಂಕ 18-8-2025ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ "ವಿದೇಶಿ ಮದ್ಯ, ತಂಬಾಕಿನ ಜನರ ಚಿತ್ತ" ಶೀರ್ಷಿಕೆಯಡಿ ವರದಿ ಪ್ರಕಟವಾಗಿರುತ್ತದೆ.

ಒಂದು ದಶಕದ ಹಿಂದೆ ಬೀಡಿ ಹೊಗೆಗೆ ಸಿಕ್ಕಿಹಾಕಿಕೊಂಡಿದ್ದ ಗ್ರಾಮೀಣ ಕರ್ನಾಟಕ, ಇಂದು ಹೊಸ ನಶೆಯ ಹಾದಿಯಲ್ಲಿರುವುದು ಅಚ್ಚರಿಯ ಸಂಗತಿಯಾಗಿರುತ್ತದೆ. ಆರ್ಥಿಕ ಮತ್ತು ಆರೋಗ್ಯ ತಜ್ಞರ ಅಂದಾಜುಗಳ ಅಂದಾಜಿನಂತೆ ಗ್ರಾಮೀಣ ಪ್ರದೇಶದಲ್ಲಿ ಮಾದಕ ವಸ್ತುಗಳ ಮೇಲಿನ ತಲಾ ವಾರ್ಷಿಕ ವೆಚ್ಚ ರೂ.58,000 ಗಳು ಆಗಿದ್ದು, ನಗರ ಪ್ರದೇಶದಲ್ಲಿ ಒಂದು ಲಕ್ಷ ಮೀರಿದೆ. ವಿಶೇಷವಾಗಿ ವಿದೇಶಿ ಮದ್ಯ ಮತ್ತು ಬಿಯರ್ ಮೇಲಿನ ವೆಚ್ಚವು 10-15% ಏರಿಕೆ ಕಾಣುವ ಸಾಧ್ಯತೆ ಇದೆ ಎಂಬ ವಿಷಯವನ್ನು ಸಾರ್ವಜನಿಕ ಹಣಕಾಸು ಮತ್ತು ನೀತಿ ಸಂಸ್ಥೆ ಬಹಿರಂಗಪಡಿಸಿದೆ. ಒಂದು ಕಾಲದಲ್ಲಿ ವಯಸ್ಕರು ಮತ್ತು ವೃದ್ಧರು ಹವ್ಯಾಸವೆಂದು ಪರಿಗಣಿಸಲಾಗಿದ್ದ ತಂಬಾಕು ಮತ್ತು ಮದ್ಯಪಾನದಂತಹ ವ್ಯಸನಗಳು ಈಗ ರಾಜ್ಯದ ಯುವಪೀಳಿಗೆ ಮತ್ತು ಮಕ್ಕಳನ್ನು ಆವರಿಸುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ.

ಮಕ್ಕಳ ಸ್ಕೂಲ್ ಬ್ಯಾಗ್‌ನಲ್ಲಿ ಪೆನ್ ಬದಲು ಸಿಗರೇಟ್ ಪ್ಯಾಕ್‌ಗಳು, ಕಾಲೇಜು ಕ್ಯಾಂಟೀನ್‌ಗಳಲ್ಲಿ ಜಗಿಯುವ ತಂಬಾಕು ಬಳಕೆ ಮತ್ತು ಪಾರ್ಟಿಗಳಲ್ಲಿ ಮದ್ಯದ ಬಳಕೆ ಸಾಮಾನ್ಯವೆಂಬಂತೆ ಹರಡಿದೆ. ಜನರ ಆರ್ಥಿಕ ಮಟ್ಟ ಸುಧಾರಿಸುತ್ತಿರುವುದರಿಂದ ಹೆಚ್ಚು ಬೆಲೆಯ ಸಿಗರೇಟ್ ಮತ್ತು ವಿದೇಶಿ ಮದ್ಯಕ್ಕೆ ಬೇಡಿಕೆ ಹೆಚ್ಚಿರುವುದು ತಿಳಿದುಬಂದಿರುತ್ತದೆ.

ದಯಮಾಡಿ, ಆರೋಗ್ಯಕ್ಕೆ ಹಾನಿಕಾರಕವಾದ ಸಿಗರೇಟ್ ಮತ್ತು ವಿದೇಶಿ ಮದ್ಯದಂತಹ ದುಶ್ಚಟಕ್ಕೆ ಯುವಕರು ಬಲಿಯಾಗುವುದು, ಆ ಮೂಲಕ ತಾವು ದುಡಿದುಗಳಿಸಿದಂಥ ಆದಾಯವನ್ನು ನಷ್ಟ ಮಾಡಿಕೊಳ್ಳುವುದನ್ನು ನಿಯಂತ್ರಿಸಬೇಕು. ನಶೆಯುಕ್ತ ಕರ್ನಾಟಕಕ್ಕೆ ಒತ್ತು ನೀಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಚಲುವರಾಯ ಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಖ) ವಿಷಯ:- ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವ ಬಗ್ಗೆ.**

- - -

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ಒಂದು ವರ್ಷದಲ್ಲಿ 13,235 ಮಂದಿಗೆ ಹಾವು ಕಡಿತ" ಎಂಬ ತಲೆ ಬರಹದಡಿಯಲ್ಲಿ ಪ್ರಕಟಗೊಂಡ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

2024ನೇ ಸಾಲಿನಲ್ಲಿ ರಾಜ್ಯ ಹಾವು ಕಡಿತದ ಪ್ರಕರಣಗಳು ಗಂಭೀರವಾಗಿ ಏರಿಕೆಗೊಂಡಿದ್ದು, ಕೇವಲ ಒಂದು ವರ್ಷದ ಅವಧಿಯಲ್ಲಿ 13,235 ಜನರು ಹಾವು ಕಡಿತಕ್ಕೆ ಒಳಗಾಗಿರುವುದಾಗಿ ಅಧಿಕೃತ ಮಾಹಿತಿ ಲಭ್ಯವಾಗಿದೆ. ಹಾವು ಕಡಿತದಿಂದ ತಿಂಗಳಿಗೆ ಕನಿಷ್ಠ 100 ಮಂದಿ ಸಾವನ್ನಪ್ಪಿರುವುದೂ ಆತಂಕಕಾರಿ ಸಂಗತಿಯಾಗಿದೆ. 2023 ರಲ್ಲಿ ಇಂತಹ ಪ್ರಕರಣಗಳು 6,596 ಇದ್ದರೆ, 2022 ರಲ್ಲಿ 3,439 ಪ್ರಕರಣಗಳು ದಾಖಲಾಗಿದ್ದವು. ಈ ಅಂಕಿ-ಅಂಶಗಳಿಂದಾಗಿ ರಾಜ್ಯದಲ್ಲಿ ಹಾವು ಕಡಿತದ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಎರಡು ಪಟ್ಟು ಹೆಚ್ಚುತ್ತಾ ಬರುತ್ತಿರುವುದು ಸ್ಪಷ್ಟವಾಗಿದೆ.

ಹಾವು ಕಡಿತದ ಪ್ರಕರಣಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ಹೆಚ್ಚುತ್ತಿರುವುದರ ಜೊತೆಗೆ, ಚಿಕಿತ್ಸೆಗಾಗಿ ಸಮಯಕ್ಕೆ ಸರಿಯಾಗಿ ಅಗತ್ಯ ಸೌಲಭ್ಯಗಳು ದೊರೆಯದೆ ಹಲವರು ಸಾವನ್ನಪ್ಪುತ್ತಿದ್ದಾರೆ. ತಜ್ಞರ ಪ್ರಕಾರ, ಹಾವು ಕಡಿತದ ನಂತರ 45 ರಿಂದ 60 ನಿಮಿಷಗಳೊಳಗೆ ಸೂಕ್ತ ಚಿಕಿತ್ಸೆ ದೊರೆತರೆ ಜೀವ ಉಳಿಯಬಹುದಾದರೂ, ಆಸ್ಪತ್ರೆಗಳಿಗೆ ತಲುಪುವಲ್ಲಿ ವಿಳಂಬ ಹಾಗೂ ಪ್ರಾಥಮಿಕ ಚಿಕಿತ್ಸೆಯ ಕೊರತೆ ಹಿನ್ನೆಲೆಯಲ್ಲಿ ಅಮೂಲ್ಯ ಜೀವಗಳು ಹಾಳಾಗುತ್ತಿವೆ.

ಇನ್ನೊಂದು ಪ್ರಮುಖ ವಿಷಯವೆಂದರೆ, ಹಾವು ಕಡಿತ ಪ್ರಕರಣಗಳಲ್ಲಿ ಜಿಲ್ಲಾವಾರು ಅಂಕಿಅಂಶಗಳ ಸಂಗ್ರಹಣೆ, ಚಿಕಿತ್ಸೆಗಾಗಿ ಅಗತ್ಯವಿರುವ ಪ್ರತಿ ವಿಷಲಸಿಕೆಗಳ ಲಭ್ಯತೆ, ಹಾಗೂ ವೈದ್ಯಕೀಯ ಸಿಬ್ಬಂದಿಯ ಸಜ್ಜುಗೊಳಿಸುವಿಕೆಯಲ್ಲಿ ಇನ್ನೂ ಹಲವು ಕೊರತೆಗಳು ಕಂಡುಬರುತ್ತಿವೆ. ಆದ್ದರಿಂದ, ಸರ್ಕಾರವು ಈ ಕೆಳಗಿನ ಕ್ರಮಗಳನ್ನು ತಕ್ಷಣ ಕೈಗೊಳ್ಳುವುದು ಅಗತ್ಯ.

1. ಹಾವು ಕಡಿತದ ಪ್ರಕರಣಗಳು ಹೆಚ್ಚು ಸಂಭವಿಸುವ ಜಿಲ್ಲೆಗಳನ್ನು ಗುರುತಿಸಿ ವಿಶೇಷ ಕ್ರಮ ಜಾರಿಗೆ ತರುವುದು, ಪ್ರತಿಯೊಂದು ತಾಲ್ಲೂಕು ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರತಿವಿಷ ಲಸಿಕೆಗಳನ್ನು ಲಭ್ಯವಾಗುವಂತೆ ಮಾಡುವುದು.
2. ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲೇ ತುರ್ತು ಚಿಕಿತ್ಸಾ ವ್ಯವಸ್ಥೆ ಹಾಗೂ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸುವುದು, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಹಾವು ಕಡಿತದ ಸಂದರ್ಭದಲ್ಲಿ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

3. ಹಾವು ಕಡಿತದಿಂದಾಗಿ ಸಂಭವಿಸುವ ಸಾವುಗಳನ್ನು ತಡೆಗಟ್ಟುವ ದೃಷ್ಟಿಯಿಂದ ತುರ್ತು ಆಂಬ್ಯುಲೆನ್ಸ್ ಹಾಗೂ ತ್ವರಿತ ಚಿಕಿತ್ಸೆ ವ್ಯವಸ್ಥೆ ಸಕ್ರೀಯಗೊಳಸುವುದು.

ಮಾನವ ಜೀವಕ್ಕೆ ಧಕ್ಕೆಯಾಗುತ್ತಿರುವ ಈ ಗಂಭೀರ ವಿಷಯದಲ್ಲಿ ಸರ್ಕಾರ ತಕ್ಷಣ ಕ್ರಮಕೈಗೊಂಡು ಅಮೂಲ್ಯ ಜೀವ ಉಳಿಸುವ ಕೆಲಸದಲ್ಲಿ ನಿರ್ಲಕ್ಷ್ಯ ತೋರಿಸಬಾರದೆಂದು ನಾನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗಿದೆ.

ರಾಜ್ಯದಲ್ಲಿ 2024 ರಲ್ಲಿ ಒಟ್ಟು 13,235 ಹಾವು ಕಡಿತದ ಪ್ರಕರಣಗಳು ಹಾಗೂ 100 ಮರಣಗಳು IHIP (Integrated Health Information Platform) ನಲ್ಲಿ ವರದಿಯಾಗಿರುತ್ತವೆ.

2022 ರಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮವು ಕರ್ನಾಟಕದಲ್ಲಿ ಅನುಷ್ಠಾನಗೊಂಡಿದ್ದು, 2024 ಫೆಬ್ರುವರಿಯ ಮೊದಲು ಹಾವು ಕಡಿತ ಹಾಗೂ ಮರಣದ ನೈಜ ಪ್ರಕರಣಗಳು ವರದಿಯಾಗದೇ ಇದರ ಮಾಹಿತಿಯು ಸಮರ್ಪಕವಾಗಿರುವುದಿಲ್ಲ. ದಿನಾಂಕ 12.02.2024 ರಂದು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರವು ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು (Notifiable Disease) ಆದೇಶ ಹೊರಡಿಸಿದೆ. ಹಾಗೂ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಆರೋಗ್ಯ ಕೇಂದ್ರಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿರುವುದರಿಂದ 2023 ರ ಪ್ರಕರಣಗಳಿಗೆ ಹೋಲಿಸಿದರೆ 2024 ರಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿರುತ್ತವೆ. ಯಾವುದೇ ಖಾಸಗಿ ಆಸ್ಪತ್ರೆ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಹಾವು ಕಡಿತ ಪ್ರಕರಣ ಹಾಗೂ ಮರಣಗಳನ್ನು ವರದಿ ಮಾಡದೇ ಇರುವುದು ಅಥವಾ ವರದಿ ಮಾಡುವುದು ತಡವಾದರೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಉಲ್ಲೇಖಿತ ವಿಷಯವಾದ ಹಾವು ಕಡಿತದ ನಂತರ 45 ರಿಂದ 60 ನಿಮಿಷದೊಳಗೆ ಚಿಕಿತ್ಸೆ ದೊರೆತರೆ ಜೀವ ಉಳಿಸಬಹುದಾಗಿರುತ್ತದೆ.

ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ

1. ದೇಶದಲ್ಲೇ ಪ್ರಪ್ರಥಮ ಬಾರಿಗೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಹಾವು ಕಡಿತ ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು ದಿನಾಂಕ 12.02.2024 ರಂದು ಆದೇಶ ಹೊರಡಿಸಲಾಗಿದೆ. ಹಾಗೂ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಕೇಂದ್ರಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿದೆ. ಇದರಿಂದ ನೈಜ ಪ್ರಕರಣಗಳಲ್ಲಿ ಏರಿಕೆಯಾಗದಿದ್ದರೂ ಕೂಡ ವರದಿಯಾಗುತ್ತಿರುವ ಸಂಖ್ಯೆ ಹೆಚ್ಚಾಗಿರುತ್ತದೆ.

ಮರಣಗಳನ್ನು ನಿಯಂತ್ರಿಸಲು, ಜಿಲ್ಲಾಧಿಕಾರಿಗಳಿಗೆ ಕಾರ್ಯಕ್ರಮದ ಪರಿಶೀಲನೆ ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳ ಲೆಕ್ಕ ಪರಿಶೋಧನೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನಕ್ಕೆ ಕಂಡು ಬರುವ ಸವಾಲುಗಳನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

7. ವರದಿಯಾಗಿರುವ ಮರಣಗಳನ್ನು ಪರಿಶೀಲಿಸಿದಾಗ, ಅಧಿಕ ಪ್ರಕರಣಗಳಲ್ಲಿ ಸಾಂಪ್ರದಾಯಕ ನಾಟಿ ಚಿಕಿತ್ಸಕರಿಗೆ ಭೇಟಿ ನೀಡಿ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿರುವುದು ಕಂಡು ಬಂದಿರುತ್ತದೆ. ಹಾಗಾಗಿ ಸಾಂಪ್ರದಾಯಕ/ ನಾಟಿ ಚಿಕಿತ್ಸೆಕರು ಹಾವು ಕಡಿತ ಪ್ರಕರಣಗಳಲ್ಲಿ ಚಿಕಿತ್ಸೆ ನೀಡಿ ಇದರಿಂದ ರೋಗಿಯು ನಿರ್ಣಾಯಕ ಚಿಕಿತ್ಸೆಗೆ ಆಸ್ಪತ್ರೆ ತಲುಪಲು ತಡವಾದರೆ ಅಥವಾ ರೋಗಿಯು ಮರಣ ಹೊಂದಿದರೆ, ಇಂತವರ ಮೇಲೆ **KPME Act** ಅಡಿಯಲ್ಲಿ ಶಿಸ್ತು ಕ್ರಮ ಜರುಗಿಸಬಹುದಾಗಿರುತ್ತದೆ.

8. ಹಾವು ಕಡಿತ ಪ್ರಕರಣಗಳು ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡಬೇಕೆಂದು ಮ್ಯಾಪಿಂಗ್ ಮಾಡಲು ಹಾಗೂ ತಮ್ಮ ಕೇಂದ್ರದಲ್ಲಿ ಬರುವಂತಹ high risk area ಹಾಗೂ high risk population ಅನ್ನು ಗುರುತಿಸಿ, ಅಲ್ಲಿ ತೀವ್ರ ನಿಗಾವಹಿಸಲು ಮತ್ತು ಅಂತರ್ ಇಲಾಖಾ IEC ಚಟುವಟಿಕೆಗಳನ್ನು ನಡೆಸಲು ಸೂಚಿಸಲಾಗಿದೆ.

**ಎ) ವಿಷಯ:- ಸಿಂಧನೂರ ತಾಲ್ಲೂಕಿನ ಚಿರತನಾಳ ಗ್ರಾಮದ ಹತ್ತಿರದ ಕಿರುಸೇತುವೆ ಕಾಮಗಾರಿ ವಿಳಂಬದ ಬಗ್ಗೆ.**

- - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 15-08-2025 ರಂದು ಸೇತುವೆ ನಿರ್ಮಾಣ ವಿಳಂಬ ಎಂದು 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಸಿಂಧನೂರು ತಾಲ್ಲೂಕಿನ ಚಿರತನಾಳ ಗ್ರಾಮದ ಹತ್ತಿರ ಕಿರುಸೇತುವೆ ಗಟ್ಟಿ ತಳಪಾಯವಿಲ್ಲದೆ ನಿರ್ಮಾಣದಲ್ಲಿ ಆಗಿರುವ ವಿಳಂಬದಿಂದಾಗಿ ಎರಡು ವರ್ಷಗಳಿಂದಲೂ ಮಳೆಬಂದಾಗೆಲ್ಲಾ ಗ್ರಾಮಸ್ಥರು ಜೀವ ಕೈಯಲ್ಲಿಡಿದು ಹಳ್ಳ ದಾಟುವ ಸ್ಥಿತಿ ಎದುರಾಗಿದೆ ಮತ್ತು ಸೇತುವೆ ಇಲ್ಲದೆ ಚಿರತನಾಳ ಗ್ರಾಮಕ್ಕೆ ಬಸ್ ಸಂಚಾರ ಕಡಿತಗೊಂಡಿದೆ. ಶಾಲಾ-ಕಾಲೇಜುಗಳಿಗೆ ಸಿಂಧನೂರಿಗೆ ಪ್ರತಿನಿತ್ಯ ಬರುವ ವಿದ್ಯಾರ್ಥಿಗಳು ಕಷ್ಟಪಡುವಂತಾಗಿದೆ ಮತ್ತು ಸೇತುವೆ ಕೊಚ್ಚಿಹೋಗಿದೆ. ದಿನಗಳೇ ಕಳೆದರು ಇದುವರೆಗೂ ಮರು ನಿರ್ಮಾಣ ಮಾಡಿಲ್ಲ. ಜನರು ದಿನವೂ ಹಳ್ಳದಲ್ಲೇ ಹರಸಾಹಸ ಪಟ್ಟು ಬೊಮ್ಮನಾಳ ಗ್ರಾಮಕ್ಕೆ ಬರುತ್ತಿದ್ದಾರೆ. ಅಲ್ಲಿಂದ ಸಿಂಧನೂರಿಗೆ ಬರುವ ಸ್ಥಿತಿ ಇದೆ.

ಆದುದರಿಂದ, ಈ ಸೇತುವೆ ಕಾಮಗಾರಿಗೆ ಎರಡು ವರ್ಷದಲ್ಲಿ ಸುಮಾರು 5.50 ಕೋಟಿ ರೂಗಳ ಅನುದಾನ ತಲುಪಿದ್ದರು ಯಾವ ಕಾರಣದಿಂದ ವಿಳಂಬವಾಗಿದೆ? ಹೊಸ ಸೇತುವೆ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುತ್ತದೆ? ಅಧಿಕಾರಿಗಳು ಅಥವಾ ಗುತ್ತಿಗೆದಾರರ ನಿರ್ಲಕ್ಷವೇ? ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು

**ಏ) ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಅಧಿಕಾರಿ, ಸಿಬ್ಬಂದಿಗಳ ಹುದ್ದೆ ಖಾಲಿ ಇರುವುದರಿಂದ ನಿರ್ವಹಣೆ ಕೊರತೆ ಹೆಚ್ಚಾಗಿದ್ದು ಖಾಲಿ ಇರುವ ಹುದ್ದೆಗಳನ್ನು ತುಂಬುವ ಕುರಿತು**

\- - -

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ‘ವಿಜಯ ಕರ್ನಾಟಕ’ ದಿನಪತ್ರಿಕೆಯಲ್ಲಿ ದಿನಾಂಕ 18-8-2025 ರಂದು ಪ್ರಕಟಗೊಂಡಿರುವಂತೆ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ 22 ಕ್ಕೂ ಹೆಚ್ಚು ಅಧಿಕಾರಿ, ಸಿಬ್ಬಂದಿ ಹುದ್ದೆಗಳು ಖಾಲಿ ಇದ್ದು, ದೈನಂದಿನ ನಿರ್ವಹಣೆ, ಆಡಳಿತ ನಡೆಸಲು ಅಡ್ಡಿಯುಂಟಾಗಿದೆ. ಬನ್ನೇರುಘಟ್ಟ ಉದ್ಯಾನವನ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಒಳಪಟ್ಟಿದ್ದರೂ ಇಲ್ಲಿರುವ ಪ್ರಮುಖ ಹುದ್ದೆಗಳು ಅರಣ್ಯ ಸೇವೆಯ ಅಧಿಕಾರಿ, ಸಿಬ್ಬಂದಿಯೇ ಕಾರ್ಯನಿರ್ವಹಿಸಬೇಕಿದೆ. ಸದ್ಯ ಬನ್ನೇರುಘಟ್ಟ ಉದ್ಯಾನವನದಲ್ಲಿ ಕಾರ್ಯನಿರ್ವಹಣಾಧಿಕಾರಿ ಐಎಫ್ಎಸ್ (ಭಾರತೀಯ ಅರಣ್ಯ ಸೇವೆ) ಕೇಡರ್‌ನ ಹುದ್ದೆ ಭರ್ತಿಯಾಗಿದೆ. ಸಹಾಯಕ ಕಾರ್ಯನಿರ್ವಹಣಾಧಿಕಾರಿಯ (ಐಎಫ್ಎಸ್ ಅಥವಾ ತತ್ಸಮಾನ ಅರ್ಹತೆ) ಒಂದು ಹುದ್ದೆ ಖಾಲಿ ಇರುವುದಾಗಿ ತಿಳಿದು ಬಂದಿರುತ್ತದೆ. ವಲಯ ಅರಣ್ಯಧಿಕಾರಿ ಮೂರು ಹುದ್ದೆಗಳ ಪೈಕಿ ಒಂದು ಮಾತ್ರ ಭರ್ತಿಯಾಗಿದೆ. ಉಪವಲಯ ಅರಣ್ಯಾಧಿಕಾರಿಯ ನಾಲ್ಕು ಹುದ್ದೆಗಳು ಇದ್ದು, ಎಲ್ಲವೂ ಭರ್ತಿಯಾಗಿದೆ. ಅರಣ್ಯ ರಕ್ಷಕ ಮತ್ತು ಅರಣ್ಯ ಕಾವಲುಗಾರರ ತಲಾ ಹತ್ತು ಹುದ್ದೆಗಳದ್ದು, ಎಲ್ಲವೂ ಖಾಲಿ ಇದೆ. ಬನ್ನೇರುಘಟ್ಟ ಉದ್ಯಾನಕ್ಕೆ ವರ್ಷದಲ್ಲಿ ಸರಾಸರಿ 59 ಲಕ್ಷ ಪ್ರವಾಸಿಗರು ಭೇಟಿ ನೀಡುವುದು ವಾಡಿಕೆಯಾಗಿದೆ. ಈಗಾಗಲೇ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಅಧಿಕಗೊಂಡಿದ್ದು, ಅನೇಕರು ಪದವಿಯನ್ನು ಪೂರೈಸಿ ಉದ್ಯೋಗಕ್ಕಾಗಿ ಕಾಯ್ದುಕೊಂಡಿದ್ದು, ಈ ರೀತಿ ಖಾಲಿ ಹುದ್ದೆಗಳನ್ನು ಬಾಕಿ ಇಟ್ಟುಕೊಂಡಲ್ಲಿ ಹಲವು ಉದ್ಯೋಗಕಾಂಕ್ಷಿಗಳಿಗೆ ಅನ್ಯಾಯವಾದಂತಗುತ್ತದೆ. ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಮನವಿಗಳು ಕೋರಿಕೆಗಳು ಬಂದಿದ್ದರೂ ಸಹ, ಕಾರ್ಯಗತಗೊಳ್ಳದೇ, ಉದ್ಯೋಗಗಳು ಹಾಗೇ ಖಾಲಿಯಾಗಿ ಉಳಿದುಬಿಟ್ಟಿರುವುದು ಶೋಚನೀಯ ಸಂಗತಿಯಾಗಿದೆ. ಇದರಿಂದ ವರ್ಷದಿಂದ ವರ್ಷಕ್ಕೆ ಉದ್ಯಾನವನ ಪ್ರಗತಿಯತ್ತ ಸಾಗುತ್ತಿರುವುದರಿಂದ ಆಡಳಿತಾತ್ಮಕ ಕೆಲಸಗಳು, ನಿರ್ವಹಣೆ ಜವಾಬ್ದಾರಿಯೂ ಹೆಚ್ಚಾಗಿರುವುದರಿಂದ ಖಾಯಂ ಸಿಬ್ಬಂದಿಯ ಅವಶ್ಯಕತೆ ತೀರಾ ಇದೆ. ಖಾಲಿ ಹುದ್ದೆಗಳು ಹಾಗೇ ಬಾಕಿ ಉಳಿದಲ್ಲಿ ಆಡಳಿತಾತ್ಮಕ ಕೆಲಸಗಳಿಗೆ ಹಿನ್ನಡೆಯುಂಟಾಗಿದೆ. ಆದ್ದರಿಂದ, ಈ ಸಂಬಂಧ ಸರ್ಕಾರವು ಕೂಡಲೇ ಹುದ್ದೆಗಳನ್ನು ಭರ್ತಿಗೊಳಿಸಲು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವ ಸಲುವಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಬೇಕೆಂದು ಸಚಿವರ ಬಳಿ ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರ ಬಳಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(776) 19-08-2025/11.50/ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಐ) ವಿಷಯ:- ಬಿ.ಬಿ.ಎಂ.ಪಿ ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 81ರಷ್ಟು ಬೋಧಕರ ಹುದ್ದೆ ಖಾಲಿ ಇರುವ ಕುರಿತು.**

-----

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 18.08.2025ರಂದು "ಪಾಲಿಕೆ ಶಿಕ್ಷಣ ಸಂಸ್ಥೆಗಳಲ್ಲಿ 81%ರಷ್ಟು ಬೋಧಕರಿಲ್ಲ" ಎಂದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. "ಬಿ.ಬಿ.ಎಂ.ಪಿ. ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ 81%ರಷ್ಟು ಬೋಧಕರ ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದಿರುವುದು ಬೆಳಕಿಗೆ ಬಂದಿವೆ. ನಗರದಲ್ಲಿ 93 ಕಿಂಡರ್ ಗಾರ್ಡನ್‌ಗಳು, 17 ಪ್ರಾಥಮಿಕ ಶಾಲೆಗಳು, 35 ಪ್ರೌಢಶಾಲೆಗಳು, 20 ಪದವಿ ಪೂರ್ವ ಕಾಲೇಜುಗಳು, 4 ಪದವಿ ಕಾಲೇಜುಗಳು ಮತ್ತು 2 ಸ್ನಾತಕೋತ್ತರ ಕಾಲೇಜುಗಳು ಬಿ.ಬಿ.ಎಂ.ಪಿ. ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಆ ಶಿಕ್ಷಣ ಸಂಸ್ಥೆಗಳಲ್ಲಿ ಮಂಜೂರಾದ 761 ಹುದ್ದೆಗಳಿದ್ದು, ಆ ಪೈಕಿ 147 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇನ್ನೂ 614 ಹುದ್ದೆಗಳು ಬಹು ವರ್ಷಗಳಿಂದಲೂ ನೇಮಕಾತಿಯೇ ಆಗದೇ ಖಾಲಿ ಉಳಿದಿದೆ.

ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬದಲು ಬಿ.ಬಿ.ಎಂ.ಪಿ ಅತಿಥಿ ಉಪನ್ಯಾಸಕರು ಹಾಗೂ ಅರೆಕಾಲಿಕ ಉಪನ್ಯಾಸಕರಿಂದಲೇ ಕಾಲೇಜುಗಳನ್ನು ನಡೆಸಲಾಗುತ್ತಿದೆ. ಈ ಅತಿಥಿ ಉಪನ್ಯಾಸಕರ ನೇಮಕಾತಿಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2021-22ನೇ ಸಾಲಿನಲ್ಲಿ 678ರಷ್ಟಿದ್ದ ಅತಿಥಿ ಉಪನ್ಯಾಸಕರ ಸಂಖ್ಯೆ 2024-25ನೇ ಸಾಲಿಗೆ 786ಕ್ಕೆ ಹೆಚ್ಚಳವಾಗಿದೆ. ಬಿ.ಬಿ.ಎಂ.ಪಿ ಅಧೀನದ ಶಿಕ್ಷಣ ಸಂಸ್ಥೆಗಳನ್ನು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಬೇಕೆಂಬ ಬೇಡಿಕೆ ಅನೇಕ ವರ್ಷಗಳಿಂದ ಈಡೇರದೇ ಬೇಡಿಕೆಯಾಗಿಯೇ ಉಳಿದಿರುವುದು ಈ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಬಹುದೊಡ್ಡ ತೊಡಕಾಗಿದೆ ಎನ್ನಲಾಗುತ್ತಿದೆ. ಬಿ.ಬಿ.ಎಂ.ಪಿ ಮೂಲಗಳ ಪ್ರಕಾರ ಕಳೆದ 4 ವರ್ಷಗಳಲ್ಲಿ ಒಂದೇ ಒಂದು ಖಾಯಂ ಹುದ್ದೆಗಳನ್ನು ಬಿ.ಬಿ.ಎಂ.ಪಿ ಭರ್ತಿ ಮಾಡಿರುವುದಿಲ್ಲ ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸದರಿ ವಿಷಯದ ಕುರಿತು ಇಲಾಖೆಯ ಖಾಯಂ ಬೋಧಕರನ್ನು ನೇಮಕಾತಿ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕೆಂದು ಸನ್ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಿ.ಬಿ.ಎಂ.ಪಿ ಅಧೀನ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 81ರಷ್ಟು ಬೋಧಕರ ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದಿರುವುದು ಬೆಳಕಿಗೆ ಬಂದಿದೆ. ನಗರದಲ್ಲಿ 93 ಕಿಂಡರ್ ಶಾಲೆಗಳು, 35 ಪ್ರೌಢಶಾಲೆಗಳು, 20 ಪದವಿಪೂರ್ವ ಕಾಲೇಜುಗಳು, 4 ಪದವಿ ಕಾಲೇಜುಗಳು ಮತ್ತು 2 ಸ್ನಾತಕೋತ್ತರ ಕಾಲೇಜುಗಳು ಬಿ.ಬಿ.ಎಂ.ಪಿ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಆ ಶಿಕ್ಷಣ ಸಂಸ್ಥೆಗಳಲ್ಲಿ ಮಂಜೂರಾದ 761 ಹುದ್ದೆಗಳಿದ್ದು ಆ ಪೈಕಿ 147 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇನ್ನೂ 614 ಹುದ್ದೆಗಳು ಬಹುವರ್ಷಗಳಿಂದಲೂ ನೇಮಕಾತಿಯೇ ಆಗದೆ ಖಾಲಿ ಉಳಿದಿವೆ. ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬದಲು ಬಿ.ಬಿ.ಎಂ.ಪಿ ಅತಿಥಿ ಉಪನ್ಯಾಸಕರು ಹಾಗೂ ಅರೆಕಾಲಿಕ ಉಪನ್ಯಾಸಕರಿಂದಲೇ ಕಾಲೇಜುಗಳನ್ನು ನಡೆಸಲಾಗುತ್ತಿದೆ. ಈ ಅತಿಥಿ ಉಪನ್ಯಾಸಕರ ನೇಮಕಾತಿಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2021-22ನೇ ಸಾಲಿನಲ್ಲಿ 678 ರಷ್ಟಿದ್ದ ಅತಿಥಿ ಉಪನ್ಯಾಸಕರ ಸಂಖ್ಯೆ 2024-25ನೇ ಸಾಲಿಗೆ 786ಕ್ಕೆ ತಲುಪಿದೆ. ಬಿ.ಬಿ.ಎಂ.ಪಿ ಅಧೀನದ ಶಿಕ್ಷಣ ಸಂಸ್ಥೆಗಳನ್ನು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಬೇಕೆಂಬ ಬಹುವರ್ಷಗಳ ಬೇಡಿಕೆ ಈಡೇರದೇ ಬೇಡಿಕೆಯಾಗಿಯೇ ಉಳಿದಿರುವುದು ಈ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಬಹುದೊಡ್ಡ ತೊಡಕಾಗಿದೆ ಎನ್ನಲಾಗಿದೆ. ಬಿ.ಬಿ.ಎಂ.ಪಿ ಮೂಲಗಳ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ಹುದ್ದೆಯನ್ನೂ ಭರ್ತಿ ಮಾಡಿಲ್ಲ. ಬಿ.ಬಿ.ಎಂ.ಪಿ ಅಧೀನದ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡರೆ ಅವರು ಬಿ.ಬಿ.ಎಂ.ಪಿ ನೌಕರರಾಗಿಬಿಡುತ್ತಾರೆ. ಇದು ಭವಿಷ್ಯದಲ್ಲಿ ನೌಕರರ ವರ್ಗಾವಣೆಯ ಸಂದರ್ಭದಲ್ಲಿ ಆಡಳಿತಾತ್ಮಕ ಸಮಸ್ಯೆಗಳನ್ನು ಸೃಷ್ಟಿಸುವುದರಿಂದ ಬಿ.ಬಿ.ಎಂ.ಪಿ. ಅತಿಥಿ ಉಪನ್ಯಾಸಕರ ಮೇಲೆಯೇ ಅವಲಂಬಿತವಾಗಿದೆ ಎನ್ನಲಾಗಿದೆ.

ಈ ರೀತಿ ಅತಿಥಿ ಉಪನ್ಯಾಸಕರು ಮತ್ತು ಅರೆಕಾಲಿಕ ಉಪನ್ಯಾಸಕರ ನೇಮಕಾತಿಯಿಂದಾಗಿ ಬಿ.ಬಿ.ಎಂ.ಪಿ. ಅಧೀನದ ಶಿಕ್ಷಣದ ಸಂಸ್ಥೆಗಳಲ್ಲಿ ಬೋಧನಾ ಗುಣಮಟ್ಟ ಕುಸಿತ ಕಂಡಿದೆ ಎಂಬುದು ಅಂಕಿ ಅಂಶಗಳಿಂದ ಧೃಡಪಟ್ಟಿದೆ. ಬಿ.ಬಿ.ಎಂ.ಪಿ ಯ ಮೂಲಗಳ ಪ್ರಕಾರ ಕಳೆದ ವರ್ಷ ಬಿ.ಬಿ.ಎಂ.ಪಿ. ಅಧೀನದ ಶಾಲೆಗಳಲ್ಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಶೇಕಡಾ 55.88ರಷ್ಟಿದೆ. ಇದು 2023-24ನೇ ಸಾಲಿಗೆ ಹೋಲಿಸಿದರೆ ಶೇಕಡಾ 13ರಷ್ಟು ಕುಸಿತ ಕಂಡಿದೆ. ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳು ಈ ಕುಸಿತದಿಂದಾಗಿ ಹೊರತಾಗಿಲ್ಲವೆನ್ನಲಾಗಿದೆ. ಕಡಿಮೆ ವೇತನ ಪಡೆಯುವ ಅತಿಥಿ ಉಪನ್ಯಾಸಕರು ಮತ್ತು ಅರೆಕಾಲಿಕ ಉಪನ್ಯಾಸಕರು ಬದುಕಿನ ನಿರ್ವಹಣೆಗೆ ಬೇಕಿರುವ ಸಂಪಾದನೆಗಾಗಿ ಈ ಕೆಲಸದ ಜೊತೆಗೆ ಬೇರೆ ಬೇರೆ ಕೆಲಸಗಳನ್ನೂ ಮಾಡುವುದರಿಂದ ಬೋಧನೆಯ ಮೇಲೆ ಸಂಪೂರ್ಣ ಏಕಾಗ್ರತೆ ವಹಿಸಲು ಸಾಧ್ಯವಾಗದಿರುವುದರಿಂದ ಶಿಕ್ಷಣ ಗುಣಮಟ್ಟ ಕುಸಿತಕ್ಕೆ ಕಾರಣವೆಂದು ಹೇಳಲಾಗುತ್ತಿದೆ. 2022-23ನೇ ಸಾಲಿನಲ್ಲಿ 24,656, 2023-24ನೇ ಸಾಲಿನಲ್ಲಿ 23,910, 2024-25ನೇ ಸಾಲಿನಲ್ಲಿ 23,341 ಕುಸಿತ ಕಂಡಿದೆ. ಇದರಿಂದಾಗಿ ಶಿಕ್ಷಣದ ಗುಣಮಟ್ಟವನ್ನು

ಗಣನೀಯವಾಗಿ ಸುಧಾರಿಸುವಂತೆ ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟ ಸಚಿವರ ಬಳಿ ಈ ಮೂಲಕ ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

## ೦3. ವರದಿಗಳನ್ನೊಪ್ಪಿಸುವುದು

**ಅ) ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ರೀತ್ಯಾ 2023-24 ಮತ್ತು 2024-25ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ 50ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಆ) ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2024-25ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಬಿ-1) ರ ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ 2022ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿತವಾಗಿ ನೀಡಿರುವ ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಹಂತ-3ರ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು ಆಡಿಟ್ ಆಕ್ಷೇಪಣೆಗಳನ್ನು ಕುರಿತು 31ನೇ ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಆಡಿಟ್ ವರದಿ, 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಆಡಿಟ್ ವರದಿ ಹಾಗೂ 74ನೇ ಸಂವಿಧಾನ ತಿದ್ದುಪಡಿಯ ಕಾಯಿದೆಯ ಅನುಷ್ಠಾನ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಸಮಿತಿ ಸಭೆಯಲ್ಲಿ ಚರ್ಚಿಸಿ ಇಲಾಖೆಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಒಟ್ಟು 144 ಕಂಡಿಕೆಗಳ ಕುರಿತು ಸಿದ್ಧಪಡಿಸಲಾದ ಸಮಿತಿಯ 43ನೇ ವರದಿಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 215ರ ಪ್ರಕಾರ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಇ) ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಸದಸ್ಯನಾದ ನಾನು 16ನೇ ವಿಧಾನಸಭೆಯ 2024-25ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 40ನೇ ವರದಿಯನ್ನು ಸಮಿತಿಯ ಪರವಾಗಿ ಮಂಡಿಸುತ್ತಿದ್ದೇನೆ.

**ಈ) ಶ್ರೀ ಎ.ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2024-25ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸದಸ್ಯನಾದ ನಾನು ಸಮಿತಿಯ 53ನೇ ವರದಿಯನ್ನು ಸಮಿತಿಯ ಪರವಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನು ಒಪ್ಪಿಸಲಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಎರಡು ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡಾಗ ಮಾನ್ಯ ಮಂತ್ರಿಗಳು ಇಲ್ಲವೆಂದು ನಾಳೆ ಬೇಗನೆ ಅದನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದು ತಾವು ಹೇಳಿದ್ದೀರಿ. ಅದರಲ್ಲಿ ಒಂದು ಒಳಮೀಸಲಾತಿ ವಿಚಾರ. ಮತ್ತೊಂದು law and order ಗೆ ಸಂಬಂಧಪಟ್ಟಿರುವಂತಹ ವಿಚಾರ. ಇದನ್ನು ಮೊದಲೇ ತೆಗೆದುಕೊಳ್ಳುವುದಕ್ಕೆ ಪ್ರಶ್ನೋತ್ತರಕ್ಕೆ ತೊಂದರೆ ಮಾಡಬಾರದು ಎಂಬ ಕಾರಣಕ್ಕೆ ನಾವು ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳದೆ ಬಿಟ್ಟಿದ್ದೆವು. ತಾವು ಈಗ ಅದನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಆ ವಿಷಯ ಅಜೆಂಡಾದಲ್ಲಿ ಬಂದಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು ಅಜೆಂಡಾದಲ್ಲಿ ಬಂದಿದೆ. ಈಗ 4.00 ಗಂಟೆಗೆ ಒಳಮೀಸಲಾತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ವಿಶೇಷ ಸಚಿವ ಸಂಪುಟ ಸಭೆಯನ್ನು ಕರೆದಿದ್ದಾರೆ. ಇಲ್ಲಿ ಆ ವಿಚಾರವಾಗಿ ಏನಾದರೂ ನಮ್ಮ ಚರ್ಚೆಗಳು ಇದ್ದರೆ, ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತಿದ್ದೇವೆ.

**ಸಭಾಪತಿಯವರು:-** ಆಯಿತು ನೋಡೋಣ.

## 04. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನದ 151, 2ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರ ಈ ಕೆಳಕಂಡ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಮಾರ್ಚ್ 2023-24ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (2025ರ ವರದಿ ಸಂಖ್ಯೆ-4).

2. ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಂದಾಯದ ವರದಿ (2025ನೇ ವರ್ಷದ ವರದಿ ಸಂಖ್ಯೆ-5).

3. 2020-2022ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ.

4. ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನೆ ವರದಿ (2025ನೇ ವರ್ಷದ ವರದಿ ಸಂಖ್ಯೆ-3) ಇವುಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ, ಅಧ್ಯಕ್ಷರು, ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಕುರಿತು.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿದ್ದರು)**

(ಮುಂದು)

(777) 19.08.2025 12.00 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿರುತ್ತೇನೆ. ಅದನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕಾಗಿ ಕೋರುತ್ತೇನೆ.

**ಸಭಾಪತಿಯವರು:-** ಸದರಿ ವಿಷಯವನ್ನು ನಿಯಮ 72 ಕ್ಕೆ ಪರಿವರ್ತನೆ ಮಾಡಲಾಗಿರುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳು. ಮೊದಲನೆ ವಿಷಯ ಶ್ರೀ ಪುಟ್ಟಣ್ಣ ಹಾಗೂ ಶ್ರೀ ಎಸ್.ಎಲ್. ಭೋಜೇಗೌಡರವರದ್ದು.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಇದು ಎಸ್.ಇ.ಪಿ. ಮತ್ತು ಎನ್.ಇ.ಪಿ. ವಿಚಾರಕ್ಕೆ ಸಂಬಂಧಿಸಿದ ವಿಷಯವಾಗಿರುವುದರಿಂದ, ಬಹಳ ವಿಸ್ತಾರವಾಗಿ ಈ ವಿಷಯ ಚರ್ಚೆಯಾಗಬೇಕಾಗಿರುತ್ತದೆ.

**ಸಭಾಪತಿಯವರು:-** ಆಯಿತು, ತಮ್ಮ ವಿಚಾರವನ್ನು ನಿಯಮ 72 ಕ್ಕೆ ಪರಿವರ್ತನೆ ಮಾಡಿರುತ್ತೇನೆ. ನಂತರ, ಚರ್ಚೆಗೆ ಅವಕಾಶ ನೀಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಯಾವಾಗ ಅವಕಾಶ ನೀಡುತ್ತೀರಿ?

**ಸಭಾಪತಿಯವರು:-** ನಂತರ ತಮಗೆ ಅವಕಾಶ ನೀಡುತ್ತೇನೆ. ಹಾಗಾಗಿ, ತಾವು ಈಗ ನನಗೆ ಸದನ ನಡೆಸಲು ಅವಕಾಶ ನೀಡಿ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಪುಟ್ಟಣನವರೇ ತಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಉತ್ತರ ನೀಡಲು ಮಾನ್ಯ ಸಚಿವರು ಇರುವುದಿಲ್ಲ. ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ಈಗ ನಾನು ಏನು ಮಾಡಬೇಕು? ಅಲ್ಲದೇ, ಶ್ರೀ ಐವನ್ ಡಿ' ಸೋಜಾ ಮತ್ತು ಶ್ರೀ ಟಿ.ಎನ್. ಜವರಾಯಿ ಗೌಡ ರವರ ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ ಬಂದಿರುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ಸಂಬಂಧಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿರುವುದಿಲ್ಲ. ಈಗ ನಾನು ಏನು ಮಾಡಬೇಕು?

**ಸಭಾಪತಿಯವರು:-** ಏನು ಮಾಡಬೇಕು ಎಂದರೆ, ಉತ್ತರ ಬಂದಾಗ ಅದನ್ನು ತೆಗೆದುಕೊಳ್ಳಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತು ನಾನು ಏನು ಮಾಡಬೇಕೆಂದು ಹೇಳಿ. ಇದು ಅತ್ಯಂತ ತುರ್ತು ವಿಷಯ ಹಾಗೂ ಗಂಭೀರವಾದ ವಿಷಯ ಎಂಬುದು ತಮಗೆ ಗೊತ್ತಿದೆ. ಇವರು ಏಕಾಏಕಿ ನಿವೇಶನದಾರರ ಖಾತೆಗಳನ್ನು ರದ್ದುಗೊಳಿಸಿರುವುದನ್ನು ನೋಡಿದರೆ, ಇಂತಹ ಅಧಿಕಾರಿಗಳು ಇಡೀ ದೇಶದಲ್ಲಿಯೇ ಯಾರೂ ಇರುವುದಿಲ್ಲ.

**ಸಭಾಪತಿಯವರು:-** ಸರ್ಕಾರದ ಮುಖ್ಯ ಸಚೇತಕರೇ, ಈ ವಿಷಯಕ್ಕೆ ಈ ದಿನ ಮಧ್ಯಾಹ್ನದೊಳಗೆ ಉತ್ತರ ಒದಗಿಸುತ್ತೀರಾ? ಅಥವಾ ಯಾರಾದರೂ ಮಂತ್ರಿಗಳು ಈ ವಿಷಯಕ್ಕೆ ಉತ್ತರ ನೀಡಲಿ. ಅದಕ್ಕಾಗಿ, ತಾವು ಯಾರಿಗಾದರೂ ಮಂತ್ರಿಗಳಿಗೆ ಜವಾಬ್ದಾರಿ ವಹಿಸಿ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈ ವಿಷಯ ಸದನದಲ್ಲಿ ಬಂದಿರುವುದಕ್ಕೆ ಸಂಬಂಧಪಟ್ಟ ಇ.ಓ. ಏನು ಹೇಳುತ್ತಾನೆಂದರೆ, "after all, ಒಬ್ಬ ವಿಧಾನ ಪರಿಷತ್ತಿನ

ಸದಸ್ಯರು ನನಗೆ ಏನು ಮಾಡುವುದಕ್ಕಾಗುತ್ತದೆ? ಕೇವಲ ನನ್ನನ್ನು ವರ್ಗಾವಣೆ ಮಾಡಿಸಬಹುದಷ್ಟೇ" ಎಂದು ಹೇಳುತ್ತಾನಂತೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ಮಾನ್ಯ ಸಭಾನಾಯಕರು ಬಂದು ಉತ್ತರ ನೀಡುತ್ತಾರಂತೆ. ಅವರ ಮುಂದೆ ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿ. ಈಗ ಹೇಳಿದರೆ ಏನು ಪ್ರಯೋಜನ?

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಂದು ಅಭಿನಂದನೆ ಸಲ್ಲಿಸುವುದಕ್ಕೆ ಒಂದು ಪತ್ರವನ್ನು ತಮಗೆ ನೀಡಿರುತ್ತೇನೆ.

**ಸಭಾಪತಿಯವರು:–** ನಂತರ ತಮಗೆ ಅವಕಾಶ ನೀಡುತ್ತೇನೆ.

## ೦೫. ಗಮನ ಸೆಳೆಯುವ ಸೂಚನೆ

**ಅ) ವಿಷಯ:- ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಿ ಅರ್ಹತೆ ಹೊಂದಿದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಉಂಟಾಗಿರುವ ಕುರಿತು**

- - -

**ಡಾ॥ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಿ ಅರ್ಹತೆ ಹೊಂದಿದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಉಂಟಾಗಿರುವ ಕುರಿತು ಮಾನ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ. ಆದರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬಂದಿರುವುದಿಲ್ಲ. ಈಗ ಉತ್ತರ ಕೊಡುತ್ತಾರೆ. ಅದನ್ನು ತಕ್ಷಣ ಓದಿಕೊಳ್ಳುವುದಕ್ಕೆ ಹಾಗೂ ಅದರ ಮೇಲೆ ಪ್ರಶ್ನೆ ಕೇಳುವುದಕ್ಕೆ ಹೇಗೆ ಸಾಧ್ಯವಿದೆ?

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಉತ್ತರ ನೀಡಿರುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರವನ್ನು ಮೊದಲೇ ಕೊಟ್ಟರೆ, ಅವರು ಓದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡುವುದೇ ಇಲ್ಲ. ಈಗ ತಾವು ಗಮನ ಸೆಳೆಯುವ ಸೂಚನೆ ಪ್ರಸ್ತಾಪ ಮಾಡಲು ಅವಕಾಶ ನೀಡಿದಾಗ, ಉತ್ತರ ನೀಡುತ್ತಿದ್ದಾರೆ. ಇದರಿಂದಾಗಿ, ಮಾನ್ಯ ಸದಸ್ಯರು ಏನು ಮಾಡಬೇಕು?

**ಸಭಾಪತಿಯವರು:-** ಅದು ನಮ್ಮ ಸಚಿವಾಲಯದ ಅಧಿಕಾರಿ/ಸಿಬ್ಬಂದಿಗಳ ಜವಾಬ್ದಾರಿಯಾಗಿರುತ್ತದೆ. ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿರುವಂತಹ ಪ್ರಶ್ನೆಗಳಿಗೆ ಸಂಬಂಧಪಟ್ಟ ಸಚಿವರು ಬರಲಿ ಅಥವಾ ಬಿಡಲಿ, ಉತ್ತರಗಳನ್ನು ಆಯಾ ಸದಸ್ಯರಿಗೆ ನೀಡುವುದು ತಮ್ಮಗಳ ಜವಾಬ್ದಾರಿಯಾಗಿರುತ್ತದೆ. ಆಯಿತು, ಮಾನ್ಯ ಸಚಿವರೇ ತಾವು ಉತ್ತರ ನೀಡಿ.

**(ಗೊಂದಲ)**

**ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ,

ಉತ್ತರ:

ಮೈಸೂರು ವಿಶ್ವವಿದ್ಯಾನಿಲಯವು ದಿನಾಂಕ:23.12.2024 ಹಾಗೂ 24.12.2024ರಂದು ಪಿಎಚ್.ಡಿ. ಪದವಿಗೆ ನೋಂದಣಿ ಮಾಡಿಕೊಳ್ಳಲು ವಿವಿಧ ವಿಷಯಗಳಲ್ಲಿ ಪ್ರವೇಶ ಪರೀಕ್ಷೆಗಳನ್ನು ಆಯೋಜಿಸಿ ದಿನಾಂಕ: 03.03.2025 ಫಲಿತಾಂಶ ಪ್ರಕಟಿಸಿದೆ. ಪಿಎಚ್.ಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪಡೆದ 186 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವನ್ನು ಒಳಗೊಂಡಂತೆ ತನ್ನ ವ್ಯಾಪ್ತಿಯಲ್ಲಿ ಬರುವ ವಿವಿಧ ಸಂಯೋಜಿತ ಕಾಲೇಜುಗಳಿಂದ ಅರ್ಹ ಮಾರ್ಗದರ್ಶಕರಾಗಿ ಪಡೆಯಲು ಕ್ರಮವಹಿಸಿದೆ.

ಪಿ.ಎಚ್.ಡಿ ನೋಂದಣಿ ಮಾಡಿಕೊಳ್ಳಲು ಮಾರ್ಗದರ್ಶಕರ ಬಳಿ ಅಭ್ಯರ್ಥಿಗಳ ಲಭ್ಯತೆ ಖಾಲಿ ಇದ್ದಲ್ಲಿ, ಅರ್ಹ ಅಭ್ಯರ್ಥಿಗಳು ಅಂತಹ ಮಾರ್ಗದರ್ಶಕರಿಂದ ಸಮ್ಮತಿ ಪತ್ರ ಪಡೆದು, ಸಲ್ಲಿಸಿದ್ದಲ್ಲಿ ವಿಶ್ವವಿದ್ಯಾನಿಲಯವು ಅಂತಹ ವಿದ್ಯಾರ್ಥಿಗಳಿಗೆ ಪ್ರಥಮವಾಗಿ ತಾತ್ಕಾಲಿಕ ನೋಂದಣಿಗೆ ಅನುಮತಿ ನೀಡಲು ಕ್ರಮವಹಿಸುತ್ತಿದೆ. ವಿಶ್ವವಿದ್ಯಾನಿಲಯವು ನಡೆಸುವ ಪಿಎಚ್.ಡಿ. ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಪ್ರಮಾಣ ಪತ್ರಕ್ಕೆ ಮೂರು ವರ್ಷಗಳವರೆಗೆ ಮಾನ್ಯತೆಯಿದ್ದು, ಆಯಾ ಮಾರ್ಗದರ್ಶಕರ ಅಡಿಯಲ್ಲಿ ಖಾಲಿಯಾಗುವ ಎದುರಿಗೆ ಅವರ ಸಮ್ಮತಿ ಪತ್ರದೊಡನೆ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ವಿಶ್ವವಿದ್ಯಾಲಯವು ಅವಕಾಶ ಕಲ್ಪಿಸಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 33 ಅಧ್ಯಯನ ಮಂಡಳಿ (Board of Studies) ರನ್ವಯ ವಿಶ್ವವಿದ್ಯಾಲಯವು ಪದವಿ ಪೂರ್ವ ಅಧ್ಯಯನಗಳಿಗಾಗಿ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗಾಗಿ ಪ್ರತ್ಯೇಕ ಅಧ್ಯಯನ ಮಂಡಳಿಯಿದ್ದು, UGC (Minimum Standards and Procedures for Award of Ph.D Degree) Regulations, 2022ರಲ್ಲಿ ಸಂಶೋಧನಾ ಮೇಲ್ವಿಚಾರಕರಿಗೆ ಸಂಬಂಧಿಸಿದಂತೆ, ಈ ಕೆಳಕಂಡ ನಿಯಮಗಳನ್ನು ಉಪಬಂಧಿಸಲಾಗಿರುತ್ತದೆ;

**Adjunct Faculty members shall not act as Research Supervisors and can only act as co-supervisors;**

(1) An eligible Professor/Assistant Professor can guide up to eight (8)/six (06)/ four (04), Ph.D scholars, respectively, at any given time.

(2) In case of interdisciplinary/ multidisciplinary research work, if required, a Co-Supervisor from outside the Department/School/Centre/University may be appointed.

ಮೇಲ್ಕಂಡ ಮಾರ್ಗಸೂಚಿಯನ್ವಯ ವಿಶ್ವವಿದ್ಯಾಲಯದಲ್ಲಿ ಬೋಧಕ ಹುದ್ದೆಗಳ ಕೊರತೆಯಿರುವುದರಿಂದ ಪಿ.ಎಚ್.ಡಿ ಸಾಮಾನ್ಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಿ ಅರ್ಹತೆ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರನ್ನು ನೇಮಕ ಮಾಡಲು ಸಾಧ್ಯವಾಗುತ್ತಿಲ್ಲ.

ಮೈಸೂರು ವಿಶ್ವವಿದ್ಯಾಲಯವನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ. 13.02.2025 ಮತ್ತು 09.05.2025ರಂದು ಸಭೆಗಳನ್ನು ನಡೆಸಿದ್ದು, ಪ್ರಸ್ತುತ ಇಲ್ಲಿಯವರೆಗೆ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ. ಸಮಿತಿಯ ವರದಿ ನಿರೀಕ್ಷಿಸಲಾಗಿದ್ದು, ಸಮಿತಿ ನೀಡುವ ಶಿಫಾರಸ್ಸುಗಳನ್ನು, ಸಚಿವ ಸಂಪುಟದ ಮುಂದೆ ಮಂಡಿಸಿ ವಿಶ್ವವಿದ್ಯಾಲಯಗಳು ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಸದೃಢಗೊಳ್ಳಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಡಾ॥ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಮೈಸೂರು ವಿಶ್ವವಿದ್ಯಾಲಯದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿರುತ್ತಾರೆ. ಆದರೆ, ಬಹಳ ದೊಡ್ಡ ಸಮಸ್ಯೆಯನ್ನು ನಾನು ತಮ್ಮ ಮುಂದೆ ಹೇಳುತ್ತಿಲ್ಲ. ಇವೊತ್ತಿನ ದಿವಸ, ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪದವಿಗೆ ಏನು ವಿದ್ಯಾರ್ಥಿಗಳು ಎನ್‌ರೋಲ್ ಆಗಿರುತ್ತಾರೆ, ಅವರಿಗೆ ಅಗತ್ಯ ಗೈಡ್‌ಗಳ ಕೊರತೆ ಇರುವ ಕಾರಣದಿಂದಾಗಿ, ಅವರು ಅವಕಾಶ ವಂಚಿತರಾಗುತ್ತಿದ್ದಾರೆ. ಆ ಗೈಡ್‌ಗಳನ್ನು ಕೊಡಬೇಕಾದರೆ, ಈ ಹಿಂದೆ ಯು.ಜಿ.ಸಿ. ರೆಗ್ಯುಲೇಷನ್ಸ್ ಪ್ರಕಾರವೇ ಅವರನ್ನು ನೇಮಕ ಮಾಡಬೇಕಾಗಿತ್ತು. ಆದರೆ, ಒಬ್ಬ ಉಪ ಕುಲಪತಿಗಳು ಹಾಗೂ ಈ ಹಿಂದೆ ಯಾರು ಪ್ರಾಧ್ಯಾಪಕರು ಇದ್ದಾರೆ, ಆ ಬೋಧಕ ವರ್ಗದವರನ್ನು ಮಾರ್ಗದರ್ಶಕರಾಗಿ ಮಾಡಿ, ಹೆಚ್ಚಿನ ವಿದ್ಯಾರ್ಥಿಗಳನ್ನು ಅವರಿಗೆ ಹಂಚಿಕೆ ಮಾಡಿ ಅವರಿಗೆ ಮಾರ್ಗದರ್ಶನ ಮಾಡುವುದಕ್ಕೆ ಅವಕಾಶ ನೀಡಲಾಗಿತ್ತು. ಆದರೆ, ಇಲ್ಲಿ 8, 6, 4 ಈ ರೀತಿಯಾಗಿ ವಿಭಜನೆ ಮಾಡಿ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹಾಗೂ ಇತರರಿಗೆ ಕೊಡುವುದಕ್ಕೆ ಅವಕಾಶವಿದೆ. ಆದರೆ, ಇಲ್ಲಿ ಆ ಅವಕಾಶವನ್ನು ಮೀರಿ ಈ ಹಿಂದಿನವರು ಕೊಟ್ಟಿದ್ದರು. ಯು.ಜಿ.ಸಿ. ರೆಗ್ಯುಲೇಷನ್ಸ್ ಪ್ರಕಾರ ಆ ರೀತಿ ಕೊಡಬಾರದು ಎನ್ನುವಂಥದ್ದನ್ನು ನಾನು ಇತ್ತೀಚೆಗೆ ತಿಳಿದುಕೊಂಡಿರುತ್ತೇನೆ. ಆದರೆ, ಈಗ ಆಗಬೇಕಾಗಿರುವುದೇನೆಂದರೆ, ಆ ವಿದ್ಯಾರ್ಥಿಗಳು ಪಿಹೆಚ್.ಡಿ. ಯಿಂದ ವಂಚಿತರಾಗಬಾರದು ಮತ್ತು ಅವರಿಗೆ ಉತ್ತಮ ಮಾರ್ಗದರ್ಶಕರನ್ನು ಒದಗಿಸಬೇಕು. ಆ ರೀತಿ ಮಾರ್ಗದರ್ಶಕರನ್ನು ಒದಗಿಸಬೇಕಾದರೆ, ಬೇರೆ ಬೇರೆ ಕಾಲೇಜುಗಳಲ್ಲಿ ಅದಕ್ಕೆ ಸಂಬಂಧಪಟ್ಟಂತಹ ಪೇಪರ್ ಪ್ರೆಸೆಂಟ್ ಮಾಡಿರುವವರು ಇರಬಹುದು ಅಥವಾ ಆ ರೂಲ್ಸ್ ಪ್ರಕಾರವೇ ಇರುವಂಥವರು ಅಂದರೆ, ಒಬ್ಬ ಪಿಹೆಚ್.ಡಿ. ವಿದ್ಯಾರ್ಥಿಗೆ ಮಾರ್ಗದರ್ಶನ ಮಾಡಬೇಕಾದರೆ, ಅದಕ್ಕೆ ಕೆಲವು ವಿಚಾರಗಳು ಇರುತ್ತವೆ. ಅಂದರೆ, ಇಂತಿಷ್ಟು Journals ಅನ್ನು publication ಮಾಡಿರಬೇಕೆಂದು ಇದೆ. ಆ ರೀತಿ Journals ಅನ್ನು publication ಮಾಡಿರುವಂತಹ ಪಿಹೆಚ್.ಡಿ. ಪ್ರಾಧ್ಯಾಪಕರು ಬೇರೆ ಬೇರೆ ಅಫಿಲಿಯೇಟ್ ಆಗಿರುವಂತಹ ಕಾಲೇಜುಗಳಲ್ಲಿ,

ಸಂಶೋಧನಾ ಕಾಲೇಜುಗಳಲ್ಲಿ ಇರುತ್ತಾರೆ. ಅಂತಹ ಪ್ರಾಧ್ಯಾಪಕರನ್ನು ಇಲ್ಲಿಗೆ ಟ್ಯಾಗ್ ಮಾಡಿ, ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿಸುವುದಕ್ಕೆ ಅವಕಾಶ ಇದ್ದರೂ ಸಹ, ಇನ್ನು ಅಂತಹ ಕೆಲಸವನ್ನು ವೈಸ್ ಚಾನ್ಸೆಲರ್ ಅವರು ಏತಕ್ಕೆ ಮಾಡುತ್ತಿಲ್ಲ? ಏತಕ್ಕಾಗಿ ಆ ವಿದ್ಯಾರ್ಥಿಗಳನ್ನು ಅವಕಾಶ ವಂಚಿತರನ್ನಾಗಿ ಮಾಡುತ್ತಿದ್ದಾರೆ? ನಾನು ಕೇಳಿರುವ ಮಾಹಿತಿ ಪ್ರಕಾರ, ಎಸ್.ಸಿ. ಸಮಾಜ ಮತ್ತು ಹಿಂದುಳಿದ ಸಮಾಜ ಹಾಗೂ ಇತರೆ ಸಮುದಾಯದ ವಿದ್ಯಾರ್ಥಿಗಳು ಪಿಹೆಚ್.ಡಿ. ಓದುತ್ತಿದ್ದಾರೆ. ಆ ಮಕ್ಕಳಿಗೆ ವಿದ್ಯಾಭ್ಯಾಸ ಎನ್ನುವಂಥದ್ದು ಮರೀಚಿಕೆಯಾಗುತ್ತಿದೆ. ಅವರ ಕನಸು ಕೈಬಿಟ್ಟು ಹೋಗುತ್ತಿದೆ. ಹಾಗಾಗಿ, ಸರ್ಕಾರ ತಕ್ಷಣವೇ ಇದನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟವರಿಗೆ ತಕ್ಷಣವೇ ಒಂದು ಸಲಹೆಯನ್ನು ನೀಡಿ, ಬೇರೆ ಬೇರೆ ಕಾಲೇಜುಗಳಿಂದ ಪ್ರಾಧ್ಯಾಪಕರನ್ನು ನಿಯೋಜನೆ ಮಾಡಿಕೊಂಡು ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಟ್ಯಾಗ್ ಮಾಡುವುದಕ್ಕೆ ಅವಕಾಶವಿದೆಯಲ್ಲಾ, ಅದನ್ನು ಏತಕ್ಕೆ ಸರ್ಕಾರ ಅವರಿಗೆ ಹೇಳಿ ಮಾಡಿಸಬಾರದು ಎನ್ನುವಂಥದ್ದು ನನಗೆ ಬಂದಿರುವ ಪ್ರಶ್ನೆಯಾಗಿದೆ. ಅದಕ್ಕೆ ಸರ್ಕಾರದಿಂದ ಉತ್ತರ ಬೇಕಾಗಿರುತ್ತದೆ.

**ಡಾ॥ ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹೇಳುತ್ತಿರುವಂತಹ ವಿಚಾರಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಯು.ಜಿ.ಸಿ. ಯಲ್ಲಿ ನಿಖರವಾದಂತಹ ನಿಯಮಗಳನ್ನು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಒಬ್ಬ ಪ್ರಾಧ್ಯಾಪಕರ ಅಡಿಯಲ್ಲಿ 8 ಜನಕ್ಕಿಂತಲೂ ಹೆಚ್ಚು ಪಿಹೆಚ್.ಡಿ. ಪದವೀಧರರನ್ನು ಪಡೆಯುವುದಕ್ಕೆ ಅವಕಾಶ ಇತ್ತು. ಈ ಹಿಂದೆ ಕುಲಪತಿಗಳು ಆ ಕೆಲಸವನ್ನು ಮಾಡಿದ್ದಾರೆ. ಆದರೆ, 2018ರ ನಂತರ, ಯು.ಜಿ.ಸಿ. ಯ ನಿರ್ದಿಷ್ಟವಾದಂತಹ ಗೈಡ್‌ಲೈನ್ಸ್ ಏನು ಬಂದಿದೆ, ಅದರಡಿಯಲ್ಲಿ ಯಾವುದೇ 8 ಪಿಹೆಚ್.ಡಿ. ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಪಿಹೆಚ್.ಡಿ. ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

(ಮುಂದು)

(778) 19.08.2025 12.10 ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಎಂ.ಸಿ.ಸುಧಾಕರ್ (ಮುಂದು):-**

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಹ ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಕುಲಪತಿಗಳನ್ನು ಕರೆಸಿ ಮಾನ್ಯ ಸದಸ್ಯರು ಹೇಳಿದಂತೆ ಸಂಯೋಜಿತ ಕಾಲೇಜುಗಳಲ್ಲಿ ಯಾರು ಅರ್ಹ ಪ್ರಾಧ್ಯಾಪಕರಿದ್ದಾರೆ, ಅವರು ಏನು eligibility criteria fulfil ಮಾಡುತ್ತಾರೆ, ಪೇಪರ್ ಪ್ರೆಸೆಂಟೇಷನ್, ಮತ್ತೊಂದು ಆಗಿರಬಹುದು. ಅವರೆಲ್ಲರೂ ಯಾವ್ಯಾವ ನಿಯಮದಡಿ ಬರುತ್ತಾರೆ, ಅವರೆಲ್ಲರನ್ನೂ ಕಾಲ್

ಮಾಡುವಂಥ ಕೆಲಸವಾಗಿದೆ. ಈಗಾಗಲೇ ಅವರ ಸಂಪೂರ್ಣ ಮಾಹಿತಿಗಳನ್ನು ಕೇಳುವಂಥ ಕೆಲಸವಾಗಿದೆ. ಅದೆಲ್ಲವನ್ನೂ ಪಡೆದುಕೊಂಡು ಮಾನ್ಯ ಸದಸ್ಯರು ಹೇಳಿದ ಹಾಗೆ ಹೆಚ್ಚು ಮಂದಿ ಪಿಹೆಚ್.ಡಿ. ವಿದ್ಯಾಭ್ಯಾಸ ಪಡೆಯಲು ಯಾರು ಮುಂದೆ ಬಂದಿದ್ದಾರೆ, ಅವರಿಗೆ ಈಗಾಗಲೇ ಇರುವಂಥ ಪ್ರೊಫೆಸರ್‌ರವರೊಂದಿಗೆ ಟ್ಯಾಗ್ ಮಾಡಿ, ಪಿಹೆಚ್.ಡಿ. ಮಾಡಲಿಕ್ಕೆ ಪ್ರವೇಶಾತಿ ಪಡೆಯಲು ಅವಕಾಶ ಮಾಡಿಕೊಡುವಂಥ ಕೆಲಸವಾಗಿದೆ. ಬಹಳಷ್ಟು ಜನ ಇದನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವುದಿಲ್ಲ. ಸುಮಾರು 5 ವರ್ಷಗಳು, 6 ವರ್ಷಗಳು, 8 ವರ್ಷಗಳು, 9 ವರ್ಷಗಳವರೆಗೂ ಪಿಹೆಚ್.ಡಿ. ಮಾಡಿರುವುದನ್ನು ನಾವು ನೋಡಿದ್ದೇವೆ. ಇಂತಹ ಸಂದರ್ಭದಲ್ಲಿ ಏನಾಗುತ್ತದೆ ಎಂದರೆ, ಇರುವಂಥ ಗೈಡ್‌ನವರು ಮತ್ತೊಬ್ಬ ವಿದ್ಯಾರ್ಥಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಇರುವಂಥ ceiling ಪ್ರಕಾರ 8 ವಿದ್ಯಾರ್ಥಿಗಳನ್ನು ಮಾತ್ರ ತೆಗೆದುಕೊಳ್ಳಲು ಸೀಮಿತವಾಗಿರುವುದರಿಂದ ಈ ಒಂದು ಗೊಂದಲ / ಸಮಸ್ಯೆ ಸೃಷ್ಟಿಯಾಗಿದೆ. ಹಾಗಾಗಿ, ಅದರಲ್ಲಿಯೂ ಸ್ಟ್ರೀಮ್‌ಲೈನ್ ಮಾಡಬೇಕಾಗಿದ್ದು, ಆದಷ್ಟು ಬೇಗ ಪಿಹೆಚ್.ಡಿ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ, ಅವರು ಸಹ ಬೇಗ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ, ಬೇರೆಯವರಿಗೆ ಅವಕಾಶ ಕಲ್ಪಿಸುವಂಥ ಕೆಲಸವಾಗಬೇಕೆಂದು ನಿರ್ದಿಷ್ಟವಾಗಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈಗಾಗಲೇ ಮಾನ್ಯ ಉಮಾಶ್ರೀರವರು ಹೇಳಿದಂತೆ ಆ ಪ್ರಕ್ರಿಯೆಯನ್ನು ಬಹಳಷ್ಟು ತ್ವರಿತವಾಗಿ ಮಾಡಿ, ಯಾರು ಇವತ್ತು ಮಾರ್ಗದರ್ಶಕರ ಆಶ್ರಯವನ್ನು ಬಯಸುತ್ತಿದ್ದಾರೆ ಅಂಥವರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುತ್ತಿದ್ದೇವೆ.

**ಡಾ|| ಉಮಾಶ್ರೀ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಪಿಹೆಚ್.ಡಿ. ವಿದ್ಯಾಭ್ಯಾಸ ಮಾಡಲು ಸರ್ಕಾರದಿಂದ ಸಹಾಯಧನ ಸಿಗುತ್ತದೆ. ಬಹಳ ಮುಂಚೆಯೇ ಸಹಾಯಧನವನ್ನು ತೆಗೆದುಕೊಂಡು ಪಿಹೆಚ್.ಡಿ. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸದೇ ಅರ್ಧದಲ್ಲಿಯೇ ಕೈಬಿಟ್ಟು ವಿದ್ಯಾರ್ಥಿಗಳು ಹೋಗುತ್ತಿರುವುದನ್ನು ಗಮನಿಸಿದ್ದೇವೆ. ಹಾಗಾಗಿ, ಯಾವ ರೀತಿಯಲ್ಲಿ ಆ ಸಹಾಯಧನವನ್ನು ಕೊಟ್ಟು, ಪೂರ್ಣ ಪ್ರಮಾಣದಲ್ಲಿ ವಿದ್ಯಾಭ್ಯಾಸ ಪಡೆದುಕೊಳ್ಳಬೇಕೆಂಬುದರ ಬಗ್ಗೆ ಸಹ ವಿಚಾರ ಮಾಡಬೇಕು. ಈ ರೀತಿಯಲ್ಲಿಯೂ ನಡೆಯುತ್ತಿದ್ದು, ಈ ವಿಚಾರ ಸರ್ಕಾರದ ಗಮನಕ್ಕೂ ಬಂದಿರಬಹುದೆಂದು ಭಾವಿಸುತ್ತೇನೆ. ಇದರಲ್ಲಿಯೂ ಸ್ವಲ್ಪ ನಿಯಂತ್ರಣವನ್ನು ತರಬೇಕಾಗಿದೆ. ಜೊತೆಗೆ ಬೇರೆ ಬೇರೆ ಕಾಲೇಜುಗಳಿಂದ ಪಿಹೆಚ್.ಡಿ. ವಿದ್ಯಾಭ್ಯಾಸ ಪಡೆದಿರುವವರನ್ನು ಟ್ಯಾಗ್ ಮಾಡಿಕೊಳ್ಳುತ್ತೇವೆ ಎಂದು ಹೇಳಿರುವಂಥ ವಿಚಾರವನ್ನು ಸ್ವಾಗತ ಮಾಡುತ್ತೇನೆ. ಆದಷ್ಟು ಶೀಘ್ರವಾಗಿ ಮಾಡುವುದರ ಮೂಲಕ ಮಕ್ಕಳಿಗೆ ಅನುಕೂಲವಾಗಬೇಕು.

ತುಳಿತಕ್ಕೊಳಗಾದ ಪ್ರತಿಯೊಂದು ಸಮುದಾಯದ ಮಕ್ಕಳೆಲ್ಲರೂ ಸಹ ಉತ್ತಮ ವಿದ್ಯಾಭ್ಯಾಸ ಪಡೆಯಲು ದಯವಿಟ್ಟು ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಈ ಎಲ್ಲಾ ಸಮಸ್ಯೆಯನ್ನು ಮನಗಂಡಿದ್ದೇವೆ. 5 ವರ್ಷಗಳವರೆಗೂ ವಿದ್ಯಾಭ್ಯಾಸ ಪಡೆಯುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡಲು ಅವಕಾಶ ಇದ್ದು, ಅದರ ಮೇಲ್ಪಟ್ಟು ಸ್ಕಾಲರ್‌ಶಿಪ್ ಕೊಡುವಂಥ ಅವಕಾಶ ಇರುವುದಿಲ್ಲ. ಕೆಲವರು ಅದೇ ನಿಟ್ಟಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸುವಂಥದ್ದಾಗಿದೆ. ಹಾಗಾಗಿ, ಅವರೆಲ್ಲರಿಗೂ ನಿರ್ದಿಷ್ಟವಾಗಿ ಸೂಚನೆ ಕೊಟ್ಟು, ಆದಷ್ಟು ತ್ವರಿತವಾಗಿ ಪದವಿಯನ್ನು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಪ್ರೋಗ್ರಾಮ್ ಅನ್ನು ಪೂರ್ಣಗೊಳಿಸಲಿಲ್ಲವೆಂದರೆ, ಬೇರೆಯವರಿಗೆ ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಹೇಳಿದ್ದೇವೆ. ಈ ಸಂಬಂಧ ಸಿಂಡಿಕೇಟ್ ಸಭೆಯ ಮುಂದಿಟ್ಟು ಅದರ ಬಗ್ಗೆ ಚರ್ಚೆ ಮಾಡಿ, ನಂತರ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಸೂಚನೆ ಕೊಡುವುದರ ಮೂಲಕ ತ್ವರಿತವಾಗಿ ವಿದ್ಯಾಭ್ಯಾಸವನ್ನು ಪೂರೈಸಬೇಕೆಂಬ ಒತ್ತಡ ಹಾಕುವಂಥ ಕೆಲಸ ಮಾಡುತ್ತೇವೆ.

**ಡಾ॥ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಸಹಾಯಧನವನ್ನು ತೆಗೆದುಕೊಂಡು, ಹಣಕೋಸ್ಕರವೇ ಕೆಲವರು ಈ ರೀತಿ ಮಾಡುತ್ತಿದ್ದಾರೆ ಎಂಬ ಅಪವಾದ ಕೂಡ ಇದೆ. ಇದು ನಿಜವೇ? ಆ ರೀತಿ ಏನಾದರೂ ಇದ್ದ ಪಕ್ಷದಲ್ಲಿ ಅದನ್ನು ಸ್ಟ್ರೀಮ್‌ಲೈನ್ ಮಾಡಿ, ನಿಯಂತ್ರಣಗೊಳಿಸಲು ಸಾಧ್ಯತೆ ಇದೆಯೇ?

**ಡಾ॥ ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಬಹಳಷ್ಟು ಜನ ಕೆಲಸದ ಜೊತೆಗೆ ಈ ವಿದ್ಯಾಭ್ಯಾಸವನ್ನು ಮುಂದುವರೆಸಿಕೊಂಡು ಬರುತ್ತಾರೆ. ಕೆಲವರಿಗೆ ನಾನಾ ರೀತಿಯ ಸಮಸ್ಯೆಗಳಿದ್ದು, ನಿರ್ದಿಷ್ಟವಾಗಿ ಹಣಕ್ಕೋಸ್ಕರವೇ ಬರುತ್ತಾರೆ ಎಂಬುದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅವರಿಗೆ ಬೇರೆ ಬೇರೆ ಸಮಸ್ಯೆಗಳಿರುತ್ತವೆ, ಕೆಲಸದ ಒತ್ತಡಗಳು ಬೇರೆ ಬೇರೆ ಇರುತ್ತವೆ. ಆದಾಗ್ಯೂ ಕೂಡ ನಿರ್ದಿಷ್ಟ ಸಮಯದೊಳಗೆ ಪಿಹೆಚ್.ಡಿ. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವುದು ಬಹಳ ಮುಖ್ಯ. ಇದರಿಂದ ಬೇರೆಯವರಿಗೆ ತೊಂದರೆಯಾಗುವುದನ್ನು ತಪ್ಪಿಸುವಂಥ ಕೆಲಸವಾಗುತ್ತದೆ.

## 06. ವಿಶೇಷ ಸದನ ಸಮಿತಿ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ

**ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶ ವಿಸ್ತರಿಸುವುದು.**

---

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 22.04.2025 ರಿಂದ 6 ತಿಂಗಳು ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪರವರು ಮಂಡಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

**ಪ್ರಸ್ತಾವ ಏನೆಂದರೆ;**

"ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 06 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸದನದ ಒಪ್ಪಿಗೆ ಪಡೆಯುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಕಾಲಾವಕಾಶ ವಿಸ್ತರಣೆಗೆ ಸದನದ ಅನುಮೋದನೆ ದೊರೆಯಿತು**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಶಿರವರು ಹಾಗೂ ಶ್ರೀ ಮಂಜುನಾಥ ಭಂಡಾರಿಯವರು ಎರಡು ವಿಚಾರಗಳನ್ನು ಮಂಡಿಸಿದ್ದಾರೆ. ಮಾನ್ಯ ಶಶೀಲ್ ಜಿ.ನಮೋಶಿಯವರು ನ್ಯಾಷನಲ್ ಎಜುಕೇಷನ್ ಪಾಲಿಸಿ (ಎನ್.ಇ.ಪಿ.) ಹಾಗೂ ಸ್ಟೇಟ್ ಎಜುಕೇಷನ್ ಪಾಲಿಸಿ (ಎಸ್.ಇ.ಪಿ.) ಗೆ ಸಂಬಂಧಿಸಿದಂತೆ ಬಹಳ ಗಂಭೀರವಾದ ವಿಚಾರವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ದೇಶದಲ್ಲಿರುವಂಥ ಯಾವುದೇ ಶಾಸಕಾಂಗ ಸಭೆಯಲ್ಲಿ ಚರ್ಚೆಯಾಗಿಲ್ಲ. ಹಾಗಾಗಿ, ಸದರಿ ವಿಚಾರವಾಗಿ ಚರ್ಚೆಯಾಗಬೇಕೆಂದರೆ, ವಿಶೇಷ ಸಭೆಯನ್ನು ಕರೆದು ತಾವು ಚರ್ಚೆ ಮಾಡಲು ಅವಕಾಶ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಇಡೀ ದೇಶದ ಶಾಸಕಾಂಗದ ಇತಿಹಾಸದಲ್ಲಿ ಯಾವುದೇ ಶಾಸಕರು ಆಯ್ಕೆಯಾಗಿ 45 ವರ್ಷಗಳ ಕಾಲ ಸುದೀರ್ಘವಾಗಿ ಸೇವೆ ಸಲ್ಲಿಸಿರುವಂಥ ವಿಚಾರವನ್ನು ಮಾನ್ಯ ಮಂಜುನಾಥ ಭಂಡಾರಿಯವರು ಹೇಳಿದ್ದಾರೆ. ಆದ್ದರಿಂದ ಆ ವಿಚಾರವಾಗಿ ತಮಗೆ ಅಭಿನಂದನೆ ಸಲ್ಲಿಸಲಿಕ್ಕೆ ಅವಕಾಶ ಕಲ್ಪಿಸಬೇಕೆಂದು ಕೇಳುತ್ತೇನೆ.

**ಸಭಾಪತಿಯವರು:-** ಗಮನ ಸೆಳೆಯುವ ಸೂಚನೆ ಇನ್ನೊಂದು ವಿಚಾರ ಇದ್ದು, ಅದು ಮುಗಿಯಲಿ. ಆಮೇಲೆ ಅಭಿನಂದನೆಗೆ ಅವಕಾಶ ಕಲ್ಪಿಸುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಅಡಿ ನನಗೆ ಸಂಬಂಧಿಸಿದಂಥ ವಿಷಯ ಇದೆ.

**ಸಭಾಪತಿಯವರು:-** ಅದಕ್ಕೆ ಇನ್ನು ಉತ್ತರ ಬಂದಿಲ್ಲ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲಿಯೇ ಇರುವುದರಿಂದ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ಹಾಗಾಗಿ, ನಾನು ಸದರಿ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಸಭಾಪತಿಯವರು:-** ಆಗಬಹುದು.

**07. ಗಮನ ಸೆಳೆಯುವ ಸೂಚನೆಗಳು (ಮುಂದುವರೆದಿದ್ದು)**

**ಆ) ವಿಷಯ:- 1995ರ ನಂತರದಲ್ಲಿ ಸ್ಥಾಪನೆಯಾಗಿರುವ ಕನ್ನಡ ಮಾಧ್ಯಮ ಖಾಸಗಿ ಶಾಲಾ ಕಾಲೇಜುಗಳನ್ನು ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ.**

-----

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 1995ರ ನಂತರದಲ್ಲಿ ಸ್ಥಾಪನೆಯಾಗಿರುವ ಕನ್ನಡ ಮಾಧ್ಯಮ ಖಾಸಗಿ ಶಾಲಾ ಕಾಲೇಜುಗಳನ್ನು ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಲಿಖಿತವಾಗಿ ನಾನು ಉತ್ತರವನ್ನು ಕೊಡುತ್ತೇನೆ. ಕಳೆದ ಅಧಿವೇಶನದಲ್ಲಿ ಸಹ ಮಾನ್ಯ ಎಸ್.ಯತೀಂದ್ರರವರು ಒಳಗೊಂಡಂತೆ ಕೆಲವು ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಬಹಳ ದಿನಗಳಿಂದ ಬೇಡಿಕೆ ಇದೆ. 2015 ರಿಂದ 2025ನೇ ಸಾಲಿನವರೆಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಇದುವರೆಗೂ ಭರ್ತಿ ಮಾಡುವಂಥ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಇದು ತಮಗೂ ಸಹ ಚೆನ್ನಾಗಿ ಗೊತ್ತಿದೆ. ಇದೇ ಕ್ಷೇತ್ರದಲ್ಲಿ ತಾವು ಕೂಡ 50 ವರ್ಷಗಳಿಗಿಂತ ಹೆಚ್ಚಿನ ಕಾಲಗಳವರೆಗೂ ಸೇವೆ ಸಲ್ಲಿಸಿದ್ದೀರಿ. ಕನ್ನಡ ಮಾಧ್ಯಮ ಶಾಲೆಗಳ ಪರಿಸ್ಥಿತಿ ಬಹಳ ಗಂಭೀರವಾಗಿವೆ. ಸರ್ಕಾರಿ ಶಾಲೆಗಳು ತೆರೆಯದಂಥ ಸಂದರ್ಭದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆದು  ನಾವು ಇಂಗ್ಲೀಷ್ ಬೋಧನೆ ಮಾಡುವುದಿಲ್ಲ,... ಇವತ್ತು ಸರ್ಕಾರದ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲೀಷ್ ವಿಷಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಮಾಧ್ಯಮಕ್ಕೆ ಒತ್ತು ನೀಡುತ್ತೇವೆ ಎಂದು ಅನೇಕ ಶಾಲೆಗಳನ್ನು ನಡೆಸಲಾಗುತ್ತಿದೆ. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಗುಣಮಟ್ಟವನ್ನು ಕಾಪಾಡಿ, ಚೆನ್ನಾಗಿ ಶಾಲೆಗಳನ್ನು ಮುನ್ನಡೆಸುತ್ತೇವೆ ಎಂದು ಹೇಳುವ ಮೂಲಕ ಅನೇಕ ಶಾಲಾ-ಕಾಲೇಜುಗಳನ್ನು ಮುಂದೆ ತರುವಂಥ ಕೆಲಸ ಮಾಡುತ್ತಿದ್ದಾರೆ. ತಮ್ಮದೇ sources ನಿಂದ ಜಮೀನು ತೆಗೆದುಕೊಂಡು ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೆ, ಇವತ್ತು ಸಂಬಳ ನೀಡಬೇಕೆಂದರೆ ಬಹಳ ಕಷ್ಟಕರವಾಗಿದೆ. ಬಹಳ ಗಂಭೀರವಾದ ಸ್ಥಿತಿ ಇದ್ದು, ಕಲ್ಯಾಣ ಕರ್ನಾಟಕ ಭಾಗದಿಂದ ಸಾವಿರಾರು ಮಂದಿ ಬಂದು ಧರಣಿ ಕೂತಿದ್ದಾರೆ.

**ಸಭಾಪತಿಯವರು:-** ಯಾವಾಗ ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಕುರಿತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಹಣಕಾಸಿನ ಖಾತೆಯನ್ನು ಹೊಂದಿದ್ದು ಅವರು ಸಹ ಒಪ್ಪಿಗೆ ಸೂಚಿಸಿದ್ದಾರೆ. ಎರಡು ಬಾರಿ ಸದರಿ ವಿಚಾರದ ಕುರಿತು ಚರ್ಚೆ ಮಾಡಿದ್ದೇನೆ. First financial constraint ಎಂದು ಬಂತು.

**ಸಭಾಪತಿಯವರು:-** ಸರ್ಕಾರವೇ ಒಪ್ಪಿಗೆ ಸೂಚಿಸಿದ್ದಾರೆ ಅಲ್ಲವೇ?

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಚಾರದಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್ ಎಂದು ಯಾವುದೇ ಅಧಿಕಾರಿಯವರಿಗೆ ಕಡತ ಸಲ್ಲಿಸಿಲ್ಲ. ಏಕೆಂದರೆ, ಕನ್ನಡವನ್ನು ಉಳಿಸುವಂಥ ಕೆಲಸವನ್ನು ಯಾರೆಲ್ಲಾ ಸಂಸ್ಥೆಗಳು ಮಾಡುತ್ತಿದ್ದಾರೆ, 1995 ರ ನಂತರ ಏನೇನು ಅನುದಾನವನ್ನು ಒಳಪಡಿಸಿಲ್ಲ, ಅದರ ಬಗ್ಗೆ ಕನಿಷ್ಠ 10 ವರ್ಷಗಳವರೆಗಾದರೂ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ಮನವಿಯನ್ನು ಮಾಡಿದ್ದು, ಅವರು ಸಹ ಈ ವಿಚಾರವಾಗಿ ಪಾಸಿಟಿವ್ ಆಗಿದ್ದಾರೆ. ಆದಷ್ಟು ಬೇಗ ತೀರ್ಮಾನ ಕೈಗೊಂಡು, ಕನ್ನಡ ಭಾಷೆಯನ್ನು ಉಳಿಸುವಂಥ ಜವಾಬ್ದಾರಿ ತೆಗೆದುಕೊಳ್ಳಲಾಗುತ್ತದೆ. ಒಂದು ಕಡೆ ಶಾಲೆಗಳಲ್ಲಿ ಕೋರಿಕೆ ಮಾಡುವುದು ನನ್ನ ಹತೋಟಿಗೆ ಬರುವುದಿಲ್ಲ. ಆದರೆ, ಕನ್ನಡ ಮಾಧ್ಯಮವನ್ನು ಉಳಿಸಬೇಕೆಂದರೆ, ಅದಕ್ಕೆ ಸಲ್ಲಬೇಕಾದ ಗೌರವವನ್ನು ಶೇಕಡ 100 ರಷ್ಟು ನಮ್ಮ ಸರ್ಕಾರವು ಮಾಡುತ್ತದೆ. 2020ನೇ ಇಸವಿಗೆ ಸಂಬಂಧಿಸಿದಂತೆ ಏನಿದೆ, ಆ ವಿಚಾರವಾಗಿ ಮುಂದಿನ ದಿನಗಳಲ್ಲಿ ಏನಾದರೂ 2020ನೇ ಇಸವಿ ನಂತರ ಶಿಕ್ಷಕರ ನೇಮಕಾತಿ ಕೊಡಲು ಸಾಧ್ಯವಾಗಲಿಲ್ಲವೆಂದರೆ, ಕೊನೆಪಕ್ಷ ಅತಿಥಿ ಶಿಕ್ಷಕರನ್ನು ನೇಮಕ ಮಾಡಲು ಎಷ್ಟು ಖರ್ಚಾಗುತ್ತದೆ ಎಂಬುದರ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸರ್ಕಾರದಿಂದ ಅದಕ್ಕೂ ಸಹ ಅನುಮತಿ ತೆಗೆದುಕೊಳ್ಳುತ್ತೇವೆ ಎಂಬ ವಿಶ್ವಾಸ ಇದ್ದು, ಆದಷ್ಟು ಬೇಗ ಮಾಡುತ್ತೇನೆ. ಕನ್ನಡ ಮಾಧ್ಯಮಗಳಿಗೆ ಶಿಕ್ಷಕರ ನೇಮಕಾತಿ ಮಾಡುವುದು ಅವಶ್ಯಕತೆ ಇದೆ.

**ಸಭಾಪತಿಯವರು:-** ಸರ್ಕಾರವೇ ಶಿಕ್ಷಕರನ್ನು ತುಂಬಬೇಕೆಂದು ಹೇಳಿದ್ದಾರೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಆದಷ್ಟು ಬೇಗ ತೀರ್ಮಾನ ಕೈಗೊಂಡು ಅವಕಾಶ ಕಲ್ಪಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಗೊಂದಲ ಮಾಡಿಕೊಳ್ಳಬೇಡಿ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರೊಂದಿಗೆ ಚರ್ಚಿಸಿ, ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿ ಸರ್ಕಾರ ಆಜ್ಞೆ ಹೊರಡಿಸಿದೆ. ಮತ್ತೇನು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡುತ್ತೀರಿ? 1995 ರಿಂದ 2000 ರವರೆಗೂ ಖಾಲಿ ಇದ್ದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಆಗಿದೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅನುದಾನಿತ ಶಾಲೆಗಳಿಗೆ 1995 ರಿಂದ 2000 ರವರೆಗೂ ಖಾಲಿ ಇದ್ದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಂಥ ಕೆಲಸ ಇನ್ನೂ ಆಗಿಲ್ಲ. 2016 ರಿಂದ 2020 ರವರೆಗೂ ಖಾಲಿ ಇರುವಂಥ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ತೀರ್ಮಾನ ಮಾಡಲಾಗಿದೆ.

**ಸಭಾಪತಿಯವರು:-** ಅದನ್ನೇ ನಾನು ಹೇಳುತ್ತಿರುವುದು.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಶಿಯವರು ಕೇಳುತ್ತಿರುವುದೇನೆಂದರೆ, 1995ರ ಮೇಲೆ,... ನಾನು ಸದನದ ಮೂಲಕ ಹೇಳಬಯಸುವುದೇನೆಂದರೆ, ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸುವಂಥ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಏನಿದೆ, ಆದಷ್ಟು ಬೇಗ ಒಳ್ಳೆಯ ತೀರ್ಮಾನವನ್ನು ದೃಢವಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಈ ವಿಚಾರವನ್ನು ಚರ್ಚೆ ಮಾಡಿದ್ದೇನೆ.

(ಮುಂದು)

(779) 19.08.2025/12.20/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹತ್ತು ವರ್ಷ ಎಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯದು. 1995 ರಿಂದ 2005 ರ ರವರೆಗೆ ಒಂದು ಆದೇಶ ಮಾಡಿ, ಅದನ್ನು ಬರವಣಿಗೆಯಲ್ಲಿ ಕೊಟ್ಟರೆ ಬಹಳ ಉತ್ತಮವಾಗುತ್ತದೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**೦೮. ಅಭಿನಂದನೆ.**

**ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರು 45 ವರ್ಷಗಳ ಸುದೀರ್ಘಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುವ ಕುರಿತು.**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸತತವಾಗಿ ಸುಮಾರು 45 ವರ್ಷಗಳ ಕಾಲ ಸುದೀರ್ಘವಾಗಿ ಈ ಸದನದ ಸದಸ್ಯರಾಗಿ ರಾಜ್ಯ ಮತ್ತು ರಾಷ್ಟ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಬಹಳ ಶ್ಲಾಘನೆ ಮಾಡಿ ಎಲ್ಲಾ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಈ ವಿಚಾರದ ಬಗ್ಗೆ ಮಾನ್ಯ ಮಂಜುನಾಥ್ ಭಂಡಾರಿಯವರು ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಈಗಾಗಲೇ ಒಂದು ಮನವಿಯನ್ನು ಮಾಡಿದ್ದರು. ಅದಕ್ಕೆ ನಾನು ಕೂಡ ಧ್ವನಿ ಸೇರಿಸಿದ್ದೇನೆ. ನನಗೆ ಸರಿಯಾದ ಜ್ಞಾಪಕ ಇದೆ ಎನ್ನುವುದಾದರೆ, 1980 ನೇ ಇಸವಿಯಲ್ಲಿ ಕಾಂಗ್ರೆಸ್‌ನಲ್ಲಿ ಯುವಕರಿದ್ದಂತಹ ಸಂದರ್ಭದಲ್ಲಿ ತಾವು ಕೂಡ ಒಳ್ಳೆಯ ಕಬಡ್ಡಿ ಆಟಗಾರರಾಗಿದ್ದು, ಇಡೀ ರಾಷ್ಟ್ರದ ಇತಿಹಾಸವನ್ನು ನೋಡಿದಾಗ, ಶಿಕ್ಷಕರ ಕ್ಷೇತ್ರದಲ್ಲಿ ನಲವತ್ತು ವರ್ಷಗಳ ಕಾಲ ಸತತವಾಗಿ ಆಯ್ಕೆಯಾಗಿ ಬಂದಿರುವ ವ್ಯಕ್ತಿ ಯಾರೂ ಸಹ ಈ ದೇಶದಲ್ಲಿ ಇಲ್ಲ ಎಂಬುದು ನನ್ನ ಭಾವನೆ. ಈ ಹಿಂದೆ ಪ್ರೊಫೆಸರ್ ರಂಗ ಎಂಬುವರು ಆಂಧ್ರ ಪ್ರದೇಶದಿಂದ ಹತ್ತು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ಅವರನ್ನು ಬಿಟ್ಟರೆ, ಈಗ ಇರುವಂತಹ ಇತಿಹಾಸವನ್ನು ನೋಡಿದಾಗ, ತಾವೇ ಈ ಇತಿಹಾಸವನ್ನು ಸೃಷ್ಟಿ ಮಾಡಿದ್ದೀರಿ. ಈ ಒಂದು ಇತಿಹಾಸವನ್ನು ನೋಡಿದರೆ, ರಾಜ್ಯ ಮತ್ತು ರಾಷ್ಟ್ರಕ್ಕೆ ಒಳ್ಳೆಯ ಮಾದರಿಯಾಗಿ ತಮ್ಮ ಅಪಾರವಾದ ಜ್ಞಾನವನ್ನು ಈ ಸದನಕ್ಕೆ ಕೊಡುಗೆಯನ್ನು ಕೊಟ್ಟಿದ್ದೀರಿ. ಈ ಮೇಲ್ಮನೆಗೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರುಗಳು ಮತ್ತು ಮುಂದೆ ಬರುವಂತಹ ಸದಸ್ಯರುಗಳಿಗೆ ಸದನವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಮತ್ತು ಸದನದಲ್ಲಿ ಯಾವ ರೀತಿ ಇರಬೇಕು ಎಂಬುದನ್ನು ಮಾದರಿಯಾಗಿ ನಮಗೆಲ್ಲರಿಗೂ ದಾರಿ ದೀಪವಾಗಿ ತೋರಿಸಿಕೊಟ್ಟಿದ್ದೀರಿ. ಸದನವನ್ನು ನಡೆಸುವಾಗ, ತಾವೊಬ್ಬ ಸಭಾಪತಿಯವರನ್ನಾಗಿ ನಾನು ನೋಡಿದ್ದೇನೆ. ತಾವು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಾನು ತಮ್ಮನ್ನು ಆಗ ನೋಡಿಲ್ಲ. ತಾವು ಸಭಾಪತಿಯಾಗಿ ನಡೆಸುವಾಗ, ದೊಡ್ಡದಾಗಿ ತಮ್ಮನ್ನು ಇಡೀ ರಾಜ್ಯ ಪ್ರಶಂಸೆ ಮಾಡಿದ್ದು ಏನೆಂದರೆ, ತಾವು ಸಭಾಪತಿಯಾಗಿದ್ದ ಒಂದು ಕ್ಷಣದಲ್ಲಿಯೂ ಸಹ ತಾವು ಯಾವ ಪಕ್ಷದ ರಾಜಕೀಯ ಸದಸ್ಯರಾಗಿದ್ದಾರೋ, ಅದಕ್ಕೆ ರಾಜೀನಾಮೆ ಕೊಟ್ಟುಬಿಟ್ಟು, ನಾನು ಯಾವುದೇ ಪಕ್ಷದ ಸದಸ್ಯನಲ್ಲ. ನಾನು ಇಲ್ಲಿ ನಿಷ್ಪಕ್ಷಪಾತವಾಗಿ ಈ ಸದನವನ್ನು ನಡೆಸುತ್ತೇನೆ ಎಂಬ ಬಗ್ಗೆ ಇಡೀ ರಾಜಕೀಯ ಕ್ಷೇತ್ರದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದು. ಅದರಲ್ಲೂ ಸಹ ಈ ಕಾಲಘಟ್ಟದಲ್ಲಿರುವಂತಹ ಕಲುಷಿತ ರಾಜಕೀಯ ಹವಮಾನದಲ್ಲಿ ತಾವು ತೆಗೆದುಕೊಂಡಿರುವಂತಹ ತೀರ್ಮಾನ ಬಹಳ ಮುಂದೆ ಬರುವಂತಹ ಪೀಳಿಗೆಗೂ ಸಹ ಸದನದ ಗೌರವವನ್ನು ಯಾವ ರೀತಿ ಎತ್ತಿ ಕಾಪಾಡಬೇಕು ಮತ್ತು ಹೇಗೆ

ನಿಷ್ಪಕ್ಷಪಾತವಾಗಿರುವಂತಹ ಕೆಲಸವನ್ನು ಮಾಡಬೇಕು ಎಂಬ ಬಗ್ಗೆ ತಾವು ಮುಂದಿನ ದಿನಗಳಲ್ಲಿ ತೋರಿಸಿಕೊಟ್ಟಿದ್ದೀರಿ. ನಾವೆಲ್ಲರೂ ಸಹ ರಾಜಕೀಯ ಪಕ್ಷಕ್ಕೆ ಸೇರಿಕೊಂಡಿರುವಂತಹವರು. ಆ ಒಂದು ಸಂವಿಧಾನಿಕ ಪೀಠದಲ್ಲಿ ಕುಳಿತುಕೊಂಡಾಗ, ತಾವು statesman ತರಹ behave ಮಾಡಿರುವುದನ್ನು ನಾನು ಹಲವಾರು ಬಾರಿ ನೋಡಿದ್ದೇನೆ. ಆಳ್ವಿಕೆ ಮಾಡಿರುವ ಪಕ್ಷಗಳಿಗೂ ಬಿಟ್ಟಿಲ್ಲ ತಮ್ಮ ಹಳೆಯ ಪಕ್ಷದ ಜನತಾ ದಳ ಮತ್ತು ಬಿ.ಜೆ.ಪಿ., ಇರಬಹುದು. ಎಲ್ಲಾ ಪಕ್ಷದವರನ್ನು ಸಹ ಬೇಧಭಾವ ಇಲ್ಲದೇ ಈ ಸದನದ ಎಲ್ಲರನ್ನು ಸಹ ಸಮಾನವಾಗಿ ನೋಡಿದ್ದೀರಿ. ನನಗೆ ಒಂದೇ ಒಂದು ಬೇಸರವೇನೆಂದರೆ, ತಮ್ಮ ಕುರ್ಚಿಗೆ ಸಂಬಂಧಪಟ್ಟಂತೆ ಯಾವುದೇ ಪೊಲೀಸ್ ಅಧಿಕಾರಿಗಳಾಗಲೀ, ಅದನ್ನು ಪ್ರಶ್ನೆ ಮಾಡಿದಾಗ, ತಾವು ಅವರನ್ನು ಇಲ್ಲಿಗೆ ಕರೆಯಿಸಿ, ಅವರಿಗೆ ಛೀಮಾರಿ ಹಾಕಬೇಕಾಗುತ್ತದೆ. ಅದು ಒಂದು ಕೆಲಸ ಮಾತ್ರ ಆಗಲಿಲ್ಲ. ಈ ಸದನಕ್ಕೆ ತಾವು ಸಭಾಪತಿಯಾಗಿರುತ್ತೀರಿ ಹಾಗೂ, the Chairman is the custodian of this House. ಅದಕ್ಕೆ ಯಾವುದೇ ಗೌರವ ಧಕ್ಕೆ ಬಂದಾಗ, ತಾವು ತೀರ್ಮಾನವನ್ನು ತೆಗೆದುಕೊಂಡು, ಆ ವಿಚಾರದಲ್ಲಿ ಪೊಲೀಸ್ ಅಧಿಕಾರಿಗಳು ಇರಬಹುದು ಅಥವಾ ಯಾವ ಅಧಿಕಾರಿಗಳಾದರೂ ಇರಬಹುದು. ಒಬ್ಬ ಸದಸ್ಯರನ್ನು ಮುಟ್ಟಬೇಕೆಂದರೆ, ತಮ್ಮ ಅನುಮತಿಯಿಲ್ಲದೇ ಯಾರೂ ಸಹ ಮುಟ್ಟುವ ಆಗಿಲ್ಲ. ಬಿ.ಜೆ.ಪಿ., ಕಾಂಗ್ರೇಸ್, ಜನತಾದಳ ಪ್ರಶ್ನೆಯೇ ಇಲ್ಲ. ನಾವು ಇಲ್ಲಿ ಒಂದು ರಾಜ್ಯವನ್ನು ಪ್ರತಿನಿಧಿಸುವಂತಹ ಈ ಒಂದು ಸದನ. ಈ ಒಂದು ಗೌರವವನ್ನು ಬಹಳಷ್ಟು ಕಾಪಾಡಿ ಮತ್ತು ನಮ್ಮೆಲ್ಲರ ಗೌರವವನ್ನು ಸಹ ಕಾಪಾಡಿರುವುದಕ್ಕೋಸ್ಕರ, ಈಗಾಗಲೇ ನಲವತ್ತೈದು ವರ್ಷಗಳಾಗಿದ್ದು, ಈಗಾಗಲೇ ಎಂಟು ಬಾರಿ ಗೆದ್ದಿದ್ದೀರಾ ಎಂಬುದು ಕಾಣುತ್ತದೆ. ಇನ್ನೂ ಮುಂದಿನ ದಿನಗಳಲ್ಲಿ ಒಂಭತ್ತನೇ ಬಾರಿ ಸಹ ಗೆದ್ದು, ಇಡೀ ದೇಶದಲ್ಲಿ ಒಂದು ಇತಿಹಾಸವನ್ನು ಸೃಷ್ಟಿ ಮಾಡಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಒಂದು ಅಭಿನಂದನೆಯನ್ನು ತಮಗೆ ಸಲ್ಲಿಸುತ್ತಾ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿರಿಯ ನಾಯಕರಾದಂತಹ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಈಗಾಗಲೇ ಹಲವಾರು ವಿಷಯಗಳನ್ನು ಮುಂದಿಟ್ಟಿದ್ದಾರೆ. ನಲವತ್ತೈದು ವರ್ಷಗಳ ಕಾಲ ಈ ಸದನದ ಸದಸ್ಯರಾಗಿ ತಾವು ಕೆಲಸ ಮಾಡಿರುವ ಬಗ್ಗೆ ದಿನ ಪತ್ರಿಕೆಗಳಲ್ಲಿ ಬಂದಿತ್ತು. ನಾವು ಹೋಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕೆಂಬ ಮಾತನ್ನು ನಿನ್ನೆ ದಿವಸ ನನ್ನ ಮಿತ್ರರಾದ ದಿನೇಶ್ ಗೂಳಿಗೌಡರು ಹೇಳಿದರು. ತಾವು ವಿಧಾನ ಪರಿಷತ್ತಿನ ಮೆಟ್ಟಿಲನ್ನು ಮೆಟ್ಟಬೇಕಾದಂತಹ ಸಂದರ್ಭದಲ್ಲಿ ನಾವು ಇನ್ನೂ ರಾಜಕೀಯ ಹೊಸ್ತಿಲಿನಲ್ಲಿದ್ದಂತಹವರು. ತಾವು ಕಳೆದ ನಲವತ್ತೈದು ವರ್ಷಗಳಲ್ಲಿ ಎಂಟು ಬಾರಿ ಸತತವಾಗಿ ಚುನಾವಣೆಯಲ್ಲಿ ಗೆದ್ದು, ಈ ಮೇಲ್ಮನೆಯ ಘನತೆಯನ್ನು ಎತ್ತಿ ಹಿಡಿದಿದ್ದೀರಾ ಎನ್ನುವುದು ನಮ್ಮೆಲ್ಲರಿಗೂ ಬಹಳ ಸಂತೋಷದ ವಿಷಯವಾಗಿದೆ. ಅದರಲ್ಲೂ ನಾನು ಪತ್ರಿಕೆಗಳನ್ನು ಓದುತ್ತಿರುವಾಗ, ಪತ್ರಿಕೆಗಳಲ್ಲಿ ನೋಡಬೇಕಾದರೆ, ತಾವು ಸುಮಾರು ಎಂಟು ಬಾರಿ ಶಾಸಕರಾಗಿ ಗೆದ್ದಂತಹವರು. ತಾವು ಹದಿನೆಂಟು ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡಿದಂತಹವರು. 432 ಜನ ಸಚಿವರ ಜೊತೆಯಲ್ಲಿ ಇದ್ದವರು. ಕಳೆದ

ನಲವತ್ತೈದು ವರ್ಷಗಳಲ್ಲಿ ಐದು ಸಾವಿರ ಜನ ಶಾಸಕರು ತಮ್ಮ ಒಳನಾಡಿಗಳಾಗಿದ್ದರು. ನಮ್ಮ ದೇಶದ ಇತಿಹಾಸವನ್ನು ನೋಡಿದರೆ, ಇಷ್ಟೊಂದು ಚುನಾಯಿತ ಪ್ರತಿನಿಧಿಗಳ ಜೊತೆ ಸತತವಾಗಿ ಒಬ್ಬರಿದ್ದಾರೆ ಎನ್ನುವುದನ್ನು ಯಾರು ಮರೆಯುವುದಕ್ಕೆ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಪತ್ರಿಕೆಗಳಲ್ಲಿ ಕೆಲವೊಂದು ವಿಷಯಗಳನ್ನು ನಾನು ಓದುತ್ತಿರುವಾಗ, ಕೆಲವು ಆಶ್ಚರ್ಯಕರವಾದ ಸಂಗತಿ ಮತ್ತು ನಮ್ಮಂಥವರಿಗೆ ಅದು ದಾರಿ ದೀಪವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಹದಿನೈದು ವರ್ಷಗಳ ಹಿಂದೆ, ತಾವು ತಮ್ಮ ಊರಿನಲ್ಲಿ "ಅವ್ವ" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿ, ತಮ್ಮ ಸ್ವಂತ ಏಳು ಎಕರೆ ಜಾಗವನ್ನು ಸರ್ಕಾರಕ್ಕೆ ದಾನವನ್ನಾಗಿ ಕೊಟ್ಟಿದ್ದೀರಿ. ಸುಮಾರು ೩೦ ಕೋಟಿ ರೂಪಾಯಿಗಳ ವೆಚ್ಚವನ್ನು ಮಾಡಿ ಅದರಲ್ಲಿ ಒಂದು ಶಾಲೆಯನ್ನು ಕಟ್ಟಿ, ಇವತ್ತು ಬಡ ಜನರಿಗೆ, ದೀನ ದಲಿತರು ಮತ್ತು ಯುವಕರಿಗೆ ಒಂದು ದಾರಿ ದೀಪವಾಗಿದ್ದೀರಾ ಎಂದು ಹೇಳಿದರೆ, ಅದನ್ನು ತಮ್ಮಿಂದ ಇವತ್ತು ಚುನಾಯಿತ ಪ್ರತಿನಿಧಿಗಳೆಲ್ಲರೂ ಕಲಿಯಬೇಕಾಗಿದೆ. ಏಕೆಂದರೆ, ನಾವು ಚುನಾವಣೆಯಿಂದ ಗೆದ್ದು ಬಂದ ಮೇಲೆ ನಮ್ಮ ಕೆಲಸವೇನು? ಮತ್ತು ನಮ್ಮ ಜವಾಬ್ದಾರಿ ಏನು ಎಂಬುದು ನಮಗೆ ಗೊತ್ತಿರುವುದಿಲ್ಲ. ತಾವು ಒಂದು ಸ್ಪಷ್ಟವಾದ ಜವಾಬ್ದಾರಿಯನ್ನು, ಸಮಾಜಕ್ಕೆ ಏನು ಮಾಡಬೇಕು ಎನ್ನುವುದನ್ನು ನಮಗೆಲ್ಲರಿಗೂ ತೋರಿಸಿಕೊಟ್ಟಿದ್ದೀರಾ ಎಂದು ನಮಗೆ ಹೇಳುವುದಕ್ಕೆ ಬಹಳ ಸಂತೋಷವಾಗುತ್ತದೆ. ತಮ್ಮ ಜೊತೆಯಿದ್ದಂತಹ ಇಲ್ಲಿರುವಂತಹ ಎಲ್ಲಾ ಮಾನ್ಯ ಶಾಸಕರುಗಳು ತಮ್ಮೊಂದಿಗೆ ಇದ್ದಂತಹವರು ಮತ್ತು ತಮ್ಮ ಅನುಭವನ್ನು ಪಡೆದಂತಹವರು. ಇನ್ನೊಂದು ಆಶ್ಚರ್ಯಕರವಾದ ವಿಷಯವೇನೆಂದರೆ, ನಾವೆಲ್ಲರೂ ಚುನಾವಣೆಯಲ್ಲಿ ಗೆದ್ದಂತಹ ಸಂದರ್ಭದಲ್ಲಿ ನನ್ನ ಮಗ ಗೆಲ್ಲಬೇಕು. ನನ್ನ ಗಂಡ ಗೆಲ್ಲಬೇಕು ಮತ್ತು ನನ್ನ ಹೆಂಡತಿ ಗೆಲ್ಲಬೇಕು ಎಂದು ನಮ್ಮ ಮನೆಗಳಲ್ಲಿ ದೇವರ ಮೇಲೆ ಹರಿಕೆ ಮಾಡಿಕೊಳ್ಳುತ್ತಾರೆ. ಆದರೆ ಪತ್ರಿಕೆಯಲ್ಲಿ ಬಂದಿರುವುದೇನೆಂದರೆ, ಚುನಾವಣೆ ಫಲಿತಾಂಶ ಬರುವುದಕ್ಕಿಂತ ಮುಂಚೆ ತಮ್ಮ ಧರ್ಮಪತ್ನಿಯ ಹತ್ತಿರ ಕೇಳುತ್ತಾರಂತೆ, ಆಗ ಅವರು ಏನು ಹೇಳಿದ್ದೇನೆಂದರೆ, ನನ್ನದು ಒಂದು ಆಸೆ ಏನೆಂದರೆ, ನನ್ನ ಕುಟುಂಬದ ಜೊತೆ ಇರಬೇಕು. ಈ ಚುನಾವಣೆಯಲ್ಲಿ ಅವರಿಗೆ ಸೋಲಾಗಲೀ ಎಂದು ಹೇಳಿದ್ದರಂತೆ. ಬಹುಶಃ ಯಾರ ಮನೆಯಲ್ಲಿಯೂ ಇದು ನಡೆಯುವುದಿಕ್ಕೆ ಸಾಧ್ಯ ಇಲ್ಲ ಎಂದು ನನಗೆ ಅನಿಸುತ್ತದೆ.

**(ಸದನವು ನಗೆಗಡಲಿನಲ್ಲಿ ತೇಲಿತು)**

ಈಗಾಗಲೇ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಹಲವಾರು ವಿಷಯಗಳನ್ನು ಮುಂದಿಟ್ಟಿದ್ದಾರೆ. ತಾವು ಯಾವ ರೀತಿ ಸದನವನ್ನು ನಡೆಸುತ್ತಿದ್ದೀರಿ? ನನ್ನ ಅನುಭವವನ್ನು ಹೇಳಬೇಕೆಂದರೆ, ಪ್ರಥಮಬಾರಿ ಗೆದ್ದು ಬಂದಂತಹ ಸಂದರ್ಭದಲ್ಲಿ ತಾವು ನನ್ನನ್ನು ಕರೆದು ಹೇಳಿದ್ದೇನೆಂದರೆ, ನೋಡಪ್ಪ ನಿನ್ನ ವಿದ್ಯಾರ್ಹತೆ ಏನಿದೆ ಎಂಬುದನ್ನೆಲ್ಲಾ ನಾನು ನೋಡಿದ್ದೇನೆ. ನೀನು ಒಳ್ಳೆಯ ಸಂಸದೀಯ ಪಟುವಾಗಬೇಕು. ವಿಧಾನ ಪರಿಷತ್ತಿನಲ್ಲಿ ಕಲಾಪ ನಡೆಯುವಾಗ ಪ್ರತಿಯೊಂದರಲ್ಲಿ ಭಾಗವಹಿಸಬೇಕು ಎಂಬ ಬಗ್ಗೆ ಹಲವಾರು ವಿಷಯಗಳನ್ನು ಹೇಳಿದ್ದೀರಿ. ತಾವು ಮಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ನಾನು ತಮ್ಮನ್ನು ಭೇಟಿಯಾಗುವುದಕ್ಕೆ ಬಂದಿದ್ದೆ. ನೀನು ಒಂದು ಕಾಲೇಜು ಮಾಡಿದ್ದಿಯಾ

ಎಂದು ನನ್ನನ್ನು ತಾವು ಕೇಳಿದಿರಿ. ನನ್ನನ್ನು ಏತಕ್ಕೆ ಕರೆದಿಲ್ಲ, ನೀನು ನನ್ನ ಜೊತೆ ಬಾ, ನಿನ್ನ ಕಾಲೇಜನ್ನು ತೋರಿಸು ಎಂದು ನನ್ನನ್ನು ಕೇಳಿದಿರಿ. ನನ್ನ ಕಾಲೇಜಿನ ಬಗ್ಗೆ ಹೇಳುವುದಕ್ಕೆ ಏನು ಇರಲಿಲ್ಲ ಹಾಗಾಗಿ, ತಮಗೆ ಹೇಳುವುದಕ್ಕೆ ನನಗೆ ಬಹಳ ಇರಿಸುಮುರಿಸು ಆಗಿತ್ತು. ತಾವು ಒಂದು ಗಂಟೆಗೆ ಕಾಲೇಜಿಗೆ ಬರುತ್ತೇನೆಂದು ಹೇಳಿ, ಒಂದು ಗಂಟೆಗೆ ಬಂದವರು ಸುಮಾರು ನಾಲ್ಕರಿಂದ ಐದು ಗಂಟೆಗಳ ಕಾಲ ನೀವು ನಮ್ಮ ಕಾಲೇಜಿನ ಸಿಬ್ಬಂದಿಗಳ ಜೊತೆ ಮಾತನಾಡಿ ಹೋಗಿದ್ದೀರಿ. ನಮ್ಮ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಅದನ್ನು ಪೂರ್ಣವಾಗಿ ನೆನಪಿಟ್ಟುಕೊಂಡಿದ್ದಾರೆ ಎಂಬುದರ ಬಗ್ಗೆ ನಾನು ಹೇಳಬಯಸುತ್ತೇನೆ. ಹಲವಾರು ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಮೊನ್ನೆ ತಾನೇ ವೈಯಕ್ತಿಕವಾಗಿ ಹೇಳಬೇಕೆಂದರೆ, ಅಮೆರಿಕಾಕ್ಕೆ ಸಂಸದೀಯ ನಮ್ಮ ಶಾಸಕರು ಜೊತೆ ಹೋಗುವಂತಹ ಸಂದರ್ಭದಲ್ಲಿ ನಾನು ತಮಗೆ ಸರ್ಕಾರದಿಂದ ಬರುವುದಕ್ಕಾಗದೇ ನಮ್ಮ ಸ್ವಂತ ಹಣದಿಂದ ಬರುತ್ತೇನೆ ಎಂದು ನಾನು ತಮ್ಮ ಅಪ್ಪಣೆಯನ್ನು ಕೇಳಿದಾಗ, ತಾವು ಎರಡು ದಿವಸ ಬಿಟ್ಟು ನಿಮ್ಮ ಹೆಸರನ್ನು ನಾನು ಹಾಕಿದ್ದೇನೆ ಎಂದು ನನ್ನನ್ನು ಕರೆದು ಹೇಳಿದಿರಿ. ನಿಮ್ಮ ಸ್ವಂತವಾಗಿ ಹೋಗುವುದಲ್ಲ. ನೀನು ಮೂರು ದಿವಸ ಅದರಲ್ಲಿ ಭಾಗವಹಿಸಬೇಕು ಎಂದು ಹೇಳಿ ಒಂದು ಷರತ್ತು ಹಾಕಿದರು. ನಾನು ಹೋಗುವುದಕ್ಕಿಂತ ಜಾಸ್ತಿ ತಮ್ಮ ಅನಿಸಿಕೆ ಏನಿತ್ತೆಂದರೆ, ನಾನು ಪ್ರತಿಯೊಂದು ವಿಷಯಗಳಲ್ಲಿ ಭಾಗವಹಿಸಬೇಕು ಮತ್ತು ಅದರಲ್ಲಿ ಭಾಗವಹಿಸಿದ್ದನ್ನು ನಾವು ಅಳವಡಿಸಿಕೊಳ್ಳಬೇಕು ಎಂದು ತಾವು ಒಂದು ಪೂರ್ಣವಾದ ಸೂಚನೆಯನ್ನು ನನಗೆ ಕೊಟ್ಟಿದ್ದೀರಿ. ನಲವತ್ತೈದು ವರ್ಷಗಳಲ್ಲಿ ತಾವು ಸಾವಿರಾರು ಜನರಿಗೆ ಯಾವ ರೀತಿ ದಾರಿ ದೀಪವಾಗಿದ್ದೀರೋ, ಅದೇ ರೀತಿ ನಮಗೂ ಕೂಡ ದಾರಿ ದೀಪವಾಗಿದ್ದೀರಿ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

(ಮುಂದು)

(780) 19.08.2025 12.30 TCH-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನ ಇವತ್ತು ತಮಗೆ ಶುಭಾಷಯಗಳನ್ನು ಕೋರತಕ್ಕಂಥ ಸ್ಥಿತಿಯಲ್ಲಿದೆ. ಇವತ್ತು ತಾವು ಸುದೀರ್ಘವಾಗಿ 45 ವರ್ಷಗಳ ಕಾಲ ರಾಜಕೀಯ ಜೀವನವನ್ನು ಪೂರೈಸಿ ಈ ರಾಜ್ಯದ ಸೇವೆಯಲ್ಲಿದ್ದೀರಿ. ಅನೇಕ ಜನರಿಗೆ ತಾವು ಮಾರ್ಗದರ್ಶಕರಾಗಿದ್ದೀರಿ. ಈಗಲೂ ಕೂಡ ತಮ್ಮ ನಡೆ-ನುಡಿ, ತಮ್ಮ ಜೀವನ ಶೈಲಿಯನ್ನು ಯಾವ ರಾಜಕಾರಣಿಯಾದರೂ ಕೂಡ ಹಿಂಬಾಲಿಸಬೇಕು ಅನಿಸುತ್ತದೆ. ನಿಮ್ಮ ಈ ಸುದೀರ್ಘ ಜೀವನದ ಸತತ ಗೆಲುವನ್ನೆಲ್ಲಾ ಅರ್ಥ ಮಾಡಿಕೊಳ್ಳಬೇಕೆಂದರೆ, ಬಹುಶಃ ಅನೇಕರು, ನಾವು ನಿಮ್ಮ ಹೆಸರಿನಲ್ಲಿ ಪಿ.ಹೆಚ್.ಡಿ ಮಾಡಬೇಕಾಗುತ್ತದೆ. ಇದರಲ್ಲಿ ಏನಾದರೂ ಗೆಲುವಿನ ಗುಟ್ಟು ಇದೆಯೋ, ಏನೋ ಗೊತ್ತಿಲ್ಲ. ಆದರೆ ಸತತವಾಗಿ

ನೀವು ಆ ಜನರ ಸೇವೆ ಮಾಡಿ, ಅವರ ಮನಸ್ಸು ಗೆದ್ದು ಇಷ್ಟು ದೀರ್ಘಕಾಲ ಈ ಒಂದು ಪದವಿಯನ್ನು ಅಲಂಕರಿಸಿರುವುದಕ್ಕೆ ಇವತ್ತು ನಿಮಗೆ ಈ ಸದನದ ಮೂಲಕ ನಾವೆಲ್ಲರೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ವಿಪರ್ಯಾಸವೆಂದರೆ ರಾಜಕೀಯ ಜೀವನದಲ್ಲಿ ಈ ಒಂದು ಅಧಿಕಾರ ಸ್ಥಾನವನ್ನು ಅಲಂಕರಿಸಿ ಸುಮಾರು 45 ವರ್ಷಗಳಾಯಿತು. ಆದರೆ ನಾನು ಈ ಸದನಕ್ಕೆ ಬರಬೇಕೆಂದು ಪ್ರಾರಂಭ ಮಾಡಿ ಸುಮಾರು 45 ವರ್ಷಗಳಾಯಿತು. ಏನೋ ನಿಮ್ಮ ಭಾಗ್ಯ, ನಿಮ್ಮದು 45 ವರ್ಷಗಳ ಆಗುವಷ್ಟೊತ್ತಿಗೆ ನಾವು ತೆವಳಿಕೊಂಡು ಬಂದು ಈ ಸದನವನ್ನು ಸೇರಿಕೊಂಡೆವು. ನಿಜವಾಗಿಯು ತಮ್ಮಂಥವರ ನಾಯಕತ್ವದಲ್ಲಿ ನಾವು ಇಲ್ಲಿ ಇರತಕ್ಕಂಥದ್ದು ಕೂಡ ಬಹಳ ಖುಷಿ ತಂದಿದೆ. ಬಹುಶಃ ನಾನು ಇಲ್ಲಿಗೆ ಬರುತ್ತೇನೆ ಎಂದು ನನಗೆ ಅನಿಸುತ್ತಿರಲಿಲ್ಲ. ಏಕೆಂದರೆ ವ್ಯವಸ್ಥೆಗಳು ಆ ರೀತಿ ಇತ್ತು. ಆದರೆ ನಾನು ಭಾರತೀಯ ಜನತಾ ಪಕ್ಷಕ್ಕೆ ಬಂದಮೇಲೆ, ನಾಯಕತ್ವ ನನ್ನನ್ನು ಗುರುತಿಸಿ ಇಲ್ಲಿಯವರೆಗೆ ತಂದಿದೆಯಲ್ಲಾ, ಆ ಒಂದು ವಿಷಯದಲ್ಲಿ ನಾನು ಅವರಿಗೂ ಕೂಡ ಕೃತಜ್ಞನಾಗಿರಬೇಕು. ತಮ್ಮಿಂದ ನಾನು ಕಲಿತಿರುವುದು ಏನೆಂದರೆ, ನೀವು ಯಾವಾಗಲೂ ಕೂಡ ಹೇಗೆ ಇರಬೇಕು, ಹೇಗೆ ನಡೆದುಕೊಳ್ಳಬೇಕು, ಏನು ಮಾಡಬೇಕು ಎನ್ನುವುದನ್ನು ನನಗೂ ತಿಳಿಸುತ್ತೀರಿ ಮತ್ತು ಎಲ್ಲರಿಗೂ ತಿಳಿಸುತ್ತೀರಿ. ಅವರು ನನಗೆ ವಿಶೇಷ, ಇವರು ನನಗೆ ವಿಶೇಷ ಅಲ್ಲ ಎಂದೇನಿಲ್ಲ. ಸರ್ವರೂ ಏನಾದರೂ ತಪ್ಪು ಮಾಡಿದಾಗ ತಿದ್ದತಕ್ಕಂಥ ಕೆಲಸವನ್ನು ನೀವು ಮಾಡುತ್ತೀರಿ. ಆದರೆ ಒಂದು ತಮ್ಮಲ್ಲಿ ನಾನು ನೋಡಿದ್ದು ಏನೆಂದರೆ, ಇದನ್ನು ಒಂದು ಬಾರಿ ನಾನು ಹೇಳಿದ್ದೇನೆಂದು ಕಾಣುತ್ತದೆ. ಗೃಹ ಸಚಿವರಾದ ಡಾ.ಜಿ. ಪರಮೇಶ್ವರ ರವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ಅವರು ಸಚಿವರಿದ್ದಾಗ ನೀವು ಅವರ ಮನೆ ಮುಂದೆ ನಡೆದುಕೊಂಡು ಬಂದು ನಿಂತುಕೊಂಡಿದ್ದೀರಿ, ನಾವು ಅವರು ಎಲ್ಲಿಗೋ ಹೋಗಬೇಕಾಗಿತ್ತು ಅಲ್ಲೇ ನಿಂತಿದ್ದೆವು. ಅವರು ಅರೀಬರಿಯಲ್ಲಿ ಇದ್ದಾಗ, ನೀವು ಒಂದು ಪತ್ರವನ್ನು ತೆಗೆದು ಅವರಿಗೆ ಕೊಟ್ಟಾಗ, ಅವರು ನಾನು ನೋಡುತ್ತೇನೆಂದು ಎಲ್ಲಿಗೋ ಹೊರಡುವುದಕ್ಕೆ ಶುರು ಮಾಡಿದಾಗ; ನೀವು ರೀ, ಪರಮೇಶ್ವರ್ ರವರೇ, ನಿಂತುಕೊಳ್ಳಿ ಅಲ್ಲಿ. ನಾನು ಒಬ್ಬ ಶಾಸನಾಗಿ ಬಂದಿದ್ದೇನೆ. ಈ ಜಾಗ ಮುಂದೆ ನಿಮಗೇನು permanent ಅಲ್ಲ. ಈ ಜಾಗಕ್ಕೆ ನಾನು ಕೂಡ ಬರುವವನು ಇದ್ದೇನೆ. ಮೊದಲು ಅದನ್ನು ನೋಡಿ ಸರಿಪಡಿಸಿ ಎಂದು ಹೇಳಿದಿರಿ. ಅವರು ಸ್ವಲ್ಪ alert ಆಗಿ, immediately ಅದರಲ್ಲಿ ಬರೆದು ಅವರ ಪಿ.ಎ. ರವರನ್ನು ಕರೆದು ನೋಡಪ್ಪಾ, ಈ ಕೆಲಸ ಆಗಲೇಬೇಕು ಎಂದು ಹೇಳಿ ಹೋದರು. ಅಂದರೆ ಅಷ್ಟು ದಿಟ್ಟತನ ಇತ್ತು. ನೀವು ಯಾವ ರೀತಿ ಹೇಳಿದರೋ ಮುಂದಿನ ಬಾರಿ ನಾನು ಈ ಜಾಗಕ್ಕೆ ಬರುವವನು ಇದ್ದೇನೆಂದು ಹೇಳಿದ್ದರೋ ಅದೇ ರೀತಿ ನೀವು ಖಂಡಿತವಾಗಿಯು ಬಂದಿರಿ. ಇದು ಒಬ್ಬ ನಾಯಕನಿಗೆ ಇರಬೇಕಾಗಿರತಕ್ಕಂಥ ಗತ್ತು. ಅದು ಸರ್ವರಲ್ಲೂ ಬರಬೇಕು, ಇಲ್ಲ ಅಂತ ಅಲ್ಲ. ಅದೇ ಒಂದು ವಿಚಾರವನ್ನು ಇಟ್ಟುಕೊಂಡು ನಾವು ಇವತ್ತಿನ ದಿವಸ ರಾಜಕೀಯ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಗತ್ತಿನಿಂದ ಜನರ ಕೆಲಸ ಮಾಡಬೇಕೆಂದು ಅವೊತ್ತು ತಾವು ಹೇಳಿದ್ದಿರೋ ಅದೇ ರೀತಿ ಎಲ್ಲಾ ನಾಯಕರೂ ಕೂಡ ಜನ ಸಮುದಾಯಕ್ಕೆ ಕೆಲಸ ಮಾಡುವುದಕ್ಕೆ ಪ್ರೇರೇಪಿತರಾಗಬೇಕು. ತಮ್ಮ ಈ ಒಂದು ಸುದೀರ್ಘವಾದಂತಹ ರಾಜಕೀಯ ಜೀವನದಲ್ಲಿ ಕಷ್ಟ-ಸುಖ ಎಲ್ಲವನ್ನೂ ತಾವು ಅನುಭವಿಸಿದ್ದೀರಿ. ಆ ಅನುಭವವನ್ನು

ನಮಗೆಲ್ಲರಿಗೂ ಕೂಡ ತಾವು ಧಾರೆ ಎರೆಯುತ್ತೀರಿ ಎಂದು ಹೇಳುತ್ತೇನೆ. ಇಂತಹ ಸಂದರ್ಭದಲ್ಲಿ ನಾನು ಮಾತನಾಡಲು ತಮಗೆ ಅಭಿನಂದನೆಯನ್ನು ಸಲ್ಲಿಸಲು ಕೊಟ್ಟ ಅವಕಾಶಕ್ಕಾಗಿ ವಂದಿಸುತ್ತೇನೆ. ನಮಸ್ಕಾರ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಮ್ಮ 45 ವರ್ಷಗಳ ಸುದೀರ್ಘ ಸೇವೆಯ ಬಗ್ಗೆ ನಮ್ಮೆಲ್ಲಾ ಸ್ನೇಹಿತರುಗಳು ಮಾತನಾಡಿದ್ದಾರೆ. 1980ನೇ ಇಸವಿಯಿಂದ ನಮಗೂ ಮತ್ತು ನಿಮಗೂ ಬಹಳ ಅವಿನಾಭಾವ ಸಂಬಂಧ. ನಾನು ಶಿಕ್ಷಣ ಸಚಿವರಿದ್ದಾಗ ನಮ್ಮಿಬ್ಬರ ಜೊತೆ ಇದೇ ಸದನದಲ್ಲಿ ಒಂದು ಬಾರಿ ಜಗಳ ಕೂಡ ಆಗಿದೆ. ಏಕೆಂದರೆ, ಕೆಂಗಲ್ ಹನುಮಂತಯ್ಯನವರು ಕಟ್ಟಿದಂತಹ ವಿಶ್ವವಿಖ್ಯಾತ ಈ ವಿಧಾನಸೌಧದಲ್ಲಿ ಸುಮಾರು 45 ವರ್ಷಗಳಿಂದ ಹಲವಾರು ಅನುಭವಗಳನ್ನು ತಾವು ಪಡೆದುಕೊಂಡಿದ್ದೀರಿ. ಬರೀ ರಾಜಕೀಯದ ಅನುಭವವಷ್ಟೇ ಅಲ್ಲದೇ ಇಲ್ಲಿಗೆ ಬರತಕ್ಕಂಥ ಮಾನ್ಯ ಶಾಸಕರುಗಳು ಹಲವಾರು ವಿಚಾರಗಳಲ್ಲಿ ಬೆಳಕನ್ನು ಚೆಲ್ಲುತ್ತಾರೆ. ಅದೆಲ್ಲವೂ ಕೂಡ ನಿಮ್ಮ ಮನಸ್ಸಿನಲ್ಲಿದ್ದು, ಅದರಿಂದ ಒಂದು ದೊಡ್ಡ ಅನುಭವವನ್ನು ಈ ಮನೆಯಲ್ಲಿ ನೀವು ಪಡೆದುಕೊಂಡಿದ್ದೀರಿ. ಆ ಅನುಭವ ನಿಮ್ಮದೇ. ಅದು ನಿಮ್ಮ ಆಸ್ತಿ, ಏಕೆಂದರೆ ಅನುಭವದ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಸನ್ಮಾನ್ಯ ರಾಜೀವ್ ಗಾಂಧಿಯವರು ಸನ್ಮಾನ್ಯ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ Sri A.P. Venkateswaran ಎಂಬುವರು Foreign Secretary of India, Ministry of External Affairs ನಲ್ಲಿದರು. Doon School ನಲ್ಲಿ ಓದುತ್ತಿದ್ದಂತಹ ಕೆಲವು ಎಂ.ಪಿ.ಗಳು ಮಾನ್ಯ ರಾಜೀವ್ ಗಾಂಧಿಯವರಿಗೆ ಛಾಡಿಹೇಳಿ ಅವರನ್ನು impeach ಮಾಡಿಸುತ್ತಾರೆ. ಆಗ ಅವರು ಮಾನ್ಯ ರಾಜೀವ್ ಗಾಂಧಿಯವರಿಗೆ ರಾಜೀನಾಮೆ ಕೊಟ್ಟು office ನಿಂದ ಹೊರಗೆ ಬರುತ್ತಾರೆ. ಆಗ media ದವರು *'Mr. Venkateswaran, what is your answer to your impeachment unceremoniously?'* ಎಂದು ಕೇಳಿದಾಗ. ಅವರು *'One can acquire beauty by inheritance; one can also acquire property by inheritance; but one cannot acquire experience by inheritance'* ಎಂದು ಹೇಳುತ್ತಾರೆ. ಅವರು ಬಹಳ ವರ್ಷಗಳ ಕಾಲ Foreign Secretary ಆಗಿ parliament ನಲ್ಲಿ ಇದ್ದವರು. ಒಬ್ಬ ವ್ಯಕ್ತಿ ತನ್ನ ತಂದೆ-ತಾಯಿಗಳಿಂದ ಬೆಡಗು ಬಿನ್ನಾಣಗಳನ್ನು ಪಡೆಯಬಲ್ಲ. ಅವರ ಆಸ್ತಿಯನ್ನೂ ಪಡೆಯಬಲ್ಲ. ಆದರೆ ಅವರ ಅನುಭವನ್ನು ಪಡೆಯಲಾರ. ನಿಮಗೆ ಶ್ರೀಮತಿ ಇಂದಿರಾಗಾಂಧಿಯವರ ರೀತಿ ಬಣ್ಣ ಇದೆ. ನಿಮಗೆ ಶ್ರೀಮತಿ ಇಂದಿರಾಗಾಂಧಿಯವರ ಕುರ್ಚಿ ಕೂಡ ಸಿಕ್ಕಿದೆ. ಆದರೆ ಶ್ರೀಮತಿ ಇಂದಿರಾ ಗಾಂಧಿಯವರ ಅನುಭವ ನಿಮಗೆ ಇಲ್ಲ ಎನ್ನತಕ್ಕಂಥ ಮಾತನ್ನು ಸೂಕ್ಷ್ಮವಾಗಿ ಶ್ರೀ ಎ.ಪಿ.ವೆಂಕಟೇಶ್ವರನ್‌ರವರು ಹೇಳುತ್ತಾರೆ. ಹಾಗಾಗಿ, ಆ ಅನುಭವ ನಿಮ್ಮದೇ. ನೀವು ಪಡೆದಿರತಕ್ಕಂಥ ಅನುಭವ ನಿಮ್ಮ ಆಸ್ತಿ. ಆದರೆ ಆ ಅನುಭವ ಎಲ್ಲರಿಗೂ ಕೂಡ ಸಿಗಬೇಕು. ನಾವೆಲ್ಲಾ ಶ್ರೀ ದೇವರಾಜ್ ಅರಸು ರವರ ಕೃಪೆಯಿಂದ 1978ನೇ ಇಸವಿಯಲ್ಲಿ ಬಂದೆವು. ತಾವು 1980ನೇ ಇಸವಿಯಲ್ಲಿ ಇಲ್ಲಿಗೆ ಶಾಸಕರಾಗಿ ಬಂದಿದ್ದೀರಿ. ಹಾಗಾಗಿ, ನಾನು ಮತ್ತು ನೀವು ಹಲವಾರು ವರ್ಷಗಳ ಕಾಲ ಜೊತೆಯಲ್ಲೇ ಕೆಲಸ ಮಾಡಿಕೊಂಡು ಬಂದಿದ್ದೇವೆ. ಒಂದು ಬಾರಿ ಇದೇ ಸದನದಲ್ಲಿ ನನಗೆ ಮತ್ತು ನಿಮಗೆ

ಜಗಳವಾಯಿತು. ನೀವು ಯಾವುದೋ ಒಂದು ವಿಷಯದ ಬಗ್ಗೆ ಪ್ರಶ್ನೆ ಕೇಳಿದಾಗ, ‘ಯಾವನೋ ದನ ಕಾಯುವವನು ಪ್ರಶ್ನೆ ಕೇಳುತ್ತಾನೆ’ ಎಂದು ಹೇಳಿದೆನು. ಆಗ ನೀವು ‘ಅವರ ಅಂತರಂಗದಿಂದ ನನ್ನ ಸ್ನೇಹದ ಬಗ್ಗೆ ಮಾತನಾಡುತ್ತಿದ್ದಾರೆ’ ಎಂದು ಗಲಾಟೆಗೂ ಅವಕಾಶವಾಗದಂತೆ ತಮ್ಮ ಅನುಭವವನ್ನು ಹೇಳಿ ಸಾಧಿಸಿಬಿಟ್ಟಿದ್ದೀರಿ. ಹಾಗಾಗಿ, ಇವತ್ತಿನ ದಿವಸ ನನಗೆ ಬಹಳ ಸಂತೋಷವಾಗುತ್ತಿದೆ. ಎಲ್ಲಾ ಸ್ನೇಹಿತರು ಕೂಡ ತಮಗೆ ಅಭಿನಂದನೆಯನ್ನು ಹೇಳುತ್ತಿದ್ದಾರೆ. ಸಾಕಷ್ಟು ಅಧಿಕಾರಿಗಳು ಕೂಡ ತಮ್ಮನ್ನು ಇಷ್ಟಪಡುವವರು ಇದ್ದಾರೆ. ಹಾಗಾಗಿ, ತಾವು ಬಹಳ ದೊಡ್ಡ ಸ್ಥಾನದಲ್ಲಿ ಕುಳಿತಿದ್ದೀರಿ. ಆ ಸ್ಥಾನಕ್ಕೆ ಎಲ್ಲಿಯೂ ಕೂಡ ಚ್ಯುತಿ ಆಗದಂತೆ ತಾವು ನಡೆಸಿಕೊಂಡು ಬಂದಿದ್ದೀರಿ, ಅದು ಬಹಳ ಮುಖ್ಯ. ಹಾಗಾಗಿ ತಮ್ಮ 45 ವರ್ಷಗಳ ಸುದೀರ್ಘ ಸೇವೆಯನ್ನು ಅತ್ಯಂತ ಸಂತೋಷದಿಂದ ನಾವೆಲ್ಲರೂ ಕೂಡ ಸ್ಮರಣೆ ಮಾಡುತ್ತೇವೆ. ತಮಗೆ ಒಳ್ಳೆಯದು ಆಗಲಿ.

**ಶ್ರೀ ಐವನ್ ಡಿ’ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇದು ಬಹಳ ಸಂತೋಷದ ವಿಚಾರ. ಸುಮಾರು 45 ವರ್ಷಗಳ ಕಾಲ ಒಬ್ಬರು ಶಾಸಕರಾಗಿ ಈ ಸದನದಲ್ಲಿ ಸೇವೆಯನ್ನು ಸಲ್ಲಿಸಿರುವುದು ನಮ್ಮೆಲ್ಲರ ಭಾಗ್ಯ, ನಮಗೆಲ್ಲರಿಗೂ ಮಾರ್ಗದರ್ಶನವಾಗತಕ್ಕಂಥ ವಿಚಾರ. ಶಿಕ್ಷಕರ ಕ್ಷೇತ್ರವೊಂದರಲ್ಲೇ ಸತತವಾಗಿ ಅದೇ ಮತದಾರರಿಂದ ಸುಮಾರು 45 ವರ್ಷಗಳ ಕಾಲ ಆಯ್ಕೆಯಾಗುವುದು ಬಹಳ ವಿರಳ. ಹಾಗಾಗಿ, ತಾವು ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ಗೆ ಸೇರುವಂಥ ದಾಖಲೆ ಮಾಡಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಮುಂದೆ ಅದು ಯಾರೂ break ಆಗದಂತಹ ದಾಖಲೆಯಾಗುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಏಕೆಂದರೆ ಈಗಿನ political system ನಲ್ಲಿ ಕ್ಷೇತ್ರಗಳಲ್ಲಿ ಬದಲಾವಣೆಗಳಾಗುತ್ತವೆ. Delimitation ಬಂದು ಬದಲಾವಣೆಯಾಗುತ್ತದೆ. ಮತದಾರರ ಹೆಸರು ಬದಲಾವಣೆಯಾಗುತ್ತದೆ. ಕ್ಷೇತ್ರದ ಹೆಸರು ಬದಲಾವಣೆಯಾಗುತ್ತದೆ. ಆದರೆ ತಮ್ಮ ಕ್ಷೇತ್ರ ಮಾತ್ರ ಇದುವರೆಗೆ 8 ಬಾರಿ ಕೂಡ ಒಂದೇ ಕ್ಷೇತ್ರ.

**(ಮುಂದು)**

(781)19.8.2025/12.40/ಎಂ.ಎಂ-ಎಂ.ಡಿ.(ಬಿ.ಎನ್.ಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ’ಸೋಜಾ (ಮುಂದು):-**

ಆದರೆ ತಮ್ಮ ಕ್ಷೇತ್ರ ಮಾತ್ರ ಇದುವರೆಗೂ ಒಂದೇ ಕ್ಷೇತ್ರ, 8 ಬಾರಿಯೂ ಒಂದೇ ಶಿಕ್ಷಕರ ಕ್ಷೇತ್ರ, ಅದೇ ಕ್ಷೇತ್ರದ ಮತದಾರರು ಮತ್ತು ತಮ್ಮನ್ನು ಮೆಚ್ಚಿ ನಮ್ಮ ಕೆಲಸ ಮಾಡುವುದಕ್ಕೆ, ನಮ್ಮ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದನೆ ಮಾಡಲು ಸೂಕ್ತ ಅಭ್ಯರ್ಥಿ ತಾವು, ಎಂದು ಹೇಳುತ್ತೇನೆ. ಪ್ರತಿ ಬಾರಿ ಆಯ್ಕೆ ಮಾಡಿ ಕಳುಹಿಸಿರುವಂತಹದ್ದು ಬಹಳ ಸಂತೋಷ ಮತ್ತು ತಮಗೆ ಆ ಅವಕಾಶ ಸಿಕ್ಕಿದ್ದಕ್ಕಾಗಿ ಮತ್ತು ಅವಕಾಶ ಕೊಟ್ಟಿದ್ದಕ್ಕಾಗಿ ಮತದಾರರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಮ್ಮ ಜೀವನದುದ್ದಕ್ಕೂ, ತಾವು ಏನು ಆದರ್ಶ, ತಮ್ಮ ಗುರಿ ಮತ್ತು ಸಿದ್ಧಾಂತ ಇಟ್ಟುಕೊಂಡಿದ್ದೀರಿ ಆ ಸಿದ್ಧಾಂತಕ್ಕೆ ತಾವು ವಿರೋಧವಾಗಿ ನಡೆಯಲಿಲ್ಲ ಎಂದು ಹೇಳುವುದಕ್ಕೆ ನಾನು ಪ್ರಥಮ ಬಾರಿಗೆ ಸದಸ್ಯನಾಗಿದ್ದಾಗ

ನಾನು ಆಡಳಿತ ಪಕ್ಷದಲ್ಲಿದ್ದೆ. ಸರ್ಕಾರದ ಮುಖ್ಯ ಸಚೇತಕನಾಗಿದ್ದೆ. ತಾವು ವಿರೋಧಪಕ್ಷದಲ್ಲಿದ್ದು ಇವತ್ತು ಹಿರಿಯ ಸದಸ್ಯರಾದ ಶ್ರೀ ವಿಶ್ವನಾಥ್‌ರವರು ಕುಳಿತಿರುವ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದಿರಿ. ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಆಗ ಸಭಾಪತಿಗಳಾಗಿದ್ದರು. ಯಾವುದೇ ವಿಚಾರಗಳು ಬಂದಾಗ deadlock ಬಂದರೆ ತಾವು ಆಡಳಿತ ಪಕ್ಷ, ವಿರೋಧ ಪಕ್ಷ ಅನ್ನದೇ ಕರೆಸಿ ಸಮಾಧಾನ ಮಾಡಿ ಒಂದು ಸೂತ್ರವನ್ನು ಕೊಡುತ್ತಿದ್ದಿರಿ. ಆಗ ಶ್ರೀ ವಿ.ಎಸ್. ಉಗ್ರಪ್ಪನವರು ಸಹ ಇದ್ದರು. ಅಲ್ಲಿ ಏನಾದರೂ ಮಾತುಕತೆಗಳು ನಡೆದಾಗ ತಾವು ಮಧ್ಯಸ್ಥಿಕೆಯನ್ನು ವಹಿಸುತ್ತಿದ್ದಿರಿ. ಮತ್ತು ಸದನ ಸುಗಮವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಿರಿ. ಓರ್ವ ಸದಸ್ಯನಿಗೆ ಅನುಭವ ಇದ್ದರೆ ಅವರ ಅನುಭವದ ಮಾತಿನಿಂದ ಸಮಾಜಕ್ಕೆ ಹೇಗೆ ಸಹಾಯವಾಗುತ್ತದೆ ಎಂದು ಹೇಳುವುದಕ್ಕೆ ಇದೊಂದು ಉದಾಹರಣೆಯಾಗಿದೆ. ತಾವು ಮಂತ್ರಿಯಾಗಿ, ಸದನದ ಸದಸ್ಯರಾಗಿ ಹಾಗೂ ಸಭಾಪತಿಗಳಾಗಿ ಕೆಲಸ ಮಾಡಿದ್ದೀರಿ. ಎಲ್ಲಾ ಕೆಲಸದಲ್ಲಿಯೂ ಕೂಡ ತಾವು ತಮ್ಮ ಸಿದ್ಧಾಂತವನ್ನು ಬಿಟ್ಟು ಮಾಡಲಿಲ್ಲ ಎಂಬುದು ನಮ್ಮೆಲ್ಲರ ದೃಢವಾದ ಅಭಿಪ್ರಾಯ ಮಾತ್ರವಲ್ಲ, ಇದು accepted truth. ಇದು ಒಪ್ಪಿಕೊಳ್ಳುವಂತಹ ಸತ್ಯ. ಹಾಗಾಗಿ ತಮಗೆ ವಯಸ್ಸಾದ ಹಾಗೆ ಕಾಣುವುದಿಲ್ಲ. ನಿಮ್ಮ ಚಟುವಟಿಕೆಗಳು ಚಟುವಟಿಕೆಗಳ ಹಾಗೆ ಕಾಣುವುದಿಲ್ಲ. ಇತ್ತೀಚೆಗೆ ನಾನು ತಮ್ಮ ಜೊತೆ ಅಮೆರಿಕಕ್ಕೆ ಹೋಗುವ ಅವಕಾಶ ಬಂದಿತ್ತು. ವಾಷಿಂಗ್ಟನ್ ಡಿ.ಸಿ.ಯಲ್ಲಿ ನನಗೆ ಸಭಾಪತಿಯವರ ಜೊತೆ ಸೇರುವ ಅವಕಾಶವಾಯಿತು. ನಾನು ತಮ್ಮ ಜೊತೆ ಏನು ಆರು ದಿನಗಳನ್ನು ಕಳೆದಿದ್ದೇನೆ ಇದು ನನ್ನ ಜೀವನದ ಅತ್ಯಂತ ಸಂತೋಷದ ದಿನಗಳಾಗಿವೆ ಎಂದು ಇವತ್ತು ಈ ಸದನದ ಮೂಲಕ ನಾನು ಹೇಳಬಯಸುತ್ತೇನೆ. ಏಕೆಂದರೆ ಆ ಸಂದರ್ಭದಲ್ಲಿ ನಿಮ್ಮ ತಾಳ್ಮೆ ನೀವು ಬೇರೆಯವರ ಜೊತೆಯಲ್ಲಿ ನಡೆದುಕೊಂಡಂತಹ ರೀತಿ, ನಾವು ದಿವಸಕ್ಕೆ ಹತ್ತು ಸಲ ಚಹಾ, ಕಾಫಿ ಕುಡಿದರೂ ಕೂಡ ಮಾನ್ಯ ಸಭಾಪತಿಗಳು ಬಾಲ್ಯದಿಂದಲೂ ಟೀ, ಕಾಫಿಯನ್ನು ಮುಟ್ಟುವುದೇ ಇಲ್ಲ. ನಾನು ಮತ್ತೊಂದು ವಿಚಾರವನ್ನು ಕೇಳಿದೆ. ಇವರಿಗೆ ತಾಯಿ ಎಂದರೆ ಹೆಚ್ಚು. ಇವರು ಊಟ ಮಾಡುವಾಗ ತಾಯಿಯ ಜೊತೆಯಲ್ಲಿಯೇ ಊಟ ಮಾಡುತ್ತಿದ್ದರಂತೆ. ಈ ತರಹದ ಜೀವನ ತಮ್ಮದು ಎಂದು ಹೇಳಿದರೆ ಅದು ನಿಜವಾಗಿಯೂ ಶ್ಲಾಘನಾರ್ಹ ಮತ್ತು ಮುಂದೆ ಕೂಡ ಆ ದೇವರು ನಿಮಗೆ ಶಕ್ತಿ ಕೊಡಲಿ ಎಂದು ಪ್ರಾರ್ಥನೆ ಮಾಡುವುದರ ಜೊತೆಗೆ ಶ್ರೀ ಎಂ.ಸಿ. ನಾಣಯ್ಯನವರು ಒಮ್ಮೆ ಒಂದು ಮಾತನ್ನು ಹೇಳಿದ್ದರು. ನಾವು ಏನೋ ಒಂದು ಮಾತನಾಡಿದೆವು. ಅದೇನೆಂದರೆ, ಶ್ರೀ ಎಂ.ಸಿ. ನಾಣಯ್ಯನವರು ಆಗ ಈ ಸದನದ ಸದಸ್ಯರಾಗಿದ್ದರು, ಆಗ ನೀವು ನಿಮ್ಮ ಜೀವನದ ವಯಸ್ಸು ಮತ್ತು ಈ ಸದನದ ಸದಸ್ಯರಾದುದು ಮಾತ್ರವಲ್ಲ, ನೀವು ಮನೆಯಲ್ಲಿದ್ದ ಅವಧಿಗಿಂತ ಜಾಸ್ತಿ ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನದ ಸದಸ್ಯರಾಗಿ ಈ ಸದನದ ಒಳಗಿದ್ದರು ಎಂದು ಹೇಳಿದರು. ನೀವು ಮನೆಯಲ್ಲಿ ಕಳೆದ ಅವಧಿಗಿಂತ ಜಾಸ್ತಿ ಸಮಯವನ್ನು ಸದನದಲ್ಲಿ ಜಾಸ್ತಿ ಹೊತ್ತು ಕಳೆದಿದ್ದೀರಿ ಎಂಬ ಮಾತನ್ನು ಹೇಳಿದರು. ಅದು ಸತ್ಯ ಎಂದು ಹೇಳಿ, ನಾನು on a lighter note ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಹರಿಪ್ರಸಾದ್‌ರವರು, ತಾವು ರಾಜಕೀಯ ಜೀವನಕ್ಕೆ ಬರುವಾಗ ಕಬಡ್ಡಿ ಆಟಗಾರರಾಗಿದ್ದಿರಿ ಎಂದು ಉಲ್ಲೇಖ ಮಾಡಿದರು. ಕಬಡ್ಡಿ ಆಟವು ರಾಜಕೀಯಕ್ಕೆ ಇಷ್ಟು

ಉತ್ತಮವಾದ ದಾರಿ ಕೊಡುತ್ತದೆಂದು ನನಗೆ ಗೊತ್ತಿರಲಿಲ್ಲ. ಕಬಡ್ಡಿ ಎಂದರೆ ಯಾವಾಗಲೂ ಹಗ್ಗ ಹಿಡಿದವರನ್ನು ಎಳೆದು ಹಾಕುವುದು. ಆದರೆ ಕಬಡ್ಡಿ ಆಟ ಆಡಿದವರೂ 45 ವರ್ಷಗಳ ಕಾಲ ಸತತವಾಗಿ ಗೆದ್ದು ಬಂದರು ಎಂದರೆ ಕಬಡ್ಡಿ ಆಟಕ್ಕೆ ಒಂದು ಗೌರವ ಬಂದು ಬಿಟ್ಟಿತ್ತು. ಹಾಗಾಗಿ ಕಬಡ್ಡಿ ನಮ್ಮ ಆಟ. ಅದು ರಾಜಕಾರಣಿಗಳ ಆಟ. ಆ ಆಟದ ಮೂಲಕವೇ ನೀವು ಯಾರ ಕಾಲನ್ನೂ ಎಳೆಯದೇ ಯಾರ ಕಾಲು ನಿಮ್ಮ ಮೇಲಿದ್ದರೂ ಅವರೇ ಬಿದ್ದರು ವಿನಃ ನೀವೇನೂ ಬೀಳಲಿಲ್ಲವಲ್ಲಾ ಎಂದು ನನಗದು ಸಂತೋಷವಾಗುತ್ತದೆ. ಹಾಗಾಗಿ ನಾನು ತಮಗೆ ಶುಭ ಕೋರುತ್ತಾ, ಮುಂದೆ ನಿಮ್ಮ ಸೇವೆ Guinness World Records ನಲ್ಲಿ ದಾಖಲಾಗಬೇಕು, ಮುಂದಿನ ಸಲವೂ ನೀವು ಆಯ್ಕೆಯಾಗಿ ಬಂದು 50 ವರ್ಷಗಳನ್ನು ದಾಟಿ ಮುಂದಕ್ಕೆ ಹೋಗಬೇಕೆನ್ನುವ ಮಾತನ್ನು ಹೇಳಿ ಈ ಸಂದರ್ಭದಲ್ಲಿ ತಮಗೆ ಶುಭ ಹಾರೈಕೆ ಮಾಡುತ್ತೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಈ ಸಭೆಯಲ್ಲಿ ತಮ್ಮನ್ನು ಉದ್ದೇಶಿಸಿ ಮಾತನಾಡುವಷ್ಟು ದೊಡ್ಡ ಮಟ್ಟಕ್ಕೆ ನಾವು ಬೆಳೆದಿಲ್ಲ ಎಂದು ಭಾವಿಸುತ್ತೇನೆ. ಕೇವಲ ಇಲ್ಲಿನ 14 ತಿಂಗಳ ನಮ್ಮ ಅನುಭವದಲ್ಲಿ ತಮ್ಮ ಸಂಘರ್ಷ, ಹೋರಾಟ ಮತ್ತು ಸಾಧನೆಯ ಪುಸ್ತಕವನ್ನು ಮೆಲುಕು ಹಾಕುವಂತಹ ಸಂದರ್ಭದಲ್ಲಿ ತಾವುಗಳು 42 ವರ್ಷಗಳಲ್ಲಿ ‘ಹೂ ತರುವ ಕೆಲಸ ಮಾಡಿದ್ದೇನೆಯೇ ಹೊರತು ಹುಲ್ಲು ತರುವ ಕೆಲಸ ಮಾಡಿಲ್ಲ’ ಎಂದು ಇದರಲ್ಲಿ ಬರೆದುಕೊಂಡಿದೆ. ಆದರೆ ನನಗನ್ನಿಸುತ್ತಿತ್ತು, ‘ಆಡು ಮುಟ್ಟದ ಸೊಪ್ಪಿಲ್ಲ, ನಮ್ಮ ಸಭಾಪತಿಯವರು ಶಿಕ್ಷಣ ಕ್ಷೇತ್ರದಲ್ಲಿ ಮಾಡದ ಕೆಲಸವಿಲ್ಲ’ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಾಗಾಗಿ ಇದನ್ನು ನೋಡಿದಂತಹ ಸಂದರ್ಭದಲ್ಲಿ ನನಗನ್ನಿಸುತ್ತಿತ್ತು, ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಇರಬಹುದು, ಪ್ರೌಢಶಾಲೆ ಇರಬಹುದು, ಕಾಲ್ಪನಿಕ ವೇತನ ಇರಬಹುದು ಅದೇ ನಿಟ್ಟಿನಲ್ಲಿ ಎನ್.ಇ.ಪಿ. ವಿಚಾರ ಇರಬಹುದು, ಓ.ಪಿ.ಎಸ್. ವಿಚಾರವಾಗಿ ಇರಬಹುದು, 7ನೇ ವೇತನ ವಿಚಾರವಾಗಿರಬಹುದು, ಡಿಪ್ಲೊಮಾ ಕಾಲೇಜುಗಳಿರಬಹುದು, ಐ.ಟಿ.ಐ. ಕಾಲೇಜುಗಳಿರಬಹುದು, ಪದವಿ ಕಾಲೇಜುಗಳಿರಬಹುದು, ಈ ತರಹ ಪೂರ್ಣ ಪ್ರಮಾಣದಲ್ಲಿ ಇಡೀ ಕ್ಷೇತ್ರದಲ್ಲಿ ಅನುದಾನಿತ ರೈತ ಶಾಲೆಗಳಿರಬಹುದು, ಆಂಗ್ಲ ಮಾಧ್ಯಮ ಶಾಲೆಗಳಿರಬಹುದು, ಕನ್ನಡ ಶಾಲೆಗಳಿರಬಹುದು, ಅನುದಾನಕ್ಕೆ ಒಳಪಡಿಸುವ ವಿಚಾರವಾಗಿರಬಹುದು, ಕಾಲ್ಪನಿಕ ವೇತನಕ್ಕಾಗಿ ತಾವು ಕೊಟ್ಟಂತಹ ವರದಿ ವಿಚಾರವಾಗಿರಬಹುದು, ಶಿಕ್ಷಕರಿಗೆ ಬಡ್ತಿ ಇರಬಹುದು, ಉಪನ್ಯಾಸಕರಿಗೆ ಬಡ್ತಿ ಇರಬಹುದು, ಈ ರೀತಿ ಸರಿ ಸುಮಾರು 31 ವಿಚಾರಗಳಲ್ಲಿ ತಮ್ಮ ಸಾಧನೆ ಖಂಡಿತವಾಗಿಯೂ ಇಲ್ಲಿ ಕುಳಿತಿರುವ ನಮಗೆ ದಾರಿ ದೀಪವಾಗುತ್ತದೆಂದು ಭಾವಿಸುತ್ತೇನೆ. ಆಗಿಂದಾಗ್ಗೆ ತಾವುಗಳು ಹೊಸದಾಗಿ ಬಂದಂತಹ ನಮಗೆ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಸಂದರ್ಭದಲ್ಲಿ ಎಲ್ಲಿ ತಪ್ಪು ಮಾಡುತ್ತೇವೋ ಎಂದು ಒಂದು ಕಡೆ ಭಯವೂ ಆಗುತ್ತಿರುತ್ತದೆ. ತಾವು ಮುಗುಳುನಗೆ ನಕ್ಕಂತಹ ಸಂದರ್ಭದಲ್ಲಿ ನಿಮ್ಮ 45 ವರ್ಷಗಳ ಅನುಭವ ನೀವು ನಮ್ಮನ್ನು condemn ಮಾಡುತ್ತಿದ್ದೀರಿ ಎಂದು ನನಗನ್ನಿಸುತ್ತಿರುತ್ತದೆ. ಏಕೆಂದರೆ, ಈ ಕ್ಷೇತ್ರದಲ್ಲಿ ನಿಮಗಿರುವಂತಹ ಅನುಭವ ನಮಗ್ಯಾರಿಗೂ ಇಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಸತತವಾಗಿ ನಿಮ್ಮನ್ನು ಆಯ್ಕೆ ಮಾಡುತ್ತಿದ್ದಾರೆ ಎಂದರೆ ಅಷ್ಟು ಸುಲಭವಾದ ವಿಚಾರವಲ್ಲ.

ಆಯ್ಕೆ ಮಾಡುವಂತಹವರು ಗುರುಗಳು ಅಂದರೆ ಪಾಠ ಹೇಳಿಕೊಡುವಂತಹವರು. ಪಾಠ ಹೇಳಿಕೊಡುವಂತಹವರ ಪ್ರತಿನಿಧಿ ಯಾರು ಬೇಕೆಂದು ನಿರ್ಧಾರ ಮಾಡುತ್ತಾರೆಂದರೆ ಖಂಡಿತ ನಿಮ್ಮ ಸಾಧನೆಯನ್ನು ಮತ್ತೆ ಇತಿಹಾಸದ ಪುಟಗಳಲ್ಲಿ ಯಾರೂ ಬರೆಯುವುದಕ್ಕೆ ಸಾಧ್ಯವೇ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ನಿಟ್ಟಿನಲ್ಲಿ ನೀವು ಮುಗುಳುನಗೆ ನಕ್ಕಂತಹ ಸಂದರ್ಭದಲ್ಲಿ ನಮಗನ್ನಿಸುವಂತಹದ್ದು 'ಏ ದಡ್ಡರಾ, ನೀವೆಲ್ಲಾ ಇಲ್ಲಿ ಕುಳಿತಿದ್ದೀರಿ 75 ಜನ, ನಾನು 45 ವರ್ಷ ಸೇವೆ ಮಾಡಿದ್ದೇನೆ'. ನಾವು ಒಬ್ಬರಿಗೊಬ್ಬರು ಮಾತನಾಡುವಂತಹ ಸಂದರ್ಭದಲ್ಲಿ, ನಿಯಮ ಮೀರಿ ವರ್ತಿಸುವಂತಹ ಸಂದರ್ಭದಲ್ಲಿ ಖಂಡಿತ ನಿಮ್ಮ ಮುಗುಳುನಗೆ ನಮಗೆಲ್ಲಾ ಪಾಠವಾಗಬೇಕು. ಆದರೂ ಸಹ ಇಲ್ಲಿ ಸಾಕಷ್ಟು ಜನ ನಾವದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ನಮಗಿಷ್ಟ ಬಂದ ರೀತಿಯಲ್ಲಿ ವರ್ತನೆ ಮಾಡುತ್ತೇವೆ. ನಿಮ್ಮ ಸಾಧನೆಯನ್ನು ಯಾರೂ ಕೂಡ ಸರಿಗಟ್ಟುವುದಕ್ಕೆ ಸಾಧ್ಯವೇ ಇಲ್ಲ. ಅದೇ ನಿಟ್ಟಿನಲ್ಲಿ ಈಗ ಹೊಸದಾಗಿ ಬಂದಿರುವಂತಹ ನಾವುಗಳು ಒಂದಷ್ಟು ವಿಚಾರಧಾರೆಗಳನ್ನು ನೋಡಿದಂತಹ ಸಂದರ್ಭದಲ್ಲಿ, ತಾವು ನಡೆದುಬಂದ ಹಾದಿಯನ್ನು ಮೆಲುಕು ಹಾಕಿದಂತಹ ಸಂದರ್ಭದಲ್ಲಿ ಮತ್ತೊಮ್ಮೆ ಇತಿಹಾಸದ ಪುಟಗಳಲ್ಲಿ ಬೇರೆ ಯಾರೂ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನಿಸುತ್ತದೆ ಹೊರತು, ಮಾಡುತ್ತೇವೆ ಎನ್ನುವ ಧೈರ್ಯ ಮಾಡುವಂತಹವರು ಈಗಿನ ಕಾಲಘಟ್ಟಕ್ಕೆ ಸಾಧ್ಯನೇ ಇಲ್ಲ. ಜೊತೆಗೆ ನನಗೊಂದು ಮಾತನ್ನು ಹೇಳಿದಿರಿ. ನಾನು ಚುನಾವಣೆಗೆ ನಿಂತಾಗ ತಮ್ಮ ಆಶೀರ್ವಾದ ಕೇಳಿದಂತಹ ಸಂದರ್ಭದಲ್ಲಿ ನನಗೆ ಈ ರೀತಿ ಹೇಳಿದರು. ಈ ಕ್ಷೇತ್ರ ಸಂಪೂರ್ಣವಾಗಿ ಕಲುಷಿತವಾಗಿದೆ, ಆದರೆ ಈ ಕಲುಷಿತ ಕ್ಷೇತ್ರದಲ್ಲಿ ಖಂಡಿತವಾಗಿಯೂ ಒಳ್ಳೆಯದು ಮಾಡುವುದಕ್ಕೆ ನಿನ್ನ ಕೈಯಿಂದ ಸಾಧ್ಯವಾಗುತ್ತದೆಯೇ ಎಂದು ಹೇಳಿದ್ದಿರಿ. ಖಂಡಿತ ಆದಷ್ಟು ಮಟ್ಟಿಗೆ ಈ ಶಿಕ್ಷಣ ಕ್ಷೇತ್ರದಲ್ಲಿ; ನಾನು ಸುಮಾರು 1976ರಿಂದ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವುದರಿಂದ ಆದಷ್ಟು ನಿಮ್ಮ ದಾರಿಯಲ್ಲಿ ಎಲ್ಲೂ ಒಂದಷ್ಟು ವ್ಯತ್ಯಾಸವಾಗದಿದ್ದ ರೀತಿಯಲ್ಲಿ ನಾವು ನಮ್ಮ ದಾರಿಯನ್ನು ಸವೆಸುತ್ತೇವೆ, ನೀವು ನಮಗೆ ಮಾರ್ಗದರ್ಶಕರಾಗಬೇಕು. ಅದೇ ನಿಟ್ಟಿನಲ್ಲಿ ನಿಮ್ಮಿಂದ ಕಲಿಯುವುದು ಸಾಕಷ್ಟಿದೆ ಎಂದು ಹೇಳುತ್ತಾ, ಶಿಕ್ಷಕರು ಸದಾ ನಿಮ್ಮನ್ನು ನೆನೆಯುತ್ತಾರೆ. ಏಕೆಂದರೆ, ನೀವು ಸಚಿವರಾಗಿದ್ದಾಗ ತೆಗೆದುಕೊಂಡಂತಹ ನಿರ್ಣಯಗಳು ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿವೆ. ಮತ್ತೋರ್ವರು ಆ ರೀತಿ ನಿರ್ಧಾರ ತೆಗೆದುಕೊಳ್ಳಬೇಕೆಂದರೆ, ಆ ರೀತಿ ದೃಢಸಂಕಲ್ಪ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಎಂದು ಹೇಳುತ್ತಾ, ನಿಮ್ಮ 45 ವರ್ಷಗಳು ತಾವು ಕೊಟ್ಟಂತಹ ದಾರಿ ನಮಗೆಲ್ಲಾ ದಾರಿದೀಪವಾಗಲಿ ಎಂದು ಹೇಳುತ್ತಾ, ದೇವರು ನಿಮಗೆ ಒಳ್ಳೆಯದು ಮಾಡಬೇಕು, ಅದೇ ನಿಟ್ಟಿನಲ್ಲಿ ಸದಾ ನಿಮ್ಮನ್ನು ನೆನೆಸುತ್ತೇವೆ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ 45 ವರ್ಷಗಳಿಂದ ಆಯ್ಕೆಯಾಗುವುದು ಮತ್ತು ಎಲ್ಲಾ ಶಾಸಕರ ಮನಸ್ಸಿನಲ್ಲಿ ಉಳಿಯುವುದೆಂದರೆ, ಒಬ್ಬ ಹೊರಟ್ಟಿಗೆ ಮಾತ್ರ ಸಾಧ್ಯ, ಮತ್ತೊಬ್ಬ ಹೊರಟ್ಟಿಯವರಿಗೆ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ, ನಮ್ಮ ಭಾಗದಲ್ಲಿ ತುಂಬಾ ಪ್ರಭಾವಶಾಲಿಯಾದಂತಹ ವ್ಯಕ್ತಿ ನೀವು. ಇಲ್ಲಿದ್ದಾಗ ನಾವು ಶಾಸಕರು ನಿಮ್ಮನ್ನು ಭೇಟಿ ಮಾಡುತ್ತೇವೆ.

(ಮುಂದು)

(782) 19.08.2025 12.50 ಹೆಚ್‌ವಿ.ಎಂಡಿ(ಬಿಎನ್‌ಎಸ್) (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಸದನ ನಡೆಯುವಂತಹ ಸಂದರ್ಭದಲ್ಲಿ ನಾವು ಶಾಸಕರುಗಳು ನಿಮ್ಮನ್ನು ಭೇಟಿ ಮಾಡುತ್ತೇವೆ. ಆದರೆ, ಕೊಪ್ಪಳ ಭಾಗದಲ್ಲಿ ತಾವು ಬರುತ್ತೀರಿ ಎಂದು ಗೊತ್ತಾದಾಗ, ಹಲವಾರು ಜನ ಶಿಕ್ಷಕರು ನಿಮ್ಮನ್ನು ಭೇಟಿ ಮಾಡಲು ಬರುತ್ತಾರೆ. ಅವರಲ್ಲಿ ನಮ್ಮ ಯಜಮಾನರೂ ಸಹ ಒಬ್ಬರಾಗಿದ್ದಾರೆ. ತಾವು ಪ್ರತಿ ಬಾರಿ ಚುನಾವಣೆಯನ್ನು ಎದುರಿಸಿದಾಗ, ಎಷ್ಟೊಂದು ನಿರಾಯಾಸವಾಗಿ ಗೆದ್ದು ಬರುತ್ತಿದ್ದೀರಿ. ನಮ್ಮ ಭಾಗದ ಜನರು "ಅವರನ್ನು ಬಿಟ್ಟರೆ, ಮತ್ತ್ಯಾರು ಆಯ್ಕೆಯಾಗಿ ಬರುತ್ತಾರೆ?" ಎನ್ನುವ ಮಾತನ್ನು ಹೇಳುತ್ತಾರೆ. ಪ್ರತಿಯೊಬ್ಬ ಶಿಕ್ಷಕರು ನಿಮ್ಮಿಂದ ಎಷ್ಟೊಂದು ಕಲಿತುಕೊಂಡಿದ್ದಾರೆ. ತಮ್ಮ ಬಗ್ಗೆ ಅವರಿಗೆ ಅಪಾರವಾಗಿರುವ ಪ್ರೀತಿ ಮತ್ತು ಅಭಿಮಾನಗಳಿವೆ. ಕಳೆದ ಡಿಸೆಂಬರ್‌ನಲ್ಲಿ "ಅವ್ವಾ" ಟ್ರಸ್ಟ್ ವತಿಯಿಂದ ನಡೆದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮಕ್ಕೆ ನಾನು ಬಂದಾಗ, ಅಲ್ಲಿನ ವಾತಾವರಣವನ್ನು ನೋಡಿ ನನಗೆ ಬಹಳ ಸಂತೋಷವಾಗಿತ್ತು. ತಾಯಿಯ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುವಂತಹ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಅಲ್ಲಿ ಸೇರಿದ್ದ ಜನರು ತಮ್ಮ ಬಗ್ಗೆ ಇಟ್ಟುಕೊಂಡಿರುವ ಪ್ರೀತಿ ಅಭಿಮಾನವನ್ನು ನೋಡಿ "ಹೊರಟ್ಟಿ ಸಾರ್ ಏನು" ಎನ್ನುವುದು ನನಗೆ ಅರ್ಥವಾಯಿತು.

ಸನ್ಮಾನ್ಯ ಸಭಾಪತಿಯವರೇ, ನಾನು ವಿಧಾನ ಪರಿಷತ್ತಿನ ಸದಸ್ಯಳಾದ ಮೇಲೆ ತಮ್ಮ ಸಂಪರ್ಕಕ್ಕೆ ಬಂದೆ. ಆಗ ತಾವು "ಒಬ್ಬ ಹಿಂದುಳಿದ ವರ್ಗದ ಹೆಣ್ಣುಮಗಳಾಗಿ ವಿಧಾನ ಪರಿಷತ್ತಿನ ಸದಸ್ಯಳಾಗಿರುವುದಕ್ಕೆ ನೀನು ಪುಣ್ಯ ಮಾಡಿದ್ದೀ, ನೀನು ಹಿಂದುಳಿದ ವರ್ಗದ ಮಹಿಳೆ, ಚೆನ್ನಾಗಿ ಬೆಳೆಯಬೇಕು. ಸದನದಲ್ಲಿ ನಡೆಯುವಂತಹ ವಿಷಯಗಳ ಬಗ್ಗೆ ಚೆನ್ನಾಗಿ ತಿಳಿದುಕೋ" ಎನ್ನುವ ಅಭಿಮಾನದ ಮಾತುಗಳನ್ನು ಹೇಳಿದಾಗ ನನಗೆ ಬಹಳ ಸಂತೋಷವಾಗಿತ್ತು. ನಾನು ಮತ್ತು ನನ್ನ ಸ್ನೇಹಿತರಾದ ಶ್ರೀ ಪ್ರಾಣೇಶ್‌ರವರು ಒಟ್ಟಿಗೆ ಸೇರಿದಾಗ, ತಮ್ಮ ಬಗ್ಗೆ ಎರಡು ಮಾತುಗಳನ್ನಾಡದಿದ್ದರೆ ನಮಗೆ ಸಮಾಧಾನವಾಗುವುದಿಲ್ಲ. "ನಾನು ಹುಬ್ಬಳ್ಳಿಗೆ ಹೋದರೆ, ಸಾರ್ ಅವರನ್ನು ಭೇಟಿಯಾಗಿಯೇ ಬಂದಿರುತ್ತೇನೆ. ಆಗ ನಿನ್ನ ವಿಷಯಗಳನ್ನು ಮಾತನಾಡಿರುತ್ತೇನೆ" ಎಂದು ನನ್ನ ಸ್ನೇಹಿತನಾದ ಶ್ರೀ ಪ್ರಾಣೇಶ್ ಹೇಳುತ್ತಿದ್ದ. ಮೊನ್ನೆ ಯು.ಎಸ್.ಎ.,ಯಲ್ಲಿ ನಡೆದಂತಹ NATIONAL LEGISLATORS' CONFERENCE, (N.L.C)ಗೆ ನನ್ನನ್ನು, ಶ್ರೀಮತಿ ಬಲ್ಕೀಶ್ ಬಾನು ಮತ್ತು ಶ್ರೀಮತಿ ಭಾರತಿ ಶೆಟ್ಟಿ ಅವರನ್ನು ನೀವು ಆಯ್ಕೆ ಮಾಡಿ ಕರೆದುಕೊಂಡು ಹೋಗಿದ್ದೀರಿ. ಅಲ್ಲಿರುವ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಅವುಗಳ ಪರಿಚಯ ಮಾಡಿಕೊಟ್ಟಿದ್ದೀರಿ, ಕೆಲವೊಂದು ಚರ್ಚೆಗಳಲ್ಲಿ ನಾವು ಸಹ ಭಾಗಿಯಾಗಿದ್ದೆವು. ಒಬ್ಬ ತಂದೆಯ ಜೊತೆಗೆ ಕುಳಿತುಕೊಂಡು ಊಟ ಮಾಡುವಂತಹ ಅವಕಾಶವನ್ನು ತಾವು ನಮಗೆ ಕಲ್ಪಿಸಿಕೊಟ್ಟಿದ್ದೀರಿ, ಅದು ನಮಗೆ ಮರೆಯಲಾಗದ ಘಟನೆಯೆಂದು ನಾನು ಭಾವಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶಂಕರಣ್ಣ ಮನವಳ್ಳಿಯವರ ಕಾರ್ಯಕ್ರಮದಲ್ಲಿ ತಮ್ಮನ್ನು ನೋಡಿದಾಗ, ವೇದಿಕೆಯ ಮೇಲೆ ತಾವು ಇದ್ದರೆ ಕಳೆಕಟ್ಟುತ್ತದೆ. ನಮ್ಮ ಭಾಗದಲ್ಲಿ ತಾವು ಬಹಳಷ್ಟು ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡಿರುವಂತಹ ವ್ಯಕ್ತಿಯಾಗಿದ್ದೀರಿ. ಹುಬ್ಬಳ್ಳಿ-ಕೊಪ್ಪಳದಿಂದ ಹಿಡಿದು ಬೆಂಗಳೂರಿನವರೆಗೆ ತಮ್ಮ ಬಗ್ಗೆ ಜನರಿಗೆ ಅಪಾರವಾಗಿರುವ ಅಭಿಮಾನವಿದೆ. ಶಿಕ್ಷಕರಿಗಿಂತ ಹೆಚ್ಚು ವಿದ್ಯಾರ್ಥಿಗಳಿಗೆ ತಮ್ಮ ಬಗ್ಗೆ ಅಭಿಮಾನವಿದೆ. ನಮ್ಮ ಗವಿಶ್ರೀ ಶ್ರೀಗಳು ನಿಮ್ಮನ್ನು ಬಹಳ ನೆನಪು ಮಾಡಿಕೊಳ್ಳುತ್ತಿರುತ್ತಾರೆ. ಒಂದು ಕಾರ್ಯಕ್ರಮದಲ್ಲಿ ಶ್ರೀಗಳನ್ನು ಭೇಟಿ ಮಾಡಿದ್ದಾಗ, "ಅಪ್ಪಾ, ನಾನು ಅವ್ವಾ ಕಾರ್ಯಕ್ರಮಕ್ಕೆ ಹೋಗಿದ್ದೆ; ಮಾನ್ಯ ಸಭಾಪತಿಗಳು ನನ್ನನ್ನು ಆಹ್ವಾನಿಸಿದ್ದರು" ಎಂದು ಹೇಳಿದಾಗ, ಅವರು "ಹೌದು ನಾನು ಸಹ ಹೋಗಿದ್ದೆ, ಅವರ ಫಾರಂಹೌಸ್‌ಗೆ ಒಮ್ಮೆ ಭೇಟಿ ನೀಡಬೇಕು. ಅವರು ಸಾಕಿರುವಂತಹ ಗೋವುಗಳನ್ನು ನೋಡಬೇಕು" ಎಂದು ಹೇಳಿ ತಮ್ಮ ಬಗ್ಗೆ 2-3 ನಿಮಿಷಗಳ ಕಾಲ ಮಾತನಾಡಿದ್ದರು. ಇಂತಹ ವ್ಯಕ್ತಿಯ ಜೊತೆಗೆ ನಾವಿದ್ದೇವೆ ಎನ್ನುವುದೇ ಬಹಳ ಸಂತೋಷದ ವಿಷಯವಾಗಿದೆ. ತಾವು ಇನ್ನೂ ಮುಂದೆಯೂ ಸಭಾಪತಿಗಳಾಗಿ ಮುಂದುವರೆಯಬೇಕೆನ್ನುವುದು ನನ್ನ ಅಭಿಲಾಷೆಯಾಗಿದೆ. ಮಾನ್ಯ ಐವನ್ ಡಿ'ಸೋಜಾರವರು ಹೇಳಿದಂತೆ, ಮುಂದೆ ಇನ್ನೂ ಹೆಚ್ಚಿನ ಅವಕಾಶಗಳು ತಮಗೆ ಸಿಗಲಿ ಎಂದು ಆಶಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ನನಗೂ ಸಹ ತಮ್ಮ ಬಗ್ಗೆ ಅಭಿಮಾನವಿದೆ. ತಾವು ನಮ್ಮ ಜಿಲ್ಲೆಯವರಾಗಿದ್ದೀರಿ. ಮುಧೋಳು ತಾಲ್ಲೂಕಿನ ಚಿಕ್ಕಲಗುಂಡಿ ಗ್ರಾಮದಿಂದ ಮಧ್ಯಮ ರೈತಾಪಿ ಕುಟುಂಬದಿಂದ ಬಂದಂತಹ ವ್ಯಕ್ತಿ ತಾವು. ನಾವು ಚಿಕ್ಕವರಾಗಿದ್ದಾಗ ಭಾರತೀ ಜನಸೇವೆಯಿಂದ ರಾಜಕಾರಣ ಮಾಡುತ್ತಾ, ಭಾರತೀಯ ಜನತಾ ಪಕ್ಷವನ್ನು ಸೇರಿಕೊಂಡಂತಹ ದಿನಗಳಲ್ಲಿ ನಮ್ಮ ಭಾಗದವರು ಒಬ್ಬರು ವಿಧಾನ ಪರಿಷತ್ತಿನಲ್ಲಿದ್ದಾರೆ, ಶಿಕ್ಷಕರ ಪ್ರತಿನಿಧಿಯಾಗಿ ನಮ್ಮ ರಾಜ್ಯದ ಎಲ್ಲ ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸುವಂತಹ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಅಂಶ ನಮಗೆ ಬಹಳ ಹೆಮ್ಮೆಯನ್ನು ತಂದು ಕೊಟ್ಟಿತ್ತು. ಶಿಕ್ಷಕರ ಪ್ರತಿನಿಧಿಯಾಗಿ ಸತತವಾಗಿ 8 ವರ್ಷಗಳ ಕಾಲ ಈ ಸದನದ ಸದಸ್ಯರಾಗಿ ಕೆಲಸ ಮಾಡುವುದು ಸಣ್ಣ ಮಾತಲ್ಲ.

ಸನ್ಮಾನ್ಯ ಸಭಾಪತಿಯವರೇ, ಚುನಾವಣೆಗಳನ್ನು ಬಹುತೇಕ ಸೋಲು ಅಥವಾ ಗೆಲುವಿನ ಕಡೆಗೆ ತೆಗೆದುಕೊಂಡು ಹೋಗುವವರು ನಮ್ಮ "ಮಾಸ್ತರು"ಗಳು ಎನ್ನುವುದು ಮಾನ್ಯ ಹೆಚ್.ಕೆ.ಪಾಟೀಲ್ ಮತ್ತು ಮಾನ್ಯ ಎಂ.ಬಿ.ಪಾಟೀಲ್‌ರವರಿಗೂ ಗೊತ್ತಿದೆ. ಅವರುಗಳು ನಮ್ಮ ಪರವಾಗಿ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಹಳ್ಳಿಯ ಜನರಿಗೆ ತಿಳುವಳಿಕೆಯನ್ನು ನೀಡುವುದು ನಿರಂತರವಾಗಿ ನಡೆದುಕೊಂಡು ಬಂದಿದೆ. ಶಿಕ್ಷಕರು ನೇರವಾಗಿ ಚುನಾವಣೆಯ ಪ್ರಚಾರಕ್ಕೆ ಇಳಿಯದೇ ಇದ್ದರೂ ಸಹ ನಮ್ಮ ಬಗ್ಗೆ ಒಳ್ಳೆಯ ಅಥವಾ ಕೆಟ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಹ ರೀತಿ ಜನರ ಮನಸ್ಸಿನಲ್ಲಿ ನಾಟುತ್ತದೆ. ಚುನಾವಣೆಯ ಸಂದರ್ಭದಲ್ಲಿ ಪರೋಕ್ಷವಾಗಿ ಅವರುಗಳು

ಮಾತನಾಡುವಂತಹ ಮಾತುಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದು ಆ ವ್ಯಕ್ತಿಯ ಪರವಾಗಿ ಮತ ಹಾಕಿರುವಂತಹ ಸಂದರ್ಭಗಳನ್ನು ಸಹ ನಾವು ನೋಡಿದ್ದೇವೆ. ಶಿಕ್ಷಕರುಗಳಿಂದಲೇ ಚುನಾವಣೆಗಳನ್ನು ಗೆಲ್ಲುವುದು ಅಥವಾ ಸೋಲುವಂತಹ ಪ್ರಸಂಗಗಳನ್ನು ನಾವು ನೋಡಿದ್ದೇವೆ.

ಇಂತಹ ಶಿಕ್ಷಕರ ಪ್ರತಿನಿಧಿಯಾಗಿ ಅವರುಗಳ ಬೇಕು-ಬೇಡಗಳಿಗೆ ಸ್ಪಂದನೆ ಮಾಡುವುದಷ್ಟೇ ಅಲ್ಲ, ಅವರುಗಳನ್ನು ಹಿಡಿಯುವುದು ಬಹಳ ಕಷ್ಟಕರವಾದ ಸಂಗತಿಯಾಗಿದೆ. ನಮ್ಮಲ್ಲಿರುವ ಶಿಕ್ಷಕರ ಪ್ರತಿನಿಧಿಗಳಾದ ಶ್ರೀ ಶಶಿಲ್ ಜಿ.ನಮೋಶಿ ಮತ್ತು ಶ್ರೀ ಎಸ್.ವ್ಹಿ.ಸಂಕನೂರ್‌ರವರು ಸದನದಲ್ಲಿ ಶಿಕ್ಷಕರ ಬಗ್ಗೆ ಜವಾಬ್ದಾರಿಯಿಂದ ಎದ್ದು ನಿಂತು ಮಾತನಾಡುತ್ತಾರೆ. ನಾವೆಲ್ಲರೂ ಮಾತನಾಡುತ್ತೇವೆ ಆದರೆ, ಶಿಕ್ಷಕರ ಬಗ್ಗೆ ಸಮಸ್ಯೆಗಳು ಬಂದಾಗ, ನೇರವಾಗಿ ಅವರು ಹೊರಟುಬಿಡುತ್ತಾರೆ. ಎಲ್ಲಾದರು ಶಿಕ್ಷಕರು ಮುಷ್ಕರ ಮಾಡುತ್ತಿದ್ದಾರೆಂದರೆ ಇವರುಗಳು ಅಲ್ಲಿ ಹಾಜರಿರುತ್ತಾರೆ. ಶಿಕ್ಷಕರುಗಳು ತಮ್ಮದೇ ಬಳಗ ಎನ್ನುವ ರೀತಿಯಲ್ಲಿ ವರ್ತಿಸುತ್ತಾರೆ. ತಾವು ಈ ವ್ಯವಸ್ಥೆಯನ್ನು ಬಹಳ ಉತ್ತಮವಾಗಿರುವ ರೀತಿಯಲ್ಲಿ ಕಾಯ್ದುಕೊಂಡು ಬಂದಿದ್ದೀರಿ, ತಾವು ಆ ಗುಟ್ಟನ್ನು ಯಾರಿಗೂ ಬಿಟ್ಟುಕೊಡುತ್ತಿಲ್ಲ. ಏನು ಗುಟ್ಟು ಎನ್ನುವುದನ್ನು ತಿಳಿಯಲಾರದ ಸ್ಥಿತಿಯಲ್ಲಿ ನಾವೆಲ್ಲರೂ ಇದ್ದೇವೆ. ಏಕೆಂದರೆ, ಸೋತು-ಗೆದ್ದು, ಗೆದ್ದು-ಸೋತು ಬಂದಿರುವವರಿಗೆಲ್ಲ ತಮ್ಮ ಗೆಲುವು ಮಾತ್ರ ಕೌತುಕಮಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತಾವು ಶಿಕ್ಷಕರ ಪ್ರತಿನಿಧಿಯಾಗಿರುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದೀರಿ. ಈ ರಾಜ್ಯದ ಶಿಕ್ಷಣ ಕ್ಷೇತ್ರ ಅಭಿವೃದ್ಧಿಗೆ ತಮ್ಮ ಕೊಡುಗೆ ಅಪಾರ ಮತ್ತು ಮಹತ್ವಪೂರ್ಣವಾಗಿದೆ. ಇದನ್ನು ಯಾರೂ ಕೂಡ ಅಲ್ಲಗೆಳೆಯುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲ ಬಹಳ ಬೇಗನೆ ಕೋಪಗೊಳ್ಳುವಂತಹ ಸ್ವಭಾವದವರು. ನನಗೂ ಜನ " ಪೂಜಾರ್‌ರವರು ಸಿಟ್ ಆಕ್ತಾರಾ" ಎಂದು ಜನ ಹೇಳುತ್ತಾರೆ. ಎಲ್ಲ ಸಂದರ್ಭಕ್ಕೂ ಇವರು ಸಿಟ್ಟಿಗೇಳುತ್ತಾರೆ ಎನ್ನುವ ಆರೋಪ ನನ್ನ ಮೇಲಿದೆ. ನಮ್ಮಲ್ಲಿ ಕುದುರೆಗೆ "ಮಗಡ" ಹಾಕುತ್ತೇವೆ. ಕುದುರೆ ದಾರಿಯಲ್ಲಿ ಹೋಗುವಾಗ ಆ ಕಡೆ, ಈ ಕಡೆ ನೋಡದೇ ನೇರವಾಗಿ ಗುರಿ ಇರುವ ಕಡೆಯೇ ಹೋಗಬೇಕೆಂದು "ಮಗಡ" ಅನ್ನು ಕಟ್ಟಿರುತ್ತಾರೆ. ತಮಗೆ ಭಗವಂತ ಆ ರೀತಿ "ಮಗಡ" ಕಟ್ಟಿ ಕಳುಹಿಸಿರಬಹುದೆಂದು ನನಗನ್ನಿಸುತ್ತಿದೆ. ಸರ್ವಾಂಗೀಣ ಶಿಕ್ಷಣ ಅಭಿವೃದ್ಧಿಯ ಜೊತೆಗೆ ನೀವು ಇರುವಂತಹ ಪಾರ್ಟಿ ವ್ಯವಸ್ಥೆಯಲ್ಲಿ ಎಲ್ಲರ ವಿಶ್ವಾಸವನ್ನು ಗಳಿಸಿಕೊಂಡಿದ್ದೀರಿ. ಎಲ್ಲರೂ ತಮ್ಮ ಪರವಾಗಿ ನಿಲ್ಲುವಂತೆ ಮಾಡಿದ್ದೀರಿ. ಆ ಚಾಣಕ್ಯನೀತಿ ನಿಮ್ಮಲ್ಲಿ ರಕ್ತಗತವಾಗಿ ಬಂದಿದೆ. ನಮ್ಮ ಜಿಲ್ಲೆಯ ಬಹಳ ಜನರಿಗೆ ಇದು ಬಂದಿಲ್ಲ. ಏನಾದರೂ ಸಾಧನೆ ಮಾಡಬೇಕೆಂದು ಹೊರಟು ನಿಂತ ಬಹಳ ಜನರು ಸೋತು ಹೋಗಿದ್ದಾರೆ. ಆದರೆ, ತಾವು ಸೋಲು ಅರಿಯದ ಸರದಾರನ ರೀತಿಯಲ್ಲಿ ೮ ಬಾರಿ ಶಿಕ್ಷಕರ ಪ್ರತಿನಿಧಿಯಾಗಿ ಈ ಸದನಕ್ಕೆ ಬಂದು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದೀರಿ.

ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷವರು ಮತ್ತು ವಿರೋಧ ಪಕ್ಷದವರು ಪರಸ್ಪರ ಜಗಳವಾಡುತ್ತಿರುತ್ತೇವೆ, ತಾವು ಕುಳಿತುಕೊಂಡಿರುವ ಆ ಸ್ಥಾನವನ್ನು ನಿಭಾಯಿಸುವುದು ಕಷ್ಟಕರವಾಗಿರುವ ಕೆಲಸವಾಗಿದೆ. ತಾವು ಬಹಳ ಚಾಕಚಕ್ಯತೆಯಿಂದ ಅದನ್ನು ನಿಭಾಯಿಸಿಕೊಂಡು ಬಂದಿದ್ದೀರಿ. ಇದರ ಜೊತೆಗೆ ತಮ್ಮ

ಮೇಲೆ ತಾಯಿಯ ಆಶೀರ್ವಾದ ಸಹ ಇದೆಯೆಂದು ನಾನು ಭಾವಿಸುತ್ತೇನೆ. ಆಲಗುಂಡಿ ಗ್ರಾಮದಲ್ಲಿ "ಅವ್ವಾ ಸೇವಾ ಟ್ರಸ್ಟ್" ಕಟ್ಟಿ ಶಿಕ್ಷಣದ ಬಗ್ಗೆ ಮಹತ್ವ ನೀಡುವುದರ ಜೊತೆಗೆ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಶಿಕ್ಷಣ ಸಂಸ್ಥೆ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವುದಕ್ಕೆ ಇದು ಮಾದರಿಯಾಗಿದೆ. ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ಮತ್ತು ಪಿ.ಯು.ಸಿ., ತರಗತಿಗಳು ಯಾವ ರೀತಿಯಲ್ಲಿ ನಡೆಯುತ್ತವೆ ಎನ್ನುವುದನ್ನು ಅಲ್ಲಿಗೆ ಹೋಗಿ ನೋಡಿ ಬರಬೇಕಾಗಿದೆ. ನಮ್ಮ ಬಹಳಷ್ಟು ಜನ ಸದಸ್ಯರಿಗೆ ತಾವು ಆ ಶಿಕ್ಷಣ ಸಂಸ್ಥೆಗಳನ್ನು ನೋಡಲು ಆಮಂತ್ರಣವನ್ನು ನೀಡಿದ್ದೀರಿ ಅವರೆಲ್ಲರೂ ಹೋಗಿ ನೋಡಿ ಬಂದಿದ್ದಾರೆ. ಆ ಸಂಸ್ಥೆಗಳನ್ನು ತಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೀರಿ. ತಮ್ಮ ಬಗ್ಗೆ ತಾಯಿಯವರಿಗೆ ಇದ್ದಂತಹ ಪ್ರೀತಿ ಆಶೀರ್ವಾದ ಮತ್ತು ವಿಶ್ವಾಸ ಎಷ್ಟಿತ್ತು ಎನ್ನುವುದು ತುಲನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬ ಮನುಷ್ಯನಲ್ಲಿ ಇರಬೇಕಾದ ಉತ್ತಮ ಗುಣಗಳನ್ನು ತಾವು ಅಳವಡಿಸಿಕೊಂಡಿದ್ದೀರಿ. ಭಗವಂತ ತಮಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಾಧಾನ ಮತ್ತು ನೆಮ್ಮದಿಯ ಜೀವನವನ್ನು ಸದಾ ಕಾಲ ನೀಡಲಿ ಎಂದು ಹಾರೈಸುತ್ತೇನೆ. ಈ ಸದನವನ್ನು ತಾವು ಹೃದಯಪೂರ್ವಕವಾಗಿ ಮತ್ತು ಚಾಕಚಕ್ಯತೆಯಿಂದ ನಿಭಾಯಿಸಿಕೊಂಡು ಹೋಗಿದ್ದೀರಿ, ನಮ್ಮ ಕಡೆ ಹೆಚ್ಚಿನ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತಾ, ಮುಂದಿನ ತಮ್ಮ ಜೀವನ ನೆಮ್ಮದಿಯಾಗಿ ಸುಗಮವಾಗಿ ಸಾಗಲಿ ಎಂದು ಹಾರೈಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

(ಮುಂದುವರಿದಿದೆ)

(783) 19.8.2025 1.00 ಪಿಕೆ:ಎಕೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಾವು ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ 45 ವರ್ಷಗಳ ಸುದೀರ್ಘ ಅವಧಿಯನ್ನು ಪೂರೈಸಿದ್ದೀರಿ. ನಿಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ನಾನು 2002 ರಲ್ಲಿ ಎಲೆಕ್ಟ್ ಆದೆ. ಬೆಂಗಳೂರಿನಲ್ಲಿ ನಡೆದ ದೊಡ್ಡ ಮಟ್ಟದ ಚುನಾವಣೆಯಲ್ಲಿ ಜೆಡಿ(ಎಸ್) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲ್ಲುವುದಕ್ಕೆ ಆಗುವುದಿಲ್ಲ ಎನ್ನುವಂತಹ ಸಂದರ್ಭದಲ್ಲಿ ನಾನು ಗೆದ್ದು ಆಯ್ಕೆಯಾದೆ. ಈ ಚುನಾವಣೆ ಆದಮೇಲೆ ಶಾಸಕರ ಭವನದ ನಿಮ್ಮ ಕೊಠಡಿಯಲ್ಲಿ ನನ್ನನ್ನು ಉಪಹಾರಕ್ಕಾಗಿ ಕರೆದಿರಿ. ನನಗೆ ಅದು ಜ್ಞಾಪಕ ಇದೆ. ಆವತ್ತು ತಾವು ಒಂದು ಮಾತು ಹೇಳಿದಿರಿ. ನೋಡು ಪುಟ್ಟಣ್ಣ, ನೀನು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೆ, ಸೆನೆಟ್ ಮೆಂಬರ್ ಆಗಿದ್ದೆ, ಸಿಂಡಿಕೇಟ್ ಮೆಂಬರ್ ಆಗಿದ್ದೆ, ಈಗ ಶಿಕ್ಷಕರ ಕ್ಷೇತ್ರದಿಂದ ಗೆದ್ದಿದ್ದೀಯಾ, ನಮ್ಮ ಶಿಕ್ಷಕರು ಬಹಳ ಬುದ್ಧಿವಂತರು, ಈ ಕ್ಷೇತ್ರವನ್ನು ಉಳಿಸಿಕೊಳ್ಳಬೇಕು ಎಂದರೆ ಮೊದಲನೆಯದಾಗಿ ಶಿಕ್ಷಕರ ಹತ್ತಿರ ಒಂದು ಪೈಸೆ ದುಡ್ಡು ಮುಟ್ಟಬಾರದು, ಪ್ರಾಮಾಣಿಕವಾಗಿರಬೇಕು, ಏನೇ ಇದ್ದರೂ ಓಪನ್ ಆಗಿ ಮಾತನಾಡಬೇಕು; ಏನು ಮಾತನಾಡುವೆಯೋ ಅದೇರೀತಿ ನಡೆದುಕೊಳ್ಳಬೇಕು ಎಂಬ ಮಾತುಗಳನ್ನು ಹೇಳಿದಿರಿ. ಆ ಮಾತುಗಳನ್ನು ಅಕ್ಷರಶಃ ಉಳಿಸಿಕೊಂಡಿರುವ ಕಾರಣ ಮೂರು ಪಕ್ಷಗಳಿಂದ ಐದು ಬಾರಿ ಆಯ್ಕೆಯಾದೆ ಎಂದು ಭಾವಿಸಿದ್ದೇನೆ. ಈ ಕ್ಷಣದವರೆಗೆ ನೀವು ಹೇಳಿದ್ದನ್ನು ಪಾಲನೆ ಮಾಡಿಕೊಂಡು ಬಂದಿದ್ದೇನೆ. ಪ್ರತಿಯೊಂದು

ಚುನಾವಣೆಯಲ್ಲೂ ನಿಮ್ಮ ಆಶೀರ್ವಾದ ಮತ್ತು ಬೆಂಬಲ ಕೊಟ್ಟಿದ್ದೀರಿ. ಬಹಳಷ್ಟು ಸಂದರ್ಭದಲ್ಲಿ, ಇದನ್ನು ಮಾಡಬೇಡ ಎಂದು ಹೇಳಿದಾಗ ಅಂಥದ್ದನ್ನು ಮಾಡಿಲ್ಲ. ಮಾಡು ಎಂದು ಹೇಳಿದಾಗ ಮಾಡಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳು ಆಗಿದ್ದ ಸಂದರ್ಭದಲ್ಲಿ ಅಹೋರಾತ್ರಿ 11 ದಿನಗಳ ಕಾಲ ಇದೇ ಗಾಂಧೀಜಿ ಪ್ರತಿಮೆ ಮುಂದೆ ಧರಣಿ ಮಾಡಿದ ಇತಿಹಾಸ ಇದೆ. ಆದರೆ ನಿಮ್ಮಿಂದ ಬಹಳಷ್ಟನ್ನು ಅಳವಡಿಸಿಕೊಂಡಿದ್ದೇನೆ. ನೀವು ಶಿಕ್ಷಣ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದಿರಿ. ಆದರೆ ಅತ್ಯಂತ ಪ್ರಮುಖವಾಗಿ, 2006ರಲ್ಲಿ ತಾವು ಶಿಕ್ಷಣ ಸಚಿವರಾದಿರಿ. ತಮ್ಮನ್ನು ಶಿಕ್ಷಣ ಸಚಿವರನ್ನಾಗಿ ಮಾಡಬೇಕೆಂದು, ಮಾನ್ಯ ಚೆಲುವನಾರಾಯಣಸ್ವಾಮಿ, ಮಾನ್ಯ ಬಾಲಕೃಷ್ಣ ಮತ್ತು ನಾವುಗಳು ಅಂದು ಸತತ ಪ್ರಯತ್ನ ಮಾಡಿದ್ದೆವು. ನಿಮಗೂ ಅದೃಷ್ಟ ಚೆನ್ನಾಗಿತ್ತು. ತಾವು ಶಿಕ್ಷಣ ಸಚಿವರಾದಿರಿ. ಆವತ್ತಿನ ದಿವಸ ವರ್ಗಾವಣೆ ಹೇಗೆ ನಡೆಯುತ್ತಿತ್ತು ಎಂದರೆ, ನೂರಾರು ಕೋಟಿ ಕೈ ಬದಲಾವಣೆ ಆಗುತ್ತಿತ್ತು. ಎಲ್ಲಾ ಶಾಸಕರು ಕೂಡ ನಮ್ಮ ಕ್ಯಾಂಡಿಡೇಟ್ ಅವರನ್ನು ವರ್ಗಾವಣೆ ಮಾಡಬೇಕೆಂದು ಹಿಂದೆ ಬೀಳುತ್ತಿದ್ದರು. ಆಗ ನೀವು "ವರ್ಗಾವಣೆ ನಿಷೇಧ ಮಸೂದೆ"ಯನ್ನು ಜಾರಿಗೆ ತಂದಿರಿ. ಇದು ಇಡೀ ರಾಜ್ಯದಲ್ಲಿ ಒಂದು ಮಾದರಿಯಾಗಿ ಉಳಿದುಕೊಂಡಿದೆ. ಯಾರಿಗೂ ದುಡ್ಡು ಕೊಡದೇ, ಲಂಚ ಕೊಡದೇ ವರ್ಗಾವಣೆ ಪಡೆಯುತ್ತಿದ್ದಾರೆ. ಅದಕ್ಕೋಸ್ಕರ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನನ್ನ ಮತ್ತು ನಿಮ್ಮ ಮಧ್ಯೆ ಸಾಕಷ್ಟು ಸಲ ಸಂಘರ್ಷ ಆಗಿರುವುದೂ ಇದೆ. ನಿಮ್ಮ ಮೇಲೆ ದೊಡ್ಡ ಮಟ್ಟದ ಹೋರಾಟಗಳನ್ನು ಮಾಡಿದ್ದೇನೆ; ಬಾಣ-ಬಿರುಸುಗಳನ್ನು ಬಿಟ್ಟಿದ್ದೇನೆ. ಇದರಲ್ಲಿ ಹಿಂದೆ-ಮುಂದೆ ಎನ್ನುವಂಥದ್ದು ಇಲ್ಲ. ನನಗೆ ಒಂದು ಸಂದರ್ಭ ಜ್ಞಾಪಕ ಬರುತ್ತದೆ. ಕನ್ನಡ ಮೀಡಿಯಂ ಶಾಲೆಗೆ ಅನುಮತಿ ತೆಗೆದುಕೊಂಡು ಇಂಗ್ಲಿಷ್ ಮೀಡಿಯಂ ಶಾಲೆಗಳನ್ನು ಪ್ರಾರಂಭ ಮಾಡುತ್ತಾರೆ ಎಂದು ಅಫಿಲಿಯೇಷನ್ ಕ್ಯಾನ್ಸಲ್ ಆಯಿತು. ಆಗ ನಮಗೂ ನಿಮಗೂ ಸಂಘರ್ಷವಾಯಿತು. ಹೊಸದಾಗಿ ಏನು ಬೆಳಗಾವಿಯಲ್ಲಿ ಅಧಿವೇಶ ನಡೆಯುತ್ತಿದ್ದಾಗ, ನಾನು ಎಷ್ಟೇ ಜಗಳ ಮಾಡಿದರೂ ನೀವು ಅಷ್ಟೇ ಸಮಾಧಾನದಿಂದ ಉತ್ತರ ಕೊಟ್ಟಿರಿ. ನಾನು ಆವತ್ತು, ನಾವು 300 ಜನ ಶಾಸಕರು ಇದ್ದೇವೆ, ನಾವೆಲ್ಲರೂ ನಮ್ಮ ಮಕ್ಕಳನ್ನು ಇಂಗ್ಲಿಷ್ ಮೀಡಿಯಂನಲ್ಲಿ ಓದಿಸುತ್ತೇವೆ, ಬಡವರ ಮಕ್ಕಳು ಮಾತ್ರ ಕನ್ನಡ ಮೀಡಿಯಂನಲ್ಲಿ ಓದಲಿ ಎನ್ನುತ್ತೀರಿ; ಇದು ಯಾವ ನ್ಯಾಯ ಎಂದು ಪ್ರಶ್ನೆ ಕೇಳಿದೆ. ಆವತ್ತು ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಕುಮಾರಸ್ವಾಮಿಯವರು ಸದನದಲ್ಲಿ ಹಾಜರಿದ್ದರು. ನಾನು ಇನ್ನೊಂದು ಪ್ರಶ್ನೆಯನ್ನು ಕೇಳಿದೆ. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವಂತಹ ಅಟೆಂಡರ್‌ನಿಂದ ಹಿಡಿದು ಮಂತ್ರಿಗಳವರೆಗೆ, ಅವರು ತಮ್ಮ ಮಕ್ಕಳನ್ನು ಯಾವ ಮಾಧ್ಯಮದಲ್ಲಿ ಓದಿಸುತ್ತಿದ್ದಾರೆ ಎಂಬುದನ್ನು ಹೇಳಿಸಿ ಎಂದು ಕೇಳಿದ್ದೆ. ನಾನು ಶಾಸಕನಾಗಿದ್ದೇನೆ, ನನ್ನ ಮಕ್ಕಳನ್ನು ಇಂಗ್ಲಿಷ್ ಮೀಡಿಯಂನಲ್ಲಿ ಓದಿಸುತ್ತಿದ್ದೇನೆ. ನಮ್ಮ ಡ್ರೈವರ್ ನನ್ನ ಮಕ್ಕಳನ್ನು ಡ್ರಾಪ್ ಮಾಡುವುದಕ್ಕೆ ಹೋದಾಗ, ಡ್ರೈವರ್‌ನ ಹೆಂಡತಿ, ಅಣ್ಣನವರಿಗೆ ಹೇಳಿ ನನ್ನ ಮಕ್ಕಳನ್ನು ಇಂಗ್ಲಿಷ್ ಮೀಡಿಯಂಗೆ ಸೇರಿಸುವಂತೆ ಹೇಳಿ ಎಂದು ಕೇಳುತ್ತಾಳೆ. ಇದರಲ್ಲಿ ತಪ್ಪೇನಿದೆ ಎಂದು ಕೇಳಿದೆ. ತಾವು ಇದನ್ನು ಒಪ್ಪಿಕೊಂಡು, ಕನ್ನಡ ಮೀಡಿಯಂ ಇದ್ದುದನ್ನು ಇಂಗ್ಲಿಷ್ ಮೀಡಿಯಂಗೆ ಪರಿವರ್ತನೆ ಮಾಡಿ, ಕನ್ನಡವನ್ನು ಮೊದಲ ಭಾಷೆಯಾಗಿ ಓದಿಸುವ ಹಾಗೆ ಆದೇಶ

ಮಾಡಿಸಿದಿರಿ. ಇದೂ ಕೂಡ ಒಂದು ಇತಿಹಾಸ. ಇವತ್ತು ಸರ್ಕಾರ ಇಂಗ್ಲಿಷ್ ಮತ್ತು ಕನ್ನಡ ಮೀಡಿಯಂನ ಶಾಲೆಗಳನ್ನು ನಡೆಸುತ್ತಿದೆ. ಮಾನ್ಯ ಮಧು ಬಂಗಾರಪ್ಪನವರು ಎಲ್ಲಾ ಕಡೆ ಎರಡೂ ಮೀಡಿಯಂಗಳನ್ನು ಮಾಡಿ ಅವರು ಕನ್ನಡ ಅಥವಾ ಇಂಗ್ಲಿಷ್ ಮೀಡಿಯಂ ತೆಗೆದುಕೊಳ್ಳಬಹುದು ಎಂದು ಮಾಡಿದ್ದಾರೆ. ನೀವು ಆವತ್ತು ಏನು ಬುನಾದಿ ಹಾಕಿದ್ದೀರೋ ಅದು ಮುಂದುವರೆದಿದೆ. 2006-07ರಲ್ಲಿ ನಾನು ನಿಮ್ಮ ಜೊತೆ ತುಂಬಾ ಜಗಳವಾಡಿದೆ; ನಿಮ್ಮನ್ನು ಬಹಳ ಕಾಡಿದೆ. ಪೇಪರ್‌ಗಳವರು ನನ್ನನ್ನೇ ವಿರೋಧ ಪಕ್ಷದ ನಾಯಕನಂತೆ ಬಿಂಬಿಸಿದರು. ಮುಂದಿನ ಚುನಾವಣೆಯಲ್ಲಿ ಪುಟ್ಟಣ್ಣ ಮಾನ್ಯ ಹೊರಟ್ಟಿಯವರನ್ನು ಸೋಲಿಸುತ್ತಾನೆ ಎಂದು ಅಂದುಕೊಂಡಿದ್ದರು. ಆಗ ನೀವು ಚುನಾವಣೆಗೆ ಒಂದೂವರೆ ತಿಂಗಳ ಮುಂಚಿತವಾಗಿ ದೂರವಾಣಿ ಮಾಡಿ, ಹುಬ್ಬಳ್ಳಿಗೆ ಬರಬೇಕು ಎಂದು ಹೇಳಿದಿರಿ. ನಾನು ಮತ್ತು ಮಾನ್ಯ ಮರಿತಿಬ್ಬೇಗೌಡರು ನಿಮ್ಮ ಬಳಿ ಬಂದೆವು ಮತ್ತು ಒಂದು ತಿಂಗಳು ಹುಬ್ಬಳ್ಳಿಯಲ್ಲಿ ಉಳಿದುಕೊಂಡಿದ್ದೆವು. ಎಲ್ಲೆಲ್ಲಿ ಒಡೆದ ಮನಸ್ಸುಗಳಿತ್ತೋ ಅವರು, ಹಿಂದೆ ಇದ್ದ ವರ್ಗಾವಣೆ ಮಾದರಿ ಸರಿಯಾಗಿತ್ತು ಎಂದು ತಿಳಿದುಕೊಂಡಿದ್ದರು. ಏಕೆಂದರೆ ಅಂಥವರು ಕಾಸು ಕೊಟ್ಟು ವರ್ಗಾವಣೆ ಮಾಡಿಸಿಕೊಳ್ಳಬಹುದಿತ್ತು ಎಂದು ಭಾವಿಸಿದ್ದರು. ಇಂಥದ್ದನ್ನು ಸರಿಪಡಿಸಿ, ನಿಮ್ಮ ಜೊತೆ ಒಂದು ತಿಂಗಳಿದ್ದು, ನಿಮ್ಮ ಪರವಾಗಿ ಕೆಲಸ ಮಾಡಿ, ನಿಮ್ಮ ಗೆಲುವಿನಲ್ಲಿ ನಾವೆಲ್ಲರೂ ಕೂಡ ಅಳಿಲು ಸೇವೆ ಮಾಡಿದೆವು. ಇದೇರೀತಿ ನನ್ನ ಎಲ್ಲಾ ಚುನಾವಣೆಗಳಲ್ಲಿ ನೀವು ಸಹಾಯ ಮಾಡಿದ್ದೀರಿ, ಸಹಕಾರ ಕೊಟ್ಟಿದ್ದೀರಿ. ನೀವು ಸಲಹೆ-ಸೂಚನೆಗಳನ್ನು ಕೊಟ್ಟ ಹಾಗೆ ನಡೆದುಕೊಂಡು ಬಂದಿದ್ದೇವೆ ಮತ್ತು ಅದನ್ನು ಮುಂದುವರೆಸುತ್ತಿದ್ದೇವೆ. ಮೊನ್ನೆ ನಾನು ಒಂದು ಹಕ್ಕುಚ್ಯುತಿ ಪ್ರಕರಣವನ್ನು ನಿಮಗೆ ಕೊಟ್ಟಿದ್ದೆ; ನೀವು ಈ ಕುರಿತು ಏನೂ ಮಾಡಿಲ್ಲ, ಇದನ್ನು ಏನಾದರೂ ಮಾಡಲೇಬೇಕು ಎಂದು ಹೇಳಿದೆ. ಆಗ ನೀವು "ಇದನ್ನು ಮುಕ್ತಾಯಗೊಳಿಸಲಾಗಿದೆ" ಎಂದು ಬರೆದುಬಿಟ್ಟಿರಿ. ನಾನು ಸುಮ್ಮನೆ ಎದ್ದು ಬಂದೆ. ಏನೂ ಮಾತನಾಡಲಿಲ್ಲ. ಅದು ನಾವು ನಿಮ್ಮ ಮೇಲೆ ಇಟ್ಟಿರುವ ಗೌರವವಾಗಿದೆ. ನಮ್ಮ ಆಕ್ರೋಶ ಇರಬಹುದು ಅಥವಾ ಇನ್ನೊಂದು ಇರಬಹುದು ಅವೆಲ್ಲವೂ ನಿಮ್ಮ ಅನುಭವದ ಮುಂದೆ ಏನೂ ಇಲ್ಲ ಎಂದು ಭಾವಿಸುತ್ತೇವೆ. ಆ ಕಾರಣಕ್ಕಾಗಿ ನಾನು ಏನೂ ಮಾತನಾಡದೇ ಸುಮ್ಮನೆ ಎದ್ದು ಬಂದೆ. ಇತ್ತೀಚಿಗೆ ಪತ್ರಿಕೆಗಳಲ್ಲಿ, ಮಾನ್ಯ ಹೊರಟ್ಟಿಯವರು ರಾಜೀನಾಮೆ ಕೊಡುತ್ತಿದ್ದಾರೆ ಎನ್ನುವ ವಿಚಾರ ಬಂತು. ಆಗ ನಾನು ಬೆಳಗ್ಗೆ ದೂರವಾಣಿ ಮಾಡಿ, ಏನ್ ಸ್ವಾಮಿ, ಏನಾಗಿದೆ ನಿಮಗೆ ಎಂದು ಹೀಗೆಯೇ ಮಾತನಾಡಿದೆ. ಏಕೆ ರಾಜೀನಾಮೆ ಕೊಡುತ್ತೀರಿ ಎಂದು ಕೇಳಿದೆ. ಕಿತ್ತುಕೊಳ್ಳುವುದಕ್ಕೆ ಹೋದರೂ ಜನ ರಾಜೀನಾಮೆ ಕೊಡುತ್ತಿಲ್ಲ, ಹಾಗಿರುವಾಗ ನಾನು ರಾಜೀನಾಮೆ ಕೊಡುತ್ತೇನೆ ಎಂದು ಏಕೆ ಹೇಳುತ್ತಿದ್ದೀರಿ ಎಂದು ಕೇಳಿದೆ. ಆಗ ಅವರು, ಆಯಿತು ಬಿಡೋ, ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿ ಹಿಂತೆಗೆದುಕೊಂಡ ನಿದರ್ಶನ ನಮ್ಮ ಮುಂದೆ ಇದೆ. ಇವತ್ತಿನ ದಿನ ಈ ರಾಜ್ಯದ ಇತಿಹಾಸದಲ್ಲಿ, ಈ ಸದನದ ಇತಿಹಾಸದಲ್ಲಿ ಸುದೀರ್ಘ 45 ವರ್ಷಗಳ ಕಾಲ ತಮ್ಮ ಅನುಭವ ಅಮೋಘವಾದುದು. ಇದನ್ನು ಹೇಳುವುದಕ್ಕೆ ಯಾವ ಶಬ್ದಗಳು ಇಲ್ಲ. ನಾವು ಜಗಳ ಮಾಡಬೇಕೆಂದು ಬಂದಾಗ, ಜಗಳ ಆಡದ ಹಾಗೆ ಮಾಡುತ್ತೀರಿ. ಏನೋ ಮಾತನಾಡುವುದಕ್ಕೆ ಹೋದಾಗ ಮಾತನಾಡದ ಹಾಗೆ ಮಾಡುತ್ತೀರಿ. ನೀವು ಯಾವ ಶಕ್ತಿ

ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ನಾನು ಮತ್ತು ಮಾನ್ಯ ಮರಿತಿಬ್ಬೇಗೌಡ ಅವರಂಥವರು ನಿಮ್ಮ ಸಲಹೆ-ಸೂಚನೆಗಳನ್ನು ಇಟ್ಟುಕೊಂಡು ಹೆಸರು ಮಾಡಿದ್ದೇವೆ. ನೀವು ಹೇಳಿದ್ದನ್ನು ಅಳವಡಿಸಿಕೊಂಡಿದ್ದಕ್ಕಾಗಿ 5 ಸಲ ನಾನು ಗೆಲ್ಲುವುದಕ್ಕೆ ಕಾರಣವಾಯಿತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ನಾನು ಮತ್ತೆ ಆಯ್ಕೆ ಆಗುವ ಸಾಧ್ಯತೆ ಇರುತ್ತಿರಲಿಲ್ಲ. ನೀವು ಹೇಳಿದಂತಹ ಮಾತುಗಳನ್ನು ನಾನು ಉಳಿಸಿಕೊಂಡಿದ್ದೇನೆ ಎಂದು ಹೇಳಬಯಸುತ್ತೇನೆ. ಮಾನ್ಯ ಸಭಾಪತಿಗಳೆ, ನಾನು ನಿಮಗೆ ಒಂದು ಸಲಹೆ ಕೊಟ್ಟಿದ್ದೆ.

(ಮುಂದು)

(784) 19-8-2025 1.10 ಡಿಎಸ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ(ಮುಂದು):-**

'ತಮ್ಮ ಮಗ ಶ್ರೀಯುತ ವಸಂತ್ ಅವರನ್ನು ಒಂದು ಸಲ ಚುನಾವಣೆಗೆ ನಿಲ್ಲಿಸಿ ಸ್ವಾಮಿ, ಏಕೆ ನೀವು ಬಿಡುತ್ತಿಲ್ಲ?' ಎಂದು ಹೇಳಿದೆ. 'ಡಾಕ್ಟರ್ ಮಗ ಡಾಕ್ಟರ್ ಆಗುತ್ತಾರೆ, ರಾಜಕಾರಣಿ ಮಗನೂ ಡಾಕ್ಟರ್ ಆಗುತ್ತಾನೆ; ಒಳ್ಳೆಯ ಹುಡುಗ ಚುನಾವಣೆಗೆ ನಿಲ್ಲಿಸಿ' ಎಂದು ಹೇಳಿದೆ. ಏಕೋ ಆ ವಿಚಾರದಲ್ಲಿ ಸ್ವಲ್ಪ ಹಿಂದೆ-ಮುಂದೆ ಎಳೆದಾಡುತ್ತಿದ್ದರು. ಆಗಲೂ ಕೂಡ ನಾನು ಹೇಳಿದೆ, 'ನಾನು ನಿಮ್ಮ ಪರವಿಲ್ಲ, ನಾನು ಇನ್ನು ಮುಂದೆ ಅವನ ಪರ ಇರುತ್ತೇನೆ' ಎಂದು ಹೇಳಿದೆ. ಅಂದರೆ, ನಮಗೆ ಅವರಿಗೆ ಏನೇ ವ್ಯತ್ಯಾಸಗಳಿದ್ದರೂ ಕೂಡ ಒಂದು ಅವಿನಾಭಾವ ಸಂಬಂಧ, ಆತ್ಮೀಯತೆ, ಪ್ರೀತಿ, ವಿಶ್ವಾಸ, ನಂಬಿಕೆ ಅಚಲವಾಗಿ ನಿಂತಿದೆ. ಹಾಗಾಗಿ ನಮ್ಮೆಲ್ಲರಿಗೂ, ಕೂಡ ಇಡೀ ನಮ್ಮ ಸದನಕ್ಕೆ ನಿಮ್ಮ ಅನುಭವ ಎಲ್ಲವನ್ನೂ ಕೂಡ ನಮಗೆ ಕೊಟ್ಟಿದ್ದೀರಿ. ಬಹಳಷ್ಟು ಇನ್ನು ಮಾತನಾಡದೆ ಇರತಕ್ಕಂಥವರಿಗೆಲ್ಲಾ, ಹಿಂದಿನ ಬೆಂಚ್‌ನವರನ್ನು ಕೂಡ ಮಾತನಾಡಿಸಿ ಅವರಿಗೂ ಸಹ ಮಾತನಾಡುವಂತಹ ಅವಕಾಶಗಳನ್ನು ಕೊಡುತ್ತೀರಿ. ನಮ್ಮಲ್ಲಿ ಯಾವ ವಿಷಯಕ್ಕೆ ಆದ್ಯತೆಯನ್ನು ಕೊಡಬೇಕು, ಅದಕ್ಕೂ ಅವಕಾಶ ಕೊಡುತ್ತೀರಿ. ಒಂದೊಂದು ಸಲ ನಮಗೂ ಬೇಜಾರಾಗುತ್ತದೆ. ಏಕೆಂದರೆ, ನಾವು ಮಧ್ಯದಲ್ಲಿ ಮಾತನಾಡಲು ನಿಂತಾಗ ಏಯ್ ಪುಟ್ಟಣ್ಣ ಕುಳಿತುಕೋ ಎಂದು ಹೇಳಿಬಿಡುತ್ತೀರಿ, ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ: ಆಗ ನಮಗೂ ಬೇಜಾರಾಗುತ್ತದೆ. ಆದರೂ ನಿಮ್ಮ ಅನುಭವದಿಂದ ಅವರಿಗೂ ಅನುಭವವಾಗಲಿ, ಎನ್ನುವುದು ನಿಮ್ಮ ಮೈಂಡ್‌ನಲ್ಲಿರುತ್ತದೆ. ಅವರೂ ಮಾತನಾಡುವುದನ್ನು ಕಲಿತುಕೊಳ್ಳಲಿ ಎಂಬ ಉದ್ದೇಶ ಇರುತ್ತದೆ. ಅದನ್ನು ತಿಳಿದುಕೊಂಡು ನಾವು ಸುಮ್ಮನೆ ಕುಳಿತುಕೊಂಡು ಬಿಡುತ್ತೇವೆ. ಹಾಗಾಗಿ ಈ ರೀತಿ ಹೇಳಿದ್ದೇನೆ ಎಂದು ಅವಕಾಶ ಕೊಡದೇ ಇರಬೇಡಿ. ನನಗೆ ಮಾತನಾಡುವುದಕ್ಕೆ ಜಾಸ್ತಿ ಅವಕಾಶ ಕೊಡಿ. ನಿಮಗೆ ಒಳ್ಳೆಯದಾಗಲಿ, ಆ ಭಗವಂತ ನೂರು ವರ್ಷ ಆಯಸ್ಸು ಕೊಡಲಿ, ನಮ್ಮ ಜೊತೆ ಇನ್ನು ಎಷ್ಟು ವರ್ಷ ನೀವು ಆಸೆ ಪಡುತ್ತೀರಿ ಅಷ್ಟು ವರ್ಷ ಈ ಸದನದಲ್ಲಿದ್ದು, ನಮಗೆಲ್ಲಾ ನೀವು ಸಲಹೆ-ಸೂಚನೆಗಳನ್ನು ಕೊಟ್ಟುಕೊಂಡು ನಮ್ಮನ್ನು ಮುನ್ನಡೆಸಿ ಎನ್ನುವ ಮಾತನ್ನು ಹೇಳಿ, ಮತ್ತೊಮ್ಮೆ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಈ ಸದನದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ವಿಶೇಷವಾಗಿ ಶಿಕ್ಷಕರ ಮತ ಕ್ಷೇತ್ರದಿಂದ ತಾವು 8 ಬಾರಿ ಆಯ್ಕೆಯಾಗಿ 45 ವರ್ಷಗಳನ್ನು ಇವತ್ತಿನವರೆಗೂ ಕಳೆದಿದ್ದೀರಿ. ಈ ಸಂದರ್ಭದಲ್ಲಿ ನಮಗೂ ಕೂಡ ಹೆಮ್ಮೆಯಾಗುತ್ತಿದೆ. ಇವತ್ತಿನ ದಿವಸ ನಮ್ಮ ಅವಿಭಾಜ್ಯ ವಿಜಯಪುರ ಜಿಲ್ಲೆಯವರು. ಆಗ ತಾವೆಲ್ಲಾ ಇದ್ದಾಗ ವಿಜಯಪುರ, ಬಾಗಲಕೋಟೆ ಇರಲಿಲ್ಲ. ಅವಿಭಾಜ್ಯ ವಿಜಯಪುರ ಜಿಲ್ಲೆಯವರು. ಮುಧೋಳ ತಾಲ್ಲೂಕಿನವರು. ಇವತ್ತು ನಮ್ಮಗೆಲ್ಲರಿಗೂ ಹೆಮ್ಮೆಯಾಗಿದೆ. ನಮ್ಮವರು ಮಾನ್ಯ ಬಸವರಾಜ ಹೊರಟ್ಟಿಯವರು ಇವತ್ತಿನ ದಿವಸ ಇಷ್ಟು ವರ್ಷಗಳ ಸುದೀರ್ಘ ಸೇವೆಯನ್ನು ಮಾಡಿದ್ದಾರೆ. ನಾವು ಚಿಕ್ಕವರಿಂದಲೂ ತಮ್ಮನ್ನು ನೋಡಿದ್ದೇವೆ. ನಾನು ಅಧ್ಯಕ್ಷನಾಗಿರುವಂತಹ ಬಿಎಲ್‌ಡಿಇ ಸಂಸ್ಥೆಗೆ ತಾವು ನೆರವನ್ನು ಕೊಟ್ಟಿದ್ದೀರಿ, ಆ ಶಿಕ್ಷಣ ಸಂಸ್ಥೆಯನ್ನು ನಮ್ಮ ಸಂಸ್ಥೆ ಎಂದು ಬೆಳೆಯಬೇಕೆಂದು ನೀವು ಯಾವಾಗಲೂ ನನ್ನ ತಂದೆಯವರಾದ ದಿವಂಗತ ಬಿ.ಎಂ.ಪಾಟೀಲ್‌ರವರು ಇದ್ದಾಗ ತಾವು ಕೂಡ ಆ ಶಿಕ್ಷಣ ಸಂಸ್ಥೆಯನ್ನು ಬಹಳಷ್ಟು ಬೆಳೆಸುವುದಕ್ಕೆ ಕಾರಣರಾಗಿದ್ದೀರಿ. ತಾವು ಕ್ರೀಡಾಪಟುಗಳಾಗಿ, ಕ್ರೀಡಾ ಶಿಕ್ಷಕರಾಗಿ, ಅವರು ದೈಹಿಕ ಶಿಕ್ಷಣ ಶಿಕ್ಷಕರಾಗಿ ಬಂದು ಶಿಕ್ಷಕರ ಬಗ್ಗೆ ಅಪಾರವಾದಂತಹ ಕಾಳಜಿಯನ್ನು, ಬದ್ಧತೆಯನ್ನು ಹೊಂದಿದ್ದೀರಿ. ಏಕೆಂದರೆ, 8 ಬಾರಿ ಆರಿಸಿ ಬರುವುದು ಅಷ್ಟು ಸರಳವಾದುದ್ದಲ್ಲ. ತಾವು 8 ಬಾರಿ ಆಯ್ಕೆಯಾಗಿ ನಿರಂತರವಾಗಿ ಶಿಕ್ಷಕರ ಬಗ್ಗೆ ಚಿಂತನೆಯನ್ನು ಮಾಡಿದ್ದೀರಿ.

ಇವತ್ತು ನಾನು ಕೂಡ ನೋಡಿದ್ದೇನೆ. ಕೆಲವೇ ಕೆಲವು ಜನರಲ್ಲಿ ಶ್ರೀ ಮಲ್ಲನಾಥ್‌ರವರು ಇದ್ದಾಗ ನೀವೂ ಒಬ್ಬರು. ನನಗೆ ಒಂದು ಸಂದರ್ಭ ನೆನಪು ಇದೆ: ತಾವು ಶಿಕ್ಷಣ ಸಚಿವರಾಗಿದ್ದಾಗ ಹಳದಿ ಬಣ್ಣದ ಕಾರಿನಲ್ಲಿ ಹೋಗುತ್ತಿದ್ದರು, ನನಗೆ ಫೋನ್ ಮಾಡಿದರು: 'ಹೇ, ನಾನು ಯಾವ ಸ್ಕೂಲ್ ಮಂಜೂರು ಮಾಡಿ ಕೊಡಬೇಕು ಹೇಳು' ಎಂದು ಹೇಳಿದರು. 'ಯಾವುದು ಎಂದು ಜಲ್ದಿ ಹೇಳು, ಪಟ್ಟನೆ ಹೇಳು' ಎಂದು ಹೇಳಿದರು. 'ಉರ್ದು ಶಾಲೆ ಬೇಕು' ಎಂದು ನಾನು ಹೇಳಿದೆ, 'ಉರ್ದು ಶಾಲೆಯಲ್ಲಾ ಕೊಡುತ್ತಿಲ್ಲ' ಎಂದು ಹೇಳಿದರು. ನನ್ನ ಮತಕ್ಷೇತ್ರಕ್ಕೆ ಒಂದು ಉರ್ದು ಶಾಲೆಯನ್ನು ಕೊಟ್ಟರು. ನಾನು ಪಿ.ಯು. ಕಾಲೇಜು ಅನ್ನು ಕೇಳಿದ್ದೆ, ಸೈನ್ಸ್ ಕಾಲೇಜು ಇಲ್ಲ ಎಂದು ಹೇಳಿದ್ದೆ, ಅವರು ಯಾರಿಗೂ ಕೊಟ್ಟಿರಲಿಲ್ಲ. ನನ್ನ ಮೇಲಿನ ಪ್ರೀತಿ, ನನ್ನ ತಂದೆಯವರ ಮೇಲಿನ ಪ್ರೀತಿಯಿಂದ ಅದನ್ನು ಕೂಡ ಮಂಜೂರು ಮಾಡಿ ಕೊಟ್ಟಿದ್ದೀರಿ. ನಾನು ಒಳಗೊಂಡಂತೆ ಇವತ್ತಿನ ದಿವಸ ಶ್ರೀ ಎಚ್.ಕೆ.ಪಾಟೀಲ್‌ರವರು, ಇನ್ನಿತರರು ಇದ್ದಾರೆ. ಅವರು ಸ್ವಲ್ಪ ಪಾಲನೆ ಮಾಡಿದ್ದಾರೆ. ತಾವು ಬೆಂಗಳೂರಿಗೆ ಬಂದು ವಿಧಾನ ಪರಿಷತ್ತಿನಲ್ಲಿ ಸಭಾಪತಿಗಳಾಗಿ ಸೇವೆಯನ್ನು ಮಾಡಿದ್ದರೂ ಕೂಡ ನಿಮ್ಮ ಭಾಷೆಯಲ್ಲಿ ಏನು ಬದಲಾವಣೆಯಾಗಿಲ್ಲ. ನೀವು ಮಾತನಾಡುವುದೇ ಮಾಧ್ಯಮದಿಂದ ಹಿಡಿದು ಎಲ್ಲರಿಗೂ ಸಂತೋಷವನ್ನು ತರುತ್ತದೆ. ನಿಮ್ಮ ಉತ್ತರ ಕರ್ನಾಟಕದ ಭಾಷೆಯಲ್ಲಿ 'ಹೇ, ಕುಂಡ್ರಪ್ಪ ಮಾರಾಯ' ಎಂದು ಹೇಳುವಂಥದ್ದು ಬೆಂಗಳೂರು ಜನರಿಗೂ ಬಹಳಷ್ಟು ಇಷ್ಟವಾಗುತ್ತದೆ. ಬೆಂಗಳೂರಿನಲ್ಲಿದ್ದರೂ ಕೂಡ ತಮ್ಮ ಸ್ವಭಾವದಲ್ಲಿ ಬದಲಾವಣೆಯಾಗಿಲ್ಲ. ಅದೇ ಭಾಷೆಯಲ್ಲಿ ನೇರವಾಗಿ, ನಿಷ್ಠುರವಾಗಿ ಮಾತನಾಡುತ್ತೀರಿ. 'ಬಹಳ ಶಾಣೆ ಇದ್ದೀಯಾ, ಕುಂಡ್ರೊ' ಎಂದು

ಹೇಳುತ್ತಾರೆ. 'ಏನು ಹೇಳುತ್ತೀಯಾ ಹೇಳು' ಎಂದು ಹೇಳುತ್ತಾರೆ. ಹೀಗೆ ತಮ್ಮ ಭಾಷೆಯಲ್ಲಿ ಇವತ್ತು ಬದಲಾವಣೆಯಾಗಿಲ್ಲ, ತಮ್ಮ ನಡವಳಿಕೆಯಲ್ಲಿ ಬದಲಾವಣೆಯಾಗಿಲ್ಲ. ಅಪ್ಪಟ ಉತ್ತರ ಕರ್ನಾಟಕದ ಶೈಲಿ ನಿಮ್ಮದು. ಇವತ್ತು ಸದನವನ್ನು ನಡೆಸುವಾಗ ಉತ್ತರ ಕರ್ನಾಟಕದ ಭಾಷೆಯಲ್ಲಿ ನಡೆಸುತ್ತಿದ್ದೀರಿ. ಬದಲಾವಣೆ ಕಿಂಚಿತ್ತೂ ಆಗಿಲ್ಲ. ಈಗಿನ ಕಾಲದಲ್ಲಿ ನಾವೆಲ್ಲರೂ ತಾಯಂದಿರಿಗೆ ಈ ಕಡೆ 'ಅಮ್ಮ' ಎಂದು ಹೇಳುತ್ತಾರೆ. ಅದು ಕೂಡ ಒಳ್ಳೆಯದು. ಆ ಕಡೆ 'ಅವ್ವ' ಎಂದು ಕರೆಯುತ್ತಾರೆ. ತಮ್ಮ ತಾಯಿ ಮೇಲಿನ ಪ್ರೀತಿಗೆ ತಾವು 'ಅವ್ವ' ಎನ್ನುವ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿ ಕಾರ್ಯಕ್ರಮವನ್ನು ಮಾಡಿ, ಇವತ್ತು ಒಂದು ಸರ್ಕಾರಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸಿ ತಾಯಿ ಹೆಸರಿನಲ್ಲಿ ಮಾಡುತ್ತಿರುವುದು ಬಹಳ ಶ್ರೇಷ್ಠವಾದಂತಹ ಕೆಲಸ. ಇವತ್ತು ಈ ಸಂದರ್ಭದಲ್ಲಿ ನಾನು ಬಸವಣ್ಣನವರಲ್ಲಿ, ದೇವರಲ್ಲಿ ಪ್ರಾರ್ಥಿಸುತ್ತೇನೆ. ತಾವು ರಾಜಕಾರಣಕ್ಕೆ ಬಂದು ಈಗಾಗಲೇ 45 ವರ್ಷಗಳಾಗಿವೆ. ತಾವು 50 ವರ್ಷಗಳನ್ನು ಪೂರೈಸಬೇಕು. ಸುವರ್ಣ ಮಹೋತ್ಸವವನ್ನು ಆಚರಿಸಬೇಕು. ಈ ರಾಜ್ಯದಲ್ಲಿ ಇತಿಹಾಸ ಆಗಬೇಕು ಎನ್ನುವುದು ನಮ್ಮೆಲ್ಲರ ಆಶಯ. ನಮ್ಮವರು, ನಮ್ಮ ಹಿರಿಯರು, ತಮ್ಮನ್ನು ಎಲ್ಲರೂ ಕೂಡ ಗೌರವಿಸುತ್ತಾರೆ. ಶಿಕ್ಷಕರು ಅಷ್ಟೆ ಅಲ್ಲ, ಉತ್ತರ ಕರ್ನಾಟಕದಲ್ಲಿ ಶ್ರೀ ಬಸವರಾಜ ಹೊರಟ್ಟಿಯವರು ಎಂದರೆ ಇವತ್ತು ಎಲ್ಲರೂ ತಮ್ಮ ಮೇಲೆ ಪ್ರೀತಿಯನ್ನು ಹೊಂದಿದ್ದಾರೆ. ನಿಮಗೆ ಯಾರು ವೈರಿಗಳಿರುವುದಿಲ್ಲ. ರಾಜಕೀಯವಾಗಿ ಇರಬಹುದು, ಆದರೆ ವೈಯಕ್ತಿಕವಾಗಿ ತಮಗೆ ಯಾರು ವೈರಿಗಳಲ್ಲ. ನಾನು ಗಮನಿಸಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರು ನಮ್ಮ ಸ್ನೇಹಿತರು, ಅವರ ಜೊತೆ 'ಹೇ' ಎಂದು ಏಕವಚನದಲ್ಲೇ ಮಾತನಾಡುತ್ತಾರೆ. 'ಹೇ, ಸಿದ್ಧರಾಮಯ್ಯ ಅದು ಹೀಗೆ ಆಗಿತ್ತಲ್ಲಾ, ಹಾಗೆ ಆಗಿತ್ತಲ್ಲಾ' ಎಂದು ಅದೇ ಭಾಷೆಯಲ್ಲಿ ಮಾತನಾಡುತ್ತಾರೆ. ನಿಮ್ಮ ಸ್ನೇಹ ಕೂಡ ಅಗಾಧವಾಗಿರುವಂಥದ್ದು. ನಾವೆಲ್ಲಾ ನೋಡಿದ್ದೇವೆ. ನಾವೆಲ್ಲರೂ ನಿಮ್ಮಿಂದ ಬಹಳಷ್ಟು ಕಲಿಯಬೇಕಾಗಿದೆ. ತಮಗೆ ಶುಭವನ್ನು ಹಾರೈಸುತ್ತೇನೆ. ತಾವು 50 ವರ್ಷಕ್ಕಿಂತಲೂ ಹೆಚ್ಚಿಗೆ ರಾಜಕಾರಣದ ಸೇವಾವಧಿಯನ್ನು ಪೂರೈಸಬೇಕು. ಆ ಸುವರ್ಣ ಮಹೋತ್ಸವದಲ್ಲಿ ನಾವೆಲ್ಲರೂ ಕೂಡ ಭಾಗವಹಿಸಬೇಕು ಎನ್ನುವುದನ್ನು ಹೇಳಿ, ಭಗವಂತ ತಮಗೆ ಆಯಸ್ಸು, ಆರೋಗ್ಯ, ಸಮೃದ್ಧಿ, ಯಶಸ್ಸು ಮತ್ತು ಶಕ್ತಿಯನ್ನು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

**ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬದುಕಿನ ಬಗ್ಗೆ ಒಂದು ಉಲ್ಲೇಖ ಇದೆ. "ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ, ಸಾರ್ಥಕತೆ ಇಲ್ಲದೆ ಜೀವಿಸಿದರೆ ಬದುಕಿಗೆ ಅವಮಾನ. ಬದುಕು ಇರುವುದು ಬಾಳಲು, ಬಳಲಲು ಅಲ್ಲ; ಬದುಕು ಇರುವುದು ಸವಿಯಲು, ಸವೆಯಲು ಅಲ್ಲ; ಬದುಕು ಇರುವುದು ಸಂತಸ ಪಡಲು, ಸಂಕಟ ಪಡಲು ಅಲ್ಲ; ಬದುಕು ಸಂಗ್ರಾಮಕ್ಕಿಂತ ಸಂಭ್ರಮವಾದರೆ ಚೆನ್ನ, ಬದುಕು ಚಿನ್ನ." ತಾವು ಇದನ್ನು ಅಕ್ಷರಶಃ ಜೀವನದಲ್ಲಿ ಅಳವಡಿಸಿಕೊಂಡಿದ್ದೀರಿ. ತಾವು ಎಲ್ಲರೂ ಉಲ್ಲೇಖ ಮಾಡಿದಂತೆ ಅಜಾತ ಶತೃ, ಸೋಲಿಲ್ಲದ ಸರದಾರ. ಮಾನ್ಯ ಪುಟ್ಟಣ್ಣರವರು ಮತ್ತು ಸುಮಾರು ಸದಸ್ಯರೆಲ್ಲರೂ ಉಲ್ಲೇಖ ಮಾಡಿದರು: ನೀವು ಹೇಗೆ ಅದನ್ನು ಹ್ಯಾಂಡಲ್

ಮಾಡುತ್ತೀರಿ ಎಂದು. The best way to handle an enemy is to make a friendship with him. ಹಾಗಾಗಿ ಸೋಲಿಲ್ಲದ ಸರದಾರ ಮತ್ತು ಅಜಾತ ಶತೃಗಳಾದ ತಾವು ತಮ್ಮ ಸಂಘರ್ಷ ಮತ್ತು ಹೋರಾಟದ ಬಗ್ಗೆ ಪುಸ್ತಕವನ್ನು ಬರೆದಿದ್ದೀರಿ. ಈ ವಿಧಾನ ಪರಿಷತ್ತಿನಲ್ಲಿ ಅಂಬೆಗಾಲು ಇಡುತ್ತಿರುವಂತಹ ನಾನು ಎರಡು ಪ್ರಶ್ನೆಗಳನ್ನು ತಮಗೆ ಕೇಳಬಯಸುತ್ತೇನೆ. ಯಾರಾದರೂ ವೈದ್ಯರ ಹತ್ತಿರ ಬಂದಾಗ ಸಾಮಾನ್ಯವಾಗಿ ಔಷಧಿಯನ್ನು ಕೇಳುತ್ತಾರೆ. ಮೆಡಿಸಿನ್ನೇ ಒಂದು ಔಷಧಿಯಲ್ಲ. ಚೆನ್ನಾಗಿ ನಿದ್ದೆ ಮಾಡುವುದು ಒಂದು ಔಷಧಿ, ಬೆಳಗ್ಗೆ ಬೇಗ ಏಳುವುದು ಕೂಡ ಒಂದು ಔಷಧಿ, ವ್ಯಾಯಾಮ ಕೂಡ ಒಂದು ಔಷಧಿ, ಒಳ್ಳೆಯ ಸ್ನೇಹಿತ ಕೂಡ ಔಷಧಿ, ಜೀವನದಲ್ಲಿ ನಗೆಯೂ ಕೂಡ ಒಂದು ಔಷಧಿ. ಸುಮಾರು ಸಲ ವಿಧಾನ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ತಮ್ಮ ನಗೆಕೂಟ ಕೂಡ ಬಹಳ ಅತ್ಯಮೂಲ್ಯವಾದದ್ದು. ಅದರ ಉಲ್ಲೇಖವನ್ನು ತಾವು ಮಾಡಬೇಕು. ವಿಧಾನ ಪರಿಷತ್ತಿನ ಸರ್ವ ಸದಸ್ಯರುಗಳು ಸಹ ಭಗವಂತನಲ್ಲಿ ಪ್ರಾರ್ಥಿಸುವುದು ಇಷ್ಟೆ, ತಾವು ಶತಾಯುಷಿಗಳಾಗಬೇಕು. ತಮ್ಮನ್ನು ನೋಡಿದರೆ ಎಷ್ಟು ವಯಸ್ಸಾಗಿರಬಹುದು ಎಂದರೆ, ನಮಗೆಲ್ಲರಿಗೂ ತಾವು ಯುವಕರಾಗಿಯೇ ಕಾಣುತ್ತೀರಿ ಎಂದು ನಾನು ಉಲ್ಲೇಖ ಮಾಡಿದ್ದೆ. ಆದರೆ, ನಿಮ್ಮ ಮುಗುಳ್ನಗೆ, ನಿಮ್ಮ ಗಾಂಭೀರ್ಯತೆ ಮತ್ತು ನಿಮ್ಮ ಯೌವ್ವನದ ಗುಟ್ಟುಗಳನ್ನು ದಯವಿಟ್ಟು ನಮಗೆಲ್ಲರಿಗೂ ತಾವು ತಿಳಿಸಬೇಕು ಎಂದು ಹೇಳಬಯಸುತ್ತಿದ್ದೇನೆ.

(ಮುಂದು)

(785) 19/08/2025 1:20 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಧನಂಜಯ ಸರ್ಜಿ (ಮುಂದು):-**

"ಬಾಗಿ ನಡೆದ ಮಾತ್ರಕೆ ನೀ ಬಡವನಾಗಲಾರೆ; ಎದೆಯುಬ್ಬಿಸಿ ನಡೆದ ಮಾತ್ರಕೆ ಧೀರ, ಶ್ರೀಮಂತನಾಗಲಾರೆ; ಸರಳ, ಸಜ್ಜನಿಕೆ, ಸಂಪನ್ನತೆಗಳ ಗುಣಗಳು ನಿನ್ನೊಳು ತುಂಬಿ ನಡೆ; ಬದುಕಿಗೆ ಅದುವೆ ಎಂದು ಅಳಿಯದ ಶ್ರೀಮಂತಿಕೆ" ಎಂಬ ಮಾತಿನಂತೆ, ತಾವು ನಿಜವಾಗಿಯೂ ಸಹ ಹೃದಯ ಶ್ರೀಮಂತಿಕೆಯವರಾಗಿದ್ದೀರಿ. ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಮ್ಮ 45 ವರ್ಷಗಳ ಸುದೀರ್ಘ ಸೇವೆಯನ್ನು ಈ ಮನೆಯಲ್ಲಿ ಮಾಡಿದ್ದನ್ನು ನೋಡಿದರೆ, ಬಹುಶಃ ಅನೇಕ ಹೊಸ ಸದಸ್ಯರ ವಯಸ್ಸೂ ಸಹ ಅಷ್ಟಾಗಿ ಆಗಿರುವುದಿಲ್ಲ. ಆ ಪ್ರಮಾಣದಲ್ಲಿ ಈ ಮನೆಯಲ್ಲಿ ಅಷ್ಟೇ ಅಲ್ಲದೇ, ಜನಸೇವೆಯನ್ನು ಮಾಡಿದ್ದೀರಿ. ಶಿಕ್ಷಕರ ಸೇವೆಯನ್ನೂ ಸಹ ತಾವು ಮಾಡಿದ್ದೀರಿ. ನಾನು ತಮ್ಮಲ್ಲಿ ಸರಳತನವನ್ನು ಕಂಡಿದ್ದೇನೆ. ಬಹುಶಃ that simplicity brought you to this place ಎಂದು ನನಗೆ ಅನ್ನಿಸುತ್ತದೆ. ನಾನು 1996 ರಲ್ಲಿ ಮೊದಲನೆ ಬಾರಿಗೆ ಈ ಸದನದ ಸದಸ್ಯನಾದಾಗ ಎಲ್ಲಾ ಭಾಗದ ಜನರು ನಮ್ಮ ಕಡೆ ಹಾಗೂ ನಿಮ್ಮ ಕಡೆಗೆ ಬರುತ್ತಿದ್ದರು. ಆಗ

ಅವರುಗಳು ಅಲ್ಲಿಗೆ ಬನ್ನಿ, ಇಲ್ಲಿಗೆ ಬನ್ನಿ ಎಂದು ಕರೆಯುತ್ತಿದ್ದರು. ಆಗ ನೀವು ಬಹಳಷ್ಟು ಹಿರಿಯರಾಗಿದ್ದರೂ ಸಹ ನೇರವಾಗಿ ಆ ಅಧಿಕಾರಿಗಳ ಹತ್ತಿರ ಹೋಗಿ, ಶಿಕ್ಷಕರನ್ನು ಅಲ್ಲಿಗೆ ಕರೆಸಿ ಅವರ ಕೆಲಸವನ್ನು ನೀವು ಮಾಡಿಸಿಕೊಡುತ್ತಿದ್ದೀರಿ. I think that it has got a long way. ಇವರು ಅಷ್ಟು ಸರಳತೆಯನ್ನು ಗಳಿಸಿಕೊಂಡಿದ್ದಾರೆ. ಈ ಮುಖ್ಯವಾದ ಕಾರಣದಿಂದಾಗಿ ಇಂದು ಇವರು ಈ ಸ್ಥಾನಕ್ಕೆ ಬಂದು; ಇಷ್ಟು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಇಷ್ಟು ಮಾತ್ರವಲ್ಲದೇ, ಇವರೊಬ್ಬ ಅಜಾತ ಶತೃವಾಗಿದ್ದಾರೆ. ಯಾವುದೇ ಪಕ್ಷದವರನ್ನು ತೆಗೆದುಕೊಳ್ಳಿ, "ಹೊರಟ್ಟಿ ನಮ್ಮವರು" ಎಂದು ಹೇಳುತ್ತಾರೆ. ಎಲ್ಲರೂ ಆ ಮನಸ್ಸಿನಿಂದ ಈ ಮಾತನ್ನು ಹೇಳುತ್ತಾರೆ ಅದು ಬಹುಶಃ ನಾವುಗಳು ಯಾರೂ ಸಹ ಇದನ್ನು ಮರೆಯಬಾರದು. ಆ ಪ್ರಮಾಣದ ಗೆಳೆತನವನ್ನು ಎಲ್ಲರ ಜೊತೆಗೆ ಹಾಗೂ ಎಲ್ಲಾ ಪಕ್ಷದ ನಾಯಕರೊಂದಿಗೆ ಇವರು ಹೊಂದಿದ್ದಾರೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಬಹಳ ಮುಖ್ಯವಾದ ಒಂದು ಮಾತನ್ನು ಹೇಳಬೇಕಾಗುತ್ತದೆ. ಭಾರತೀಯ ಜನತಾ ಪಕ್ಷ ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದೆ ಎನ್ನುವುದನ್ನು ನಾವು ನೆನೆಸಿಕೊಳ್ಳಬೇಕು. ಈ ಮಾತನ್ನು ನಾವುಗಳು ಯಾರೂ ಸಹ ಮರೆಯಬಾರದು. ಈ ಸ್ಥಾನದಿಂದ ತಾವು ಯಾವ ಪಕ್ಷಕ್ಕೂ ಸೇರಿದವನಲ್ಲ ಎಂಬುದಾಗಿ ರಾಜಿನಾಮೆಯನ್ನು ನೀಡಿದ್ದರೂ ಸಹ ನನಗೆ ಅನ್ನಿಸುವುದು ಏನೆಂದರೆ, ತಮ್ಮ ಬಗ್ಗೆ ಎಲ್ಲರೂ ಅವರು ನಮ್ಮವರು ಎಂಬ ಭಾವನೆಯನ್ನು ಹೊಂದಿದ್ದಾರೆ; ಇದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಇಲ್ಲಿ ಕುಳಿತಿರುವ ಅನೇಕರು ಬೇರೆ ಬೇರೆ ಹಿನ್ನೆಲೆಗಳಿಂದ ಬಂದಿರುವರಾಗಿದ್ದಾರೆ. Born with the golden spoon ಇಲ್ಲ ಎನ್ನುವುದಾದರೂ at least born with the silver spoon ಎನ್ನುವ ರೀತಿಯಲ್ಲಿ ಅನೇಕರು ಇಲ್ಲಿ ಇದ್ದಾರೆ. ಆದರೆ, ಒಬ್ಬ ದೈಹಿಕ ಶಿಕ್ಷಕನಾಗಿ ಈ ಸ್ಥಾನಕ್ಕೆ ಬರುವುದು ಒಂದು ಸಾಮಾನ್ಯವಾದ ವಿಷಯವಲ್ಲ. ಈ ಮನೆಯ ಮುಖ್ಯ ಶಿಕ್ಷಕರಾಗಿ ಕೈಯ್ಯಲ್ಲಿ ಒಂದು ಛಡಿ ಇಲ್ಲದೇ, ಈಗ ತಾನೆ ತಾವುಗಳೆಲ್ಲರೂ ಹೇಳಿದಂತೆ "ಏಯ್! ಕುತ್ಕೋ" ಎಂದು ತಮ್ಮ ಭಾಷೆಯನ್ನು ನೋಡಿ ಹೆದರಿ ಬಹುಶಃ ಯಾರೂ ನಿಮ್ಮ ಎದುರು ಏನೂ ಮಾಡುವುದಕ್ಕೂ ಸಹ ಧೈರ್ಯ ಮಾಡುವುದಿಲ್ಲ. ಆ ರೀತಿಯ ಪ್ರೀತಿ ಮತ್ತು ಹಿರೆತನವನ್ನು ತಾವು ಬೆಳೆಸಿದ್ದೀರಿ. ಇನ್ನೂ ಹೆಚ್ಚಿನ ಕಾಲ ಈ ಜನಸಾಮಾನ್ಯರ ಹಾಗೂ ಶಿಕ್ಷಕರ ಸೇವೆ ತಾವು ಮಾಡಲಿ ಎಂದು ಶುಭ ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಅಣ್ಣ ಬಸವಣ್ಣನವರ ನಾಡಿನಲ್ಲಿ ಜನಿಸಿ, ಬಸವ ತತ್ವವನ್ನು ಪರಿಪಾಲನೆ ಮಾಡಿ ಬಸವಣ್ಣನವರ ಹೆಸರನ್ನು ಇಟ್ಟುಕೊಂಡು ತಾವು ಕೂಡ ರಾಜಕಾರಣದಲ್ಲಿ ಜನಾನುರಾಗಿ ಆಗಿದ್ದಾರೆ. ಇವರು ಶಿಕ್ಷಕರಾಗಿ, ಶಿಕ್ಷಣ ಸಚಿವರಾಗಿ, ಸಭಾಪತಿಗಳಾಗಿ ನಮ್ಮಂತಹ ಯುವ ಶಾಸಕರಿಗೆ ಮಾರ್ಗದರ್ಶನ ಕೊಡತಕ್ಕ ಭೀಷ್ಮನ ಸ್ಥಾನದಲ್ಲಿ ಇದ್ದಾರೆ. ಇವರು ಇವತ್ತಿನ ದಿವಸ 45 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸಿ, ನಿಮ್ಮ ಬಗ್ಗೆ

ಮಾತನಾಡುವುದು ಎಂದರೆ, ಸೂರ್ಯ ಚಂದ್ರರನ್ನು ಪರಿಚಯ ಮಾಡಿಕೊಟ್ಟಂತೆ ಈ ಸದನಕ್ಕೆ ಆಗುತ್ತದೆ ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ತಾವು ಬಹಳಷ್ಟು ಅನುಭವದಿಂದ ನಿಷ್ಪಕ್ಷಪಾತವಾಗಿ ಸಭಾಪತಿಗಳಾಗಿ ಕಾರ್ಯವನ್ನು ನಿರ್ವಹಿಸುವುದರ ಜೊತೆಗೆ ಯಾವ ಜಾತಿ, ಮತ, ಧರ್ಮವನ್ನು ಮೀರಿ ಎಲ್ಲರೂ ನಮ್ಮವರು ಎನ್ನುವ ಭಾವನೆಯಿಂದ ಶಿಕ್ಷಣ ಕ್ಷೇತ್ರವನ್ನು ಮತ್ತು ಶಿಕ್ಷಕರನ್ನು ಅವರ ಶ್ರೇಯೋಭಿವೃದ್ಧಿಗಾಗಿ ತಾವು 45 ವರ್ಷಗಳ ಕಾಲ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ, ವಿಶೇಷವಾಗಿ ಉತ್ತರ ಕರ್ನಾಟಕದ ಬಗ್ಗೆ ಧ್ವನಿ ಎತ್ತಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ತಾವು ಸಹಕಾರವನ್ನು ಮಾಡಿದ್ದೀರಿ. ರಾಷ್ಟ್ರದಲ್ಲಿಯೇ ಅತ್ಯಂತ ಹಿರಿಯ ಶಾಸಕರಾಗಿ ತಾವು ಸೇವೆಯನ್ನು ಸಲ್ಲಿಸಿದ್ದೀರಿ. ಆಗಲೇ ಒಬ್ಬರು ಸಂಸದರು 10 ಬಾರಿ ಆಯ್ಕೆಯಾಗಿದ್ದರು ಎಂಬುದನ್ನು ಹೇಳಿದರು. ಆದರೆ, ವಿಧಾನ ಪರಿಷತ್ತಿನ ವ್ಯವಸ್ಥೆಯಲ್ಲಿ ಒಂದು ದಿವಸವೂ ಸಹ ಅಂತರವಿರುವುದಿಲ್ಲ. ಕೆಳಮನೆಯ ಬಗ್ಗೆ ಹೇಳುವುದಾದರೆ ಅಲ್ಲಿ ಚುನಾವಣೆ ಘೋಷಣೆಯಾಗಿ ಮತ್ತೆ ಆಯ್ಕೆಯಾಗಿ ಬರುವವರೆಗೂ ಅವರು ಶಾಸಕರಾಗಿ ಇರುವುದಿಲ್ಲ. ಆದರೆ, ಈ ಮನೆಯ ವೈಶಿಷ್ಟತೆ ಏನೆಂದರೆ ಅವರ ಅವಧಿಯು ಮುಗಿಯುವದರೊಳಗೆ ಮತ್ತೆ ಅವರನ್ನು ಆಯ್ಕೆ ಮಾಡಿ ಅವರು ಪ್ರಮಾಣ ವಚನವನ್ನು ತೆಗೆದುಕೊಳ್ಳುವ ವ್ಯವಸ್ಥೆ ಇರುತ್ತದೆ. ಸುದೀರ್ಘವಾದ 45 ವರ್ಷಗಳನ್ನು ದಾಟಿ ತಾವು ಸೇವೆಯನ್ನು ಮಾಡಿರುವುದನ್ನು ಕಂಡು ನಾವುಗಳೆಲ್ಲರೂ ಬಹಳ ಸಂತೋಷವನ್ನು ಪಡುತ್ತೇವೆ. ವಿಶೇಷವಾಗಿ ತಾವು ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ್ದೀರಿ. ತಮ್ಮ ಕುಟುಂಬದ ವ್ಯವಸ್ಥೆಯಲ್ಲಿ ಸಣ್ಣ ಮನೆತನದಿಂದ ಬಂದು ಕೃಷಿಕರಾಗಿ ಇಷ್ಟೆಲ್ಲಾ ಸೇವೆಯನ್ನು ಮಾಡಿದರೂ ಸಹ ಆ ಕೃಷಿಯ ಬಗ್ಗೆ ತಮಗೆ ಇರುವ ಪ್ರೀತಿ, ಅಭಿಮಾನ, ಗೌರವಗಳು ಇಂದಿಗೂ ಸಹ ಕಡಿಮೆಯಾಗಿಲ್ಲ. ಹುಬ್ಬಳ್ಳಿಗೆ ಹೋದರೆ, ತಾವು ತಮ್ಮ ತೋಟಕ್ಕೆ ಹೋಗುತ್ತಿದ್ದೀರಿ. ಅಲ್ಲಿರುವ ದನಕರುಗಳ ವ್ಯವಸ್ಥೆ ಹಾಗೂ ಅವುಗಳ ಮೇಲೆ ಪ್ರೀತಿಯನ್ನು ತೋರಿಸುವುದು ನೋಡಿದರೆ, ತಾವು ಬೆಳೆದು ಬಂದ ಕೃಷಿ ಮನೆತನವನ್ನು ಇಂದಿಗೂ ಸಹ ತಾವು ನೆನಪಿನಲ್ಲಿಟ್ಟುಕೊಂಡು ಬಂದಿದ್ದೀರಿ. ಇದನ್ನು ನಾವುಗಳೆಲ್ಲರೂ ಗಮನಿಸಬೇಕು ಎಂಬ ಮಾತನ್ನು ನಾನು ಹೇಳುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ತಾವು ಶಿಕ್ಷಣ ಸಚಿವರಾಗಿ ಸಂದರ್ಭದಲ್ಲಿ ರಾಜಕ್ಕೆ ಕೊಟ್ಟಿರುವ ಪ್ರೌಢ ಶಾಲೆ ಹಾಗೂ ಕಾಲೇಜುಗಳ ಸಂಖ್ಯೆಯನ್ನು ನೋಡಿದರೆ, ಯಾವ ಸಚಿವರೂ ಸಹ ಇಷ್ಟೊಂದು ಪ್ರಮಾಣದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಶಾಲೆಗಳನ್ನು ತೆಗೆಯಲು ಅವಕಾಶ ಮಾಡಿ ಕೊಟ್ಟಿಲ್ಲ ಎನ್ನುವುದನ್ನು ನಾವು ನೆನಪಿಸಿಕೊಳ್ಳಬೇಕು. ಅದೇ ರೀತಿಯಾಗಿ ಕೌನ್ಸಿಲಿಂಗ್ ಮುಖಾಂತರ ಶಿಕ್ಷಕರ ವರ್ಗಾವಣೆ ಮಾಡುವುದು ಆಗಿರಬಹುದು, ಹೀಗೆ ಹತ್ತು ಹಲವಾರು ಕೆಲಸ ಕಾರ್ಯಗಳನ್ನು ತಾವು ಮಾಡಿರುವುದು ಬಹಳ ಅಭಿಮಾನದ ಸಂಗತಿ ಎಂಬ ಮಾತನ್ನು ನಾವುಗಳೆಲ್ಲರೂ ಹೇಳುತ್ತಿದ್ದೇವೆ. ಇದರಲ್ಲಿ ವಿಶೇಷವಾಗಿ ತಾವು ಎಡಹಳ್ಳಿ ಗ್ರಾಮದಲ್ಲಿ ಮಾಡಿರುವ ಶಾಲಾ ಕಾಲೇಜುಗಳನ್ನು ನಾವುಗಳೆಲ್ಲರೂ ಗಮನಿಸಿದರೆ, ನಮ್ಮ ರಾಜ್ಯದಲ್ಲಿ ಎಲ್ಲಿಯೂ ಕೂಡ ಇಲ್ಲ. ತಾವೇ ಸ್ವಂತ ಶಾಲೆಯನ್ನು ತೆರೆದು ನಡೆಸಬಹುದಾಗಿತ್ತು. ಆದರೆ ನೀವು ಆ ರೀತಿಯಾಗಿ ಮಾಡಲಿಲ್ಲ. ಸರ್ಕಾರಿ ಶಾಲೆಯನ್ನು ನಾವು ಅಭಿವೃದ್ಧಿ ಮಾಡಿ ತೋರಿಸಬೇಕು ಎನ್ನುವ ನಿಟ್ಟಿನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿ. ಇದು ಊರು ಪಕ್ಕದಲ್ಲಿಯೇ ಇದೆ. ಆ ಮಟ್ಟದಲ್ಲಿ ಊರಿಗೆ ಹತ್ತಿರವಿರುವ ಭೂಮಿಗೆ

ದುಪ್ಪಟ್ಟು ಬೆಲೆ ಇರುತ್ತದೆ. ಅಂತಹ ಹತ್ತಾರು ಎಕರೆ ಜಮೀನನ್ನು ಸರ್ಕಾರಕ್ಕೆ ಉಚಿತವಾಗಿ ಕೊಟ್ಟು ಆ ಸಂಸ್ಥೆಯನ್ನು ಕಟ್ಟಿದ್ದು, ಸಾವಿರಾರು ವಿದ್ಯಾರ್ಥಿಗಳು ಅಲ್ಲಿದ್ದಾರೆ. ಹಳ್ಳಿಯಿಂದ ದಿಲ್ಲಿಯವರೆಗೆ ಎಂದು ನಾವುಗಳೆಲ್ಲರೂ ಕೇಳುತ್ತೇವೆ. ಆದರೆ, ದಿಲ್ಲಿಯಿಂದ ಹಳ್ಳಿಯವರೆಗೆ ಮಕ್ಕಳು ಶಾಲೆ ಕಲಿಯುತ್ತಾರೆ. ಮುಧೋಳ ಮತ್ತು ಬಾಗಲಕೋಟೆಗಳಲ್ಲಿರುವವರು ತಮ್ಮ ಸರ್ಕಾರಿ ಶಾಲೆಗೆ ದಾಖಲೆ ಕೋರಿ ಸರದಿಯ ಸಾಲಿನಲ್ಲಿ ನಿಂತಿರುತ್ತಾರೆ. ಅಷ್ಟು ಮಟ್ಟದ ಗುಣಮಟ್ಟದ ಶಿಕ್ಷಣ ಇಲ್ಲಿ ಸಿಗಲು ಕಾರಣವೇನೆಂದರೆ, ತಮ್ಮ ಬಿಡುವಿನ ಅವಧಿಯನ್ನು ಮಾಡಿಕೊಂಡು ಪ್ರತಿ ತಿಂಗಳು ಆ ಶಾಲೆಯ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವುದನ್ನು ನೋಡಿದರೆ, ನಾವುಗಳೆಲ್ಲರೂ ಆ ರೀತಿಯಾದ ಒಂದೊಂದು ಶಾಲೆಯನ್ನು ನಡೆಸಬೇಕು ಎನ್ನುವ ಭಾವನೆ ಬರುತ್ತದೆ. ಆದರೆ, ತಮ್ಮೊಟ್ಟಿಗೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು. ಬಹಳ ಸದಸ್ಯರು ಪ್ರಸ್ತಾಪಿಸಿದಂತೆ, ತಾವು ಅವ್ವ ಸಂಸ್ಥೆಯನ್ನು ಕಟ್ಟಿರುವುದು; ಇದು ಹೆಸರಿಗೆ ಅಷ್ಟೇ ಅಲ್ಲಾ ಅದರ ಮುಖಾಂತರ ಸಾರ್ವಜನಿಕ ಸೇವೆಯನ್ನು ಸಮಾಜ ಸೇವೆಯನ್ನು ನಿತ್ಯ ನಿರಂತರವಾಗಿ ಮಾಡಿ ಎಲ್ಲರಿಗೂ ಸಹ ತಾಯಿಯ ಬಗ್ಗೆ ಅಭಿಮಾನ ಮತ್ತು ಗೌರವಗಳು ಇರಬೇಕು ಎನ್ನುವುದನ್ನು ತಮ್ಮನ್ನು ನೋಡಿ ಕಲಿಯುವುದು ಇಲ್ಲಿ ಇದೆ ಎಂದು ನಾವು ಇವತ್ತಿನ ದಿವಸ ನೆನಪಿಸಿಕೊಳ್ಳಬೇಕು. ಇವತ್ತಿನ ದಿವಸ ಅವ್ವ ಸಂಸ್ಥೆಯು ಸಹ ಬಹಳಷ್ಟು ಜನಪ್ರಿಯ ಕೆಲಸ ಕಾರ್ಯಗಳನ್ನು ಮಾಡಿದ್ದನ್ನು ನಾವು ನೆನಪಿಸಿಕೊಳ್ಳೋಣ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೊರಟ್ಟಿ ಸಾಹೇಬರಿಗೆ 45 ವರ್ಷ ಆಯಿತು ಎಂದು ನಾವುಗಳೆಲ್ಲರೂ ಮಾತನಾಡಿಕೊಳ್ಳುತ್ತಿದ್ದೇವೆ. 45 ವರ್ಷಕ್ಕೆ ನಾವು ಒಂದು ಲೆಕ್ಕ ಹಾಕಿದ್ದೇವೆ. ನೀವು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರಲಿಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ರೈಲಿನಲ್ಲಿ ಅತೀ ಹೆಚ್ಚಾಗಿ ನೀವು ಓಡಾಡಿದ್ದೀರಿ. ವಾರಕ್ಕೆ ಒಮ್ಮೆ ಬರುವುದು ಮತ್ತು ಹೋಗುವುದು ಎಂದರೆ ವಾರಕ್ಕೆ ಎರಡು ದಿನ ಆದರೆ, ತಿಂಗಳಿಗೆ ಎಂಟು ಬಾರಿ ಆಗುತ್ತದೆ. ಅಂದರೆ ಎಂಟು ದಿವಸ ನೀವು ರೈಲಿನಲ್ಲಿಯೇ ಇದ್ದೀರಿ. ಇದು ಒಂದು ವರ್ಷಕ್ಕೆ ನೂರು ದಿನಗಳಾದವು. 45 ವರ್ಷ ಅಂದರೆ 4,500 ದಿವಸಗಳನ್ನು ಈ ಸಮಾಜ ಸೇವೆಗಾಗಿ ಶಾಸಕ ಸ್ಥಾನದಲ್ಲಿ ನಿಮ್ಮ ರಾತ್ರಿಗಳು ರೈಲಿನಲ್ಲಿ ಕಳೆದಿವೆ ಎಂದರೆ, ಇದಕ್ಕಿಂತಲೂ ದೊಡ್ಡ ಸೇವೆ ಇನ್ನೇನು ಇದೆ ಎಂದು ನಾವು ಸೂಕ್ಷ್ಮವಾಗಿ ಗಮನಿಸಬೇಕು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮ್ಮ ಬಗ್ಗೆ ಬಹಳಷ್ಟು ವಿಚಾರಗಳನ್ನು ಹೇಳಬೇಕಾಗಿತ್ತು. ಆದರೆ, ಸಮಯ ಇಲ್ಲ. ತಾವು ಮಾಡಿದ ಅಪಾರವಾದ ಶಿಕ್ಷಣ ಸೇವೆಯನ್ನು ನೆನಪಿಸುವುದು ನಮ್ಮೆಲ್ಲರಿಗೂ ಮಾರ್ಗದರ್ಶನ ಆಗುತ್ತದೆ. ಶ್ರೀ ಪುಟ್ಟಣ್ಣ ರವರು ಹೇಳಿದಂತೆ, ನಾವುಗಳು ಇಲ್ಲಿ ಆರಿಸಿ ಬರಬೇಕೆಂದರೆ ತಾವು ಕಾರಣರೆ.., ನಾನೂ ಕೂಡ ಇಲ್ಲಿಗೆ ಶಾಸಕರಾಗಿ ಬರಬೇಕಾದರೆ, ತಮ್ಮ ಆಶೀರ್ವಾದ, ಬೆಂಬಲ ಸಾಕಷ್ಟು ಆಗಿದೆ ಎನ್ನುವುದನ್ನು ನಾನು ಸ್ಮರಣೆ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ನಮ್ಮ ನಿರಾಣಿ ಕುಟುಂಬದವರಿಗೆಲ್ಲಾ ಒಬ್ಬ ಹಿರಿಯ ಅಣ್ಣನ ಸ್ಥಾನದಲ್ಲಿದ್ದು, ನಮ್ಮೆಲ್ಲಾ ಬೇಕು ಬೇಡಿಕೆಗಳಿಗೆ ಸದಾ ಸ್ಪಂದನೆಯನ್ನು ಮಾಡಿ ಸಹಕಾರವನ್ನು ನೀಡಿದ್ದೀರಿ. ತಮ್ಮ 50 ವರ್ಷಗಳ ಅವಧಿ ಪೂರ್ತಿಯಾಗಬೇಕು ಎಂದು ನಮ್ಮೆಲ್ಲರ ಆಶಯ ಇದೆ. ತಮ್ಮ ಜೀವನದುದ್ದಕ್ಕೂ ಕೂಡ ತಮಗೆ ಆಯುರ್, ಆರೋಗ್ಯ, ಭಾಗ್ಯ ಸಕಲ ಸಂಪತ್ತುಗಳನ್ನು ಭಗವಂತನು ಕಲ್ಪಿಸಲಿ

ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದಕ್ಕಾಗಿ ಅದಕ್ಕಾಗಿ ತಮಗೆಲ್ಲರಿಗೂ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. (ಮುಂದು)

(786) 19-08-2025/ 1-30/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, 45 ವರ್ಷಗಳ ಕಾಲ ವಿಧಾನ ಪರಿಷತ್ತಿನ ಶಾಸಕರಾಗಿ ಸೇವೆ ಸಲ್ಲಿಸಿರುವ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರುಗಳು ತಮ್ಮ ಬಗ್ಗೆ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಮಾತನಾಡುವಂತಹ ಸದಸ್ಯರುಗಳು ಎರಡು ನಿಮಿಷಗಳಲ್ಲಿಯೇ ಮುಗಿಸಬೇಕೆಂದು ತಾವು ಕೂಡ ಹೇಳಿದ್ದೀರಿ. ಶ್ರೀಮಾನ್ ಬಸವರಾಜ ಹೊರಟ್ಟಿಯವರು ಒಬ್ಬ ಅಪರೂಪದ ರಾಜಕಾರಣಿ. ಕಳೆದ 60 ವರ್ಷಗಳ ಕಾಲ ಜನರ ಸೇವೆ, ಶಿಕ್ಷಕರ ಸೇವೆ, ರಾಜ್ಯದ ಅಭಿವೃದ್ಧಿಗೆ ಪ್ರಾಮಾಣಿಕವಾಗಿರುವಂತಹ ಒಬ್ಬ ನಾಯಕರಾಗಿದ್ದಾರೆ. ಮಂತ್ರಿಯಾಗಿ, ಸಭಾಪತಿಯವರಾಗಿ, ಛಾಪೋಂದನ್ನು ಮೂಡಿಸಿ ಸದನವನ್ನು ಹೇಗೆ ನಡೆಸಬೇಕು, ಯಾವ ರೀತಿಯಲ್ಲಿ ಚರ್ಚೆಯಾಗಬೇಕೆನ್ನುವುದರ ಬಗ್ಗೆ ಒಳ್ಳೆಯ ರೀತಿಯಲ್ಲಿ ಮಾರ್ಗದರ್ಶನವನ್ನು ಮಾಡುವುದರ ಮೂಲಕ ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಅಂದರೆ, ಮೊದಲಿನಿಂದಲೂ ಮಾಡುತ್ತಿದ್ದರು. ಚುನಾವಣೆ ಸಂದರ್ಭದಲ್ಲಿ ನಾವು ಅವರ ವಿರುದ್ಧವಾಗಿ ಭಾಷಣ ಮಾಡಲಿಕ್ಕೆ ಹೋದಾಗ ಶ್ರೀ ಬಸವರಾಜ ಹೊರಟ್ಟಿಯವರಿಗೆ ಓಟು ಹಾಕಬೇಡಿ ಎಂದು ಹೇಳಿದೆವು. ಆದರೆ, ಅಲ್ಲಿ ಸಾಕಷ್ಟು ಜನರು ಏನು ಹೇಳಿದರು ಎಂದರೆ "ನಾವು ಯಾವುದೇ ಪಕ್ಷವನ್ನು ನೋಡುವುದಿಲ್ಲ, ನಮಗೆ ಶ್ರೀಮಾನ್ ಬಸವರಾಜ ಹೊರಟ್ಟಿಯವರು ಬೇಕು, ಪಕ್ಷ ಯಾವುದೇ ಇರಲಿ, ಅವರಿಗೆ ಮಾತ್ರ ನಾವು ಓಟು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿ ಸುಮಾರು 8 ಬಾರಿ ಅವರನ್ನು ಗೆಲ್ಲಿಸುವುದರ ಮೂಲಕ ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದರಲ್ಲಿಯೇ ನಮಗೆ ಅರ್ಥವಾಗುವುದು ಏನೆಂದರೆ, ಯಾವ ರೀತಿಯಲ್ಲಿ ಶಿಕ್ಷಕರ ಬೆಂಬಲ ಅವರಿಗೆ ಇದೆ ಎನ್ನುವುದು ಅರ್ಥವಾಗುತ್ತದೆ. ಅವರು ವಿರೋಧ ಪಕ್ಷದಲ್ಲಿ ಇರುವಾಗಲೂ ಕೂಡ ನನಗೆ ಕೆಲವು ನೆನಪುಗಳಿದೆ. ಬಹುಶಃ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಇಲ್ಲಿ ಸರ್ಕಾರಿ ಮುಖ್ಯ ಸಚೇತಕನಾಗಿ ಕೆಲಸ ಮಾಡುತ್ತಿದ್ದೆ. ಮುಂದೆ ನಮ್ಮ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು, ಡಾ॥ ಎಂ.ಪಿ.ನಾಡಗೌಡರು ಮತ್ತು ಶ್ರೀ ಬಸವರಾಜ ಬೊಮ್ಮಾಯಿಯವರು ಒಂದು ಕಡೆ ಕುಳಿತುಕೊಳ್ಳುತ್ತಿದ್ದರು. ಯಾವಾಗಲಾದರೂ ಶಿಕ್ಷಕರ ಸಮಸ್ಯೆಗಳು ಬಂದರೆ ಅವರು ಯಾರ ಮಾತನ್ನೂ ಸಹ ಕೇಳುತ್ತಿರಲಿಲ್ಲ. ನೇರವಾಗಿ ಬಾವಿಗೆ ಬಂದುಬಿಡುತ್ತಿದ್ದರು. ಆ ಸಂದರ್ಭದ ವಿಚಾರ ನನಗೆ ಇವತ್ತಿಗೂ ನೆನಪು ಇದೆ.

ಅವರು ಅಲ್ಲಿಗೆ ಬಂದು ಕುಳಿತುಕೊಳ್ಳುತ್ತಿದ್ದರು. ಯಾವುದೇ ಒಂದು ಸಮಸ್ಯೆ ಪರಿಹಾರ ಆಗುವವರೆಗೂ ನಾನು ಇಲ್ಲಿಂದ ಹೋಗುವುದಿಲ್ಲವೆಂದು ಹೇಳಿ, ಅಲ್ಲಿಯೇ ಕುಳಿತುಕೊಳ್ಳುತ್ತಿದ್ದುದನ್ನು ನಾನು ನೋಡಿದ್ದೇನೆ. ಅದಕ್ಕೋಸ್ಕರವೇ ಅವರನ್ನು ಅಪರೂಪದ ರಾಜಕಾರಣಿ ಎಂದು ಹೇಳುತ್ತಿದ್ದೇನೆ. ಜೊತೆಗೆ ಅವರು ಯುವಕರಿಗೂ ಸಹ ಸಂದೇಶವನ್ನು ಕೊಡುತ್ತಿರುತ್ತಾರೆ. ಮತ್ತೆ ಯುವಕರು ಸಹ ಅವರು ಯಾವ ರೀತಿಯಲ್ಲಿ ಹೋರಾಟ ಮಾಡಿರುತ್ತಾರೆಂದು ನೋಡಿ ಕಲಿತುಕೊಳ್ಳಬೇಕು. "ನಾನು ಚುನಾವಣೆಗೆ ಸ್ಪರ್ಧಿಸುವ ಮುಂಚೆ ಅವರು ಯಾವ ರೀತಿಯಲ್ಲಿ ಇರಬೇಕೆಂದು ನನಗೆ ಹೇಳಿದರು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟಣ್ಣನವರು ಹೇಳಿದರು. ಅಂದರೆ, ಯಾವ ರೀತಿಯಲ್ಲಿ ಈ ಒಂದು ದಾರಿಯಲ್ಲಿ ನಡೆಯಬೇಕೆಂದು ಹೇಳುವ ಮೂಲಕ ಒಂದು ಉತ್ತಮ ಕೆಲಸ ಮಾಡಿದರು. ಆದ್ದರಿಂದ, ಇವತ್ತು ನಾನು 5 ಬಾರಿ ಗೆದ್ದು ಬಂದಿದ್ದೇನೆ ಎನ್ನುವ ಮಾತನ್ನೂ ಕೂಡ ಪುಟ್ಟಣ್ಣನವರು ಹೇಳಿದ್ದಾರೆ.

ಮತ್ತೆ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಸಹ ಏನು ಹೇಳಿದರು ಎಂದರೆ " ಶ್ರೀಮಾನ್ ಬಸವರಾಜ ಹೊರಟ್ಟಿಯವರು ಒಳ್ಳೆಯ ಕಬ್ಬಡ್ಡಿ ಆಟವನ್ನು ಆಡುತ್ತಾರೆಂದು ಹೇಳಿದರು. ಆದ್ದರಿಂದ, ನಾನು ಅವರ ಬಗ್ಗೆ ಹೇಳುವುದೇನೆಂದರೆ, ಅವರು ಕಬ್ಬಡ್ಡಿ ಆಡುತ್ತಾರೆ, ಆದರೆ ಯಾರ ಕಾಲನ್ನೂ ಸಹ ಎಳೆದಿಲ್ಲವೆಂದು ಹೇಳಲಿಕ್ಕೆ ಬಯಸುತ್ತೇನೆ. ಆ ಹಿನ್ನೆಲೆಯಲ್ಲಿ ಅವರ ಬಗ್ಗೆ ಮಾತನಾಡಲು ಇನ್ನು ಹಲವಾರು ವಿಚಾರಗಳಿದ್ದರೂ ಸಹ ಅವರ ಬಗ್ಗೆ ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಶುಭವನ್ನು ಕೋರುತ್ತಾ, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಅವರು ಎಲ್ಲರಿಗೂ ಮಾರ್ಗದರ್ಶನ ಮಾಡಲಿ ಎನ್ನುವ ಮಾತನ್ನು ಹೇಳುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈಗಾಗಲೇ, ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಶ್ರೀಮಾನ್ ಬಸವರಾಜ ಹೊರಟ್ಟಿಯವರಿಗೆ ಸುಮಾರು 15-16 ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡುವಂತಹ ಅವಕಾಶ ಸಿಕ್ಕಿದೆ. ಶ್ರೀಮಾನ್ ಗುಂಡೂರಾವ್ ಮತ್ತು ಶ್ರೀಮಾನ್ ದೇವರಾಜ್ ಅರಸ್ ರವರಿಂದ ಹಿಡಿದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಶ್ರೀಮಾನ್ ಎಸ್.ಆರ್. ಬೊಮ್ಮಾಯಿ ಯವರಿಂದ ಹಿಡಿದು ಶ್ರೀಮಾನ್ ಸಿದ್ದರಾಮಯ್ಯನವರವರೆಗೆ ಸುಮಾರು 15-16 ಮುಖ್ಯಮಂತ್ರಿಗಳ ಜೊತೆಯಲ್ಲಿ ಸಹ ಕೆಲಸ ಮಾಡಲಿಕ್ಕೆ ಅವಕಾಶ ಸಿಕ್ಕಿದೆ. 1980 ರಲ್ಲಿ ತಾವು ವಿಧಾನ ಪರಿಷತ್ ಅನ್ನು ಪ್ರವೇಶ ಮಾಡಿದಿರಿ. ನಾನು ಇವತ್ತಿನ ದಿವಸ ತಮ್ಮ ಗಮನಕ್ಕೆ ತರುವಂತಹ ವಿಷಯ ಏನೆಂದರೆ, ಆಗ ರಾಜಕಾರಣದಲ್ಲಿ ಯಾವ ರೀತಿಯಲ್ಲಿ ಮೌಲ್ಯಗಳಿತ್ತು, ಯಾವ ರೀತಿಯಲ್ಲಿ morality ಇತ್ತು, ಈಗ ಯಾವ ರೀತಿಯಲ್ಲಿದೆ ಎನ್ನುವುದರ ಬಗ್ಗೆ ತಮಗೆ ಅವಕಾಶ ಸಿಕ್ಕಿದಾಗ ಬೆಳಕನ್ನು ಚೆಲ್ಲಬೇಕೆಂದು ನನ್ನ ಭಾವನೆಯನ್ನು ವ್ಯಕ್ತ ಮಾಡುತ್ತೇನೆ. ತಮ್ಮ

ಮೊದಲನೆಯ ಚುನಾವಣೆ ಸಂದರ್ಭ ಅಂದರೆ ಸುಮಾರು 1980-1981-1982 ಇರಬಹುದು. ಶ್ರೀಮಾನ್ ಹೆಚ್.ಕೆ. ಪಾಟೀಲ್ ರವರು ಸಹ ಈ ಸದನಕ್ಕೆ 1984 ರಲ್ಲಿ ಬಂದಿದ್ದರು. ಆಗ 1980, 1990 ಮತ್ತು 2000 ಮತ್ತೆ ನಂತರ ಯಾವ ರೀತಿಯಲ್ಲಿ, ರಾಜಕಾರಣದಲ್ಲಿ ಸಾಕಷ್ಟು ಬದಲಾವಣೆಗಳಾಯಿತು. ಆ ಸಂದರ್ಭದಲ್ಲಿ ಶಿಕ್ಷಕರ ಕ್ಷೇತ್ರದಿಂದ ಚುನಾವಣೆಗಳನ್ನು ಎದುರಿಸಿ ಬಂದಿದ್ದೀರಿ. ಅಂದು ಯಾವ ರೀತಿಯಲ್ಲಿ ಚುನಾವಣೆ ನಡೆಯುತ್ತಿತ್ತು, ಇವತ್ತು ಯಾವ ರೀತಿಯಲ್ಲಿ ಚುನಾವಣೆ ನಡೆಯುತ್ತಿದೆ, ಅದರ ಬಗ್ಗೆಯೂ ಸಹ ಆ ಒಂದು you have got entire experience... ಅಂದರೆ ತಾವು ಅನುಭವ ಪಡೆದಿರುವಂತಹದ್ದು, ತಾವು ಅದರ ಬಗ್ಗೆ ಈ ಸದನದಲ್ಲಿ ಮತ್ತೆ ಸಾಕಷ್ಟು ಜನರು ಅಂದರೆ ನಮ್ಮ ಶ್ರೀಮಾನ್ ಡಾ॥ ಚಂದ್ರಶೇಖರ್ ಕಂಬಾರ್ ಆಗಿರಬಹುದು, ಡಾ॥ ಹೆಚ್. ನರಸಿಂಹಯ್ಯನವರಾಗಿರಬಹುದು, ಶ್ರೀಮಾನ್ ಸಿದ್ಧಲಿಂಗಯ್ಯನವ ರಾಗಿರಬಹುದು, ಮತ್ತು ನಮ್ಮ ಶ್ರೀಮಾನ್ ಎಜಾಸುದ್ದೀನ್ ಆಗಿರಬಹುದು. ಶ್ರೀಮಾನ್ ಸುಬ್ಬಯ್ಯ ಶೆಟ್ಟಿ ಆಗಿರಬಹುದು. ಶ್ರೀಮಾನ್ ನಸೀರ್ ಸಾಬ್ ಆಗಿರಬಹುದು, ಅವರುಗಳನ್ನೆಲ್ಲಾ ನಾವು ಸಹ ನೋಡಿದ್ದೇವೆ. ಯಾವ ರೀತಿಯಲ್ಲಿ ಅಂದರೆ ಶ್ರೀಮಾನ್ ನಸೀರ್ ಸಾಬ್‌ರವರು ಗುಂಡ್ಲುಪೇಟೆಯಿಂದ ಬಸ್‌ನಲ್ಲಿ ಬರುತ್ತಿದ್ದರು, ಮತ್ತೆ ಶಾಸಕರ ಭವನದಿಂದ ಹೊರಗಡೆ ಎಲ್ಲಿಯಾದರೂ ಹೋಗಿ ಒಂದು ಕಾಫಿ-ಟೀ ಕುಡಿಯಲಿಕ್ಕೆ ಹೋಗಬೇಕಾದರೆ, "ಕೋಸಿಸ್" ಎನ್ನುವ ಒಂದು ಹೋಟೇಲ್ ಹತ್ತಿರದಲ್ಲಿ ಇತ್ತು. ಆ ಹೋಟೆಲ್ ಪಕ್ಕದಲ್ಲಿ ಒಂದು ಪುಸ್ತಕಗಳನ್ನು ಮಾರುವಂತಹ ಒಂದು ಅಂಗಡಿ ಇತ್ತು. ಅಲ್ಲಿಗೆ ಶಾಸಕರ ಭವನದಿಂದ ನಡೆದುಕೊಂಡು ಹೋಗಿ ಅಲ್ಲಿ ಒಂದು magazine ತೆಗೆದುಕೊಂಡು ಕೋಸಿಸ್‌ನಲ್ಲಿ ಒಂದು ಕಾಫಿ ಕುಡಿಯುವಂತಹ ಸಂದರ್ಭದಲ್ಲಿ ಶ್ರೀಮಾನ್ ರಘುಪತಿಯಾಗಿರಬಹುದು, ಶ್ರೀಮಾನ್ ರಮೇಶ್ ಕುಮಾರ್ ಆಗಿರಬಹುದು ಅವರೆಲ್ಲರೂ ಅಲ್ಲಿ ಒಂದು ಟೀಮ್ ಮಾಡಿಕೊಂಡು ಅಲ್ಲಿ ಕೆಲಸ ಮಾಡುವುದಾಗಲಿ, ಇತ್ಯಾದಿಯಾಗಿ ಮಾಡುತ್ತಿದ್ದುದನ್ನು ನಾವು ಸಹ ಆ ಸಂದರ್ಭದಲ್ಲಿ ನೋಡಿದ್ದೇವೆ. ಆದರೆ, ಅ ಸಂದರ್ಭದಲ್ಲಿರುವಂತಹದ್ದು ಮತ್ತು ಈ ಸಂದರ್ಭದಲ್ಲಿ ಇರತಕ್ಕಂತಹದ್ದರಲ್ಲಿ ಏನು ವ್ಯತ್ಯಾಸಗಳಿವೆ ಎನ್ನುವುದನ್ನು ನೋಡಿದಾಗ ಅದರ ನಿಮ್ಮ ಅನುಭವ ಮತ್ತು ಈಗ ಇರತಕ್ಕಂತಹದ್ದು 1978 ರಲ್ಲಿ ಗೆದ್ದಿರತಕ್ಕಂತಹ ಶಾಸಕರುಗಳು ಈಗಲೂ ಸಹ ನಮ್ಮ ಮುಂದೆ ಇದ್ದಾರೆ. ಅವರುಗಳು ಶ್ರೀಮಾನ್ ಅಡಗೂರ್ ಹೆಚ್. ವಿಶ್ವನಾಥ್‌ರವರಾಗಿರಬಹುದು, ಶ್ರೀಮಾನ್ ಆರ್.ವಿ. ದೇಶಪಾಂಡೆಯವರಾಗಿರಬಹುದು, ಮತ್ತೆ ನಮ್ಮ ಶ್ರೀಮಾನ್ ಟಿ.ಬಿ. ಜಯಚಂದ್ರರವರು ಆಗಿರಬಹುದು, ಅವರುಗಳ ಜೊತೆಯಲ್ಲಿ 1983 ರಲ್ಲಿ ನೋಡಿದಾಗ ಶ್ರೀಮಾನ್ ಸಿದ್ದರಾಮಯ್ಯನವರು ಸಹ 1983 ರಲ್ಲಿ ಬಂದಿರುವವರಾಗಿರುತ್ತಾರೆ. ಆದ್ದರಿಂದ, ಇದರ ಬಗ್ಗೆ ತಾವು ಏನಾದರೂ ಬೆಳಕನ್ನು ಚೆಲ್ಲಬೇಕು, ಅದಕ್ಕೆ ಏನಾದರೊಂದು ವ್ಯವಸ್ಥೆ ಮಾಡುವಲ್ಲಿ ನಿಮ್ಮ ಕಡೆಯಿಂದ ಏನಾದರೊಂದು ಆದೇಶ, ಅಂದರೆ ಲ್ಯಾಂಡ್ ಮಾರ್ಕ್ ಇವುಗಳನ್ನು ಬದಲಾವಣೆ ಮಾಡಲಿಕ್ಕೆ ಯಾವರೀತಿಯಲ್ಲಿ ಆಗುತ್ತದೆ, ಯಾವ ರೀತಿಯಲ್ಲಿ ಮಾಡಬಹುದು ಎನ್ನುವುದರ ಬಗ್ಗೆ ತಾವು ದಯವಿಟ್ಟು ಚಿಂತನೆ

ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀಮತಿ ಬಲ್ಕೀಸ್ ಭಾನು(ವಿಧಾನಸಭಾ ಕ್ಷೇತ್ರ):-** ಗೌರವಾನ್ವಿತ ಸಭಾಪತಿಯವರ ರಾಜಕೀಯ ಜೀವನದ 45 ವರ್ಷಗಳ ಸೇವೆಯ ಬಗ್ಗೆ ಎಲ್ಲಾ ಮಾನ್ಯ ಸದಸ್ಯರುಗಳು ಶ್ಲಾಘನೆ ಮಾತುಗಳನ್ನಾಡಿದ್ದಾರೆ. ನಾನು ಸಹ ಈ ರಾಜಕೀಯಕ್ಕೆ ಹೆಜ್ಜೆ ಇಟ್ಟಾಗಿನಿಂದಲೂ ಸನ್ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ಬಹಳ ಹತ್ತಿರದಿಂದ ಕಂಡಿರುವವರಲ್ಲಿ ಒಬ್ಬಳಾಗಿರುತ್ತೇನೆ. ಅವರು ತಮ್ಮ ರಾಜಕೀಯ ಜೀವನದಲ್ಲಿ ಒಂದು ಅಂಶ ಬಹಳ ಗಟ್ಟಿಯಾಗಿ ಹಿಡಿದಿಟ್ಟುಕೊಂಡಿದ್ದು ಎಂದರೆ ನಾನು ಮೌಲ್ಯಾಧಾರಿತ ರಾಜಕಾರಣವನ್ನು ಮಾಡಬೇಕು, ಸಮಾಜ ಸುಧಾರಣೆ ಮಾಡಬೇಕೆಂದರೆ ಮೌಲ್ಯದ ಮೂಲಕ ಸಮಾಜವನ್ನು ಗಟ್ಟಿಗೊಳಸಬೇಕೆಂದು ತಮ್ಮ ರಾಜಕೀಯ ಜೀವನದಲ್ಲಿ ಮೌಲ್ಯಾಧಾರಿತ ಹೆಜ್ಜೆಗಳನ್ನು ಇಟ್ಟಿರುವಂತಹ ಅಪರೂಪದ ವ್ಯಕ್ತಿ ಎಂದು ಹೇಳಿದರೆ ಅದು ಬೇರೆ ಯಾರು ಅಲ್ಲ, ಅದು ಶ್ರೀಮಾನ್ ಬಸವರಾಜ ಹೊರಟ್ಟಿಯವರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಅವರ ಒಂದು ವಿಚಾರವನ್ನು ಬಹಳವಾಗಿ ಮೆಚ್ಚಬೇಕಾಗಿದೆ. ಅದು ಏನೆಂದರೆ, ಹೆಣ್ಣಿಗೆ ಬಹಳ ಮಹತ್ವವನ್ನು ಕೊಟ್ಟಿರುವುದರಲ್ಲಿ ಬಹಳ ದೊಡ್ಡ ಮನಸ್ಸುಳ್ಳವರಾಗಿರುತ್ತಾರೆ. **"ಅವ್ವಾ"** ಎನ್ನುವಂತಹ ಒಂದು ಹೆಸರಿನಲ್ಲಿ ತಮ್ಮ ತಾಯಿಗೆ ಒಂದು ಗೌರವವನ್ನು ಯಾವ ರೀತಿಯಲ್ಲಿ ಸಲ್ಲಿಸುತ್ತಾರೋ ಅದೇ ರೀತಿಯಲ್ಲಿ ಬೇರೆ ಹೆಣ್ಣಿಗೂ ಕೂಡ ಅದೇ ರೀತಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ಬರಬೇಕು ಎನ್ನುವಂತಹ ಭಾವನೆ ಇರತಕ್ಕಂತಹ ಬಹಳ ದೊಡ್ಡ ಮನಸ್ಸು ಹೊಂದಿರುವಂತಹ ಮಹಾನ್ ವ್ಯಕ್ತಿ . ಅವರಿಂದ ಬಹಳವಾಗಿ ನಾವು ಕಲಿಯಬೇಕಾಗಿದೆ. ನನಗೆ ನಿಜಕ್ಕೂ ಕೂಡ ಈ ಸದನದಲ್ಲಿ ನಾನು ಅವರು ಸಭಾಪತಿಯಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಇರುತ್ತೇನೆಂದು ಯಾವತ್ತು ಸಹ ಕನಸ್ಸನ್ನೂ ಕೂಡ ಕಂಡಿರಲಿಲ್ಲ. ಆದರೆ, ಹಿಂದೆ ಅವರನ್ನು ಬಹಳಷ್ಟು ಬಾರಿ ಭೇಟಿಯಾದಂತಹ ಸಂದರ್ಭದಲ್ಲಿ ನೀವು ಇಲ್ಲಿ ಇರಬೇಕೆನ್ನುವ ಭಾವನೆಯನ್ನು ಅವರು ವ್ಯಕ್ತ ಮಾಡಿದ್ದರು. ನಾನು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷಳಾದಾಗಲೂ ಕೂಡ ಬಹಳಷ್ಟು ಸಲಹೆಗಳು ಮತ್ತು ಸಹಕಾರಗಳು ನನಗೆ ಸಿಕ್ಕಿತು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಜೊತೆ ಅವರಿಗೆ ಅಪಾರವಾದಂತಹ ಸಾಂಗತ್ಯ ಇತ್ತು. ಹಾಗೆಯೇ ಶ್ರೀಮಾನ್ ಜೆ.ಹೆಚ್. ಪಟೇಲ್ ರವರ ಜೊತೆ ಇವರ ಸ್ನೇಹವಿತ್ತು. ಅವರ ಸ್ನೇಹದ ಒಂದು ಪಟ್ಟಿಯನ್ನು ತೆಗೆದುಕೊಂಡರೆ ಎಲ್ಲರೂ ಕೂಡ ಆ ಒಂದು ನಿಟ್ಟಿನಲ್ಲಿ ಅವರಲ್ಲಿ ಇರತಕ್ಕಂತ merits and demerits ಎಲ್ಲವನ್ನು ಹಂಚಿಕೊಂಡು, ಅವರ ಜೀವನದಲ್ಲಿ ತಮ್ಮ ಜೀವನ ಶೈಲಿಯನ್ನು ಬಹಳ ಒಂದು ದೂರದೃಷ್ಟಿತ್ವದ ಮೈಲಿಗಲ್ಲಾಗಿಸಿಕೊಂಡು ನಾವು ಹೋಗಬೇಕು, ಈ ಸಮಾಜವನ್ನು ಮುಖ್ಯವಾಹಿನಿಗೆ ತರಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡಿದ್ದಂತಹ ಅಪರೂಪದ ವ್ಯಕ್ತಿ ಎಂದರೆ, ಶ್ರೀಮಾನ್ ಬಸವರಾಜ ಹೊರಟ್ಟಿಯವರು. Sir,

you will remain as a milestone in the history of the Karnataka politics. ನಿಮ್ಮಿಂದ ಬಹಳಷ್ಟು ಕಲಿಯಬೇಕಾದಂತಹದ್ದು ಇದೆ. ನಾವೆಲ್ಲರೂ ಕೂಡ ಮೊದಲನೇ ಬಾರಿಗೆ ಆಯ್ಕೆಯಾದಾಗ ನಮಗೆ ಯಾವ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಬೇಕು, ನಮಗೆ ಯಾರು ಸಲಹೆಗಳನ್ನು ಮಾಡುತ್ತಾರೆಂದು ನಮಗೆ ಒಂದು ಬಹಳ ದೊಡ್ಡ ಪ್ರಶ್ನೆಯಾಗಿತ್ತು. ಅದರಲ್ಲಿ ತಾವು ನಮಗೆ ಮೊದಲಬಾರಿಗೆ ಆಯ್ಕೆಯಾಗಿದ್ದಾರೆ, ಅವರಿಗೆ ಒಂದು ಅವಕಾಶವನ್ನು ಕೊಡಬೇಕೆನ್ನುವಂತಹ ಒಂದು ಏನು ತೀರ್ಮಾನವನ್ನು ತೆಗೆದುಕೊಂಡು ನಮಗೆ ಪ್ರೋತ್ಸಾಹವನ್ನು ಮಾಡಿದ್ದೀರಿ, ಅದನ್ನು ನಾವು ನಿಜವಾಗಿಯೂ ಕೂಡ ತಮ್ಮ ಜೀವನ ಶೈಲಿಯನ್ನು ನಮ್ಮ ರಾಜಕೀಯ ಜೀವನದಲ್ಲಿಯೂ ಅಳವಡಿಸಿಕೊಳ್ಳಬೇಕೆಂದು ಒಂದು ದಾರಿಯನ್ನು ತೋರಿಸಿಕೊಟ್ಟಿದ್ದೀರಿ. ನಾನು ಇನ್ನೊಂದು ವಿಷಯವೆಂದರೆ, ತಾವು ಒಂದು ನೋಬಲ್ ಪ್ರೊಫೆಷನ್‌ಗೆ ಸೇರಿದ್ದೀರಿ ಎಂದು ಹೇಳಲಿಕ್ಕೆ ಬಯಸುತ್ತೇನೆ. You are a teacher and remained as a Noble Person. ಅದನ್ನು ಯಾರು ಕೂಡ ಅಲುಗಾಡಿಸಲಿಕ್ಕೆ ಸಾಧ್ಯವೇ ಇಲ್ಲ. ರಾಜಕೀಯವನ್ನು ಹೊರತುಪಡಿಸಿ, ತಾವು ಎಲ್ಲರ ಜೊತೆಯಲ್ಲಿ ಬಹಳ ಪ್ರೀತಿ-ವಿಶ್ವಾಸ ಮತ್ತು ಸ್ನೇಹಮಯ ರೀತಿಯಲ್ಲಿ ಏನು ಒಂದು ತಮ್ಮ ನಡವಳಿಕೆ ಇದೆ. ಅದರಿಂದ, ವಿರೋಧಿಗಳಿಗೂ ಕೂಡ ತಾವು ಸ್ನೇಹ ಮಾಡಿಕೊಳ್ಳುವ ಒಂದು ದಾರಿಯನ್ನು ತೋರಿಸಿದ್ದೀರಿ. ಈ ಸದನದಲ್ಲಿ ತಮಗೂ ಕೂಡ ಸಂಕಟ ಆಗಿದ್ದು ಇಂದು ಪತ್ರಿಕಾ ಮಾಧ್ಯಮದಲ್ಲಿ ಹೇಳಿಕೊಂಡಿದ್ದೀರಿ. (ಮುಂದು)

(787) 19.08.2025 01.40 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕಿಸ್ ಬಾನು (ಮುಂದು):-**

ಇಂದಿನ ರಾಜಕಾರಣಕ್ಕೂ ಅಂದಿನ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆರೋಗ್ಯಕರ ಚರ್ಚೆಯಾಗುವುದು ನಶಿಸಿ ಹೋಗುತ್ತಿದೆ. ಆರೋಗ್ಯಕರ ಚರ್ಚೆಯಾಗಬೇಕು ಎನ್ನುವುದು ನನ್ನ ಕನಸಾಗಿದೆ ಎಂದು ತಮ್ಮ ಅನಿಸಿಕೆಯನ್ನು "ದಿ ಹಿಂದು" ಪತ್ರಿಕೆಯಲ್ಲಿ ವ್ಯಕ್ತಪಡಿಸಿದ್ದೀರಿ. ನಾವೆಲ್ಲರೂ ಪ್ರಥಮವಾಗಿ ಆಯ್ಕೆಯಾಗಿರುವವರು ತಮ್ಮ ಆಸೆಯಂತೆ ನಡೆದುಕೊಳ್ಳುತ್ತೇವೆ. ತಮ್ಮ ಮಾರ್ಗದರ್ಶನದ ಹೆಜ್ಜೆಗಳನ್ನು ಅನುಸರಿಸುತ್ತಾ ನಾವು ಹೆಜ್ಜೆಯಿಟ್ಟು ನಡೆಯುತ್ತೇವೆ ಎನ್ನುವ ಭರವಸೆಯನ್ನು ನಾನು ತಮಗೆ ಕೊಡುತ್ತಾ, ಅವಕಾಶಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಕೊನೆಯದಾಗಿ ಮಾನ್ಯ ತಿಪ್ಪಣ್ಣಪ್ಪ ಅವರೆ, ಎರಡೇ ನಿಮಿಷ ಸಮಯ ನಿಮಗೆ. ಮಾತನಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಏಕೆ ಎರಡೇ ನಿಮಿಷ. ಎಲ್ಲರೂ ಎಷ್ಟು ಸಮಯ ಮಾತನಾಡಿದ್ದಾರೆಯೋ ನಾನು ಅಷ್ಟು ಮಾತನಾಡುತ್ತೇನೆ.

ಮಾನ್ಯ ಸಭಾಪತಿಯವರೆ, 45 ವರ್ಷಗಳ ಹಿಂದೆ ಆರಂಭವಾದ ತಮ್ಮ ಸುದೀರ್ಘ ರಾಜಕೀಯ ಜೀವನದ ಬಗ್ಗೆ ಇವತ್ತು ಇಡೀ ಸದನವು ಮೆಚ್ಚುಗೆಯನ್ನು ವ್ಯಕ್ತಪಡಿಸಿ, ತಮ್ಮ ಗೌರವ-ಘನತೆಗಳ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದ್ದನ್ನು, ಕಲಬುರಗಿಯಲ್ಲಿ ಓದಿದ್ದೆ. ಇಂದು ಅದನ್ನು ನನ್ನ ಸಂಗಡ ತಂದಿದ್ದೇನೆ. “ವಿಧಾನ ಪರಿಷತ್ತಿನ ಒಡನಾಟದಲ್ಲಿ ಅನನ್ಯ ದಾಖಲೆ ಬರೆದ ಸಭಾಪತಿ; ಬಸವರಾಜ ಹೊರಟ್ಟಿಯವರ ಕೌನ್ಸಿಲ್ ಮಾಸ್ತರಿಕೆಗೆ 45 ವರ್ಷ.” ನೀವು ಅತ್ಯಂತ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು. ಪ್ರಾಮಾಣಿಕ ರಾಜಕಾರಣಿಗಳ ವಿಚಾರಕ್ಕೆ ಬಂದಾಗ ಮತ್ತು ಸದನವನ್ನು ಅತ್ಯಂತ ಉತ್ತಮವಾಗಿ ನಡೆಸತಕ್ಕಂಥ ವಿಚಾರ ಬಂದಾಗ ಮೊಟ್ಟಮೊದಲಿಗರು ತಾವಾಗುತ್ತೀರಿ. ರಾಜಕಾರಣದಲ್ಲಿ ಮತ್ತೆ ನೀವು ತಾಯಿಯಂಥ ಹೃದಯವುಳ್ಳವರು. ತಾಯಿಯಂಥ ಹೃದಯ ಎಂದರೇನು? ಎನ್ನುವುದಕ್ಕೆ ಉದಾಹರಣೆ ಒಬ್ಬ ಮಗ ಅನಕ್ಷರಸ್ಥನಾಗಿದ್ದು, ಒಕ್ಕಲುತನ ಮಾಡುತ್ತಿದ್ದನು. ಅವನು ತನ್ನ ಹೆಂಡತಿಯ ಮಾತನ್ನು ಕೇಳುತ್ತಿದ್ದನು. ಒಮ್ಮೆ ಅವನ ಹೆಂಡತಿಯು ಆತನ ತಾಯಿಯ ಕೈಯಿಂದ ಕಾರುಬಾರನ್ನು ಕಸಿದುಕೊಂಡು ತಾನು ಕಾರುಬಾರು ಮಾಡಬೇಕೆನ್ನುವ ಉದ್ದೇಶದಿಂದ ನನಗೆ ತಲೆ ನೋಯುತ್ತಿದೆ ಎಂದು ಕುಳಿತಳು. ಅವನು ಹೊಲದ ಕೆಲಸವನ್ನು ಮುಗಿಸಿ ಬಂದವನು ಏನಾಯಿತು, ಏನಾಯಿತು ಎಂದು ಹೆಂಡತಿಯನ್ನು ಕೇಳಿದನು. ಆಗ ಆಕೆಯು ನಾನು ಉಳಿಯುವುದಿಲ್ಲ, ಸಾಯುತ್ತೇನೆಂದು ಹೇಳಿದಳು. ನಿನ್ನ ತಾಯಿಯ ಹೊಟ್ಟೆಯನ್ನು ಸೀಳಿ ಆಕೆಯ ರಕ್ತವನ್ನು ತಂದು ನನ್ನ ತಲೆಗೆ ಹಚ್ಚಿದರೆ ಮಾತ್ರ ನಾನು ಉಳಿಯುತ್ತೇನೆಂದು ಹೇಳಿದಳು. ಆ ಮಗ ಅನಕ್ಷರಸ್ಥ, ತಿಳುವಳಿಕೆಯಿಲ್ಲದವನು. ಇದೇನು ಸಣ್ಣ ಕೆಲಸ ಎಂದು ಹೇಳಿ ಮೂಲೆಯಲ್ಲಿ ಕುಳಿತಿದ್ದ 80 ವರ್ಷ ವಯಸ್ಸಿನ ತಾಯಿಯ ಬಳಿ ಹೋಗುತ್ತಾನೆ. ತಾಯಿ ಇದರ ಅರಿವಿಲ್ಲದೆ, ಬಾ ಮಗ ಎಂದು ಕರೆಯುತ್ತಾಳೆ. ಹೆಂಡತಿಯ ಮಾತಿನಂತೆ ತಾಯಿಯ ಬಳಿ ಹೋದ ಮಗ ತಾಯಿಯ ಹೊಟ್ಟೆಯನ್ನು ಸೀಳಿಬಿಡುತ್ತಾನೆ. ಮಗ ತನ್ನ ಹೊಟ್ಟೆಯನ್ನು ಸೀಳಿದನು ಎಂಬ ಸಿಟ್ಟು ಆಕೆಗೆ ಬರಲಿಲ್ಲ. ಹೊಟ್ಟೆಯಲ್ಲಿದ್ದಂಥ ಕರುಳು ಮಗನ ಕೊರಳಿಗೆ ಬಿದ್ದು ಬಾ ಮಗ, ಬಾ ಮಗ ಎಂದು ಕರೆಯಿತು. ಹಾಗೆ ಮಾನ್ಯ ಹೊರಟ್ಟಿ ಸಾಹೇಬರೇ, ತಮ್ಮಲ್ಲಿ ತಾಯಿಯ ಹೃದಯ ಇದೆ.

ತಾವು ನಮ್ಮ ಸಮಾಜಕ್ಕೆ ಬಹಳಷ್ಟು ಕೆಲಸವನ್ನು ಮಾಡಿಕೊಟ್ಟಿದ್ದೀರಿ. ಮಾನ್ಯ ಹೆಚ್.ಕೆ.ಪಾಟೀಲರ ಮನವೊಲಿಸಿ ತಾವು ಕೂಡಿಕೊಂಡು ನಮ್ಮ ಸಮಾಜದ ಮಾತಾ ಮಾಣಿಕೇಶ್ವರಿ ಅಮ್ಮನವರ ಅಭಿವೃದ್ಧಿ ಪ್ರಾಧಿಕಾರದ ರಚನೆ ಮಾಡಿಕೊಟ್ಟಿದ್ದೀರಿ. ಅಂಬಿಗರ ಚೌಡಯ್ಯನವರ ಐಕ್ಯಸ್ಥಳದ ಅಭಿವೃದ್ಧಿಗೆ ಒಂದು ಸಮಿತಿಯನ್ನು ನೇಮಕ ಮಾಡಿ ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಟ್ಟ ಸಲುವಾಗಿ ನಾನು ಮಾನ್ಯ ಹೆಚ್.ಕೆ.ಪಾಟೀಲರಿಗೆ ಹಾಗೂ ನಿಮಗೆ ಆಗಲೂ ಸಾವಿರ ಕೋಟಿ ಪ್ರಣಾಮಗಳನ್ನು ಸಲ್ಲಿಸಿದ್ದೇನೆ. ಈಗಲೂ ಹೇಳುತ್ತೇನೆ. ಮಾನ್ಯ ಹೆಚ್.ಕೆ.ಪಾಟೀಲರಿಗೆ ಮತ್ತು ತಮಗೆ ಮಾತಾ ಮಾಣಿಕೇಶ್ವರಿ ಅಮ್ಮನವರ ಆಶೀರ್ವಾದದಿಂದ ಇನ್ನೂ ಹೆಚ್ಚು ಹೆಚ್ಚು ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ. ಹೆಚ್ಚಿನ ಅಧಿಕಾರ ದೊರೆಯುವಂತಾಗಲಿ ಎಂದರೆ ಅದಕ್ಕೆ ಬೇರೆ ಅರ್ಥ ಬರುತ್ತದೆ.

ತಾವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದ್ದೀರಿ. ಶಿಕ್ಷಣ ಕ್ಷೇತ್ರದಲ್ಲಿ ನಿಮ್ಮ ಆಸ್ತಿಯನ್ನೇ ಕೊಟ್ಟು ಶಿಕ್ಷಣ ಸಂಸ್ಥೆಗಳನ್ನೇ ಬೆಳೆಸಿದ್ದೀರಿ. ಹತ್ತಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಸರ್ಕಾರಿ ಶಾಲೆಗೆ ದಾನದ ರೂಪದಲ್ಲಿ ಕೊಟ್ಟಿದ್ದೀರಿ. ನೀವು ಒಬ್ಬ ಅತ್ಯಂತ ಪ್ರಾಮಾಣಿಕ ರಾಜಕಾರಣಿ. ನಿಮ್ಮ ವಿಚಾರಗಳನ್ನು ನೋಡಿದರೆ "ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು" ಎನ್ನುವ ಬಸವಣ್ಣನವರ ಸಿದ್ಧಾಂತದಡಿಯಲ್ಲಿ ನಿಮ್ಮ ಜೀವನ ಪ್ರಾರಂಭವಾಗಿದೆ. ಮಾನ್ಯ ಪುಟ್ಟಣ್ಣ ಅವರು ಕೂಡ ಅದ್ಭುತವಾದ ಮಾತುಗಳನ್ನು ಹೇಳಿದ್ದಾರೆ. ಸಹೋದರಿ ಬಲ್ಕಿಸ್ ಬಾನು ಅವರು ಕೂಡ ಉತ್ತಮ ಮಾತುಗಳನ್ನು ಹೇಳುತ್ತಾರೆ. ತಾವೊಬ್ಬ ಆಜಾತಶತ್ರು ಎಂದು ಈ ಪತ್ರಿಕೆಯಲ್ಲಿ ಹೇಳಿದ್ದಾರೆ. ಪರಿಷತ್ ಸದಸ್ಯರಾಗಿ ಆಡಳಿತ ಪಕ್ಷ ಹಾಗೂ ವಿರೋಧಪಕ್ಷದ ಸದಸ್ಯರಾಗಿದ್ದ ಹೊರಟ್ಟಿಯವರು ತಮ್ಮ ದೀರ್ಘ ಇನ್ನಿಂಗ್ಸ್‌ನಲ್ಲಿ 17 ಮುಖ್ಯಮಂತ್ರಿಗಳಿಗೆ ಮುಖಾಮುಖಿಯಾಗಿದ್ದಾರೆ. ದಿವಂಗತ ರಾಮಕೃಷ್ಣ ಹೆಗಡೆಯವರ ಅನುಯಾಯಿಗಳಾದ ಹೊರಟ್ಟಿಯವರು ಕೂಡ ಮೌಲ್ಯಾಧಾರಿತ ರಾಜಕಾರಣದಲ್ಲಿ ನಂಬಿಕೆಯಿಟ್ಟು ನಡೆದು ಬಂದವರು. ಜನತಾ ಪರಿವಾರ ವಿಭಜನೆಯಾಗಿ, ಹೆಗಡೆ, ಬೊಮ್ಮಾಯಿ, ಜೆ.ಹೆಚ್.ಪಟೇಲರ ಕಾಲಾನಂತರ ಜೆ.ಡಿ.ಎಸ್‌ನಲ್ಲಿ ಗುರುತಿಸಿಕೊಂಡ ಹೊರಟ್ಟಿ ಪಕ್ಷದ ಹಿರಿಯರಾಗಿ ಶ್ರೀ ಹೆಚ್.ಡಿ.ದೇವೇಗೌಡ ಮತ್ತು ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರೊಂದಿಗೆ ಹೆಜ್ಜೆ ಹಾಕಿದರು. ಶ್ರೀ ಧರಂಸಿಂಗ್ ನೇತೃತ್ವದ ಸರ್ಕಾರದಲ್ಲಿ ಮೊದಲ ಬಾರಿಗೆ ಸಚಿವರಾಗಿದ್ದ ಅವರು ನಂತರ ಶ್ರೀ ಕುಮಾರಸ್ವಾಮಿ ಅವರ ಮಂತ್ರಿಮಂಡಲದಲ್ಲಿ ತಮ್ಮ ನೆಚ್ಚಿನ ಶಿಕ್ಷಣ ಖಾತೆಯನ್ನು ವಹಿಸಿಕೊಂಡಿದ್ದರು. ವಿದ್ಯಾಮಂತ್ರಿಯಾಗಿದ್ದ ಹೊರಟ್ಟಿಯವರು ಅನೇಕ ಸುಧಾರಣೆಗಳನ್ನು ತಂದರು. ಉತ್ತರ ಕರ್ನಾಟಕದ ವಿಚಾರ ಬಂದಾಗ ಹೊರಟ್ಟಿಯವರದ್ದು ಗಟ್ಟಿ ಧ್ವನಿ. ಹೇಳಬೇಕಾದುದನ್ನು ಮುಖಕ್ಕೆ ಹೊಡೆದ ಹಾಗೆ ಹೇಳುವ ಹೊರಟ್ಟಿ ರಾಜಕೀಯ ರಂಗದಲ್ಲಿ ಯಾರೊಂದಿಗೂ ವೈರತ್ವ ಕಟ್ಟಿಕೊಂಡವರಲ್ಲ. ಹಾಲಿ ಮುಖ್ಯಮಂತ್ರಿ ಮಾನ್ಯ ಸಿದ್ದರಾಮಯ್ಯನವರೂ ಹೊರಟ್ಟಿಯವರಿಗೆ ಆಪ್ತರು ಮತ್ತು ಜನತಾ ಪರಿವಾರದ ಕಾಲದ ಗೆಳೆಯ. ಅಂದ ಮಾತ್ರಕ್ಕೆ ಸಭಾಪತಿಯ ಸ್ಥಾನದಿಂದ ಸಿದ್ದರಾಮಯ್ಯ ಮತ್ತು ಅವರ ಸರ್ಕಾರದ ಸಂಬಂಧವಾಗಿ ಮೃದು ಧೋರಣೆಯನ್ನು ವ್ಯಕ್ತ ಪಡಿಸುವುದಿಲ್ಲ. ಸಂದರ್ಭ ಬಂದಾಗ ಚಾಟಿ ಬೀಸದೆ ಬಿಡುವುದಿಲ್ಲ. ಬಿಜೆಪಿ ಸರ್ಕಾರವಿದ್ದಾಗಲೂ ಅದೇ ರೀತಿ ನಡೆದುಕೊಳ್ಳುತ್ತಿದ್ದರು. ಅಭಿಮಾನಿಗಳ ಪಾಲಿಗೆ ಹೊರಟ್ಟಿ ಮಾಸ್ತರು, ಮಂತ್ರಿಯಾಗಿ 45 ವರ್ಷ ಪರಿಷತ್ ಅನುಭವ. 1980ರಲ್ಲಿ ಪರಿಷತ್ತಿಗೆ ಮೊದಲ ಬಾರಿಗೆ ಪ್ರವೇಶ. ಧರಂಸಿಂಗ್ - ಹೆಚ್‌ಡಿಕೆ ಸಂಪುಟದಲ್ಲಿ ಮಂತ್ರಿ. ಕಳೆದ 43 ವರ್ಷಗಳಿಂದ ಶಾಸಕರ ಭವನದಲ್ಲಿ ವಾಸ್ತವ್ಯ ಮಾಡಿದ ಕೊಠಡಿ ಸಂಖ್ಯೆ 465. ಸದಸ್ಯತ್ವ ಅವಧಿ ಮುಕ್ತಾಯವಾಗುವುದು 2028. ಸದನದಲ್ಲಿ ಇವರು ಕಂಡಿರುವ ಮುಖ್ಯಮಂತ್ರಿಗಳ ಸಂಖ್ಯೆ 17.

ಬಹುಶಃ ನಿಮ್ಮಂಥ ಸಭಾಪತಿಗಳು ಮುಂದೆ ಯಾರು ಬರುತ್ತಾರೆಯೋ ಗೊತ್ತಿಲ್ಲ. ಅನುಭವಿ ರಾಜಕಾರಣಿ, ಪ್ರಾಮಾಣಿಕ ರಾಜಕಾರಣಿ. ಬಡವರು, ದಲಿತರು, ಹಿಂದುಳಿದ ವರ್ಗದವರ ಸಲುವಾಗಿ ನಿಮ್ಮ ಆಸ್ತಿಯನ್ನೇ ಮಾರಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ್ದೀರಿ. ಹುಬ್ಬಳ್ಳಿ-ಧಾರವಾಡದಲ್ಲಿ ಕಷ್ಟದಲ್ಲಿದ್ದವರಿಗೆ, ಬಡವರಿಗೆ ತೊಂದರೆಯಿದ್ದಾಗ ಸ್ವತಃ ನಿಮ್ಮ ಹಣದಿಂದ ವೆಚ್ಚ ಭರಿಸಿ ಅವರಿಗೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದೀರಿ ಹಾಗೂ ಅವರು ಎತ್ತರೆತ್ತರಕ್ಕೆ ಬೆಳೆಯುವಂತೆ

ಮಾಡುವ ಕೆಲಸವನ್ನು ನೀವು ಮಾಡಿದ್ದೀರಿ. ನೀವು ನೂರು ವರ್ಷಗಳ ಕಾಲ ಬಾಳಬೇಕು. ನಮ್ಮಂಥವರಿಗೆಲ್ಲಾ ಅವಕಾಶ ಕೊಟ್ಟಿರಿ. ವಿಧಾನ ಪರಿಷತ್ತಿನ ಸದಸ್ಯನಾಗಿ ನಾನು ತಮ್ಮನ್ನು ಭೇಟಿಯಾಗಲು ಬಂದಾಗ "ಏನಪ್ಪಾ ಮತ್ಯಾರೋ ಬರುತ್ತಾರೆಂದು ತಿಳಿದಿದ್ದೆ. ನೀನು ಬಹಳ ಒಳ್ಳೆಯ ಸ್ವಭಾವದವನು. ಒಳ್ಳೆಯ ಕೆಲಸ ಮಾಡಪ್ಪಾ. ಕಾನೂನಿನೊಳಗೆ ಬದುಕು. ಈ ಸದನದ ವಿಚಾರಗಳನ್ನು ತಿಳಿದು ಉತ್ತಮವಾದ ಕೆಲಸಗಳನ್ನು ಮಾಡು. ಮೊದಲನೆಯ ಬಾರಿಗೆ ಬಂದಿದ್ದಿ, ಹೆಚ್ಚಿನ ಅವಕಾಶಗಳನ್ನು ಕೊಡುತ್ತೇನೆ" ಎಂದು ತಾವು ಕೊಟ್ಟ ಮಾತಿನಂತೆ ನಡೆದಿದ್ದೀರಿ. ತಾಯಿಯಂಥ ಹೃದಯವಂತರಾದ ನಿಮಗೆ ಈ ಸದನದ ಮೂಲಕ ನಾಲ್ಕು ಮಾತುಗಳನ್ನು ಹೇಳಿ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಳೆದ 45 ವರ್ಷಗಳಿಂದ ಸುದೀರ್ಘ ರಾಜಕಾರಣ ಪಯಣದಲ್ಲಿ ತಾವು ಶಿಕ್ಷಣ ಕ್ಷೇತ್ರ ಇರಬಹುದು, ಸಮಾಜಮುಖಿ ಕೆಲಸಗಳಿರಬಹುದು, ಅಜಾತಶತ್ರು. ನಮ್ಮ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಹಲವಾರು ಮುಖ್ಯಮಂತ್ರಿಗಳ ಜೊತೆಯಲ್ಲಿ ಸಂಪರ್ಕ, ಒಡನಾಟದಲ್ಲಿದ್ದಂತಹ ಯಾರಾದರೂ ಒಬ್ಬ ರಾಜಕಾರಣಿ ಎಂದರೆ ಅದು ಬಸವರಾಜ ಹೊರಟ್ಟಿಯವರು ಎಂದು ಎದೆ ತಟ್ಟಿ ಹೇಳಬೇಕಾಗುತ್ತದೆ. ಸೋಲಿಲ್ಲದ ಸರದಾರ ಅಷ್ಟೇ ಅಲ್ಲ. ಹಿಂದೆ ನಮ್ಮನ್ನೆಲ್ಲಾ ಅಮೆರಿಕಾ ದೇಶಕ್ಕೆ ಕರೆದುಕೊಂಡು ಹೋಗಿದ್ದಿರಿ. ಅಲ್ಲಿ ನಮ್ಮ ರಾಜ್ಯ, ನಮ್ಮ ದೇಶವಷ್ಟೇ ಅಲ್ಲ; ವಿದೇಶಗಳಿಂದ 4500 ಜನ Legislators ಸೇರಿದ್ದೆವು. ಆ Legislative Summit ನಲ್ಲಿ ಬಹುಶಃ 45 ವರ್ಷಗಳ ಕಾಲ ಕಳೆದವರು ಯಾರೂ ಇಲ್ಲ ಎಂದು ನಾನು ಭಾವಿಸಿದ್ದೇನೆ. ಅಜ್ಜಿಯರಿಲ್ಲದ ಮನೆಯಿಲ್ಲ, ಮಜ್ಜಿಗೆಯಿಲ್ಲದ ಊಟವಿಲ್ಲ, ಗೆಜ್ಜೆಯಿಲ್ಲದ ಕುಣಿತವಿಲ್ಲ, ಸನ್ಮಾನ್ಯ ಹೊರಟ್ಟಿ ಸಾಹೇಬರಿಲ್ಲದ ವಿಧಾನ ಪರಿಷತ್ತಿಲ್ಲ ಎಂದು ತಾವು ಸಾಬೀತು ಮಾಡಿದ್ದೀರಿ. ಸಣ್ಣ ಮಕ್ಕಳಿಂದ ಹಿರಿಯರವರೆಗೂ ನೆನಪಿಸಿಕೊಳ್ಳುವಂಥ ಸಾಧನೆಯನ್ನು ತಾವು ಮಾಡಿದ್ದೀರಿ. ಇದು ವಿಶ್ವದಾಖಲೆ ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ಕೂಡ ನಾನು ಕಂಡಿದ್ದೇನೆ. ಇದು ಗಿನ್ನಿಸ್ ದಾಖಲೆಯಾಗಬೇಕು. ಈ ಸದನದ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ತಾವು ಪಕ್ಷ ಬದಲಾದರೂ ಕೂಡ ತಮ್ಮ ವ್ಯಕ್ತಿತ್ವ ಎಂದಿಗೂ ಬದಲಾಗಿಲ್ಲ. ಅದನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ನಾವು ಇಲ್ಲಿ ಏನಾದರೂ ಗಲಾಟೆ ಮಾಡಿದರೂ ಕೂಡ ಅದನ್ನು ಸಹಿಸಿಕೊಂಡು ಅಲ್ಲಿ ಕುಳಿತಿದ್ದೀರಿ. ಏನಾದರೂ ತಪ್ಪು ಮಾಡಿದಾಗ ನೀವೇ ಏನಾದರೊಂದು ಮಾತನ್ನು ಅಂದರೂ ಕೂಡ ಅದಕ್ಕೆ ಕ್ಷಮೆಯನ್ನು ಕೊಟ್ಟಿದ್ದೀರಿ.

**(ಮುಂದು)**

(788) 19-08-2025 (1.50) ಕೆಜಿ:ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):-**

ತಪ್ಪು ಮಾಡಿ ಸಹಿಸಿಕೊಳ್ಳುವುದನ್ನು ಉತ್ತಮವೆಂದು ಹೇಳುತ್ತೇವೆ. ಕೇವಲ ಸಹಿಸಿಕೊಳ್ಳುವುದು ಅಷ್ಟೇ ಅಲ್ಲ, ಕ್ಷಮೆಯಾಚಿಸುವುದನ್ನು ಅತ್ಯುತ್ತಮ ಎಂದು ಹೇಳುತ್ತೇವೆ. ಆ ತಪ್ಪನ್ನು ಮರೆತು ಮುಂದಕ್ಕೆ ಹೋಗಬೇಕೆಂದು ತಾವು

ನಮಗೆ ಪಾಠ ಮಾಡುತ್ತೀರಿ ಅಲ್ಲವೇ; ಅದನ್ನು ಸರ್ವೋತ್ತಮ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇಂತಹ ಒಂದು ಒಳ್ಳೆಯ ಕೆಲಸಗಳನ್ನು ತಾವು ಮಾಡಿಕೊಂಡು ನಮ್ಮ ಮಾರ್ಗದರ್ಶಕರಾಗಿ, ನಮ್ಮ Headmaster ಆಗಿ, ನಮ್ಮ ರಾಜಕೀಯದ ಗುರುಗಳಾಗಿ ಇಲ್ಲಿ ನಮಗೆ ಎಲ್ಲಾ ರೀತಿಯಲ್ಲಿಯೂ ಯುವಕರಿಗೆ, ಹೊಸಬರಿಗೆ ಅವಕಾಶಗಳನ್ನು ಮಾಡಿಕೊಟ್ಟಿದ್ದೀರಿ. ನಮಗೆ ಈ ಬಗ್ಗೆ ಬಹಳ ಹೆಮ್ಮೆ ಇದೆ. ನಮ್ಮ ರಾಜ್ಯದಲ್ಲಿ ತಮ್ಮಂತಹ ಒಬ್ಬ ರಾಜಕಾರಣಿ ಇರುವುದೇ ಒಂದು ಸೌಭಾಗ್ಯವೆಂದು ನಾನು ಭಾವಿಸಿದ್ದೇನೆ.

ಮಾನ್ಯ ಸಭಾಪತಿಯವರೇ, ತಮಗೆ 100 ವರ್ಷಗಳ ಕಾಲ ಆರೋಗ್ಯ, ಆಯಸ್ಸು ಎಲ್ಲವೂ ಸಿಗಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ. ಅಲ್ಲದೇ, ತಾವು ನಮ್ಮನ್ನು ತಮ್ಮ ತೋಟಕ್ಕೂ ಸಹ ಕರೆದುಕೊಂಡು ಹೋಗಿದ್ದೀರಿ. ಅಲ್ಲಿ ನಮಗೆ ಕೃಷಿ ಬಗ್ಗೆಯೂ ಸಹ ತಿಳುವಳಿಕೆಯನ್ನು ಮೂಡಿಸಿದ್ದೀರಿ. ತಮಗೆ ಎಲ್ಲಾ ರೀತಿಯಲ್ಲೂ ಶುಭವಾಗಲಿ ಎಂದು ಮತ್ತೊಮ್ಮೆ ಈ ಸಂದರ್ಭದಲ್ಲಿ congratulations ಅನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ತಮಗೆ ನಮ್ಮ ಸದನದ ಎಲ್ಲಾ ಸದಸ್ಯರ ಪರವಾಗಿ 45 ವರ್ಷಗಳ ಕಾಲ ಸುಧೀರ್ಘವಾಗಿ ಈ ಮನೆಯ ಸದಸ್ಯರಾಗಿ ಇರುವಂತಹದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಕಳೆದ ಮೂರುವರೆ ವರ್ಷಗಳ ಹಿಂದೆ ನಾನು ಈ ಸದನಕ್ಕೆ ಸದಸ್ಯನಾಗಿ ಆಯ್ಕೆಯಾಗಿ ಬಂದಂತಹ ಸಂದರ್ಭದಲ್ಲಿ ಬಜೆಟ್ ಅಧಿವೇಶನದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಆಗಲೇ ಬಜೆಟ್‌ನ ಮೇಲೆ ಮಾತನಾಡಿದ್ದರು. ಆಗ ತಾವು ನನಗೆ 10 ನಿಮಿಷಗಳ ಕಾಲ ಮಾತ್ರ ಮಾತನಾಡಬೇಕೆಂದು ಪ್ರಾರಂಭದಲ್ಲಿ ಹೇಳಿದ್ದೀರಿ. ಆ ಸಂದರ್ಭದಲ್ಲಿ ನನಗೆ ಸದನದ ಶಿಷ್ಟಾಚಾರಗಳು ಮತ್ತು ಸದನದಲ್ಲಿ ಯಾವ ರೀತಿ ನಮ್ಮ ವರ್ತನೆಗಳು ಇರಬೇಕೆಂದು ಅಷ್ಟಾಗಿ ಗೊತ್ತಿರಲಿಲ್ಲ. ಅದು ನನಗೆ ಮೊದಲನೇ ಅಧಿವೇಶನವಾಗಿತ್ತು. ಆ ಸಂದರ್ಭದಲ್ಲಿ ನಾನು ತಮ್ಮನ್ನು ಏಕೆ 10 ನಿಮಿಷಗಳ ಕಾಲ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ, ನನಗೆ 10 ನಿಮಿಷಗಳಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದೆ. ಆ ಸಂದರ್ಭದಲ್ಲಿ ಪೀಠದ ನಿರ್ದೇಶನದಂತೆ ನಡೆದುಕೊಳ್ಳಬೇಕೆಂದು ಉಳಿದ ನಮ್ಮ ಹಿರಿಯ ಸದಸ್ಯರು ಹೇಳಿದ ನಂತರ ನಾನು ಕ್ಷಮಾಪಣೆಯನ್ನು ಕೇಳಿದೆ. ನಂತರ ನಾನು ತಮ್ಮ Chamber ಗೆ ಬಂದಾಗ, ತಾವು ಆ ಘಟನೆ ಏನು ನಡೆದಿಲ್ಲ ಎನ್ನುವ ರೀತಿಯಲ್ಲಿ ನನಗೆ ಒಂದು ರೀತಿ ಸರಿದಾರಿಗೆ ತರುವಂತಹ, ಸದನದಲ್ಲಿ ಹೇಗೆ ಇರಬೇಕು, ಸದನದಲ್ಲಿ ಯಾವ ರೀತಿ ನಡವಳಿಕೆಗಳು ಶಾಸಕರದ್ದು ಇರಬೇಕು ಎನ್ನುವಂತಹದ್ದನ್ನು ತಾವು ಹೇಳಿರುವಂತಹದ್ದು ಇವತ್ತಿಗೂ ಸಹ ನನಗೆ ಅದರ ಮಹತ್ವದ ಅರಿವು ಇದೆ.

ಎರಡನೆಯದಾಗಿ, ನಾವೆಲ್ಲರೂ ಮೊದಲ ಬಾರಿಗೆ ಸದಸ್ಯರಾಗಿ ಆಯ್ಕೆಯಾಗಿ ಈ ಮನೆಗೆ ಬಂದಂತಹ ಸಂದರ್ಭದಲ್ಲಿ ತಾವು ನಮಗೆ 2 ದಿವಸಗಳ ಕಾರ್ಯಾಗಾರವನ್ನು ವಿಕಾಸಸೌಧದಲ್ಲಿ ಏರ್ಪಡಿಸಿದ್ದಿರಿ. ಯಾರು ಬಹಳ ವರ್ಷಗಳ ಕಾಲ ಸದನದ ಹಿರಿಯ ಪಟುಗಳಾಗಿರುತ್ತಾರೆ ಮತ್ತು Parliamentarians ಅಂತಹವರನ್ನು ಕರೆದು ನಮಗೆ 2 ದಿವಸಗಳ ಕಾಲ ಬೆಳಗ್ಗೆ 9 ಗಂಟೆಯಿಂದ ಸಂಜೆ 8 ಗಂಟೆಯವರೆಗೆ ಹೇಗೆ corporate training

sessions ನಡೆಯುತ್ತವೆಯೋ, ಆ ತರಹ ಶಾಸಕರು ಯಾವ ಯಾವ ಅವಧಿಗಳಲ್ಲಿ ಏನೇನು ಮಾಡಬೇಕು, ನಮ್ಮ ಹಕ್ಕುಗಳು ಏನು, ಸದನದಲ್ಲಿ ಪ್ರಶ್ನೆಗಳನ್ನು ಯಾವ ರೀತಿ ಕೇಳಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದೀರಿ. ಅವತ್ತು ಎಲ್ಲಾ ಪಕ್ಷದ ನಾಯಕರುಗಳು ಬಂದು ಒಂದೊಂದು ಅವಧಿಗಳನ್ನು ತೆಗೆದುಕೊಂಡು ಹೇಳಿದರು. ನಮಗೆ ನಿಜವಾಗಲೂ ಸಹ, ಅದು ಒಂದು ಅವಿಸ್ಮರಣೀಯವಾಗಿ ಉಳಿದಿರುವಂತಹ ಕೆಲಸ. ಅದು ತಮ್ಮ ನೇತೃತ್ವದಲ್ಲಿ ಆಗಿದ್ದು, ಅದಕ್ಕೂ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಮೈಸೂರು ರಾಜ್ಯದ ಕಾಲದಿಂದ ಇದ್ದಂತಹ ನಮ್ಮ ಮೇಲ್ಮನೆಗೆ ಇಡೀ ನಮ್ಮ ದೇಶದಲ್ಲಿಯೇ ತನ್ನದೇ ಆದಂತಹ ವಿಶಿಷ್ಟವಾದಂತಹ ಗೌರವ ಸ್ಥಾನಮಾನಗಳಿವೆ. ಇಂತಹ ಒಂದು ಮೇಲ್ಮನೆಗೆ ನಿರಂತರವಾಗಿ 45 ವರ್ಷಗಳ ಕಾಲ ತಾವು ಸದಸ್ಯರಾಗಿ, ಅದು ಒಂದೇ ಕ್ಷೇತ್ರದ ಮತದಾರರಿಂದ ಮತವನ್ನು ಪಡೆದು ಆಯ್ಕೆಯಾಗಿದ್ದೀರಿ. ಯಾವುದೇ ಒಬ್ಬ ವ್ಯಕ್ತಿ ಸಹಜವಾಗಿ ಒಂದು ಸ್ಥಾನವನ್ನು ಪಡೆದ ನಂತರ, ಮತ್ತೆ ಆ ಸ್ಥಾನಕ್ಕೆ ಹೋಗಬೇಕೆಂಬ ಆಸೆ ಇರುವುದಿಲ್ಲವೆಂದು ಒಬ್ಬ Psychologist ರವರು ಹೇಳಿದ್ದಾರೆ. ನಾನು ಇನ್ನೂ ಬೇರೆ ಸ್ಥಾನವನ್ನು ಹೊಂದಬೇಕು ಎಂದು ಆಸೆ ಪಡುವುದು ಮಾನವನ ಸಹಜ ಗುಣ. ಆದರೆ, ತಾವು ಅದೇ ಮತದಾರರು, ಅದೇ ಶಿಕ್ಷಕರ ಕ್ಷೇತ್ರದಿಂದ ಬಂದಿದ್ದೀರಿ. ತಾವು ಈ ಶಿಕ್ಷಕರ ಮಧ್ಯೆಯೇ ಸೇವೆ ಮಾಡಬೇಕು, ಈ ರಾಜ್ಯಕ್ಕೆ ಶಿಕ್ಷಣದ ಮಹತ್ವ ಎಷ್ಟಿದೆ ಎನ್ನುವುದನ್ನು ತಾವು ಜೀವನದ ಮೂಲಕ ಸಾರಿ ಇರುವಂತಹದ್ದು ನಿಜವಾಗಲೂ ಸಹ ಅತ್ಯಂತ ಅಭಿನಂದನೀಯ ಮತ್ತು ಅತ್ಯಂತ ಶಾಘ್ಲನೀಯ. ಇವತ್ತು ಈ ಪ್ರಸ್ತಾವನೆಯನ್ನು ನಮ್ಮ ಆಡಳಿತ ಪಕ್ಷದ ಹಿರಿಯ ಸದಸ್ಯರುಗಳಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಹಾಗೂ ಶ್ರೀ ಮಂಜುನಾಥ ಭಂಡಾರಿಯವರು ಮಾಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಪ್ರಾರಂಭದಲ್ಲಿಯೇ ತಮ್ಮ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಹೆಚ್.ಕೆ.ಪಾಟೀಲ್‌ರವರು ಮತ್ತು ಶ್ರೀ ಎಂ.ಬಿ.ಪಾಟೀಲ್‌ರವರು ಬಹಳ ಹಿರಿಯ ಸಚಿವರು ಇದ್ದಾರೆ. ನಾನು ಎಲ್ಲಾ ಮಾನ್ಯ ಸದಸ್ಯರ ಪರವಾಗಿ ವಿನಂತಿಯನ್ನು ಮಾಡುತ್ತೇನೆ. ತಮ್ಮ ಪಕ್ಷದ ಸಂಖ್ಯಾಬಲ ಹೆಚ್ಚಿಗಾದರೂ ಸಹ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಮುಂದಿನ ಅಷ್ಟು ವರ್ಷಗಳ ಕಾಲ ಸಭಾಪತಿಗಳನ್ನಾಗಿ ಮುಂದುವರೆಸುವಂತಹ ನಿರ್ಣಯವನ್ನು ತಾವೆಲ್ಲರೂ ಸೇರಿ ಮಾಡಬೇಕು. ಏಕೆಂದರೆ, ಅವರನ್ನು ಬೇರೆ Chair ನಲ್ಲಿ ಕುಳ್ಳಿಸಿ ನೋಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅವರಷ್ಟು Seniority, ಈ ಸದನದಲ್ಲಿ ಬೇರೆ ಯಾರಿಗೂ ಸಹ ಮುಂದಕ್ಕೂ ಬರುವುದಿಲ್ಲ. ಈ ಒಂದು ಗೌರವಯುತವಾದ ನಿರ್ಣಯವನ್ನು ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಕಡೆಯಿಂದ ಮಾಡಿದರೆ, ನಾವು ಅವರಿಗೆ ಸಲ್ಲಿಸುವಂತಹ ಗೌರವ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ನಿರ್ಣಯವನ್ನು ತಂದಿರುವಂತಹ ಸಂದರ್ಭದಲ್ಲಿ ಇದನ್ನು ಮಾಡಬೇಕೆಂಬ ಒತ್ತಾಯವನ್ನು ಮಾನ್ಯ ಎಲ್ಲಾ ಸದಸ್ಯರುಗಳ ಪರವಾಗಿ ಹಾಗೂ ಈ ಸಂದರ್ಭದಲ್ಲಿ ಎರಡೂ ಪಕ್ಷದಾರರಿಗೆ ಹೇಳಬಯಸುತ್ತೇನೆ. ಈ ಸದನದಲ್ಲಿ Independent ಸದಸ್ಯರೂ ಇದ್ದಾರೆ, ತೊಂದರೆ ಇಲ್ಲ. ನಾನು ಎಲ್ಲಾ ಮಾನ್ಯ

ಸದಸ್ಯರಿಗೂ ಸಹ ವಿನಂತಿಯನ್ನು ಮಾಡುತ್ತೇನೆ. ತಮಗೆ ದೇವರು ಆರೋಗ್ಯ ಮತ್ತು ಆಯುಸ್ಸನ್ನು ಕೊಡಲಿ ಎಂದು ಆಶಿಸುತ್ತೇನೆ. ಈ ದಾಖಲೆಯನ್ನು ಬೇರೆ ಯಾರು ಸಹ ಮುರಿಯುವುದಕ್ಕೆ ಸಾಧ್ಯವಿಲ್ಲ. ಆದರೆ, ಈಗಾಗಲೇ ಒಂದು ಗಿನ್ನಿಸ್ ದಾಖಲೆಯಾಗಿದೆ. ಇದು ಇದೇರೀತಿ ಮುಂದುವರೆಯಲಿ. ತಮ್ಮಿಂದ ಎಲ್ಲರಿಗೂ ಮಾರ್ಗದರ್ಶನ ಸಿಗುವಂತಹದ್ದು ಆಗಲಿ ಎನ್ನುವಂತಹ ವಿನಂತಿಯನ್ನು ಮಾಡುತ್ತಾ, ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಪ್ರಮಾಣ ವಚನವನ್ನು ಸ್ವೀಕರಿಸುವಾಗ ನನಗೆ ತಮ್ಮ ಪರಿಚಯವಾಗಿದೆ ಗುರುಗಳೇ. ನಾನು ಪ್ರಮಾಣ ವಚನವನ್ನು ಸ್ವೀಕರಿಸಿ ತಮ್ಮ ಪಾದಕ್ಕೆ ನಮಸ್ಕರಿಸಿದಾಗ ತಾವು ನನಗೆ ಚೆನ್ನಾಗಿ ಆಗುತ್ತದೆ, ಮುಂದಕ್ಕೆ ಹೋಗಿ ಶ್ರೀ ಕಿಶೋರ್ ಎಂದು ಧೈರ್ಯದ ಮಾತನ್ನು ಹೇಳಿದ್ದೀರಿ. ಈ ಸದನ ಚಿಂತಕರ ಚಾವಡಿ. ನನ್ನ ಹೆಸರು ಎರಡು ಬಾರಿ ಪುತ್ತೂರ್ ಕ್ಷೇತ್ರದ ಶಾಸಕನ ಸ್ಥಾನದ ಅಭ್ಯರ್ಥಿಯಾಗಿ ಬಂದಿತ್ತು. ಕೊನೆಯ ಹಂತದಲ್ಲಿ ಅದು ತಪ್ಪಿತ್ತು. ಆದರೆ, ನಾನು ಪಕ್ಷವನ್ನು ತಾಯಿ ಎಂದು ಕೆಲಸ ಮಾಡಿದ ಕಾರಣಕ್ಕಾಗಿ ಆನಂತರದಲ್ಲಿ ಸಂಸದನ ಸ್ಥಾನಕ್ಕೆ ಕೊನೆಯ ಹಂತದವರೆಗೂ ನನ್ನ ಹೆಸರು ಬಂದಿತ್ತು. ಆದರೂ ಸಹ ಸಿಗಲಿಲ್ಲ. ನಾನು ಪಕ್ಷಕ್ಕೆ ಕೆಲಸ ಮಾಡಿದ ಕಾರಣಕ್ಕಾಗಿ ಹಿರಿಯರು ನನ್ನನ್ನು ಗುರುತಿಸಿ ತಮ್ಮ ಮಧ್ಯೆ ಇರುವಂತಹ ಅವಕಾಶವನ್ನು ಮಾಡಿದ್ದಾರೆ. ಆದರೆ, ಇಲ್ಲಿಗೆ ನನಗೆ ಬರಬೇಕಾದರೆ ತುಂಬ ಭಯ ಇತ್ತು. ಈ ಸದನ ಚಿಂತಕರ ಚಾವಡಿ. ಆದರೆ, ನನಗೆ ಅಷ್ಟು ಜ್ಞಾನ ಇದೆಯೇ ಎಂದು ಇತ್ತು. ಆದರೆ, ಪ್ರಥಮವಾಗಿ ಪ್ರಮಾಣ ಸ್ವೀಕಾರದ ಸಂದರ್ಭದಲ್ಲಿಯೇ ನನಗೆ ತಾವು ಧೈರ್ಯ ತುಂಬಿದ ಗುರುಗಳಾಗಿದ್ದೀರಿ. ಯಾವಾಗಲೂ ಅಜ್ಞಾನ ಇದ್ದಾಗ, ಸುಜ್ಞಾನಕ್ಕೆ ಶಕ್ತಿ ಬರುತ್ತದೆ. ಕತ್ತಲೆ ಇದ್ದಾಗ, ದೀಪಕ್ಕೆ ಪ್ರಾಮುಖ್ಯತೆ ಬರುತ್ತದೆ. ಆ ರೀತಿಯಾಗಿ ತಾವು ನನ್ನ ಜೀವನದಲ್ಲಿಯೂ ದೀಪವಾಗಿ ಬೆಳಗಿದ್ದೀರಿ. ಅದರ ಜೊತೆಗೆ ನನಗೆ ಈ ಚಿಂತಕರ ಚಾವಡಿಯಲ್ಲಿ ಮಾತನಾಡುವುದಕ್ಕೆ ಧೈರ್ಯ ತಮ್ಮಿಂದ ಸಿಕ್ಕಿದೆ. ಗುರುಗಳೇ ಒಂದು ಗುಣ ಮಾತ್ರ ನನ್ನ ಬಳಿಯುಂಟು. ನನಗೆ 45 ವರ್ಷಗಳ ಪ್ರಾಯವಾಗಿದೆ. ತಮ್ಮ ಅನುಭವವೇ ನನ್ನ ಪ್ರಾಯವಾಗಿದೆ. ಉದಾಹರಣೆ ಕೊಡಬೇಕಾದರೆ, ನನ್ನ ವಯಸ್ಸಿನಷ್ಟು ತಮಗೆ ಅನುಭವ ಇದೆ. ಅದಕ್ಕೆ ತಾವು ಕುಳಿತುಕೊಳ್ಳಿ ಎಂದ ತಕ್ಷಣ ನಾನು ಕುಳಿತುಕೊಳ್ಳುತ್ತೇನೆ. ಏಕೆಂದರೆ, ತಾವು ನನ್ನ ಅನುಭವದಷ್ಟು ನಿನ್ನ ವಯಸ್ಸು ಇದೆ ಎಂದು ಬೈದರೆ ಎಂದು ತಿಳಿದುಕೊಂಡು ಕುಳಿತುಕೊಂಡು ಬಿಡುತ್ತೇನೆ. ತಾವು ಕಳೆದ ಎರಡು ಅಧಿವೇಶನಗಳಲ್ಲೂ ನನ್ನನ್ನು ಹುರಿದುಂಬಿಸಿದ್ದೀರಿ. ಆದರೆ, ಈ ಅಧಿವೇಶನದಲ್ಲಿ ಏಕೋ ಜೋರು ಮಾಡಿದ್ದೀರಿ. ನನಗೆ ಏಕೆ ಈ ಬಾರಿ ಗುರುಗಳು ಜೋರು ಮಾಡಿದರು ಅಂತ ತಲೆ ಬಿಸಿ ಆಯಿತು. ಮಾನ್ಯ ಸದಸ್ಯರಾದ ಕೆ.ಪ್ರತಾಪ್ ಸಿಂಹ ನಾಯಕ್‌ರವರು ತಾವು ಅಮೇರಿಕಾದಿಂದ ಬಂದಿದ್ದೀರಿ. ಹಾಗಾಗಿ, ಹಗಲು ರಾತ್ರಿಯ ವ್ಯತ್ಯಾಸಕ್ಕೆ ಅವರ ಮೂಡು ಸ್ವಲ್ಪ ಸರಿಯಿಲ್ಲವೆಂದು ಹೇಳಿದರು. ಮಾರನೇ ದಿವಸ ತಾವು ಖುಷಿ ಖುಷಿಯಾಗಿದ್ದಿರಿ. ಆಗ ನಾನು ಇದೇತರಹ ತಾವು ಖುಷಿಖುಷಿಯಾಗಿ ಇದ್ದರೆ, ತುಂಬ ಚೆನ್ನಾಗಿ ಇರುತ್ತದೆ. ನಮಗೂ ಸಹ ಖುಷಿಯಾಗಿ

ಇರುತ್ತದೆ ಎಂದು ಹೇಳಿ ಪತ್ರ ಬರೆದು ಕಳುಹಿಸಿದ್ದೆ. ಆಗ ತಾವು ಅದಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿದ್ದೀರಿ ಗುರುಗಳೇ.

ಮಾನ್ಯ ಸಭಾಪತಿಯವರೇ, ಇಸ್ರೇಲ್ ದೇಶದಲ್ಲಿ Dead Sea and Sea of Galilee ಎಂಬ ಎರಡು ನದಿಗಳು ಇವೆ. ಅದರಲ್ಲಿ Jordan Rift Valley ಬಂದು ನದಿ ಸೇರುತ್ತದೆ. ಆ ರೀತಿ ಸೇರಿದಾಗ ಒಂದು Dead Sea, ಅದರಲ್ಲಿ ಯಾವುದೇ ರೀತಿಯ, ಅದು ಒಂದು ಮೃತ ಸಮುದ್ರ ಎಂದು ಹೇಳಿದರೆ, ತಪ್ಪಾಗುವುದಿಲ್ಲ. ಎರಡು Jordan Valley ಗಳು ಸಮುದ್ರಕ್ಕೆ ಬಂದು ಸೇರಿದಾಗ, ಈ Dead Sea ಯಾವ ರೀತಿ ಎಂದರೆ, ನೀರು ಹೊರಗೆ ಹೋಗುವ ವಿಚಾರ ಇಲ್ಲ. ಈ Sea of Galilee ದಲ್ಲಿ ನೀರು ಹೊರಗೆ ಹೋಗುವಂತಹ ಅವಕಾಶ ಉಂಟು. ಆ ಕಾರಣಕ್ಕಾಗಿ, ಯಾವ ರೀತಿಯಾಗಿ ಸಮೃದ್ಧಿಯಾಗಿ Sea of Galilee ಉಂಟೋ ಅದೇರೀತಿ ತಮ್ಮ ಜ್ಞಾನವನ್ನು ಹರಿದಾಡಲು ಬಿಟ್ಟ ಕಾರಣಕ್ಕಾಗಿ ತಾವು ಸಮೃದ್ಧರಾಗಿದ್ದೀರಿ. ಅದೇರೀತಿ 'ಸಂತ ಕಬೀರ್‌ರ' ಒಂದು ಕವಿತೆ ಯಾವ ರೀತಿಯಾಗಿ ಗುರು ಮತ್ತು ಗೋವಿಂದನನ್ನು ನಿಲ್ಲಿಸಿದರೆ, ಯಾರಿಗೆ ಮೊದಲ ಪ್ರಣಾಮ ಎಂದರೆ, ಅದಕ್ಕೆ ಅವರು ಗುರುವಿಗೆ ಪ್ರಾರಂಭದಲ್ಲಿ ನಮಸ್ಕಾರ ಎಂದು ಹೇಳುತ್ತಾರೆ. ಏಕೆಂದರೆ, ಭಗವಂತನನ್ನು ತೋರಿಸಿದವರೆ ಗುರು. ಅದಕ್ಕೆ ಗುರುವಿಗೆ ಪ್ರಥಮವಾದಂತಹ ನಮನವನ್ನು ಸಲ್ಲಿಸುವಂತಹದ್ದು. ಆ ರೀತಿಯಾಗಿ ಇಡೀ ಸದನಕ್ಕೆ ತಮ್ಮ 45 ವರ್ಷಗಳ ಅನುಭವದಲ್ಲಿ ಎಷ್ಟೋ ವಿಚಾರಗಳನ್ನು ನಮಗೆಲ್ಲರಿಗೂ ಕೊಟ್ಟಿದ್ದೀರಿ. ಅದರ ಜೊತೆಗೆ ನನ್ನ ರೀತಿಯಲ್ಲಿ ಒಂದು ಕವಿತೆಯನ್ನು ಬರೆದಿದ್ದೇನೆ. ಅದನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ.

ಜ್ಞಾನವೆಂಬ ಬೆಳಕು ನೀವು!
ಆ ಜ್ಞಾನ ಹಗೆಯ ಮಂಕು ಬಡಿಯುವ ಕಿರಣ ನೀವು!!
ನಿಮ್ಮ ಒಡನಾಟವೆ ಪಾಠ!
ನಿಮ್ಮ ನೋಟವೇ ಪಾಠ ಶಾಲೆ!!
ಅಂತಹ ಮಹಾನ್ ಗುರು ನೀವು. ತಮಗೆ ಧನ್ಯವಾದಗಳು.

(ಮುಂದು)

(789) 19-08-2025/2.00/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನನ್ನದು ಒಂದು ಪ್ರಾರ್ಥನೆ ಇದೆ. ನಾವು ಸರ್ಕಾರದ ಪರವಾಗಿಯೂ ಸಹ ಮಾತನಾಡಬೇಕಾಗುತ್ತದೆ. ಮಾನ್ಯ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು ಸಹ ಮಾತನಾಡಿದ್ದಾರೆ. ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ನಮ್ಮ ಮತ್ತು ಮಾನ್ಯ ಸಭಾಪತಿಯವರ ಬಾಂಧವ್ಯ ಈ ವ್ಯವಸ್ಥೆಯಲ್ಲಿಯೂ ಕೂಡ ಗಾಢವಾಗಿ ಇರುವುದರಿಂದ, ನಮ್ಮ ಒಂದು predicament ಏನೆಂದರೆ,

ಈಗ ಹಿರೇಬೆಣಕಲ್ ಪ್ರಾಗೈತಿಹಾಸಿಕವಾಗಿರತಕ್ಕಂತಹ ಛಾಯಾ ಚಿತ್ರಗಳ ಪ್ರದರ್ಶನವಿದೆ. ಅದರ ಉದ್ಘಾಟನೆಗೆ ಮಾನ್ಯ ಮುಖ್ಯಮಂತ್ರಿಗಳು ಇನ್ನು ಎರಡು-ಮೂರು ನಿಮಿಷದಲ್ಲಿ ಆಗಮಿಸಲಿದ್ದಾರೆಂದು ನನಗೆ ಚೀಟಿ ಬಂದಿದೆ. ನಾನೂ ಸಹ ಮಾತನಾಡಲೇಬೇಕು. ಏಕೆಂದರೆ, ನನ್ನದು ಮತ್ತು ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರದು 50 ವರ್ಷಗಳಿಗಿಂತ ಹೆಚ್ಚಿನ ಸಂಬಂಧವಿದೆ. ಆದುದರಿಂದ, ಆ ಕಾರ್ಯಕ್ರಮಕ್ಕೆ ಎಲ್ಲರೂ ಹೋಗುವುದು ಅವಶ್ಯವಿರುವುದರಿಂದ ತಾವು ದಯಮಾಡಿ ಸದನವನ್ನು ಮುಂದಕ್ಕೆ ಹಾಕಬೇಕು. ಮತ್ತೆ ತಾವು ಮಧ್ಯಾಹ್ನ 3.00 ಗಂಟೆ ಅಥವಾ ಎಷ್ಟು ಗಂಟೆಗೆ ಎಂದು ತಿಳಿಸುತ್ತೀರಿ, ಆಗ ನಾವು ಬಂದು ಕುಳಿತುಕೊಳ್ಳುತ್ತೇವೆ. ದಯಮಾಡಿ ಸದನವನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

## ೦೯. ಪ್ರಕಟಣೆಗಳು

**ಅ) ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶ್ವಪರಂಪರೆ ಹಿರೇಬೆಣಕಲ್ ಪ್ರಾಗೈತಿಹಾಸಿಕ ಛಾಯಾ ಚಿತ್ರಗಳ ಪ್ರದರ್ಶನವನ್ನು ಮುಖ್ಯಮಂತ್ರಿಗಳಿಂದ ಉದ್ಘಾಟನೆ ಹಾಗೂ ಎಲ್ಲಾ ಸದಸ್ಯರುಗಳಿಗೂ ಅಹ್ವಾನದ ಬಗ್ಗೆ.**

---

**ಸಭಾಪತಿಯವರು:-** ವಿಶ್ವಪರಂಪರೆ ಹಿರೇಬೆಣಕಲ್ ಪ್ರಾಗೈತಿಹಾಸಿಕ ಛಾಯಾ ಚಿತ್ರಗಳ ಪ್ರದರ್ಶನವನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ದಿನಾಂಕ 19.08.2025ರ ಮಧ್ಯಾಹ್ನ 2.30 ಗಂಟೆಗೆ ಗೌರವಾನ್ವಿತ ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದು, ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ಆಹ್ವಾನಿತರು ಎಂದು ಪ್ರಕಟಿಸುತ್ತೇನೆ. ಮತ್ತೆ ಎಲ್ಲರೂ ಬರಬೇಕೆಂದು ವಿನಂತಿ ಮಾಡುತ್ತೇನೆ.

ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಗಿದೆ.

(790) 19.08.2025 3.30 TCH-MD

**(ಭೋಜನ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಆ) ವಿಧಾನಸಭೆಯಿಂದ ಅಂಗೀಕೃತವಾದ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ.**

---

**ಆ) ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 18.08.2025ರಂದು ಕರ್ನಾಟಕ ನಿರಪರಾಧೀಕರಣ (ಉಪಬಂಧಗಳ ತಿದ್ದುಪಡಿ) ವಿಧೇಯಕ, 2025 ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025 ಗಳನ್ನು ತಿದ್ದುಪಡಿಗಳೊಂದಿಗೆ ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**01. ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2025**

**02. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2025**

**03. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2025**

**04. ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, 2025**

**05. ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**06. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

**07. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

**08. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025**

**09. ಕರ್ನಾಟಕ ದೇವದಾಸಿ (ಪ್ರತಿಬಂಧಕ, ನಿಷೇಧ, ಪರಿಹಾರ ಮತ್ತು ಪುನರ್ವಸತಿ)**

**ವಿಧೇಯಕ, 2025**

**10. ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025**

ಈ ವಿಧೇಯಕಗಳು ವಿಧಾನ ಸಭಾಧ್ಯಕ್ಷರಿಂದ ಬಂದಿದೆ. ಈ ಸದನವು ಇದಕ್ಕೆ ಸಹಮತವನ್ನು ನೀಡುತ್ತದೆಂದು ಭಾವಿಸಿದ್ದೇನೆ.

**10. ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರು 45 ವರ್ಷಗಳ ಸುದೀರ್ಘಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುವ ಕುರಿತು ಮುಂದುವರೆದ ಅಭಿನಂದನಾ ಪ್ರಸ್ತಾವ.**

**ಸಭಾಪತಿಯವರು:-** ಅಭಿನಂದನಾ ಪ್ರಸ್ತಾವವನ್ನು ಬೇಗ ಮುಗಿಸಬೇಕು, ಏಕೆಂದರೆ ಇಲ್ಲಿ ಕುಳಿತುಕೊಂಡು ನನಗೆ ಒಂದು ತರಹ ಆಗುತ್ತಿದೆ. ಡಾ.ಎಂ.ಜಿ.ಮುಳೆಯವರೇ ತಾವು ಬೇಗ ಮಾತನಾಡಿ ಮುಗಿಸಿ, ಏಕೆಂದರೆ subjects ಬಹಳ ಇವೆ.

**ಡಾ: ಎಂ.ಜಿ.ಮುಳೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ, ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ನಾನು ತಮಗೆ ತುಂಬು ಹೃದಯದಿಂದ ಅಭಿನಂದನೆ ಹೇಳುತ್ತಿದ್ದೇನೆ. ಇದು ದೇಶದಲ್ಲಿ ದಾಖಲೆಯಾಗಿದೆ. ನನಗೆ ಇಷ್ಟವಾಗಿದ್ದು ಎರಡೇ ಮಾತು. ನಾನು ಈ ಸದನಕ್ಕೆ ಬಂದನಂತರ ನಮಗೆ 2 gifts ಕೊಟ್ಟಿದ್ದೀರಿ. ಈ ಜಗತ್ತಿನ ಮೊಟ್ಟಮೊದಲ ಸಂಸತ್ತು ಆದಂತಹ ಅನುಭವ ಮಂಟಪ. ಆ ಅನುಭವ ಮಂಟಪದಲ್ಲಿ ಶ್ರೀ ಅಲ್ಲಮಪ್ರಭು ರವರು ಅಧ್ಯಕ್ಷರಾಗಿದ್ದರು. ಅವರ ಭಾವಚಿತ್ರವನ್ನು ಇಡಲಾಗಿದೆ. ಎಲ್ಲಾ ಮಾನ್ಯ ಸದಸ್ಯರುಗಳಿಗೆ ಕೊಟ್ಟು  ತಾವು ನಮಗೆಲ್ಲಾ ಒಂದು ಸಂದೇಶ ಕೊಟ್ಟಿದ್ದೀರಿ. ಆ ಸಂಸತ್ತಿನ ಅಧ್ಯಕ್ಷರಾದ ಶ್ರೀ ಅಲ್ಲಮ ಪ್ರಭು ಭಾವಚಿತ್ರ ನೋಡಿದ ಮೇಲೆ ಪ್ರತಿದಿನ ನಿಮ್ಮ ನೆನಪು ಬರುತ್ತಿದೆ. ನಿಮ್ಮ ಚಿಂತನೆ ಮತ್ತು ನಿಮ್ಮ thought process  ಏನಿದೆ ಎಂಬುದನ್ನು ಆ ಭಾವಚಿತ್ರದ ಮುಖಾಂತರ ಸಂದೇಶ ಕೊಟ್ಟಿದ್ದೀರಿ. ಅದು ನನಗೆ ಬಹಳ ಮೆಚ್ಚಿಗೆಯಾಯಿತು. ನೀವು ಎರಡನೆಯ gift ಕೂಡ ಕೊಟ್ಟಿದ್ದೀರಿ.  ನೀವು ಎಲ್ಲಾ ಮಾನ್ಯ ಸದಸ್ಯರಿಗೂ Indian Constitution book ಕೊಟ್ಟಿದ್ದೀರಿ. ಇವೆರಡೂ gifts ನಲ್ಲಿ value based ಸಂದೇಶವಿದೆ. ಇದು ನನಗೆ ಬಹಳ ಇಷ್ಟವಾಗಿದೆ. ಬಾಕಿ ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮತ್ತೆ ನಾನು ಅದನ್ನೇ repeat ಮಾಡುವುದಕ್ಕೆ ಹೋಗುವುದಿಲ್ಲ. ಇದಕ್ಕೆ ನನ್ನ ಸಹಮತ ಇದೆ. ನಮ್ಮ ಭಾಗ್ಯ. ತಾವು ಇಲ್ಲೇ ಇದ್ದು Golden Jubilee  ಆಚರಿಸಿಕೊಳ್ಳುವಂತೆ ಆಗಲಿ ಎಂದು ನಾನು ಭಾವಿಸುತ್ತಾ, ತಮಗೆ ಧನ್ಯವಾದಗಳು ಮತ್ತು ಅಭಿನಂದನೆಗಳನ್ನು ಹೇಳುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಈ ನಾಡು ಕಂಡಂತಹ ಅಪರೂಪದ ರಾಜಕಾರಣಿ. ಸನ್ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸುಮಾರು 45 ವರ್ಷಗಳ ಕಾಲ ಸುದೀರ್ಘವಾಗಿ ವಿಧಾನ ಪರಿಷತ್ತಿನಲ್ಲಿ ಸೇವೆ ಸಲ್ಲಿಸಿ, 'ಸೋಲಿಲ್ಲದ ಸರದಾರರಾಗಿ' ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಣ್ಣ ಬಸವಣ್ಣನವರ ವಚನದಂತೆ, "ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯಾ. ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ" ಎಂದು ಅಣ್ಣ ಬಸವಣ್ಣನವರು ಹೇಳಿದಂತೆ ಸನ್ಮಾನ್ಯ ಶ್ರೀ ಹೊರಟ್ಟಿಯವರು ನಮ್ಮಂತಹ ಹೊಸದಾಗಿ ಬಂದಂತಹ ಸದಸ್ಯರುಗಳಿಗೆ ಅವಕಾಶಗಳನ್ನು ಕೊಡುತ್ತಿರುವುದು ತುಂಬಾ ಶ್ಲಾಘನೀಯ. ಆದ್ದರಿಂದ ಅವರಿಗೆ ಮತ್ತೊಮ್ಮೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ನಮಸ್ಕಾರ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ರಾಜಕೀಯ ಜೀವನವನ್ನು ಇದೇ ಸದನದಲ್ಲಿ ಸುಮಾರು 45 ವರ್ಷಗಳು ಸಾರ್ಥಕ ವರ್ಷಗಳನ್ನು ಪೂರೈಸುತ್ತಿರುವಂತಹ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಶುಭಾಷಯಗಳನ್ನು ಸಲ್ಲಿಸುತ್ತೇನೆ. ನಾನು ಒಮ್ಮೊಮ್ಮೆ ಶ್ರೀ ಸಚಿನ್ ತೆಂಡೂಲ್ಕರ್‌ರವರನ್ನು ಆಲೋಚನೆ ಮಾಡುವುದು. ಅವರು ಏಕೆ ಆ ರೀತಿಯ ಸಾಧನೆ ಮಾಡುವುದಕ್ಕೆ ಸಾಧ್ಯವಾಯಿತು? ಶ್ರೀಮತಿ ಲತಾ ಮಂಗೇಶ್ಕರ್ ರವರು ಏಕೆ ಆ ರೀತಿಯ ಸಾಧನೆ ಮಾಡುವುದಕ್ಕೆ ಸಾಧ್ಯವಾಯಿತು? ಬಹುಶಃ ಅವರ ಪರಿಶ್ರಮ, ಅವರ ತಪಸ್ಸು ಮತ್ತು ಅವರ ಏಕಾಗ್ರತೆ ಇದ್ದೇ ಇರುತ್ತದೆ. ಇದರ ಜೊತೆಗೆ ವಿಶೇಷವಾದಂತಹ ಬಹುಶಃ ಅವರಿಗೆ ಪೂರ್ವ ಜನ್ಮದ ಸುಕೃತ ಎಂದು ಹೇಳುತ್ತಾರೆ. ಆ ರೀತಿಯಲ್ಲಿ ಅವರ ಮೇಲೆ ಆ ದೇವರ ಕೃಪಾಕಟಾಕ್ಷ ಇದ್ದೇ ಇರುತ್ತದೆ. ಡಾ: ವಿ.ಎಸ್.ಆಚಾರ್ಯರವರು "ವೀರನಾದರೂ ಇಲ್ಲ, ಶೂರನಾದರೂ ಇಲ್ಲ, ಜಾಣನಾದರೂ ಇಲ್ಲ, ಬೆಟ್ಟವನ್ನೇ ಹೊತ್ತು ತಂದಿಟ್ಟರೂ ಇಲ್ಲ, ಮೇಲೆ ಕೂತವ ಕೊಟ್ಟರೆ ಉಂಟು ಕೊಡದಿದ್ದರೆ ಇಲ್ಲ" ಎಂದು ಹೇಳುತ್ತಿದ್ದರು. ಬಹುಶಃ ನಮ್ಮ ಪರಿಶ್ರಮದ ಜೊತೆಗೆ ನಮ್ಮ ಪೂರ್ವ ಜನ್ಮದ್ದೋ ಅಥವಾ ಈ ಜನ್ಮದ್ದೋ ಸುಕೃತದ ಫಲವಾಗಿ ತಾವು ಸತತವಾಗಿ ಸುಮಾರು 8 ಬಾರಿ ಗೆದ್ದುಬಂದಿದ್ದೀರಿ ಎಂದರೆ ಖಂಡಿತವಾಗಿಯು ನಾನು ಈ ಸದನಕ್ಕೆ ಬಂದಂತಹ ಸಂದರ್ಭದಲ್ಲಿ, ಶಾಸಕರ ಭವನದ ಕೋಣೆಯನ್ನು ನೋಡಿದಾಗ, ಅದು ನಿಮ್ಮ ಕೋಣೆ ಎಂದು ನಮಗೆ ಗೊತ್ತಾಯಿತು. ಆ ಮೂಲೆಯಲ್ಲಿ ತುಂಬಾ ಜನ ತುಂಬಿರುತ್ತಿದ್ದರು. ವಿಶೇಷವಾಗಿ ಅಲ್ಲಿ ಬಹುಪಾಲು ಶಿಕ್ಷಕರೇ ಇರುತ್ತಿದ್ದರು. ಅವರವರ ಸಮಸ್ಯೆಗಳನ್ನು

ಹಿಡಿದುಕೊಂಡು ನಿಮ್ಮ ಬಳಿ ಬರುತ್ತಿದ್ದಾರೆಂದರೆ ಬಹುಶಃ 8 ಬಾರಿ ಗೆಲ್ಲುವುದಕ್ಕೆ ನೀವು ಅವರಿಗೆ ಮಾಡಿದಂತಹ ಅನನ್ಯ ಸೇವೆಯೇ ಕಾರಣವೆಂದು ನಾನು ತಿಳಿದುಕೊಂಡಿದ್ದೇನೆ. ಆ ಕೋಣೆಯ ಆಕರ್ಷಣೆ ಈಗಲೂ ಕೂಡ ಇದೆ. ನಾನು ಹೋಗುವಾಗ ಒಮ್ಮೆ ನೋಡುತ್ತೇನೆ, ಇನ್ನೂ ನೀವು ಅಲ್ಲಿಯೇ ಇದ್ದೀರಾ ಎಂದು ನೋಡುತ್ತೇನೆ.

**ಸಭಾಪತಿಯವರು:-** ನಾನು ಅಲ್ಲೇ ಇದ್ದೇನೆ. ಹೌದು, ಅಲ್ಲೇ ಇರುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಖಾಲಿ ಮಾಡುವುದಕ್ಕೆ ಅವರು ಕೂಡ ಬಿಡುವುದಿಲ್ಲ. ಅವರ ಹಿರಿತನಕ್ಕೆ ಮತ್ತು ಅವರ ಅನುಭವಕ್ಕೆ ಖಂಡಿತವಾಗಿಯು ಕೂಡ ಈ ಸ್ಥಾನಕ್ಕೆ ಅವರಿಗೆ ವಿಶೇಷವಾದಂತಹ ಕೊಡುಗೆಯನ್ನು ಕೊಡಬೇಕಾಗುತ್ತದೆ. ಅವರ ಹಿರಿತನವನ್ನು ಅವರು ಗೌರವಿಸುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ನಾನು ಒಂದೇ ಮಾತು ಹೇಳುವಂಥದ್ದು. ಇದರ ಜೊತೆಗೆ ನಿಮ್ಮ ಸಾಧನೆ. ಒಂದು ಬಾರಿ ನನಗೆ ನಿಮ್ಮ ಶಾಲೆಯನ್ನು ನೋಡುವಂತಹ ಅವಕಾಶ ಸಿಕ್ಕಿತ್ತು. ಆ ಶಾಲೆಯನ್ನು ನೋಡಿದಾಗ ಸುಮಾರು 48 ವರ್ಷಗಳ ಅನುಭವದ ಸಾರ ಆ ಶಾಲೆಯಲ್ಲಿ ನಾನು ನೋಡಿದ್ದೇನೆ. ನಿಮ್ಮ ಅಮ್ಮನ ಮೇಲೆ ನಿಮಗಿರುವ ಪ್ರೀತಿಯನ್ನು ನಾನು ನೋಡಿದ್ದೇನೆ. ನಿಮ್ಮ ಅಪ್ಪನವರ ಕಾರ್ಯಕ್ರಮ ಹುಬ್ಬಳ್ಳಿಯಲ್ಲಿ ಮಾಡಿದಾಗ ನಾನು ಬಂದಿದ್ದೆನು. ನಿಮ್ಮ ಸಾಧನೆಯ ಹಿಂದೆ ಯಾರಿದ್ದಾರೆಂದು ಇಲ್ಲಿ ಯಾರೋ ಒಬ್ಬರು ಸದಸ್ಯರು ಪ್ರಸ್ತಾಪ ಮಾಡಿದರು. ನೀವು ಚುನಾವಣೆಗೆ ನಿಲ್ಲುವಾಗ ನಿಮ್ಮ ಶ್ರೀಮತಿಯವರು 'ನೀವು ಗೆಲ್ಲದಿದ್ದರೆ ಆದೀತು' ಎಂದು ಹೇಳುವಂತಹ ಭಾವನೆಯನ್ನು ವ್ಯಕ್ತಪಡಿಸುತ್ತಾರೆಂದರೆ, ಒಬ್ಬರು ಯಜಮಾನ ಸುಮಾರು 48 ವರ್ಷಗಳ ಕಾಲ ಸಾರ್ವಜನಿಕರ ಜೀವನದಲ್ಲಿ ಇದ್ದಾಗ ಸಹಜವಾಗಿ ಆ ಭಾವನೆ ಬಂದರೂ ಬಂದೀತು. ಆದರೆ, ಅವರು ನಿಮಗೆ ಕೊಟ್ಟಂತಹ ಬೆಂಬಲವನ್ನು ಮತ್ತು ಸಹಕಾರವನ್ನು ನೆನೆದು ನೀವು ಆ ಸಭೆಯಲ್ಲಿ ಭಾವುಕರಾಗಿ ಅಲ್ಲಿ ಕೃತಜ್ಞತೆಯನ್ನು ಹೇಳಿದ್ದನ್ನು ಸಹ ನಾನು ನೋಡಿದ್ದೇನೆ.

(ಮುಂದು)

(791)19.8.2025/3.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ಮುಂದು):-**

ಆ ರೀತಿಯ ಭಾವಜೀವಿ ನೀವು ಎಂದು ಹೇಳುತ್ತಾ ಒಂದು ಮನೆಯಲ್ಲಿ ಹಿರಿತನವಿರುವ ತುಂಬಾ ಜನರು ಇದ್ದಾರೆ. ಯಾವುದೇ ಮನೆ ಇರಬಹುದು ಆ ಮನೆಯಲ್ಲಿ ಅನುಭವದ ವ್ಯಕ್ತಿಯೊಬ್ಬರು ಯಾವಾಗಲೂ ಬೇಕು. ಅನುಭವಕ್ಕೆ ಪರ್ಯಾಯ ಎನ್ನುವಂಥದ್ದು ಇಲ್ಲ. ಅನುಭವವೇ ಜೀವನದ ಸಾರ. ಅನುಭವ ಎಷ್ಟು ಬರುತ್ತದೆ ಅಷ್ಟು ನಮ್ಮ

ನಿರ್ಣಯಗಳಲ್ಲಿ ಪ್ರಬುದ್ಧತೆ ಬರುತ್ತದೆ. ತಪ್ಪುಗಳನ್ನು ಮಾಡಿಯೇ ಅನುಭವ ಬರುವಂಥದ್ದು. ಆ ದೃಷ್ಟಿಯಲ್ಲಿ ಭಗವದ್ಗೀತೆಯಲ್ಲಿ ಒಂದು ಶ್ಲೋಕ ಬರುತ್ತದೆ.

*ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।*
*ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥*

ಅಂದರೆ, ಆ ಊರಿನ ಹಿರಿಯರು, ಆ ಸದನದ ಹಿರಿಯರು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ, ಯಾವ ರೀತಿಯ ಆದರ್ಶವನ್ನು ಉದಾಹರಣೆಯನ್ನು, ಗುಣಮಟ್ಟವನ್ನು ನಿರ್ಮಾಣ ಮಾಡುತ್ತಾರೆ ಅದರಂತೆ ಉಳಿದಂತವರು ಸಾಮಾನ್ಯರು ಅವರನ್ನು ಅನುಸರಿಸುತ್ತಾರೆ. ಆದರ್ಶ ಎಂದು ಹೇಳುವಂತಹದ್ದು ಅದು ಶಬ್ಧಗಳಿಗೆ, ಮಾತುಗಳಿಗೆ ಇರುವಂತಹದ್ದಲ್ಲ, ಹತ್ತು ಮಾತು ಹೇಳುವುದನ್ನು ಒಂದು ನಮ್ಮ ನಡೆ ತೋರಿಸಿಕೊಡುತ್ತದೆ ಎಂದು ಹೇಳುವಂತಹ ಕಳೆದ 45 ವರ್ಷಗಳಲ್ಲಿ ನೀವು ಆ ರೀತಿಯ ಸಾಧನೆಯನ್ನು ಮಾಡಿದ್ದೀರಿ, ನಮಗೆಲ್ಲಾ ಒಂದು ರೀತಿಯಲ್ಲಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದೀರಿ. ನನ್ನ ಹೆಸರನ್ನು ಮಾತ್ರ ಬದಲಾವಣೆ ಮಾಡಿದ್ದೀರಿ. ನನಗೊಂದು ಹೊಸ ಹೆಸರು ಕೊಟ್ಟಿದ್ದೀರಿ. ಆದರೂ ಆ ಹೆಸರು ಕರೆಯುವಾಗಲೂ, ನಮಗೆಲ್ಲಾ ಹೊಸಬರಿಗೆ ಅವಕಾಶ ಕೊಡುವಾಗಲೂ ನಿಮಗಿರುವಂತಹ ಪ್ರೀತಿ, ಗೌರವವನ್ನು ನೆನೆಸಿಕೊಳ್ಳುತ್ತಾ, ಈ ಶುಭ ಸಂದರ್ಭದಲ್ಲಿ ಮತ್ತೊಮ್ಮೆ ನಿಮಗೆ ಶುಭ ಹಾರೈಸುತ್ತಾ, ಶುಭಾಶಯಗಳನ್ನು ಕೋರುತ್ತಾ ನನ್ನ ಮಾತನ್ನು ನಿಲ್ಲಿಸುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಇವತ್ತಿನ ವಿಶೇಷ ಸಂದರ್ಭದಲ್ಲಿ ನಾವು ಶ್ರೀ ಬಸವರಾಜ ಹೊರಟ್ಟಿ ಸಾಹೇಬರನ್ನು ಕುರಿತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಮತ್ತು ಮಾನ್ಯ ಸದಸ್ಯರಾದ ಮಂಜುನಾಥ ಭಂಡಾರಿಯವರು ಈ ಪ್ರಸ್ತಾಪ ಮಂಡಿಸಿರುವುದಕ್ಕೆ ನಾನು ಮಾನ್ಯ ಸಭಾಪತಿಯವರಿಗೆ ಹಾಗೂ ಶ್ರೀ ಮಂಜುನಾಥ ಭಂಡಾರಿಯವರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಒಬ್ಬ ವ್ಯಕ್ತಿ ರಾಜಕೀಯ ಜೀವನದಲ್ಲಿ ಜನನಾಯಕನಾಗಿ ಕಳೆದ 45 ವರ್ಷಗಳ ಕಾಲ ಸತತವಾಗಿ Teachers ಇರಬಹುದು, Graduates ಇರಬಹುದು ಅಥವಾ ಸಾರ್ವಜನಿಕವಾಗಿ ಇರುವಂತಹ ಸಮಸ್ಯೆಗಳನ್ನು address ಮಾಡುವಂತಹ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿ ಜನಮನ್ನಣೆ ಪಡೆದುಕೊಂಡಿರುವಂತಹ ಯಾರಾದರೂ ನಾಯಕನಿದ್ದರೆ, ಅಜಾತಶತ್ರು ಇದ್ದರೆ ಅದು ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಎಂದು ನಾನು ಭಾವಿಸಿದ್ದೇನೆ. ಅಜಾತಶತ್ರು ಎನ್ನುವುದರ ಜೊತೆಗೆ ಹಲವಾರು ಸ್ನೇಹಿತರನ್ನು ಪಡೆದುಕೊಂಡಿರುವಂತಹ across the party lines, ಅದು ಕಾಂಗ್ರೆಸ್, ಜೆ.ಡಿ(ಎಸ್), ಬಿ.ಜೆ.ಪಿ ಇರಬಹುದು ಮತ್ತು ಪಕ್ಷಾತೀತವಾಗಿ

ಸ್ಪರ್ಧಿಸುವಂತಹ Independent Candidates ಇರಬಹುದು. ಎಲ್ಲರ ಹತ್ತಿರ ಕೂಡ ಒಂದೇ ರೀತಿಯ ಸ್ನೇಹ ಭಾವನೆಯನ್ನು ಬೆಳೆಸಿಕೊಂಡು ಬಂದಿರುವಂತಹ, ಹಿರಿಯ ಸ್ನೇಹಜೀವಿಯಾದಂತಹ, ಸಭಾಪತಿಗಳಾದಂತಹ ಶ್ರೀ ಬಸವರಾಜ ಹೊರಟ್ಟಿಯವರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ, ಇನ್ನೊಬ್ಬ ವ್ಯಕ್ತಿ ಕೂಡ ನಮ್ಮ ಪ್ರವಾಸೋದ್ಯಮ ಸಚಿವರಾದಂತಹ ಶ್ರೀ ಹೆಚ್.ಕೆ. ಪಾಟೀಲರು ಇಲ್ಲಿದ್ದಾರೆ. ಅವರು ಹೇಗೆ 45 ವರ್ಷಗಳ ಮೇಲ್ಮನೆಯಲ್ಲಿದ್ದಾರೋ ಅದೇ ರೀತಿ ಮಾನ್ಯ ಹೆಚ್.ಕೆ. ಪಾಟೀಲ್ ಸಾಹೇಬರು ಕೂಡ 24 ವರ್ಷಗಳ ಕಾಲ ಈ ಸದನದ ಸದಸ್ಯರಾಗಿ, ವಿಧಾನಸಭೆಯಲ್ಲಿ 14 ವರ್ಷಗಳ ಕಾಲ ಸದಸ್ಯರಾಗಿದ್ದರು. ಒಟ್ಟು 38 ವರ್ಷಗಳ ಕಾಲ ಅವರು ಕೂಡ ಸೇವೆ ಮಾಡಿರುವಂತಹದ್ದು, ಸಭಾಪತಿಗಳು 45 ವರ್ಷಗಳ ಕಾಲ ಸೇವೆ ಮಾಡಿರುವಂತಹ ಹಿರಿಯ ವ್ಯಕ್ತಿಗಳಾದಂತಹ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಹಾಗೂ ಮಾನ್ಯ ಪ್ರವಾಸೋದ್ಯಮ ಸಚಿವರು ಇಬ್ಬರೂ ಕೂಡ ನಮ್ಮ ಯುವ ಪೀಳಿಗೆಗೆ ಆದರ್ಶ ನಾಯಕರು ಎಂದು ಹೇಳಿದರೆ ತಪ್ಪಾಗಲಾರದು ಎಂಬ ಮಾತನ್ನು ಹೇಳಬಯಸುತ್ತೇನೆ. ಕೇವಲ ಅವರು ಒಬ್ಬ ರಾಜಕಾರಣಿಯಾಗಿ, ಸಭಾಪತಿಯಾಗಿ, ಮೇಷ್ಟ್ರಗಿರಿ ಮಾಡಿಕೊಂಡು ಬಂದಂತಹ ವ್ಯಕ್ತಿಯಲ್ಲ, ಅವರು ಸಚಿವರಾಗಿಯೂ ಕೆಲಸ ಮಾಡಿರುವಂತಹವರು. ಶ್ರೀ ಧರಂಸಿಂಗ್ ಮತ್ತು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿ ಹಲವಾರು ಪ್ರಗತಿಪರವಾದಂತಹ ಕೆಲಸಗಳನ್ನು ಮಾಡಿ ಶೈಕ್ಷಣಿಕ ಕ್ಷೇತ್ರದಲ್ಲಿ ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಆಗಬೇಕಾಗಿರುವಂತಹ ಶಿಕ್ಷಣದ ಹಲವಾರು ಬದಲಾವಣೆಗಳನ್ನು ತಂದಂತಹ ಮೇಧಾವಿ ಯಾರಾದರೂ ಇದ್ದಾರೆಂದರೆ, ಅದು ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಎಂದು ಹೇಳಿದರೆ ತಪ್ಪಾಗಲಾರದು. 1980ರಲ್ಲಿ ಮೇಲ್ಮನೆಗೆ ಬಂದಂತಹ ವ್ಯಕ್ತಿ ಇವತ್ತು ಸತತವಾಗಿ 45 ವರ್ಷಗಳ ಕಾಲ ಗೆದ್ದು ಅದೂ ಒಂದೇ ಕ್ಷೇತ್ರದಲ್ಲಿ ಶಿಕ್ಷಕರ ಕ್ಷೇತ್ರದಲ್ಲಿ ಆಯ್ಕೆಯಾದಂತಹ ಒಬ್ಬ ಜನಪ್ರಿಯ ನಾಯಕರಾದಂತಹ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ ಸಾಹೇಬರಿಗೆ ಈ ಸದನವು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಕೇವಲ ಎಂಟು ಬಾರಿ ಆಯ್ಕೆಯಾಗಿರುವಂತಹ ವಿಚಾರವಲ್ಲ. ಒಂದು ವಿಶೇಷತೆಯೆಂದರೆ, ಒಂದೇ ಕ್ಷೇತ್ರದಲ್ಲಿ ಆಯ್ಕೆಯಾಗಿರುವಂತಹದ್ದು ಹಾಗೂ ಅವತ್ತಿನಿಂದಲೂ ಶಾಸಕರ ಭವನದಲ್ಲಿ ಒಂದೇ ಕೊಠಡಿಯಲ್ಲಿ ಇರುವಂತಹದ್ದನ್ನು ಯೋಚನೆ ಮಾಡಿ ನೋಡಿ. ಈ ಕಾಲದಲ್ಲಿ ನಾವೆಲ್ಲರೂ ಬದಲಾವಣೆ ಬಯಸುತ್ತೇವೆ. ಈ ವರ್ಷ ಇದಾದರೆ, ನಂತರದ ವರ್ಷ ಇನ್ನೂ ಉತ್ತಮವಾದಂತಹ ದೊಡ್ಡ ರೂಂ ಬೇಕು ಎಂದು ಮಾತನಾಡುತ್ತೇವೆ. ಆದರೆ ಅವರು ಅವತ್ತಿನಿಂದ ಇವತ್ತಿನವರೆಗೂ ಕೂಡ ಅದೇ ರೂಂನಲ್ಲಿ ಸರಳವಾದ, ಸಜ್ಜನಿಕೆ ಜೀವನ ನಡೆಸುತ್ತಿರುವಂತಹ ಸಭಾಪತಿಗಳು ನಮಗೆಲ್ಲರಿಗೂ ಆದರ್ಶರಾಗಿದ್ದಾರೆ ಎಂದರೆ

ತಪ್ಪಾಗಲಾರದು ಎಂಬ ಮಾತನ್ನು ಹೇಳುತ್ತಿದ್ದೇನೆ. ಜೂನ್ ತಿಂಗಳ 30ನೇ ತಾರೀಖಿಗೆ ಅವರು ಸದನಕ್ಕೆ ಬಂದು 45 ವರ್ಷಗಳಾಗಿರುತ್ತದೆ. ಅವರು ಬಸವತತ್ವದ ಮೇಲೆ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿರುವಂತಹ ಒಬ್ಬ ಸರಳ, ಸಜ್ಜನಿಕೆಯ ರಾಜಕಾರಣಿ ನಮ್ಮ ಸಭಾಪತಿಯವರು. ಹಾಗೂ ಅವರು ಕೇವಲ ಒಂದೇ ಪಕ್ಷದಿಂದ ಆಯ್ಕೆಯಾದಂತಹ ವ್ಯಕ್ತಿಯಂತೂ ಅಲ್ಲವೇ ಅಲ್ಲ. ಅವರು independent ಆಗಿ ನಿಂತುಕೊಂಡರೂ ಗೆಲ್ಲುವಂತಹ ಸಾಮರ್ಥ್ಯ ಹೊಂದಿರುವಂತಹ ವ್ಯಕ್ತಿಯಾದರೆ ಜನತಾ ಪರಿವಾರದಿಂದ ದಿ: ರಾಮಕೃಷ್ಣ ಹೆಗಡೆಯವರ ಅನುಯಾಯಿಯಾಗಿ ಮತ್ತು 17 ಮುಖ್ಯಮಂತ್ರಿಗಳ ಜೊತೆ ಮುಖಾಮುಖಿಯಾಗಿ ಕೆಲಸ ಮಾಡಿರುವ ಅನುಭವ ಇರುವಂತಹ ಒಬ್ಬ ನುರಿತ ರಾಜಕಾರಣಿಯು ಈ ಬಾರಿ ಬಿ.ಜೆ.ಪಿ. ಇಂದ ಗೆದ್ದು ಬಂದು ಈಗ ಸಭಾಪತಿಗಳಾಗಿರುವುದನ್ನು ನಾವು ನೋಡಿದ್ದೇವೆ. ಅವರು ಹಲವಾರು ರೀತಿಯ ಕೆಲಸಗಳನ್ನು ಮಾಡಿದ್ದಾರೆ. ಶಿಕ್ಷಣ ಸಚಿವರಾಗಿ ಶಿಕ್ಷಕರ ಸಮಸ್ಯೆಗಳಿಗೆ ಬಹಳ ಒತ್ತು ಕೊಟ್ಟಿರುವಂತಹ ವಿಚಾರಗಳಿರಬಹುದು, recruitment process ನಲ್ಲಿ ಏನಾದರೂ reforms ತರಬೇಕೆಂದು ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಶಿಕ್ಷಣ ಸಚಿವರಾಗಿ ಅಪಾರವಾದಂತಹ ಸೇವೆ ಮಾಡಿರುವುದನ್ನು ನಾವು ನೆನೆಸಿಕೊಳ್ಳಬೇಕಾಗುತ್ತದೆ. ಅವರು ಶಿಕ್ಷಣ ಸಚಿವರಾಗಿದ್ದಾಗ ಹಲವಾರು ಸರ್ಕಾರಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಒಂದು ಮಾದರಿಯಾದಂತಹ ಪೀಠಿಕೆಯನ್ನು ಮತ್ತು ಭದ್ರ ಬುನಾದಿಯನ್ನು ಹಾಕಿಕೊಟ್ಟಂತಹವರು ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರು ಎಂಬ ವಿಚಾರವನ್ನು ಹೇಳುತ್ತೇನೆ. ಶಿಕ್ಷಕರ ಮತ್ತು ಶಿಕ್ಷಣದಲ್ಲಿರುವಂತಹ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿಯಲ್ಲಿ ಹಲವಾರು ರೀತಿಯ ಚರ್ಚೆಗಳಲ್ಲಿ ಭಾಗವಹಿಸಿ ಮತ್ತು ವಿಚಾರಗಳನ್ನು ಮಂಡಿಸಿ ಅವರು ದೇಶಕ್ಕೆ ಮಾದರಿಯಾದಂತಹ ಒಬ್ಬ ನುರಿತ ರಾಜಕಾರಣಿಯಾಗಿದ್ದಾರೆ. ಅವರ ಹೆಸರು ಇವತ್ತು Limca Book of Records ನಲ್ಲಿ ಇರಬಹುದು, World Book of Records ನಲ್ಲಿ ಇರಬಹುದು, ಇನ್ನೂ ಹಲವಾರು ದಾಖಲೆಗಳಲ್ಲಿ ಅವರ ಹೆಸರು ನಮೂದಾಗಿರುವಂತಹದ್ದು ಬಹಳ ಸಂತೋಷಕರವಾದ ಸಂಗತಿ ಎಂದು ಹೇಳುತ್ತೇನೆ. ಇಡೀ ದೇಶದಲ್ಲಿ ಮೇಲ್ಮನೆಗಳಲ್ಲಿ ಒಂದೇ ಕ್ಷೇತ್ರದಿಂದ ಆಯ್ಕೆಯಾದಂತಹ ಏಕೈಕ ವ್ಯಕ್ತಿ ಯಾರಾದರೂ ಇದ್ದರೆ ಅದು ಮಾನ್ಯ ಸಭಾಪತಿಗಳು ಎಂಬ ಮಾತನ್ನು ಹೇಳಬಯಸುತ್ತೇನೆ. ಅವರು ವಿದ್ಯಾರ್ಥಿಗಳಿಗೆ ಯಾವಾಗಲೂ ಶಿಕ್ಷಣದಲ್ಲಿ ಬಹಳ ಒತ್ತು ಕೊಡುವಂತಹದ್ದು, ಯಾವುದೇ ದೇಶವಾಗಲೀ ರಾಜ್ಯವಾಗಲೀ ಪ್ರಗತಿಪರವಾಗಬೇಕಾದರೆ ಆ ರಾಜ್ಯಗಳು ಮತ್ತು ದೇಶವು complete ಆಗಿ educated ಆಗಿರಬೇಕೆಂದು ಹೇಳುತ್ತಿದ್ದರು. ಮಕ್ಕಳಿಗೆ ಈ ದೇಶದ ಪರಂಪರೆಯನ್ನು, ಇತಿಹಾಸವನ್ನು ಮತ್ತು ರಾಜ್ಯದ ಇತಿಹಾಸವನ್ನು ಹೇಳಿಕೊಡುವುದಕ್ಕೆ ಯಾವಾಗಲೂ ಉತ್ಸುಕರಾಗಿ

ಕೆಲಸ ಮಾಡಿದಂತಹವರು ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರು ಎಂದು ಹೇಳಬಯಸುತ್ತೇನೆ. ಹಲವಾರು ವಿಚಾರಧಾರೆಗಳನ್ನು ನಿಮ್ಮ ಮುಂದೆ ಹೇಳುತ್ತಾ, ಅವರು ನಾವೆಲ್ಲರೂ ಸ್ವಲ್ಪ ಜಾಸ್ತಿ ಮಾತನಾಡಿದಾಗ ‘ಏ ಕುಳಿತುಕೋ, ಸಾಕು’ ಎಂದು ಸಭಾಪತಿಯಾಗಿ ಬೈದರೂ ಕೂಡ ಮನಸ್ಸಿನಿಂದ ಬಹಳ ಪ್ರೀತಿ, ವಿಶ್ವಾಸವನ್ನಿಟ್ಟುಕೊಂಡಂತಹವರು, ಯುವಕರನ್ನು ಗದರಿದರೂ ಕೂಡ ಮತ್ತೆ ಕರೆದು ಮಾತನಾಡಿಸುವಂತಹ ದೊಡ್ಡ ಔದಾರ್ಯವಿರುವಂತಹವರು ಅವರು. ಮಾನ್ಯ ಸಭಾಪತಿಯವರೇ, ಬೆಲ್ ಹೊಡೆಯಬೇಡಿ, 45 ವರ್ಷ ಸೇವೆ ಸಲ್ಲಿಸಿರುವ ತಮ್ಮ ಬಗ್ಗೆ ಮಾತನಾಡಲು 45 ನಿಮಿಷ ಅವಕಾಶ ಕೊಡಬೇಕಾಗುತ್ತದೆ ಎಂದು ಮಾನ್ಯ ಹೊರಟ್ಟಿ ಸಾಹೇಬರಲ್ಲಿ ಮನವಿ ಮಾಡುತ್ತೇನೆ.

ನಾನು ಇವರ ಜೊತೆ ಅಮೆರಿಕದಲ್ಲಿ ನಡೆಯುವ ‘ಅಕ್ಕ’ ಸಮ್ಮೇಳನಕ್ಕೆ ಹೋಗಿದ್ದೆ. ಆಗ ನಾನು ಅವರ ಜೊತೆಯಲ್ಲಿಯೇ ಇದ್ದೆ. ಅವರು ಪಿ.ಎಸ್. ಯಾರನ್ನೂ ಕರೆದುಕೊಂಡು ಹೋಗಿರಲಿಲ್ಲ. ನನ್ನನ್ನೆ ಸದ್ಯಕ್ಕೆ ಪಿ.ಎಸ್. ಮಾಡಿಕೊಂಡಿದ್ದರೆಂದು ಕಾಣುತ್ತದೆ. ಅವರ ಎಲ್ಲಾ ಆಚಾರ, ವಿಚಾರಗಳನ್ನು ನೋಡಿಕೊಂಡು ಅವರ ಜೊತೆಯಲ್ಲಿ ಸುತ್ತಾಡಿ ನೋಡಿದಾಗ ಇಷ್ಟು ಹಿರಿಯರಾದರೂ ಕೂಡ ನಮ್ಮ ವಯಸ್ಸಿಗೆ ಇಳಿದು, ನಮ್ಮ ನಡುವೆ ಯುವಕರಾಗಿ ಬೆರೆಯುವಂತಹ, ಎಲ್ಲಾ ವಿಚಾರಧಾರೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವಂತಹ ಟೀಕೆ ಟಿಪ್ಪಣಿಗಳನ್ನು ಮಾಡುವಂತಹ, ನಗುಮುಖದಲ್ಲಿರುವಂತಹ ಯಾವಾಗಲೂ ಕೂಡ ಕೆಲವು ಜೋಕ್‌ಗಳನ್ನು ಹೇಳುತ್ತಾ ಎಲ್ಲರನ್ನೂ ಪ್ರೀತಿಯಿಂದ ಕಾಣು ವಂತಹ ಮತ್ತು ‘ಅಕ್ಕ’ ಸಮ್ಮೇಳನಕ್ಕೆ ಹೋದಾಗ ಅಲ್ಲಿರುವಂತಹ ಎಲ್ಲರನ್ನೂ ಕರೆದು ‘ನೋಡಿ ಇವರು ನಮ್ಮ ಹುಡುಗ ನಾಗರಾಜ್ ಅಂತ, ಮೊದಲನೇ ಬಾರಿಗೆ ಎಂ.ಎಲ್.ಸಿ. ಆಗಿದ್ದಾರೆ’ ಎಂದು ಹೇಳುವಂತಹ ಉದಾರತೆಯನ್ನು ಬೆಳೆಸಿಕೊಂಡಿರುವಂತಹ ಸಭಾಪತಿಗಳಿಗೆ ನಾವು ಖಂಡಿತವಾಗಿಯೂ ಚಿರಋಣಿಯಾಗಿದ್ದೇವೆ. ಸದನದಲ್ಲಿ ಕೂಡ ಹಲವಾರು ಬಾರಿ ಬೇಸರವನ್ನು ವ್ಯಕ್ತಪಡಿಸಿರುವುದನ್ನು ಕೂಡ ನೋಡಿದ್ದೇನೆ. ಆಗಾಗ ನಮಗೂ ಕೂಡ ಒಂದು choke ಕೊಡುತ್ತಾರೆ, Press Conference ಮಾಡಿ ಸದನದಲ್ಲಿ debates ಸರಿಯಿಲ್ಲ, ನೀವೆಲ್ಲರೂ ಸರಿಯಾಗಿ ನಡೆದುಕೊಳ್ಳುತ್ತಿಲ್ಲ, ನಾನು ಬಿಟ್ಟು ಹೋಗುತ್ತೇನೆ, ನಾನು ಕುಳಿತುಕೊಳ್ಳುವುದಿಲ್ಲ ಎಂದೆಲ್ಲಾ ಹೇಳುತ್ತಾರೆ. ಅವರು ಬಿಟ್ಟು ಹೋದರೂ ಕೂಡ ನಾವು ಶ್ರೀ ಬಸವರಾಜ ಹೊರಟ್ಟಿ ಸಾಹೇಬರನ್ನು ಬಿಡುವವರಲ್ಲ ಎಂಬ ಮಾತನ್ನು ಹೇಳುತ್ತೇನೆ. ಏಕೆಂದರೆ, ನಿಮ್ಮಂತಹವರು ಇಲ್ಲದ್ದರೆ ಮಾತ್ರ ಈ ಸದನಕ್ಕೆ ಗೌರವ ಸಿಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಎಲ್ಲಾ ವಿಚಾರಗಳನ್ನು ನೋಡಿದಾಗ, ಮತ್ತೊಂದು ಸಲ ಕೂಡ ಅವರು ಹೇಳಿದರು, ಈಗ ಗುಣಮಟ್ಟದ debates ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ,

ನಾವೆಲ್ಲಾ ಯುವಕರಿದ್ದೇವೆ, ನಮಗಿಂತ ಹಿರಿಯರು 4-5 ಬಾರಿ ಗೆದ್ದು ಬಂದಂತಹವರೆಲ್ಲಾ ಇದ್ದಾರೆ. ನಾವು ಮತ್ತು ಅವರೆಲ್ಲರೂ ಸೇರಿ ಒಂದು ವಾಗ್ದಾನವನ್ನು ಕೊಡುತ್ತೇವೆ, ಮೇಲ್ಮನೆಯ ಎಲ್ಲಾ ಇತಿಹಾಸವನ್ನು, ಗೌರವವನ್ನು ಮತ್ತು ಇದರ ಮಹತ್ವವನ್ನು ಎತ್ತಿ ಹಿಡಿಯುವುದಕ್ಕೆ ನಾವೆಲ್ಲರೂ ಕೆಲಸ ಮಾಡುವುದಕ್ಕೆ ಕಟಿಬದ್ಧರಾಗಿದ್ದೇವೆ ಎಂಬ ಮಾತನ್ನು ಹೇಳುತ್ತೇನೆ. ಏಕೆಂದರೆ, ಈ ದೇಶದಲ್ಲಿರುವಂತಹ ಪ್ರಜಾತಂತ್ರ ವ್ಯವಸ್ಥೆಯಲ್ಲಿ "we all want to be good parliamentarians, we just don't want to be politicians as such" ಶ್ರೀ ಹೆಚ್.ಕೆ. ಪಾಟೀಲ ಸಾಹೇಬರಿರಬಹುದು, ಶ್ರೀ ರಾಮಲಿಂಗಾರೆಡ್ಡಿ ಸಾಹೇಬರಿರಬಹುದು, ಇಲ್ಲಿ ಹಿರಿಯರೆಲ್ಲಾ ಕುಳಿತಿದ್ದಾರೆ. ಅವರು ನಡೆದು ಬಂದ ದಾರಿಯಲ್ಲಿ ಸರಳ ಸಜ್ಜನಿಕೆ ಇರುವಂತಹ ಇಲ್ಲಿ ಕುಳಿತಿರುವಂತಹ ಇಬ್ಬರು ಸಚಿವರನ್ನು ನೋಡಿ. ಇಲ್ಲಿ ಶ್ರೀ ರಾಮಲಿಂಗಾರೆಡ್ಡಿ ಸಾಹೇಬರಿದ್ದಾರೆ. ಸಾರಿಗೆ ಸಚಿವರಾದರೂ ಒಂದು Gun Man ಇಟ್ಟುಕೊಳ್ಳುವುದಿಲ್ಲ. ಎಷ್ಟು ಸರಳವಾಗಿರುತ್ತಾರೆ. ಈ ಕಾಲದಲ್ಲಿ ಕಾರ್ಪೋರೇಟರ್ ಆದವನಿಗೆ ಒಬ್ಬ Gun Man ಬೇಕು, ಬಾಗಿಲು ತೆರಯುವುದಕ್ಕೆ ಒಬ್ಬರು ಬೇಕು, ಪಿ.ಎ. ಮತ್ತು ಪಿ.ಎಸ್. ಬೇಕು. ಆದರೆ ನಮ್ಮಲ್ಲಿರುವಂತಹ ಸಚಿವರು ಮತ್ತು ಸಭಾಪತಿಗಳು ನಮಗೆ ಆದರ್ಶರಾಗಬೇಕಾಗುತ್ತದೆ. ಅವರು ಆದರ್ಶವಾಗಿ ನಡೆಯುವಂತಹವರು. ಇನ್ನೂ ಒಂದು ವಿಚಾರ ಹೇಳಬೇಕೆಂದರೆ, ಮಾನ್ಯ ಸಭಾಪತಿಗಳು ರಾಜಕಾರಣದಲ್ಲಿ ಕೇವಲ ಸರಳ ವ್ಯಕ್ತಿಯಲ್ಲ. ವರ್ಣರಂಜಿತ ವ್ಯಕ್ತಿತ್ವ ಹೊಂದಿರುವಂತಹ ವ್ಯಕ್ತಿ ಎಂದು ಹೇಳಬೇಕಾಗುತ್ತದೆ. ಅದು ಸಿನಿಮಾ ರಂಗದಲ್ಲಿರಬಹುದು, ಕಲಾ ಕ್ಷೇತ್ರದಲ್ಲಿರಬಹುದು ಅಥವಾ ಸ್ನೇಹ ಮಾಡುವಂತಹ ವಿಚಾರದಲ್ಲಿರಬಹುದು, ದೊಡ್ಡವರು, ಚಿಕ್ಕವರಿರಬಹುದು, ಹೆಣ್ಣುಮಕ್ಕಳಾಗಲೀ, ಯಾರೇ ಆಗಲಿ ಎಲ್ಲರನ್ನೂ ಪ್ರೀತಿಯಿಂದ ಕಾಣುವಂತಹ ವರ್ಣರಂಜಿತ ಹಾಗೂ ಬಹುವ್ಯಕ್ತಿತ್ವ ಹೊಂದಿರುವಂತಹ ಯಾರಾದರೂ ಸಭಾಪತಿಗಳನ್ನು ನಮ್ಮ ಜೀವನದಲ್ಲಿ ಕಂಡಿದ್ದರೆ ಅದು ನಮ್ಮ ಸಭಾಪತಿಗಳಾದಂತಹ ಹೆಮ್ಮೆಯ ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಎಂದು ನಾನು ಭಾವಿಸಿದ್ದೇನೆ.

(ಮುಂದು)

(792) 19.08.2025 3.50 ಹೆಚ್‌ವಿ.ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ ನಾಗರಾಜು(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ತಾವು ಯಾವಾಗಲು ಈಗ ನಡೆಯುವಂತಹ ಚುನಾವಣೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿರುತ್ತೀರಿ, ಮೊದಲು ನಾವು ಚುನಾವಣೆಗೆ ಹೋಗಬೇಕಾದರೆ, ಜನರೇ ನಮಗೆ ದುಡ್ಡು ಕೊಟ್ಟು ಓಟು ಹಾಕುತ್ತಿದ್ದರು, ಈಗ ನಾವು ದುಡ್ಡು ಕೊಟ್ಟರೂ ಸಹ ಜನ ಓಟ್ ಹಾಕದೇ ಇರುವಂತಹ ಪರಿಸ್ಥಿತಿಗೆ ಬಂದಿದ್ದೇವೆ

ಎಂದು ಬಹಳ ಬೇಸರವನ್ನು ವ್ಯಕ್ತಪಡಿಸುತ್ತಿದ್ದ ಪ್ರಸಂಗವನ್ನು ಸಹ ನಾವು ನೋಡಿದ್ದೇವೆ. ತಾವು ಹೇಳಿರುವಂತಹ ಮಾತುಗಳನ್ನು ಇಲ್ಲಿ ಕುಳಿತಿರುವ ಎಲ್ಲ ಜನನಾಯಕರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜನತಂತ್ರ ವ್ಯವಸ್ಥೆಯಲ್ಲಿ we have to bring electoral reforms in such a way that ಮೌಲ್ಯಾಧಾರಿತ ರಾಜಕಾರಣ ಮಾಡುವಂತಹ ದಿನಗಳು ಹತ್ತಿರ ಬರಲಿ ಎನ್ನುವ ಆಶಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಭಾಷೆಯ ವಿಚಾರವಾಗಿ ಹೇಳಬೇಕಾದರೆ, ತಾವು ಆಂಗ್ಲ ಮತ್ತು ಹಿಂದಿ ಭಾಷೆಗಳನ್ನು ಸ್ವಲ್ಪ ಮಟ್ಟಿಗೆ ಮಾತನಾಡಿ, ಕನ್ನಡ ಭಾಷೆಯನ್ನು ಬಹಳ ಸುಲಲಿತವಾಗಿ ಮಾತನಾಡುತ್ತೀರಿ. ವಚನಗಳನ್ನು ಹೇಳುವುದು ಮತ್ತು ಬಸವಣ್ಣನವರ ತತ್ವಗಳನ್ನು ಎಲ್ಲದರಲ್ಲಿಯೂ ಅಳವಡಿಸಿಕೊಳ್ಳುವಂತಹ ಪ್ರಯತ್ನವನ್ನು ತಾವು ಮಾಡಿದ್ದೀರಿ. ಎಲ್ಲ ಸದಸ್ಯರಿಗೂ ಅನುಭವ ಮಂಟಪದ ವಿಚಾರಧಾರೆಗಳನ್ನು ಛಾಯಚಿತ್ರವನ್ನಾಗಿ ಮಾಡಿ ಕೊಟ್ಟು "ನಿಮ್ಮ ಕಛೇರಿಗಳಲ್ಲಿ ಹಾಕಿಕೊಳ್ಳಿ. ಬಸವಣ್ಣನವರ ಆದರ್ಶಗಳನ್ನು ಮತ್ತು ತತ್ವಗಳನ್ನು ಮೈಗೂಡಿಸಿಕೊಳ್ಳಿ" ಎನ್ನುವ ಮಾತನ್ನು ಹೇಳಿದ್ದೀರಿ. ತಾವು ನಮ್ಮ ದೇಶದ ಮತ್ತು ರಾಜ್ಯದ ಇತಿಹಾಸವನ್ನು ಪ್ರತಿಬಿಂಬಿಸುವಂತಹ ಜನತಂತ್ರ ವ್ಯವಸ್ಥೆಗೆ ಮಾದರಿಯಾಗಿರುವ ಸರಳ ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದೀರಿ, ಈ ಜನತಂತ್ರ ವ್ಯವಸ್ಥೆಯಲ್ಲಿ ನಾವುಗಳು ನಾಯಕರಾಗಿ ಬೆಳೆಯಬೇಕಾದರೆ, ಏನಾದರೂ ಕಲಿಯಬೇಕಾದರೆ, ಇಲ್ಲಿ ಕುಳಿತುಕೊಂಡಿರುವ ಸಚಿವರಾದಿಯಾಗಿ ಎಲ್ಲರಿಗೂ ತಾವು ಆದರ್ಶರಾಗುತ್ತೀರಿ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ವ್ಯಕ್ತಿತ್ವದಿಂದ ನಾವು ನಾಯಕರಾಗಬೇಕೇ ಹೊರತು ಹಣಬಲದಿಂದ ಅಥವಾ ತೋಳುಬಲದಿಂದ ನಾವು ನಾಯಕರಾದರೇ ಹೆಚ್ಚು ದಿನ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಸತ್ಯ ಪ್ರಾಮಾಣಿಕತೆ ಮತ್ತು ಬೇರೆಯವರಿಗೆ ಮಾದರಿಯಾಗುವಂತಹ ಮನುಷ್ಯತ್ವವನ್ನು ಪ್ರತಿಪಾದನೆ ಮಾಡುವಂತಹ ನಾಯಕರಾಗುವ ರೀತಿಯಲ್ಲಿ ನಮ್ಮನ್ನು ಬೆಳೆಸುವುದಕ್ಕೆ ಪ್ರಯತ್ನಪಡುತ್ತಿರುವ ತಾವು ಕಳೆದ 45 ವರ್ಷಗಳಿಂದ ಈ ಸದನದ ಸದಸ್ಯರಾಗಿ ಕಾರ್ಯವನ್ನು ನಿರ್ವಹಿಸಿದ್ದೀರಿ.

ಈಗ ಕೆಲವು ನಿಮಿಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಅವರು "50 ವರ್ಷಗಳ ಕಾಲ ನೀವು ಅದೇ ಜಾಗದಲ್ಲಿ ಕುಳಿತುಕೊಳ್ಳಬೇಕು ಬಸವರಾಜ ಹೊರಟ್ಟಿ" ಎನ್ನುವ ಮಾತನ್ನು ಹೇಳಿದ್ದರು, ಆಗ ನಾನು ಕೂಡ ಅವರ ಜೊತೆಗಿದ್ದೆ. ತಾವು 50 ವರ್ಷಗಳ ಕಾಲ ಮೇಲ್ಮನೆಯ ಸದಸ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಬೇಕೆನ್ನುವ ಅಭಿಲಾಷೆಯನ್ನು ಈ ರಾಜ್ಯದ ಮುಖ್ಯಮಂತ್ರಿಗಳು ವ್ಯಕ್ತಪಡಿಸಿರುತ್ತಾರೆ. ಒಬ್ಬ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಬೇಕಾದರೆ, ಎಷ್ಟು ಸುದೀರ್ಘವಾಗಿರುವ ಅನುಭವವನ್ನು ಪಡೆದುಕೊಂಡಿರುವವರು ಮತ್ತು ಇನ್ನೊಬ್ಬರಿಗೆ ಆದರ್ಶವಾಗಿರುವ ನಾಯಕತ್ವವನ್ನು ನಮ್ಮ ರಾಜ್ಯ ತಮ್ಮಲ್ಲಿ ಕಂಡಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ತಮ್ಮ ನಾಯಕತ್ವ ಗುಣವಿರಬಹುದು, ವರ್ಣರಂಜಿತ ಜೀವನವಿರಬಹುದು ಅಥವಾ ತಮ್ಮ ಅನುಭವಗಳು ನಮಗೆ ಆದರ್ಶವಾಗಿರುತ್ತವೆ. ದೇವರು ತಮಗೆ ಒಳ್ಳೆಯ ಆರೋಗ್ಯ, ಐಶ್ವರ್ಯ ನೀಡಲಿ ತಾವು ಮತ್ತೊಮ್ಮೆ ಈ ಸದನಕ್ಕೆ ಆಯ್ಕೆಯಾಗಿ ಬನ್ನಿ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ॥ ಎಂ.ಆರ್.ಸೀತಾರಾಂ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ರಾಜಕಾರಣದಲ್ಲಿ ನಾವು ಈ ಮನೆಯಲ್ಲಿ ಬಹಳ ಅಪರೂಪದ ವ್ಯಕ್ತಿಯನ್ನು ನೋಡಿರುವುದರ ಜೊತೆಗೆ ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳಾಗಿ 8ನೇ ಬಾರಿ ಆಯ್ಕೆಗೊಂಡು ಸುಮಾರು 45 ವರ್ಷಗಳ ಕಾಲ ಈ ರಾಜ್ಯದಲ್ಲಿನ ಎಲ್ಲ ಶಿಕ್ಷಕ/ಶಿಕ್ಷಕಿಯರ ಸಮಸ್ಯೆಗಳನ್ನು ಪರಿಹರಿಸಿಕೊಂಡು, ಅವರ ಸೇವೆಯನ್ನು ಮಾಡುತ್ತಾ, ನಿನ್ನೆಗೆ 45 ವರ್ಷಗಳ ಸುದೀರ್ಘ ಸೇವಾ ಅವಧಿಯನ್ನು ಪೂರೈಸಿದ್ದೀರಿ. ಪ್ರಾಮಾಣಿಕ, ನೇರ ರಾಜಕಾರಣಿಯಾಗಿ ಸೇವೆಯನ್ನು ಸಲ್ಲಿಸಿರುವುದಕ್ಕೆ ನಾವೆಲ್ಲರೂ ತಮ್ಮಿಂದ ಪ್ರೇರಿತರಾಗಿರುತ್ತೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಜನತಾ ಪಕ್ಷದಲ್ಲಿ ತಾವು ಮಾನ್ಯ ಜೆ.ಹೆಚ್.ಪಟೇಲ್‌ರಂತಹವರು ಮತ್ತು ಇನ್ನಿತರರು ಹೆಚ್ಚಿನ ಸಂಖ್ಯೆಯಲ್ಲಿ ಮೌಲ್ಯಾಧಾರಿತ ರಾಜಕಾರಣದ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡಿದ್ದೀರಿ. ಆಗ ತಾವು ಅವರ ನಾಯಕತ್ವದಲ್ಲಿ ಹೆಚ್ಚಿನ ರೀತಿಯಲ್ಲಿ ಜನ ಸೇವೆಯನ್ನು ಮಾಡಿದ್ದೀರಿ. ನಾನು ತಮ್ಮನ್ನು ಏತಕ್ಕೋಸ್ಕರ ಪ್ರಶಂಸೆ ಮಾಡುತ್ತೇನೆಂದರೆ, ಬಹಳ ಜನ ರಾಜಕಾರಣಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ, ಸಾರ್ಥಕವಾದ ಸೇವೆ ಮಾಡುವವರ ಸಂಖ್ಯೆ ಬಹಳ ಕಡಿಮೆ ಇದೆ. ನನ್ನನ್ನು ಸೇರಿಸಿಕೊಂಡು ನಾನು ಹೇಳುತ್ತಿದ್ದೇನೆ. ಸಾರ್ಥಕವಾಗಿ ಸೇವೆ ಮಾಡುವ ಜನರನ್ನು ಅವಲಂಬಿಸಿಕೊಂಡು ಅವರನ್ನು ನೋಡಿಕೊಂಡು ನಡೆದಾಗ, ನಾವು ಸಹ ಜನರ ಮುಚ್ಚುಗೆಗೆ ಪಾತ್ರರಾಗುತ್ತೇವೆ ಎನ್ನುವುದು ನಮ್ಮ ದೃಢವಾದ ನಂಬಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತಾವು ಹುಬ್ಬಳ್ಳಿ-ಧಾರವಾಡ ಜಿಲ್ಲೆಯಲ್ಲಿ ಬಹಳಷ್ಟು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದರ ಜೊತೆಗೆ ಬಹಳಷ್ಟು ಶಿಕ್ಷಣ ಸಂಸ್ಥೆಗಳಿಗೆ ಧನ ಸಹಾಯ ಮಾಡಿರುವುದನ್ನು ನಾವು ಸಹ ಕಣ್ಣಾರೆ ನೋಡಿದ್ದೇವೆ. ನಾವುಗಳು ಬೆಳಗಾವಿ ಅಧಿವೇಶನಕ್ಕೆ ಬಂದಂತಹ ಸಂದರ್ಭದಲ್ಲಿ ತಾವು ಕಟ್ಟಿ ಬೆಳೆಸಿರುವಂತಹ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಮತ್ತು ಕೌಶಲ್ಯಾಭಿವೃದ್ಧಿ ವಲಯಗಳನ್ನು ನೋಡಿದ್ದೇವೆ. ತಾವು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದೀರಿ. ನಮ್ಮ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನಸಭೆಯ ಸದಸ್ಯರುಗಳನ್ನು ಒಳಗೊಂಡಂತೆ ಹೆಚ್ಚಿಗೆ ಸಾರ್ಥಕವಾದ ಸೇವೆ ಸಲ್ಲಿಸಿರುವವರು ಯಾರಾದರು ಇದ್ದರೆ, ಅದರಲ್ಲಿ ತಾವು ಸಹ ಒಬ್ಬರು ಎನ್ನುವ ಮಾತನ್ನು ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸದನ ನಡೆಸುವಾಗ ಬಹಳಷ್ಟು ಸಂದರ್ಭಗಳಲ್ಲಿ ಗೊಂದಲಗಳಾಗುತ್ತವೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಜಟಾಪಟಿಗಳಾಗುತ್ತವೆ. ಇವೆಲ್ಲವುಗಳನ್ನು ಸರಿತೂಗಿಸಿಕೊಂಡು ಸದನವನ್ನು ಸುಲಲಿತವಾಗಿ ನಡೆಸಿಕೊಂಡು ಹೋಗುವಂತಹ ಚಾಕಚಕ್ಯತೆ ತಮ್ಮೊಬ್ಬರಿಗೆ ಇರುವುದೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ

ಎಂ.ನಾಗಾರಜುರವರು ಮಾತನಾಡುವಾಗ, ತಾವು ಇನ್ನೂ ಈ ಮನೆಯ ಸಭಾಪತಿಗಳಾಗಿ ಮುಂದುವರೆಯಬೇಕೆನ್ನುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು " ಈಗಾಗಲೇ 45 ವರ್ಷಗಳ ಸೇವೆಯನ್ನು ಸಲ್ಲಿಸಿದ್ದೀರಿ, ಇನ್ನೂ 5 ವರ್ಷಗಳ ಕಾಲ ಅಂದರೆ, ಒಟ್ಟಾರೆ 50 ವರ್ಷಗಳ ಕಾಲ ತಾವು ಈ ಸದನದ ಸದಸ್ಯರಾಗಿ ಈ ರಾಜ್ಯದ ಜನರ ಮತ್ತು ಶಿಕ್ಷಕರಿಗೆ ಸೇವೆಯನ್ನು ಸಲ್ಲಿಸಿ, ತಮ್ಮ ಹೆಸರು ಅಚ್ಚಳಿಯದಂತೆ ಮಾಡಿಕೊಳ್ಳಿ ಎನ್ನುವುದು ನಮ್ಮ ಆಶಯವೂ ಆಗಿದೆ. ತಮ್ಮ ರಾಜಕೀಯ ವೃತ್ತಿ ಜೀವನವನ್ನು 50 ವರ್ಷಗಳಷ್ಟು ಮಾಡಿ ಮುಗಿಸಿದರೆ. ಮುಂದೆ ಯಾರೂ ಈ ದಾಖಲೆಯನ್ನು ಸರಿಗಟ್ಟುವುದಕ್ಕೆ ಆಗುವುದಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. 50 ವರ್ಷಗಳನ್ನು ಪೂರೈಸುತ್ತೀರಿ ಎನ್ನುವ ವಿಶ್ವಾಸ ನನಗಿದೆ. ನೇರ, ದಿಟ್ಟ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಎಲ್ಲ ಶಾಸಕರು ನಿಮ್ಮನ್ನು ಆದರ್ಶವಾಗಿಟ್ಟುಕೊಂಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಶಿಕ್ಷಕ ಶಿಕ್ಷಕಿಯರ ಸೇವೆ ಮಾಡುವುದು ಬಹಳ ಕಷ್ಟದ ಕೆಲಸವಾಗಿದೆ. ಮಾನ್ಯ ಮಧು ಬಂಗಾರಪ್ಪನವರು ಶಿಕ್ಷಣ ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಈ ಕಷ್ಟ ಗೊತ್ತಾಗುತ್ತಿದೆ. ತಾವು ಮೊದಲಿನಿಂದಲೂ ಇದರಲ್ಲಿ ನುರಿತವರಾಗಿದ್ದೀರಿ. ಕಷ್ಟವಾದರೂ ಸಹ ಜನರ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ದೀರ್ಘಾವಧಿ ಜನಪರ ಸೇವೆಯನ್ನು ಮಾಡುತ್ತಿರುವ ತಾವು "ಇನ್ನೂ ದೀರ್ಘಕಾಲ ಈ ಮನೆಯ ಸಭಾಪತಿಗಳಾಗಿ ಜನಗಳ ಸೇವೆ ಮಾಡಬೇಕು" ಎಂದು ನಾನು ಮತ್ತು ವಿಧಾನ ಪರಿಷತ್ತಿನ ಎಲ್ಲ ಸದಸ್ಯರುಗಳು ಭಗವಂತನಲ್ಲಿ ಪ್ರಾರ್ಥಿಸಿ, ತಮಗೆ ಹೃತ್ಪೂರ್ವಕವಾಗಿ ಹಾರೈಸುತ್ತಿದ್ದೇವೆ. ಇಷ್ಟು ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ॥ ಡಿ.ತಿಮ್ಮಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕಾಯಕಯೋಗಿ ಬಸವಣ್ಣನವರು "ಹೊಗಳ ಹೊಗಳ ಹೊನ್ನ ಶೂಲಕ್ಕೆ ಏರಿಸಿದರಯ್ಯ" ಎಂದು ಹೇಳಿದ್ದಾರೆ. ತಾವು ಆ ಹೊಗಳಿಕೆಗೆ ಪಾತ್ರರಾಗಿದ್ದೀರಿ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಇಲ್ಲೇ ಕುಳಿತುಕೊಂಡು ನಾನು ತಮಗಾಗಿ ಒಂದು ಸಣ್ಣ ಕವನವನ್ನು ಬರೆದಿದ್ದೇನೆ;

**<u>ಸಭಾಪತಿ</u>**

ಸ - ಸರಳ ಸಜ್ಜನಿಕೆ ಸದಾ ಸಮಾಜ ಮುಖಿ ಸದಾ ಹಸನ್ಮುಖಿ ಸಭಾಪತಿಗಳು ಆಗಿರುವ ತಾವು;

ಭಾ – ಬಾಳಲ್ಲಿ ಬಾಧಕರಾಗದೇ ಬಾಳಲ್ಲಿ ಸಾಧಕರಾಗಿ ಭಾವನೆಗಳಿಗೆ ಸ್ಪಂಧಿಸಿದ
ಭಾವನಮೂರ್ತಿ ನಮ್ಮ ಸಭಾಪತಿಗಳು;

ಪ - ಪಕ್ಷಬೇಧವಿಲ್ಲದೆ ಪಾರದರ್ಶಕತೆಯಿಂದ ಪರಿಪಕ್ವವಾಗಿ ಪರಿಷತ್ತಿನ ಸೇವೆ ಮಾಡಿದ ಇತಿಹಾಸ
ನಿರ್ಮಿಸಿದ ಸಭಾಪತಿಗಳು;

ತಿ – ತಿಳುವಳಿಕೆಯಲ್ಲಿ ತುಂಬಿದ ಕೊಳದಂತೆ ತೀವ್ರವಾಗಿ ಶಿಸ್ತು ಸಂಯಮ ಸಾರಿದ
ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು;

(ಮುಂದು)

(793) 19.8.2025 4.00 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**ಡಾ: ಡಿ.ತಿಮ್ಮಯ್ಯ (ಮುಂದು)**

ಬಸವಾದಿ ಬಸವ; ರಾಜಾಧಿರಾಜ ಹೊರಟ್ಟಿಯವರಿಗೆ ನನ್ನ ಅಭಿನಂದನೆಗಳು. ತಾವು ಸಲ್ಲಿಸಿದ ಸೇವೆಯ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿದ್ದಾರೆ. ಈಗಾಗಲೇ ತಾವು ಇತಿಹಾಸ ನಿರ್ಮಿಸಿದ್ದೀರಿ. ಆ ಇತಿಹಾಸವನ್ನೂ ಮುರಿದು ಇನ್ನೂ ಮುಂದೆ ಹೋಗಬೇಕು. ನಿಮಗೆ ಆ ದೇವರು ಆರೋಗ್ಯ ಕೊಡಲಿ ಎಂದು ಹಾರೈಸಬಯಸುತ್ತೇನೆ. ಧನ್ಯವಾದಗಳು.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಕಳೆದ 15ನೇ ತಾರೀಖು, ಸ್ವಾತಂತ್ರ್ಯೋತ್ಸವದ ದಿನ ನಮ್ಮೂರಿನ ಪ್ರೌಢಶಾಲೆಗೆ ಧ್ವಜಾರೋಹಣಕ್ಕೆಂದು ಹೋಗಿದ್ದೆ. ಆಗ ನಿಮ್ಮ ನೆನಪು ಬಂತು. ಏಕೆಂದರೆ, ತಾವು ಶಿಕ್ಷಣ ಸಚಿವರಾಗಿದ್ದಾಗ, ಅತ್ಯಂತ ಕಡಿಮೆ ಶಾಲೆ ಇರುವ ಜಾಗದಲ್ಲಿ ಅಂದರೆ ನಮ್ಮ ಎಲ್ಲಾಪುರ ತಾಲ್ಲೂಕಿನ ಮೂರು ಭಾಗಗಳಲ್ಲಿ ಪ್ರೌಢಶಾಲೆಯನ್ನು ಕೊಟ್ಟಿದ್ದೀರಿ. ಆ ಭಾಗದಲ್ಲಿ ಪ್ರೌಢಶಾಲೆ ಎಂದು ಹೇಳಿದರೆ ಸಾಕು ಎಲ್ಲರಿಗೂ ಮಾನ್ಯ ಹೊರಟ್ಟಿಯವರು ನೆನಪಾಗುತ್ತಾರೆ. ಅವರು ಸಭಾಪತಿಯಾಗಿರುವಾಗ ನಾವು ಈ ಸದನದಲ್ಲಿ ಸದಸ್ಯರಾಗಿದ್ದೇವೆ. ಅವರು ಪ್ರಾರಂಭಿಸಿದ ಶಾಲೆಯಲ್ಲಿ ಧ್ವಜಾರೋಹಣದ ಅವಕಾಶ ಸಿಕ್ಕಾಗ ನಾನು ನಿಮ್ಮನ್ನು ಬಹಳ ನೆನಪಿಸಿಕೊಂಡೆ. ವಿಧಾನ ಪರಿಷತ್ತಿನ ಸದಸ್ಯರಾದಗಿನಿಂದ ನಮಗೆ ನಿರಂತರವಾಗಿ ಸಿಗುತ್ತಿರುವವರು ಮತ್ತು ನಮ್ಮ ಕೆಲಸಗಳಿಗೆ ಸ್ಫೂರ್ತಿಯಾಗಿರುವವರು ನೀವು ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ತಾಲ್ಲೂಕಿನಲ್ಲಿ ಮಕ್ಕಳು ಶಾಲೆಗೆ ಹೋಗಬೇಕೆಂದರೆ 10-12 ಕಿ.ಮೀ. ದೂರ ನಡೆದುಕೊಂಡು ಹೋಗಬೇಕಾಗಿತ್ತು. ಆಗ ಇನ್ನು ಮಕ್ಕಳಿಗೆ ಸೈಕಲ್‌ಗಳನ್ನು ಕೊಟ್ಟಿರಲಿಲ್ಲ. ನೀವು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಹಿತ್ತಲಳ್ಳಿ, ನಂದೊಳ್ಳಿ ಮತ್ತು ಉಮ್ಮಚಗಿ ಎನ್ನುವ ಊರುಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿದಿರಿ. ಅದರ ಪರಿಣಾಮ ಆ ಭಾಗದ ಎಲ್ಲಾ ವಿದ್ಯಾರ್ಥಿಗಳು, ವನವಾಸಿ ಮಕ್ಕಳು ಸೇರಿದಂತೆ ಎಲ್ಲರೂ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸುವುದಕ್ಕೆ ಅನುಕೂಲವಾಯಿತು. ನಾನು ಸದನ ಪ್ರವೇಶ ಮಾಡಿದಾಗ ತಾವು ಶಾಸಕರಾಗಿದ್ದರಿ. ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಸಭಾಪತಿಯವರಾಗಿದ್ದರು. ನಿಮ್ಮನ್ನು ಮೊದಲನೆ ಸಲ ನೋಡಿದಾಗ ನನಗೆ ಖುಷಿಯಾಯಿತು. ನಮ್ಮ ಊರ ಕಡೆ ಮಾನ್ಯ ಹೊರಟ್ಟಿಯವರ ಹೆಸರು ಪ್ರಸಿದ್ಧವಾಗಿತ್ತು. ನಾನು ಒಂದು ಮಾತು ಹೇಳಿದರೆ ಅದು ಜಾಸ್ತಿ ಆಗಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ತಾವು ಅನಿವಾರ್ಯ ಇದ್ದಾಗ ಆ ಪೀಠದಿಂದ ಎದ್ದು ಹೋಗುತ್ತೀರಿ. ಆ ಸಂದರ್ಭದಲ್ಲಿ ಸದನ ಸ್ವಲ್ಪ ಸಪ್ಪೆ ಎನಿಸುತ್ತದೆ. ಆ ಪೀಠಕ್ಕೆ ತಾವು ಅಷ್ಟು ಗೌರವವನ್ನು ತುಂಬಿದ್ದೀರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೆ, ನನ್ನ ಅವದಿ ಒಂದು

ವರ್ಷ ಮಾತ್ರ ಇದೆ. ಕನಿಷ್ಠ ಒಂದು ವರ್ಷದವರೆಗಾದರೂ ತಾವು ಸಭಾಪತಿಗಳಾಗಿ ಮುಂದುವರೆಯಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿದೆ. ತಮ್ಮ ಮಾರ್ಗದರ್ಶನದಲ್ಲಿ ಈ ಸದನದಲ್ಲಿ ಇರುವುದಕ್ಕೆ, ಸ್ವಲ್ಪ ಕಲಿಯುವುದಕ್ಕೆ ಅನುಕೂಲವಾಯಿತು. ಮುಂದೆ ಕೂಡ ತಮ್ಮ ಮಾರ್ಗದರ್ಶನ ಇರಲಿ ಎಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ (ನಾನನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಯಾವುದೇ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಹೊಗಳಲಿಕ್ಕೆ 2 ನಿಮಿಷ ಸಾಕಾಗುವುದಿಲ್ಲ. ಆದರೂ ಕೂಡ, ಅನ್ನ ಬೆಂದಿದೆಯೋ ಇಲ್ಲವೋ ಎಂದು ನೋಡುವುದಕ್ಕೆ ಒಂದು ಅಗಳು ಸಾಕು ಎನ್ನುವ ಮಾತಿದೆ. ನಿಮ್ಮ "ಅಪ್ಪ" ಎನ್ನುವ ಎರಡು ಶಬ್ದಗಳು ನಿಮ್ಮ ವ್ಯಕ್ತಿತ್ವವನ್ನು ಪರಿಚಯಿಸುವುದಕ್ಕೆ ಸಾಕಾಗುತ್ತದೆ. ತಾವು ಶಿಕ್ಷಣ ಸಚಿವರಾಗಿದ್ದಾಗ ನಾನು ಮೊದಲ ಬಾರಿಗೆ ತಮ್ಮ ಬಗ್ಗೆ ತಿಳಿದುಕೊಂಡೆ. ಶಿಕ್ಷಣ ಸಚಿವರಾಗಿ ತಾವು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ; ನಾನು ಅವೆಲ್ಲವನ್ನೂ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮೊದಲ ಬಾರಿಗೆ ಈ ಸದನಕ್ಕೆ ಬಂದಾಗ ತಾವು ಈ ಭಾಗದಲ್ಲಿ ಕುಳಿತುಕೊಂಡಿದ್ದೀರಿ; ನಾನು ಆ ಭಾಗದಲ್ಲಿ ಕುಳಿತುಕೊಂಡಿದ್ದೆ. ನಾನು ಬಹಳ ಮೌನವಾಗಿ ಎಲ್ಲವನ್ನೂ ವೀಕ್ಷಣೆ ಮಾಡುತ್ತಿದ್ದೆ. ಎರಡು-ಮೂರು ದಿನ ಆದಮೇಲೆ, ನೀವು ಬಹಳ ಚೆನ್ನಾಗಿ ವೀಕ್ಷಣೆ ಮಾಡುತ್ತಿದ್ದೀರಿ; ವೀಕ್ಷಣೆ ಮಾಡಿ ಮಾತನಾಡುವುದಕ್ಕೆ ಶುರು ಮಾಡಿ ಎಂದು ಹೇಳಿದಿರಿ. ನಾನು 6 ತಿಂಗಳ ಕಾಲ ಸದನದಲ್ಲಿ ಮಾತನಾಡದೆ ಸುಮ್ಮನೆ ಕುಳಿತುಕೊಂಡಿದ್ದೆ. ಇವತ್ತು ತಮ್ಮ ಬಗ್ಗೆ ಅನೇಕರು ಅನೇಕ ಅಭಿಪ್ರಾಯಗಳನ್ನು ಹೇಳಿದ್ದಾರೆ. ಎಲ್ಲರೂ, ಒಂದೇ ಕ್ಷೇತ್ರದಿಂದ, ಒಂದೇ ಮತದಾರರಿಂದ ಮತ ಹಾಕಿಸಿಕೊಂಡು ಹೇಗೆ ನಿರಂತರವಾಗಿ ಗೆಲ್ಲುತ್ತಿದ್ದೀರಿ ಎಂದು ಹೇಳುತ್ತಾರೆ. ನಮ್ಮ ಹಿರಿಯರು, ಪೂರ್ತಿ ಕಹಿಯಾಗಬೇಡ; ಸಮಾಜ ನಿನ್ನನ್ನು ಉಗುಳಿಬಿಡುತ್ತದೆ, ಪೂರ್ತಿ ಸಿಹಿ ಆಗಬೇಡ; ಸಮಾಜ ನಿನ್ನನ್ನು ನುಂಗಿಬಿಡುತ್ತದೆ ಎಂದು ಹೇಳಿದರು. ಹಾಗಾಗಿ ತಾವು ಕಹಿಯೂ ಆಗದೇ, ಸಿಹಿಯೂ ಆಗದೇ, ಸಮಾನತೆಯ ಕಾರಣ ದೀರ್ಘಾವಧಿಯಲ್ಲಿ ಒಂದೇ ಕ್ಷೇತ್ರದಿಂದ ಆರಿಸಿ ಬಂದಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಕೆಲಸಗಳನ್ನು ತಾವು ಮಾಡಿದ್ದೀರಿ. ಜೀವನಪೂರ್ತಿ ಕೆತ್ತಿದರೂ ಪರಿಪೂರ್ಣವಾಗದ ಶಿಲೆ ಯಾವುದಾದರೂ ಇದ್ದರೆ ಅದು ಮನುಷ್ಯ. ಇಷ್ಟು ಜನ ಎಲ್ಲರೂ ಹೇಳಿದ ನಂತರ ನಿಮಗೆ, ನಾನು ಪರಿಪೂರ್ಣನಾಗಿದ್ದೇನೆ, ನನ್ನ ಎಲ್ಲಾ ಕೆಲಸಗಳು ಮುಗಿಯಿತು ಎಂದು ನಿಮಗೆ ಅನಿಸಬಹುದು. ತಮ್ಮ ಕೆಲಸ ಇನ್ನೂ ಬಾಕಿ ಇದೆ. ಬಹಳಷ್ಟು ಕೆಲಸಗಳನ್ನು ರಾಜಕೀಯ ಕ್ಷೇತ್ರದಲ್ಲಿ ಮಾಡಬೇಕಿದೆ, ಸಮಾಜಕ್ಕೆ ಸೇವೆ ಮಾಡಬೇಕಿದೆ. ಆ ಭಗವಂತ ತಮಗೆ ಎಲ್ಲಾ ಶಕ್ತಿಗಳನ್ನು ಕೊಡಲಿ ಎಂದು ನಿಮ್ಮ ಸಹೋದರಿಯಾಗಿ ಬೇಡಿಕೊಳ್ಳುತ್ತೇನೆ. ನನಗೂ ತಾವು ಎಲ್ಲಾ ರೀತಿಯ ಪ್ರೋತ್ಸಾಹ ಕೊಟ್ಟಿದ್ದೀರಿ. ನಾನು ತಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನಾನು 1991ರಲ್ಲಿ ಬಿಎಡ್ ಮುಗಿಸಿ, ಎಬಿವಿಪಿಯ ಪೂರ್ಣಾವಧಿ ಕಾರ್ಯಕರ್ತನಾಗಿ ಹುಬ್ಬಳ್ಳಿಗೆ ಹೋದೆ. ಅಲ್ಲಿ ನಮ್ಮ ಆಫೀಸ್ ಎದುರುಗಡೆ ಲ್ಯಾಮಿಂಗ್‌ಟನ್ ಸ್ಕೂಲ್ ಇತ್ತು. ಮಾನ್ಯ ಬಸವರಾಜ

ಹೊರಟ್ಟಿಯವರೆಂದರೆ ಲ್ಯಾಮಿಂಗ್‌ಟನ್ ಸ್ಕೂಲ್ ಎಂದು, ಲ್ಯಾಮಿಂಗ್‌ಟನ್ ಸ್ಕೂಲ್ ಎಂದರೆ ಮಾನ್ಯ ಬಸವರಾಜ ಹೊರಟ್ಟಿ ಎಂದು ಹೇಳುವುದು ರೂಢಿಯಾಗಿತ್ತು. ಅವರು ದೈಹಿಕ ಶಿಕ್ಷಕರಾಗಿದ್ದಾಗಿನಿಂದಲೂ ನನಗೆ ಗೊತ್ತು. ಇಂಗ್ಲೀಷ್ ಮತ್ತು ಗಣಿತದಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಫೇಲ್ ಆಗುತ್ತಿದ್ದರು. ಅವರು ಪಾಸ್ ಆಗಬೇಕು ಎನ್ನುವ ಕಾರಣದಿಂದ ಇವರ ಹತ್ತಿರ ಹೇಳಿಸಿ ಆ ಶಿಕ್ಷಕರನ್ನು ಕೋಚಿಂಗ್ ಕ್ಲಾಸ್‌ಗೆ ಬರುವ ಹಾಗೆ ಮಾಡುತ್ತಿದ್ದೆವು. ಅಂದರೆ, ಶಿಕ್ಷಣದ ಬಗ್ಗೆ ಅವರು ಸಪೋರ್ಟ್ ಮಾಡುತ್ತಿದ್ದರು. ಶಿಕ್ಷಣ ಕ್ಷೇತ್ರದಿಂದ ಬಂದಿರುವ ಅವರು 45 ವರ್ಷಗಳಿಂದ ಈ ಮನೆಯಲ್ಲಿ ಇರುವುದು ಎಂದರೆ ಅದು ಹುಡುಗಾಟದ ಮಾತಲ್ಲ. ಇಂಗ್ಲೀಷ್‌ನಲ್ಲಿ, Experience makes man perfect ಎನ್ನುವ ಒಂದು ಮಾತಿದೆ. ಹಾಗೆಯೇ, ಬಹಳ ಅನುಭವದ ಮೂಸೆಯಿಂದ ಎಲ್ಲವನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವಂತಹ, ಮಂಕುತಿಮ್ಮನ ಕಗ್ಗದಲ್ಲಿ "ಎಲ್ಲರೊಳಗೊಂದಾಗೋ ಮಂಕುತಿಮ್ಮ" ಎಂದು ಹೇಳುವ ಹಾಗೆ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೀರಿ. ಕೆಲವರು ಹೆಚ್ಚು ಮಾತನಾಡಬಹುದು; ಕೆಲವರು ಕಡಿಮೆ ಮಾತನಾಡಬಹುದು. ಕೆಲವರು ಚೆನ್ನಾಗಿ ಮಾತನಾಡಬಹುದು ಅಥವಾ ಚೆನ್ನಾಗಿ ಮಾತನಾಡದೇ ಇರಬಹುದು. ಒಟ್ಟಾರೆಯಾಗಿ ಎಲ್ಲರನ್ನೂ ಕೂಡ ಒಟ್ಟಿಗೆ ತೆಗೆದುಕೊಂಡು ಹೋಗುವ ಚಾಕಚಕ್ಯತೆ ನಿಮ್ಮಲ್ಲಿ ಇದೆ. 45 ವರ್ಷಗಳನ್ನು ಇಲ್ಲಿ ಕಳೆದಿದ್ದಾರೆ. 50 ವರ್ಷಗಳನ್ನು ಪೂರ್ಣಗೊಳಿಸುತ್ತಾರೆ, ಈ ಕುರಿತು ಯಾರಿಗೂ ಸಂದೇಹ ಇಲ್ಲ. ಒಂದು ದೇಶದಲ್ಲಿ, ವಿಧಾನ ಪರಿಷತ್ತಿನಲ್ಲಿ 50 ವರ್ಷ ಪೂರ್ಣಗಳಿಸುವ ವ್ಯಕ್ತಿ ಅವರಾಗುತ್ತಾರೆ. 50 ವರ್ಷ ಪೂರ್ಣ ಮಾಡಲಿರುವ ನಮ್ಮ ಬಸವರಾಜ ಹೊರಟ್ಟಿ ಸಭಾಪತಿಯವರಿಗೆ ಎಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರಿಗೆ ಇನ್ನೂ ದೀರ್ಘ ಕಾಲ ಸೇವೆ ಮಾಡುವ ಅವಕಾಶ ಭಗವಂತ ಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈ ಸದನದ ಪರವಾಗಿ ತಮಗೆ ಅಭಿನಂದನೆ ಸಲ್ಲಿಸಬಯಸುತ್ತೇನೆ. ಎಲ್ಲರ ಧ್ವನಿಗೆ ನಾನೂ ಧ್ವನಿಗೂಡಿಸುತ್ತೇನೆ. ವಿಧಾನ ಪರಷತ್ತಿನ ಸದಸ್ಯರಾಗಿ, ಸಚಿವರಾಗಿ, ಉಪಸಭಾಪತಿಯಾಗಿ, ಸಭಾಪತಿಗಳಾಗಿ 45 ವರ್ಷಗಳು ಸುದೀರ್ಘವಾಗಿ ಕಾರ್ಯನಿರ್ವಹಿಸಿದ್ದೀರಿ. ಅದರಲ್ಲೂ ಶಿಕ್ಷಕರ ಕ್ಷೇತ್ರದಲ್ಲಿ ಮತ್ತೆ ಮತ್ತೆ ಗೆದ್ದು ಬರುವುದು, ಸೋಲಿಲ್ಲದ ಸರದಾರ ಎನಿಸಿಕೊಳ್ಳುವುದು ಸಾಮಾನ್ಯ ಸಂಗತಿಯಲ್ಲ. ಮೇಷ್ಟ್ರ ರಾಜಕಾರಣ ಎನ್ನುವುದು ನಮ್ಮೆಲ್ಲರ ರಾಜಕಾರಣವನ್ನು ಮೀರಿಸುಂಥದ್ದಾಗಿದೆ. ಮೇಷ್ಟ್ರಗಳ ನಡುವೆ ರಾಜಕಾರಣದಲ್ಲಿ ಸೈ ಎನಿಸಿಕೊಳ್ಳಬೇಕಾದರೆ ನೀವು ಬ್ರಹ್ಮ ವಿದ್ಯೆಯನ್ನೇ ಕಲಿತಿರಬೇಕು. ನಿರಂತರವಾಗಿ ಗೆಲ್ಲುತ್ತಿರುವ ನಿಮ್ಮ ಗುಟ್ಟನ್ನು ನಮಗೂ ಒಂದು ಚೂರು ತಿಳಿಸಬೇಕು.

(ಮುಂದು)

(794) 19-8-2025 4.10 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-**

ನಿಮ್ಮ ಹತ್ತಿರ ನಾನು ಗುಟ್ಟು ಏನು ಎಂಬುದನ್ನು ಕಲಿತಿದ್ದರೆ ಆ ಸದನದಲ್ಲೇ ಇರುತ್ತಿದ್ದೆ. ಈ ಸದನಕ್ಕೆ ಬರುವುದಕ್ಕೇ ಆಗುತ್ತಿರಲಿಲ್ಲ. ನಾನು ತಮಗೆ ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ಆ ಗುಟ್ಟನ್ನು ನಮಗೂ ಸ್ವಲ್ಪ ಹೇಳಿಕೊಡಿ. ನಾನು ಇದನ್ನು ಲಘುವಾಗಿ ಹೇಳುತ್ತಿರುವುದಲ್ಲ, ಶಿಕ್ಷಕರ ಕ್ಷೇತ್ರದಲ್ಲಿ ಶಿಕ್ಷಕರ ಹತ್ತಿರ ಸರಿ ಅನಿಸಿಕೊಳ್ಳುವುದು ಇದೆಯಲ್ಲಾ ಇದು ಸಾಮಾನ್ಯ ಸಂಗತಿಯಲ್ಲ. ನಾವು ಊರಿಗೆ ಕೆಲಸ ಮಾಡಿದರೆ 'ಊರಿಗೆ ಕೆಲಸ ಮಾಡಿದ್ದೀಯಾ, ನಮಗೇನು ಮಾಡಿದ್ದೀಯಾ' ಎಂದು ಕೇಳುತ್ತಾರೆ. 'ಅವರಿಗೆ ಮಾಡಿದ್ದೀರಲ್ಲಾ ಅದು ಅವತ್ತಾಯಿತು, ಇವತ್ತಿನದೇನೂ' ಎಂದು ಕೇಳುತ್ತಾರೆ. ನಾವು right hand and left hand ಎಂದು ಅಂದುಕೊಂಡವರೇ right-left ಕಿತ್ತುಕೊಂಡು ಹೋಗಿರುತ್ತಾರೆ. ಆದರೆ, ನಾವು ಅಂದುಕೊಡಿರುತ್ತೇವೆ, ಇವರೇ ನಮ್ಮ right hand, ಇವರೇ ನಮ್ಮ ಜೊತೆಗೆ ಚುನಾವಣೆಗೆಲ್ಲಾ ಇರುತ್ತಾರೆ ಅಂದುಕೊಂಡಿರುತ್ತೇವೆ, ಆದರೆ, ಅವರೇ ಕಿತ್ತುಕೊಂಡು ಹೋಗಿರುತ್ತಾರೆ. ಅಂಥದ್ದರೊಳಗೆ ನಿರಂತರವಾಗಿ ನಿಮ್ಮ ಮತ ಗಳಿಕೆಯೇ ಹೆಚ್ಚು ಮಾಡಿಕೊಂಡು ಹೋಗುತ್ತಿದ್ದೀರಿ. ಜನಪ್ರಿಯವಾಗುವುದು ಸುಲಭ, ಆದರೆ ವಿಶ್ವಾಸಗಳಿಸುವುದು ಕಷ್ಟ. ಹಲವು ಕಾರಣಕ್ಕಾಗಿ ಜನಪ್ರಿಯರಾಗಬಹುದು. ಆದರೆ ವಿಶ್ವಾಸ ಉಳಿಸಿಕೊಳ್ಳುವುದಿದೆಯಲ್ಲಾ ಅದು ಸಾಮಾನ್ಯ ಸಂಗತಿಯಲ್ಲ. ಅದಕ್ಕೆ ನಾನು ಅದು ಬ್ರಹ್ಮ ವಿದ್ಯೆ ಎಂದು ಹೇಳಿದೆ. ಅದಕ್ಕೆ ನಾನು ನಿಮ್ಮನ್ನು ಗುರುವಾಗಿ ಸ್ವೀಕಾರ ಮಾಡಿದ್ದೇನೆ. ದಯಮಾಡಿ ಆ ಬ್ರಹ್ಮ ವಿದ್ಯೆಯನ್ನು ಹೇಳಿಕೊಡಿ. ನೂರು ಕಾಲ ಸುಖವಾಗಿರಿ, 50 ವರ್ಷಗಳು ಮಾತ್ರ ಅಲ್ಲ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರ ವಿರುದ್ಧ ನೀವು ಚುನಾವಣೆಗೆ ನಿಂತುಕೊಳ್ಳಿ, ಆಗ ನಾನೇ ಹೇಳಿ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಭೋಜೇಗೌಡರು, ನಾವು ಒಂದೇ. ಈಗ ನಾವು ಎನ್‌ಡಿಎ ಆಗಿಬಿಟ್ಟಿದ್ದೇವೆ. ಹಾಗಾಗಿ ಈಗ ನಾವೆಲ್ಲಾ ಒಂದೇ. ನಮಗೆ ನೀವು ನೂರು ಕಾಲ ಮಾರ್ಗದರ್ಶನವನ್ನು ಮಾಡಬೇಕು. ಇವರೆಲ್ಲಾ 50 ವರ್ಷ ಎಂದು ಹೇಳುತ್ತಿದ್ದರು, 60ನೇ ವರ್ಷದ ಷಷ್ಠಾಬ್ಧಿಯನ್ನು ಈ ಸದನದ ಸದಸ್ಯರಾಗಿ ಆಚರಿಸುವಂತಾಗಬೇಕು ಎಂದು ನಾನು ಶುಭ ಹಾರೈಸಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಿ.ಟಿ.ರವಿಯವರೇ, ತಾವು ಗುಟ್ಟೇನು ಎಂದು ಕೇಳಿದ್ದೀರಿ. ಆ ಗುಟ್ಟು ಮಾನ್ಯ ಎಚ್.ಕೆ.ಪಾಟೀಲ್‌ರವರಿಗೆ ಮಾತ್ರ ಗೊತ್ತಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಎಚ್.ಕೆ.ಪಾಟೀಲ್‌ರವರು ಕೂಡ ಸೋಲು-ಗೆಲುವನ್ನು ಕಂಡಿರುವಂಥವರು. ನಾನೂ ಸೋಲು-ಗೆಲುವನ್ನು ಕಂಡಿರುವವನು. ಗೆಲುವನ್ನು ಕಂಡಿರುವುದು ಅವರು ಮಾತ್ರ. ಅವರಿಗೆ ನಮ್ಮ ತರಹ ಅಭ್ಯಾಸವಿಲ್ಲ. ಹಾಗಾಗಿ ಮಾನ್ಯ ಎಚ್.ಕೆ.ಪಾಟೀಲ್‌ರವರಿಗೂ ಗೊತ್ತಿದ್ದರೆ ಅವರು ಸೋಲು-ಗೆಲುವುಗಳ ಮಿಶ್ರಣ ಕಾಣುತ್ತಿರಲಿಲ್ಲ.

**ಶ್ರೀ ಸಲೀಂ ಅಹಮದ್:-** ಹಾಗಾದರೆ ಮಾನ್ಯ ಎಚ್.ಕೆ.ಪಾಟೀಲ್‌ರವರಿಗೂ ಗೊತ್ತಿಲ್ಲ ಎಂದಾಯಿತು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಈ ಸದನದಲ್ಲಿ ನಿಮ್ಮನ್ನು ನಾನು ಗುರುವಾಗಿ ಸ್ವೀಕಾರ ಮಾಡಿದ್ದೇನೆ. ದಯಮಾಡಿ ಆ ಗುಟ್ಟನ್ನು ಹೇಳಿಕೊಡಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಬಹಳ ಸಂತೋಷವಾಗುತ್ತಿದೆ. ಒಬ್ಬ ಶಿಕ್ಷಣ ಸಚಿವರಾಗಿ, ನೀವು ಈ ಸ್ಥಾನದಲ್ಲಿ ಕುಳಿತು, ಈ ರಾಜ್ಯದ ಮಕ್ಕಳ ಭವಿಷ್ಯವನ್ನು ಸೃಷ್ಟಿ ಮಾಡುವಂತಹ ಕೆಲಸವನ್ನು ಮಾಡಿದ್ದೀರಿ. ಅದೇ ರೀತಿ ಸಾಕಷ್ಟು ಸಚಿವರುಗಳು ಈ ಕೆಲಸವನ್ನು ಮಾಡಿದ್ದಾರೆ. ನೀವು ಹೇಳುತ್ತಿರುತ್ತೀರಿ, ಈ ಶಿಕ್ಷಣ ಇಲಾಖೆ ಏನು ಎಂದರೆ, ನಿಮಗೆ ಇಲ್ಲಿ ಹೇಳುವುದಕ್ಕೆ ಇಷ್ಟವಿಲ್ಲ, ಆದರೆ ನಾನು ಹೇಳುತ್ತೇನೆ. ಯಾರನ್ನಾದರೂ ಹಾಳು ಮಾಡಬೇಕು ಎಂದರೆ ಮಂತ್ರಿಗಳನ್ನು ಶಿಕ್ಷಣ ಸಚಿವರಾಗಿ ಮಾಡಿಬಿಟ್ಟರೆ ಅವರು ಆಟೋಮ್ಯಾಟಿಕ್ ಆಗಿ ಹಾಳಾಗುತ್ತಾರೆ ಎಂದು ಸ್ವಾಭಾವಿಕವಾಗಿ ಹೇಳುತ್ತಾರೆ. ಆದರೆ, ನನ್ನನ್ನು ತಿದ್ದಿ, ಮಧು ಇದು ಪುಣ್ಯದ ಕೆಲಸ ಎಂದು ನಮ್ಮ ತಂದೆ ಇಲ್ಲದಿರುವಂತಹ ಸಂದರ್ಭದಲ್ಲಿ ನೀವು ಒಬ್ಬರು ಚಿಕ್ಕಪ್ಪನ ರೀತಿಯಲ್ಲಿ ನಮ್ಮ ತಂದೆ ಸ್ಥಾನದಲ್ಲಿದ್ದು ನನಗೆ ಮಾರ್ಗದರ್ಶನವನ್ನು ನೀಡಿದ್ದೀರಿ. ನಮ್ಮ ತಂದೆ ಶ್ರೀ ಬಂಗಾರಪ್ಪನವರು ನಿಮಗೆ ಬಹಳ ಆತ್ಮೀಯರಾಗಿದ್ದರು. ಅದನ್ನು ನಿಮ್ಮ ಮಾತುಗಳಲ್ಲೇ ಹೇಳಬೇಕಾಗುತ್ತದೆ. ಆ ಸ್ಥಾನದಲ್ಲಿ ಚಿಕ್ಕಪ್ಪನ ರೀತಿಯಲ್ಲಿ ಮಾರ್ಗದರ್ಶನವನ್ನು ಕೊಡುತ್ತಿದ್ದೀರಿ. ಅದಕ್ಕೆ ನಾನು ವಿಶೇಷವಾಗಿ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರಿಗೆ ನಾನು ಬಹಳ ಕೃತಜ್ಞತೆಯನ್ನು ಹೇಳಬೇಕಾಗುತ್ತದೆ. ಏಕೆಂದರೆ, ನಾನು ಎಂಎಲ್ಎ ಆಗಿ ಅಲ್ಲೇ ಕೂರಿಸಿಬಿಟ್ಟಿದ್ದರೆ ನಾನು ನಿಮ್ಮ ಅನುಭವವನ್ನು ಹಂಚಿಕೊಳ್ಳುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಅದಕ್ಕೆ ನಾನು ಮಾನ್ಯ ಸಿದ್ದರಾಮಯ್ಯರವರಿಗೆ, ನಮ್ಮ ಪಕ್ಷದವರಿಗೆ ವಿಶೇಷವಾಗಿ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, 45 ವರ್ಷಗಳನ್ನು ಪೂರ್ಣ ಮಾಡಿದ್ದೀರಿ ಎಂದು ತಮ್ಮ ಬಗ್ಗೆ ಎಲ್ಲರೂ ಚೆನ್ನಾಗಿ ಮಾತನಾಡಿದರು. ಆದರೆ, ನಾನು ಇವತ್ತು ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನೀವು ಸೋತಿದ್ದೀರಿ! ನಿಮಗೆ ಅವಕಾಶಗಳು ಈ ಪ್ರೀತಿ, ವಿಶ್ವಾಸಗಳಿಂದ ಈ ಬೆಲ್ ಒಡೆಯುವುದಕ್ಕೆ ಅವಕಾಶಗಳು ಸಿಗಲಿಲ್ಲ. ಇವತ್ತು ನಾವು ಗೆದ್ದಿದ್ದೇವೆ! ನೀವು ಈ ಪೀಠಕ್ಕೆ ಬರೀ ಸಭಾಪತಿಗಳಲ್ಲ, ಏಕೆಂದರೆ ಇವತ್ತು ನಿಮಗೆ ಬೆಲ್ ಒಡೆಯುವುದಕ್ಕೆ ಬಿಡಲಿಲ್ಲ. ಮಾನ್ಯ ನಾಗರಾಜು ಯಾದವ್‌ರವರು ಮಾತನಾಡಬೇಕಾದರೆ ಸುಮಾರು ಸದಸ್ಯರುಗಳು ಯಾವಾಗ ಮುಗಿಸುತ್ತಾರೆ ಎಂದು ಅಂದುಕೊಂಡಿದ್ದರೂ ಕೂಡ ನೀವು ಮಾಡಿರುವಂತಹ ಸಾಧನೆಗೆ ಆ ಬೆಲ್‌ಗೆ ನೀವು ಸೋತಿದ್ದೀರಿ ಎಂದರೆ ನಮ್ಮ ಜೀವನದಲ್ಲಿ ಯಾವತ್ತೂ ಕೂಡ ನೆನಪಿಟ್ಟುಕೊಳ್ಳುತ್ತೇವೆ. ಏಕೆಂದರೆ, ನನಗೆ ವೈಯಕ್ತಿಕವಾಗಿ ಶಿಕ್ಷಣ ಇಲಾಖೆ ಬಹಳ ದೊಡ್ಡ ಇಲಾಖೆಯಾಗಿದೆ. ನನಗೆ ಯಾವಾಗಲೂ ನೀವು ಅರ್ಥಪೂರ್ಣವಾಗಿ ಬಹಳ ಸಹಕಾರವನ್ನು ನೀಡಿದ್ದೀರಿ. ಮಧು, ಇದು ಬಹಳ ಕಷ್ಟವಾದ ಇಲಾಖೆ, ಚೆನ್ನಾಗಿ ನಡೆಸಿದರೆ ಒಳ್ಳೆಯ ಹೆಸರು ಬರುತ್ತದೆ, ಇಲ್ಲದಿದ್ದರೆ ಕೆಟ್ಟ ಹೆಸರು ಬರುತ್ತದೆಂದು ಹೇಳಿದ್ದೀರಿ. ನನಗೆ ಕೆಟ್ಟ ಹೆಸರು ಬರುವುದಿಲ್ಲವೆಂದು ವಿಶ್ವಾಸವಿದೆ.

ಏಕೆಂದರೆ, ನೀವು ನನ್ನ ಚಿಕ್ಕಪ್ಪನ ಸ್ಥಾನದಲ್ಲಿ ಅಲ್ಲಿ ಕುಳಿತುಕೊಂಡಿದ್ದೀರಿ. ಆ ವಿಶ್ವಾಸಕ್ಕೆ ನಾನು ಧೈರ್ಯವಾಗಿ ನಿಭಾಯಿಸುತ್ತಿದ್ದೇನೆ. ನಾನು ಎರಡೇ ಸಲ ಶಾಸಕನಾಗಿದ್ದೇನೆ. ಇವತ್ತು ನಮ್ಮ ಪಕ್ಷ ಇಂತಹ ಒಂದು ದೊಡ್ಡ ಜವಾಬ್ದಾರಿಯನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ನನ್ನ ಜೀವನದಲ್ಲಿ ಯಾವತ್ತೂ ಕೂಡ ನೀವು ಸಹಕಾರ ಕೊಟ್ಟಿರುವುದನ್ನು ಕೊನೆ ಉಸಿರು ಇರುವವರೆಗೂ ಮರೆಯುವುದಿಲ್ಲ. ಇದು ಬರೀ ನೀವು ಪೀಠಕ್ಕೆ ಅಲ್ಲ, ಈ ಪೀಠದಲ್ಲಿ ನೀವು ಕುಳಿತುಕೊಳ್ಳುವುದೇ ಶೋಭೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ನಿಮ್ಮಂಥವರು ಇದ್ದಾಗ ಮಾತ್ರ ನಿಮ್ಮಂಥವರು ಯಾವತ್ತೂ ಕೂಡ ಮಾರ್ಗದರ್ಶಕರಾಗಿರುತ್ತಾರೆ. ಏಕೆಂದರೆ, ಗೆಲುವು-ಸೋಲು ಇದ್ದೇ ಇರುತ್ತದೆ. ಅದು ಬೇರೆ ಪ್ರಶ್ನೆ. ಆದರೆ, ನೀವು ಮಾರ್ಗದರ್ಶನ ಹಾಕಿಕೊಟ್ಟಿರುವುದು ನಮ್ಮ ಜೀವನದಲ್ಲೇ ಯಾವತ್ತೂ ಮರೆಯುವುದಿಲ್ಲ. ಎಲ್ಲಾ ಸದಸ್ಯರುಗಳಿಗೂ ಕೂಡ, ಕೆಲವರು ಯಾರ್ಯಾರು ಮಾತನಾಡುವುದಿಲ್ಲ ಅವರಿಗೆ ಮಾತು ಬರೆಸುವಂತಹದ್ದನ್ನು ಆ ಪೀಠದಿಂದ ಸಂದೇಶ ಕೊಟ್ಟಿದ್ದೀರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶಾಲೆ ನಮ್ಮ ಜವಾಬ್ದಾರಿ. ಏಕೆಂದರೆ, ಇದನ್ನು ನಾನು ಹೇಳಲೇಬೇಕು. ನನ್ನನ್ನು ಅವ್ವ ಶಾಲೆಗೆ ಕರೆದುಕೊಂಡು ಹೋಗಿ, ನಿಮ್ಮ ಸಾಧನೆಗಳನ್ನು ಒಬ್ಬ ಶಿಕ್ಷಕರಾಗಿ, ಅದರಲ್ಲೂ ನೀವು ದೈಹಿಕ ಶಿಕ್ಷಕರಾಗಿದ್ದೀರಿ. ನೀವು ಪಾಠ ಹೇಳಿಕೊಡುವಂತಹ ಗುರುಗಳಲ್ಲ, ದೈಹಿಕ ಶಿಕ್ಷಕರಾಗಿ ನಿಮ್ಮ ಸಾಧನೆ, ನಿಮ್ಮ ತಾಯಿ ಮೇಲೆ ಇರುವಂತಹ ಪ್ರೀತಿ, ವಿಶ್ವಾಸ ಅದು ಯಾವ ರೀತಿ ನಮಗೆ ಇರಬೇಕು ಎನ್ನುವುದನ್ನು ನೀವು ತೋರಿಸಿ ಕೊಟ್ಟಿದ್ದೀರಿ. ನಾನೇನಾದರೂ ನಮ್ಮ ಶಾಲೆ, ನಮ್ಮ ಜವಾಬ್ದಾರಿಯಿಂದ ಇವತ್ತು ನೂರಾರು ಕೋಟಿ ರೂಪಾಯಿಗಳು ನನ್ನ ಇಲಾಖೆಗೆ ಬರುತ್ತಿದೆ. ಬೇರೆ ಬೇರೆ CSR Fund ನಿಂದ ಇವತ್ತು ಸಾವಿರಾರು ಕೋಟಿ ರೂಪಾಯಿಗಳು ಬರುತ್ತಿದೆ ಎಂದರೆ ಅದಕ್ಕೆ ಬುನಾದಿ ಎಲ್ಲಿ ಎಂದರೆ ನಿಮ್ಮ ತಾಯಿಯವರ ಹೆಸರಿನಲ್ಲಿ ಇಟ್ಟಿರುವಂತಹ ಅವ್ವ ಶಾಲೆಯ ಉತ್ತೇಜನದಿಂದ, ಆ ವಿಶ್ವಾಸದಿಂದ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದೊಂದು ಮಾರ್ಗದರ್ಶನ ಕೂಡ ನನ್ನ ಇಲಾಖೆಗೆ; ಬರೀ ನನ್ನ ಇಲಾಖೆಗೆ ಎಂದು ಹೇಳುವುದಿಲ್ಲ, ನಾವು ನೋಡಬೇಕಾದರೆ ಎಲ್ಲಾ ಇಲಾಖೆಗಳಿಗೂ ನೀವು ಎಲ್ಲೋ ಒಂದು ರೀತಿಯಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಮಾರ್ಗದರ್ಶಕರಾಗಿದ್ದೀರಿ. ನೀವು ಸಭಾಪತಿಗಳಿಗಿಂತ ಹೆಚ್ಚಾಗಿ ಒಂದು ಸರ್ಕಾರ ಮಾಡುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಅದಕ್ಕೆ ವಿಶೇಷವಾಗಿ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಏಕೆ ಮಾನ್ಯ ಭೋಜೇಗೌಡ ಅವರಿಗಿಂತ ಮುಂಚೆ ಮಾತನಾಡಿದೆ ಎಂದರೆ ನನಗೆ ಹಾಡುವುದಕ್ಕೆ ಬರುವುದಿಲ್ಲ. ಅವರಿಗೆ ಭಾಷಣ ಮಾಡುವುದಕ್ಕೆ ಬಿಡಬೇಡಿ. ಮಾನ್ಯ ಭೋಜೇಗೌಡರವರು ಹಾಡು ಹೇಳಿ ಸುಮ್ಮನೆ ಕುಳಿತುಕೊಳ್ಳಬೇಕೆಂದು ನಿಮ್ಮ ಪೀಠಕ್ಕೆ ವಿಶೇಷವಾಗಿ ಗೌರವವನ್ನು ಕೊಟ್ಟು, ಅದಕ್ಕೆ ಮಾತ್ರ ಅವಕಾಶವನ್ನು ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ಮರೆತುಬಿಟ್ಟೆ, ನೀವು ಉಂಡಿ ತಂದುಕೊಟ್ಟಿದ್ದರೆ ನಾವು ಬಾಯಿಯಲ್ಲಿ ಹಾಕಿಕೊಳ್ಳುತ್ತಿದ್ದೆವು. ಅವರ ಮನೆಗೆ ಹೋದಾಗೆಲ್ಲಾ ಉಂಡಿ ಕೊಡುತ್ತಾರೆ. 45 ವರ್ಷಗಳ ನೆನಪಿಗಾಗಿ ಉಂಡಿಯನ್ನು ಕೊಟ್ಟಿದ್ದರೆ ನಾಲಿಗೆಗೂ ರುಚಿ ಬರುವ ಹಾಗೆ ಮಾಡಿಕೊಳ್ಳುತ್ತಿದ್ದೆವು.

**ಶ್ರೀ ಪ್ರದೀಪ್ ಶೆಟ್ಟರ್:-** ಹುಬ್ಬಳ್ಳಿಯಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಬೆಳಗ್ಗೆಯಿಂದ ಸದನಕ್ಕೆ ಬರಲಿಲ್ಲ. ಈಗ ಮಧ್ಯಾಹ್ನ 3 ಗಂಟೆಯ ಮೇಲೆ ನಾನು ಬಂದಿದ್ದರಿಂದ ನನ್ನ ಸೌಭಾಗ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಬರದಿದ್ದರೆ ಮಿಸ್ ಮಾಡಿಕೊಂಡು ಬಿಡುತ್ತಿದ್ದೆ. ತಮ್ಮ 45 ವರ್ಷಗಳ ಸುದೀರ್ಘವಾದ ಸೇವೆಯನ್ನು ಇಲ್ಲಿ ಎಲ್ಲರೂ ಕೂಡ ಅವರವರ ವಿಶೇಷವಾದಂತಹ ಪದಗಳಿಂದ ಬಣ್ಣಿಸಿ ಮಾತನಾಡಿದ್ದಾರೆ, ಅದು ಅತಿಶಯೋಕ್ತಿಯೇನಲ್ಲ. ಅದು ಅಕ್ಷರಶಃ ಸತ್ಯ ಕೂಡ. ಆ ಪದಗಳನ್ನು ಏನೇನು ಬಳಸಿದ್ದಾರೆ, ಆ ಎಲ್ಲಾ ಪದಗಳಿಗೂ ತಾವು ಅರ್ಹರಿದ್ದೀರಿ ಎಂದು ಹೃದಯದ ಅಂತರಾಳದಿಂದ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಇಷ್ಟೇ, ತಾವು ಶಿಕ್ಷಕರೆಲ್ಲರ ಭೀಷ್ಮ. ಶಿಕ್ಷಕರ ಕ್ಷೇತ್ರದಲ್ಲಿ ನಾವು ಯಾರ್ಯಾರು ಇದುವರೆಗೂ ಸುದೀರ್ಘವಾಗಿ ಆಯ್ಕೆಯಾಗಿ ಬರುತ್ತಿದ್ದಾರೆ ಅವರೆಲ್ಲರಿಗೂ ಕೂಡ ತಾವು ಬಹು ದೊಡ್ಡ ಮಾರ್ಗದರ್ಶಿಗಳು. ಹಾಗಾಗಿ ನಿಮ್ಮನ್ನು 'ಭೀಷ್ಮ' ಎಂದು ಕರೆಯುವುದರಲ್ಲಿ ತಪ್ಪಿಲ್ಲ. ನಾಲ್ಕೂವರೆ ದಶಕಗಳ ಕಾಲ ಸುದೀರ್ಘವಾಗಿ ರಾಜಕೀಯ ಕ್ಷೇತ್ರದಲ್ಲಿ ಅಧಿಕಾರವನ್ನಿಟ್ಟುಕೊಂಡು ಕೆಲಸ ಮಾಡತಕ್ಕಂಥದ್ದು ಸಾಮಾನ್ಯವಾದ ವಿಷಯವಲ್ಲ. ವಿಧಾನ ಪರಿಷತ್ತಿನಲ್ಲಿ ಶಾಸಕರಾಗಿ ಯಾವ್ಯಾವ ಹುದ್ದೆಗಳಿವೆ, ಆ ಎಲ್ಲಾ ಹುದ್ದೆಗಳನ್ನು ತಾವು ಅಲಂಕರಿಸಿದ್ದೀರಿ. ಈಗಲೂ ಕೂಡ ಅನೇಕರು ಬಹಳ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

(ಮುಂದು)

(795) 19/08/2025 4:20 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ತಾವು ಸದಾ ಇಲ್ಲಿ ಸಭಾಪತಿಗಳಾಗಿ ಇನ್ನೂ ಇರಬೇಕು ಎನ್ನುವ ವಿಚಾರವವನ್ನು ಪಕ್ಷಾತೀತವಾಗಿ ಮಾತನಾಡಿದರು. ರಾಜಕೀಯ ಕ್ಷೇತ್ರದಲ್ಲಿ ಪಕ್ಷಾತೀತವಾಗಿ ಮಾತನಾಡುವುದು ಎಂದರೆ...., ಎದುರಿಗೆ ಹೊಗಳುವುದು ಹಿಂದೆ ತೆಗಳುವುದು ಸರ್ವೇ ಸಾಮಾನ್ಯವಾದ ವಿಚಾರವಾಗಿದೆ. ನೂರಕ್ಕೆ ನೂರರಷ್ಟು ನೀವು ಆ ಎಲ್ಲಾ ಹೊಗಳಿಕೆಯ ಮಾತುಗಳಿಗೆ ಅರ್ಹರಿದ್ದೀರಿ. ನೀವು ಒಂದು ಕೃಷಿ ಕುಟುಂಬದಿಂದ ಬಂದವರಾಗಿದ್ದೀರಿ. ಕೃಷಿಗೆ ನೀವು ಕೊಟ್ಟಿರುವ ಆದ್ಯತೆಯನ್ನು ನಿಮ್ಮ ಊರಿಗೆ ಬಂದು ನಿಮ್ಮ ಹೊಲ ಮತ್ತು ತೋಟಕ್ಕೆ ಬಂದು ನೋಡಿದರೆ ಅರ್ಥವಾಗುತ್ತದೆ. ಗೋವುಗಳ ಬಗ್ಗೆ ನೀವು ಎಷ್ಟು ಕಾಳಜಿಯನ್ನು ವಹಿಸಿದ್ದೀರಿ. ಕೃಷಿ ಬದುಕಿನಲ್ಲಿ ಯಾವ ರೀತಿಯಾಗಿ ತಮ್ಮನ್ನು

ಹಾಗೂ ತಮ್ಮ ಕುಟುಂಬವನ್ನು ತೊಡಗಿಸಿಕೊಂಡಿದ್ದೀರಿ ಎನ್ನುವುದನ್ನು ವರ್ಣಿಸಲು ಪದಗಳೇ ಇಲ್ಲ. We cannot explain in terms of any words. ಅಷ್ಟೊಂದು ರೀತಿಯಾಗಿ ತಾವು ತಮ್ಮನ್ನು ಕೃಷಿ ಬದುಕಿನಲ್ಲಿ ತೊಡಗಿಸಿಕೊಂಡಿದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಶ್ರೀ ಸಿ.ಟಿ. ರವಿಯವರು ಮಾತನಾಡುವ ಸಂದರ್ಭದಲ್ಲಿ ತಮ್ಮ ಮನೆಯಲ್ಲಿ ಉಂಡೆಯನ್ನು ಕೊಡುತ್ತಾರೆ ಎಂದು ತಿಳಿಸಿದರು. ಕೇವಲ ಉಂಡೆಯಲ್ಲ; ಅವರ ಊರಿಗೆ ಹೋಗಿ ಬಂದರೆ ಅಲ್ಲಿಂದ ಗಿಣ್ಣಿನ ಡಬ್ಬವನ್ನು ಹಿಡಿದುಕೊಂಡು ಬರುತ್ತಾರೆ. ಇಲ್ಲಿನ ಬಹಳಷ್ಟು ಜನರಿಗೆ ಅವರು ಗಿಣ್ಣನ್ನು ಕೊಟ್ಟಿದ್ದಾರೆ. ಆ ಪೈಕಿ ನಾನು ಬಹಳಷ್ಟು ಬಾರಿ ಗಿಣ್ಣನ್ನು ತಿಂದಿದ್ದೇನೆ. ಗೋವುಗಳ ಮೇಲೆ ಇಟ್ಟಿರುವ ಪ್ರೀತಿ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನಾವು ನೋಡಬಹುದು. ಇವರು ಗಿಣ್ಣನ್ನು ನಾಡಿನಾದ್ಯಂತ ನೀಡಿದ್ದಾರೆ. ಅವರ ಮನೆಗೆ ಯಾವಾಗಲೇ ಹೋಗಲಿ ಉಂಡೆ ಇದ್ದೇ ಇರುತ್ತದೆ. ಬೆಳಗ್ಗೆಯ ತಿಂಡಿಯ ಸಮಯದಲ್ಲಿಯೂ ಸಹ ಉಂಡೆ ಇರುತ್ತದೆ. ಉತ್ತರ ಕರ್ನಾಟಕದ ಬಹಳಷ್ಟು ಮನೆಗಳಲ್ಲಿ ಉಂಡೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಅದೇ ರೀತಿಯಾಗಿ ನಾನು ಶ್ರೀ ಎಂ.ಬಿ.ಪಾಟೀಲ್ ರವರ ಮನೆಗೆ ಹೋದಾಗ ಅಲ್ಲಿಯೂ ಸಹ ಉಂಡೆಯನ್ನು ನೀಡಿದ್ದರು. ಆ ಭಾಗದಲ್ಲಿ ತರ ತರಹ ರೀತಿಯ ಉಂಡೆಗಳನ್ನು ಮಾಡುತ್ತಾರೆ. ಇಂತಹ ಬಿಡುವಿಲ್ಲದ ಸಮಯದಲ್ಲಿಯೂ ಸಹ ಅವರು ಕೃಷಿ ಬದುಕನ್ನು ಹೊಂದಿಸಿಕೊಂಡು, ರಾಜಕೀಯ ಕ್ಷೇತ್ರದಲ್ಲಿ ಬಂದಾಗ ಅವರು ಅಷ್ಟೊಂದು ಅಗಾಧವಾದ ಮಟ್ಟದಲ್ಲಿ ಬೆಳೆದಿರುವ ಸಂದರ್ಭದಲ್ಲಿ..., ಶ್ರೀ ಸಿ.ಟಿ. ರವಿಯವರು ಮಾತನಾಡುವ ಸಂದರ್ಭದಲ್ಲಿ ಇವರು ಮಂಕುತಿಮ್ಮನ ಕಗ್ಗದ ರೀತಿಯಲ್ಲಿ ಎಲ್ಲರೊಳು ಒಂದಾಗಿದ್ದಾರೆ ಎಂಬುದಾಗಿ ಹೇಳಿದರು. ಈ ಸಂದರ್ಭದಲ್ಲಿ ನಾನು ಮಂಕುತಿಮ್ಮನ ಕಗ್ಗವೊಂದನ್ನು ಉಲ್ಲೇಖಿಸಬಯಸುತ್ತೇನೆ.

*“ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು;*
*ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ;*
*ಬೆಲ್ಲ-ಸಕ್ಕರೆಯಾಗು ದೀನದುರ್ಬಲರಿಂಗೆ;*
*ಎಲ್ಲರೊಳಗೊಂದಾಗು ಮಂಕುತಿಮ್ಮ.”*

ಈ ಮಾತಿನಂತೆ, ಅವರು ಎಲ್ಲರೊಳಗೆ ಒಂದಾಗಿದ್ದಾರೆ. ಈ ನಾಣ್ಣುಡಿಯಂತೆ ಅವರು ಇದ್ದು; ಇದರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಇದರ ಜೊತೆಗೆ ಇವರು ಭವಿಷ್ಯದ ಚಿಂತನೆಯನ್ನು ಮಾಡಿಲ್ಲ. ಈ ಸಂಬಂಧ ನಾನು ಒಂದು ಕಗ್ಗವನ್ನು ಉಲ್ಲೇಖಿಸಬಯಸುತ್ತೇನೆ.

*"ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ,*
*ಭವಿಷಿಯವ ಚಿಂತಿಸದೆ ಬದುಕ ನೂಕುತಿರು ॥*
*ವಿವರಗಳ ಜೋಡಿಸುವ ಯಜಮಾನ ಬೇರಿಹನು ।*
*ಸವೆಸು ನೀಂ ಜನುಮವನು ಮಂಕುತಿಮ್ಮ ॥“*

ಇವರು ಎಲ್ಲಿಯೂ ಸಹ ತಾವು ಹೀಗೆ ಆಗಬೇಕು; ಹಾಗೆ ಆಗಬೇಕು ಎಂದು ಆಸೆ ಪಟ್ಟವರಲ್ಲ. ಹಾಗೂ ಇದಕ್ಕಾಗಿ ಪ್ರಯತ್ನ ಮಾಡಿದವರೂ ಸಹ ಅಲ್ಲ. ಆದರೆ ಮಂಕುತಿಮ್ಮನ ಕಗ್ಗದ ಪ್ರಕಾರ ಆ ಭಗವಂತನ ಮತ್ತು ತಂದೆ ತಾಯಿಗಳ ಆಶೀರ್ವಾದದ ಫಲದಿಂದ ಭವಿಷ್ಯದ ಚಿಂತನೆ ಮಾಡದೇ, ಒಂದು ಅಗಾಧವಾದ ಶೃಂಗಗಿರಿಯ ಮಟ್ಟಕ್ಕೆ ಬಂದಿದ್ದಾರೆ. ಈ ಸಂದರ್ಭದಲ್ಲಿ ನಾನು ಕವನವೊಂದನ್ನು ಹೇಳಲಿಚ್ಛಿಸುತ್ತೇನೆ.

*“ರಾಗದಲೆಗೆ ಭಾವ ಬೆಸುಗೆ ಸೇರಬೇಕು ಗೀತೆಗೆ*
*ನಾಭಿಯಿಂದ ಹೊಮ್ಮಿ ಸ್ವರವು ಹಾಯ ಬೇಕು ಕೊರಳಿಗೆ*
*ಸಪ್ತಸಾಗರದಾಳದಲ್ಲಿದೆ ನಾದ ಬಿಂದುವಿನಾಲಯ*
*ಈಜಿ ತಲುಪುವರೆಷ್ಟು ಮಂದಿ ಪಡೆಯಲದರ ಸಿಧ್ಧಿಯ*
*ಶೃಂಗ ಗಿರಿಗಳ ತುತ್ತತುದಿಯಲಿ ಎಲ್ಲೋ ಒಂದೆಡೆ ಲಯವಿದೆ*
*ತಲುಪಬಹುದು ಅಲ್ಲಿಗೊಮ್ಮೆ ನಿತ್ಯ ನಿರತರ ಸಾಧನೆ*
*ದೇಹಿ ಎನ್ನುವ ಭಾವ ಬೇಕು ನಾದರಾಣಿಯ ಅಡಿಯೊಳು*
*ಎಂದೋ ಒಮ್ಮೆ ಕರುಣೆ ಬಂದು ಇನಿತೆ ಇನಿತು ಕೊಡುವಳು”*

ಎಲ್ಲರೂ rank, distinction, first class ಬರುವುದಕ್ಕಾಗುವುದಿಲ್ಲ. ಕೆಲವೇ ಜನರು ಇದನ್ನು ಸಾಧನೆ ಮಾಡುತ್ತಾರೆ. ಆ ಕೆಲವೇ ಜನರ ಪೈಕಿ ನೀವು ಒಬ್ಬರಾಗಿದ್ದೀರಿ. “ಸಪ್ತಸಾಗರದಾಳದಲ್ಲಿದೆ; ಈಜಿ ತಲುಪುವರೆಷ್ಟು ಮಂದಿ ಪಡೆಯಲದರ ಸಿಧ್ಧಿಯ” ಎನ್ನುವಂತೆ ಸಪ್ತಸಾಗರವನ್ನು ಈಜಿ 45 ವರ್ಷಗಳ ಸುದೀರ್ಘವಾದ ಈ ರಾಜಕೀಯ ಜೀವನದಲ್ಲಿ ತಾವು ಉಳಿಸಿಕೊಂಡು ಬಂದಿದ್ದೀರಿ. ಶೃಂಗಗಿರಿಗಳ ತುತ್ತ ತುದಿಯಲ್ಲಿ ಎಲ್ಲಿಯೋ ಒಂದು ಕಡೆ ಇದೆ; ತಲುಪಬಹುದು ಅಲ್ಲಿಗೊಮ್ಮೆ ಅದು ಯಾವಾಗ ಎಂದರೆ ನಿಮ್ಮಂತೆ ನಿತ್ಯ ನಿರಂತರ ಸಾಧನೆಯನ್ನು ಮಾಡಿದಾಗ ಮಾತ್ರವೇ ಇಂತಹ ಸುದೀರ್ಘವಾದ ಅವಕಾಶವನ್ನು ತಲುಪಲು ಸಾಧ್ಯವಾಗುತ್ತದೆ. ಇದು ಎಲ್ಲದರ ಜೊತೆಗೆ ಪಕ್ಷಾತೀತವಾಗಿ ತಾವು ಇಷ್ಟೊಂದು ಜನರ ವಿಶ್ವಾಸವನ್ನು ಗಳಿಸಿದ್ದೀರಿ. ಇದು ಹೇಗೆ ಎಂದರೆ, ದೇಹಿ ಎಂಬ ಭಾವ ಬೇಕು. ಭಗವಂತನಲ್ಲಿ, ತಂದೆ-ತಾಯಿಗಳಲ್ಲಿ ಮತ್ತು ಗುರು-ಹಿರಿಯರಲ್ಲಿ ನಾನು ಎಂಬ ಅಹಂಕಾರವಿಲ್ಲದೇ ದೇಹಿ ಎಂಬ ಭಾವದಿಂದ ಅಂದರೆ ದೈನ್ಯ ಭಾವದಿಂದ ಇವತ್ತಿನ ದಿವಸ ತಾವು ಎಲ್ಲರ ವಿಶ್ವಾಸವನ್ನು ಗಳಿಸಿದ್ದೀರಿ. ದೇಹಿ ಎಂಬ ಭಾವ ಬೇಕು ನಾಗರಾಣಿಯ ಅಡಿಯೊಳು ಎಂದೋ ಒಮ್ಮೆ ... ಎಂದೋ ಒಂದು ದಿನ ಆ ಭಗವಂತ, ತಂದೆ ತಾಯಿಗಳ ಕರುಣೆ ಬಂದು ತಥಾಸ್ತು ಎಂದು ಹೇಳಿ, ಇವತ್ತಿನ ದಿವಸ ನಿಮ್ಮನ್ನು ಈ ಸ್ಥಾನದಲ್ಲಿ ಕೂರಿಸಿದ್ದಾರೆ. ಸುದೀರ್ಘ ನಾಲ್ಕೂವರೆ ದಶಕಗಳ ಅಂದರೆ 45 ವರ್ಷಗಳನ್ನು ತಲುಪುವುದಕ್ಕೆ ತಮಗೆ ಸಾಧ್ಯವಾಗಿದೆ. ಆ ಭಗವಂತ ತಮಗೆ ಇನ್ನೂ ಹೆಚ್ಚು ಒಳ್ಳೆಯದನ್ನು ಮಾಡಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇದರ ಜೊತೆಗೆ, ತಾವು ಸಂಬಂಧಗಳನ್ನು ಬಿಡದೇ, ಅವುಗಳನ್ನು ಉಳಿಸಿಕೊಂಡಿದ್ದೀರಿ. ಈ ಸಂದರ್ಭದಲ್ಲಿ ಕವಿ ಜಿ.ಎಸ್.ಶಿವರುದ್ರಪ್ಪ ರವರ ಪದ್ಯವೊಂದನ್ನು ಉಲ್ಲೇಖಿಸಬಯಸುತ್ತೇನೆ.

*"ಎಲ್ಲಿದೆ ನಂದನ ಎಲ್ಲಿದೆ ಬಂಧನ*
*ಎಲ್ಲಾ ಇವೆ ಈ ನಮ್ಮೊಳಗೆ*
*ಒಳಗಿನ ತಿಳಿಯನು ಕಲಕದೆ ಇದ್ದರೆ*
*ಅಮೃತದ ಸವಿಯಿದೆ ನಾಲಗೆಗೆ*

*ಎಷ್ಟು ಕಷ್ಟವೋ ಹೊಂದಿಕೆ ಎಂಬುದು*
*ನಾಲ್ಕು ದಿನದ ಈ ಬದುಕಿನಲಿ*
*ಹತ್ತಿರವಿದ್ದೂ ದೂರ ನಿಲ್ಲುವೆವು*
*ನಮ್ಮ ಅಹಮ್ಮಿನ ಕೋಟೆಯಲಿ"*

ಈ ಪದ್ಯ ನೂರಕ್ಕೆ ನೂರರಷ್ಟು ಅರ್ಥಗರ್ಭಿತವಾಗಿ ಇದಕ್ಕೆ ಸರಿಸಮಾನವಾಗಿ ಯಾರಾದರೂ ಇದ್ದಾರೆ ಅದು ನೀವೆ. ಇದು ಅತಿಶಯೋಕ್ತಿಯ ಮಾತಲ್ಲ. ಈ ಮಾತನ್ನು ಬಹಳ ಹೃದಯತುಂಬಿಕೆಯಿಂದ ಮತ್ತೊಮ್ಮೆ ಹೇಳುತ್ತಾ, ಅವಕಾಶ ನೀಡಿದ್ದಕ್ಕಾಗಿ ವಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ಹುಟ್ಟಿ, ಇಷ್ಟೊಂದು ಮಹದೆತ್ತರಕ್ಕೆ ಬೆಳೆದ ತಮಗೆ ವಿಶೇಷವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನನಗೊಂದು ಖುಷಿ ಇದೆ. ಇವರು ನನ್ನ ಜಿಲ್ಲೆ ಮತ್ತು ತಾಲ್ಲೂಕಿನವರಾಗಿದ್ದಾರೆ. ಇವರು ಇಷ್ಟು ಎತ್ತರಕ್ಕೆ ಬೆಳೆದು ನಮಗೆಲ್ಲರಿಗೂ ಈ ವಿಚಾರದಲ್ಲಿ ಮಾತನಾಡಲು ಅವಕಾಶ ನೀಡಿದ್ದಾರೆ. ಅದರಲ್ಲೂ ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ನಾನು ಖುಷಿ ಪಡುತ್ತಿದ್ದೇನೆ. ಇವರು ಸಣ್ಣ ಕುಟುಂಬದಿಂದ ಬಂದವರಾಗಿದ್ದಾರೆ. ಇವರು ಯಾವತ್ತಿಗೂ ನಮ್ಮ ಮುಧೋಳ ತಾಲ್ಲೂಕಿಗೆ ಬಂದರೆ, ಜಾತಿ, ಧರ್ಮ ಮತ್ತು ಇನ್ಯಾವುದನ್ನು ನೋಡದೇ, ಎಲ್ಲರನ್ನೂ ಒಗ್ಗೂಡಿಸುವ ಇವರ ಕಲೆ ಅದು ಎಲ್ಲರಿಗೂ ಮಾದರಿಯಾಗಿದೆ ಎಂದು ನಾನು ಇಂದಿಲ್ಲಿ ಹೇಳುತ್ತಿದ್ದೇನೆ. ಈ ಸುದೀರ್ಘ ಜೀವನದಲ್ಲಿ ಅವರು ಎಷ್ಟು ಏರುಪೇರುಗಳನ್ನು ಕಂಡಿದ್ದಾರೆ. ಅದರ ಲಾಭ ನಮ್ಮ ವಿಧಾನ ಪರಿಷತ್ತಿಗೆ ಆಗುತ್ತಿದೆ. ಒಮ್ಮೊಮ್ಮೆ ಇವರು ಮಾತನಾಡುವ ಗಟ್ಟಿ ಮಾತು "ಏಯ್ ರಾಮಣ್ಣ ಕುತ್ಕೋ" ಎಂದು ನನ್ನ ಹೆಸರನ್ನು ಹೇಳಿ, ನನ್ನನ್ನು ಕುಳ್ಳಿರಿಸಿದ್ದರು. ಜಾಸ್ತಿ ಮಾತನಾಡಲು ನನಗೆ ಅವಕಾಶ ನೀಡದಿದ್ದಾಗ ನನಗೆ ಸಿಟ್ಟು ಇದ್ದಾಗ ತಕ್ಷಣವೇ ತಮ್ಮ ಕಛೇರಿಗೆ ಕರೆದು "ನೀನು ನನ್ನ ಮ್ಯಾಲೆ ಸ್ವಲ್ಪ ಸಿಟ್ಟು ಆದೇನು" ಎಂದು ಕೇಳುವ ಮೂಲಕ ತಾಯಿ ಕರುಳಿನ ಇವರು.. ತಮ್ಮ ತಾಯಿ ಕರುಳಿನಿಂದಾಗಿಯೇ ಇವತ್ತಿನ ದಿವಸ ಇಷ್ಟು ಎತ್ತರದ ಸ್ಥಾನಕ್ಕೆ ಬಂದಿದ್ದೀರಿ.

(ಮುಂದು)

(796)19-08-2025/4-30/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ ತಿಮ್ಮಾಪೂರ(ಮುಂದು):-**

ನಾನು ಇನ್ನೊಂದು ತಮ್ಮ ಗುಣವನ್ನು ನೋಡಿದ್ದೇನೆ. ತಾವು ಒಂದು ಸರ್ಕಾರಿ ಶಾಲೆಯನ್ನು ಇವತ್ತು ತಮ್ಮ ತಾಯಿ ಹೆಸರಿನ ಮೂಲಕ ಅಭಿವೃದ್ಧಿ ಮಾಡಿರುವಂತಹದ್ದು ಇದೆ. ಬಹುಶಃ ಬಹಳಷ್ಟು ಜನರು ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡಿರುತ್ತಾರೆ. ತಾವು ಒಂದು ಸಂಘ-ಸಂಸ್ಥೆಯನ್ನು ಕಟ್ಟಿ ದೊಡ್ಡ ಸಂಸ್ಥೆಯನ್ನು ಬೆಳೆಸಿರಬಹುದು. ಆದರೆ, ನನ್ನ ಮುಧೋಳದಲ್ಲಿ ಸರ್ಕಾರಿ ಶಾಲೆಗೆ ಕ್ಯೂ ನಿಂತಿದ್ದರೆ, ಇವತ್ತು ಏನಾದರೂ ನಮಗೆ ಕೆಟ್ಟ ಹೆಸರು ಬರುತ್ತಿದೆ ಎಂದರೆ, ಅದು ನಿಮ್ಮ ಶಾಲೆಯಿಂದ. ಕಾರಣ ಏನೆಂದರೆ, ಅದೇ ಶಾಲೆಯಲ್ಲಿಯೇ ನಮಗೆ ಸೀಟ್ ಬೇಕು, ಅದೇ ಶಾಲೆಯಲ್ಲಿ ನಮಗೆ ಪ್ರವೇಶಾವಕಾಶವನ್ನು ಕೊಡಿಸಬೇಕೆಂದು ಎಷ್ಟು ಗಲಾಟೆಗಳಾಗುತ್ತವೆ ಎಂದರೆ ಸಾವಿರಾರು ಅರ್ಜಿಗಳು ಆ ಶಾಲೆಗೆ ಬರುತ್ತದೆ. ಆ ಶಾಲೆ ಯಾರದ್ದು ಎಂದರೆ ಅದು ಮಾನ್ಯ ಬಸವರಾಜ ಹೊರಟ್ಟಿಯವರ ಶಾಲೆ ಎಂದು ಹೇಳುತ್ತಾರೆ. ಅವರ ತಾಯಿಯವರ ಶಾಲೆಯಾಗಿರುತ್ತದೆ. ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರು ಅಭಿವೃದ್ಧಿ ಮಾಡಿದ್ದು, ಸರ್ಕಾರಿ ಶಾಲೆಯಾಗಿರುತ್ತದೆ. ಸರ್ಕಾರಿ ಶಾಲೆಯಲ್ಲಿ ಅಂತಹ ಅದ್ಭುತವಾದಂತಹ ಕೆಲಸಗಳು ನಡೆಯುತ್ತಿದ್ದರೆ, ಬಡ ಮಕ್ಕಳು ಓದುತ್ತಿದ್ದರೆ, ಅದು ತಮಗೆ ಶಿಕ್ಷಣದ ಮೇಲಿರುವ ಪ್ರೇಮ. ಅದರ ಜೊತೆಗೆ ಬಡ ಮಕ್ಕಳಿಗೆ ಸಿಕ್ಕುವಂತಹ ಅಗತ್ಯ ಸೌಲಭ್ಯ. ಸರ್ಕಾರಿ ಶಾಲೆಯಲ್ಲಿಯೂ ಇದೆ ಎನ್ನತಕ್ಕಂತಹದ್ದನ್ನು ತೋರಿಸಿಕೊಟ್ಟಂತಹ ಮಹಾನ್ ವ್ಯಕ್ತಿಗಳಾಗಿದ್ದಾರೆ. ನಾನು ಇಷ್ಟು ಹೇಳಲಿಕ್ಕೆ ಇಷ್ಟ ಪಡುತ್ತೇನೆ ಹೊರತು ನಾನು ಹೆಚ್ಚಿಗೆ ತಮ್ಮ ವಿಚಾರವನ್ನು ಹೇಳಲಿಕ್ಕೆ ಹೋಗುವುದಿಲ್ಲ. ತಮಗೆ ತಮ್ಮ ತಾಯಿ ಮೇಲೆ ಇರತಕ್ಕಂತಹ ಪ್ರೀತಿ, ತಾವು ಸಭೆಯನ್ನು ನಡೆಸತಕ್ಕಂತಹ ರೀತಿ ಮುಂದೆ ನಿಮ್ಮ ಹಾಗೆ ಹಿರಿತನದವರು ಯಾರು ಸಭಾಪತಿಯವರಾಗುತ್ತಾರೋ ಇನ್ನು ಗೊತ್ತಿಲ್ಲ. ಈ ವಯಸ್ಸಿಗೆ ಇಷ್ಟು ವರ್ಷಗಳ ಅನುಭವವುಳ್ಳವರಾದ ತಾವು ಈ ಒಂದು ಸ್ಥಾನವನ್ನು ಅಲಂಕರಿಸಿದ್ದೀರಿ. ಇನ್ನು ಸಹ ಹೆಚ್ಚಿನ ದಿನಮಾನಗಳ ಕಾಲ ಆ ಸ್ಥಾನದಲ್ಲಿ ಇರಬೇಕು. ಏಕೆಂದರೆ, ಹೊಸದಾಗಿ ಬರತಕ್ಕವರಿಗೆ, ಇನ್ನೂ ಕಲಿಯುತ್ತಿರುವಂತಹವರಿಗೆ ತಮ್ಮ ಮಾರ್ಗದರ್ಶನ ಆಗಬೇಕಾಗಿದೆ. ಆದ್ದರಿಂದ, ನಾನು ಭಗವಂತನಿಗೆ ಹೇಳುವುದೇನೆಂದರೆ ಇನ್ನು 100 ವರ್ಷಗಳ ಕಾಲ ಬಾಳುವುದರ ಮೂಲಕ ಇದೇ ಸ್ಥಾನದಲ್ಲಿ ಕುಳಿತು 4 ಜನರಿಗೆ ಸಹಾಯ ಮಾಡುವಂತಹ ಶಕ್ತಿಯನ್ನು ಆ ಭಗವಂತ ತಮಗೆ ಕರುಣಿಸಲಿ ಎಂದು ಹಾರೈಸುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಬೆಳಗ್ಗೆ ಮಾತನಾಡುವಾಗ ನನಗೆ ಸಡನ್ ಆಗಿ ಗೊತ್ತಾಗಲಿಲ್ಲ. ಇಲ್ಲಿಂದ ಹೋದಮೇಲೆ ನೆನಪು ಮಾಡಿಕೊಂಡು ವಾಪಸ್ಸು ಬಂದಿರುತ್ತೇನೆ. ಸದ್ಯ ಈ ವಿಚಾರ ಮುಗಿದಿರಲಿಲ್ಲ. ಇದು ನನಗೆ ಸಿಕ್ಕಿದಂತಹ ಸದಾವಕಾಶವಾಗಿದೆ. ಬಹುಶಃ ಮಾನ್ಯ ಸಭಾಪತಿಯವರು ನನಗೆ ಹಿರಿಯರು, ನನಗೆ ಬಹಳ ಅತ್ಯಂತ ಪ್ರೀತಿ ಎಂದರೆ ನಮ್ಮ ಸ್ವಂತ ಅಣ್ಣನವರು ಯಾವ ರೀತಿಯಲ್ಲಿ ನನಗೆ ಪ್ರೀತಿ ಮಾಡುತ್ತಾರೋ ಅದಕ್ಕಿಂತ ಹೆಚ್ಚಾಗಿ ಒಂದು ಪಟ್ಟು ಪ್ರೀತಿ ಮಾಡಿರತಕ್ಕವರಾಗಿರುತ್ತಾರೆ. ಒಟ್ಟಿಗೆ ರಾಜಕಾರಣ ಮಾಡಿದಂತಹವರು, ಒಟ್ಟಿಗೆ ಕಾಂಗ್ರೆಸಿಗೆ ಬರಬೇಕೆಂದು ಅಲೋಚನೆ ಮಾಡಿದವರಾಗಿದ್ದೆವು. ಆದರೆ, ಆಕಸ್ಮಿಕವಾಗಿ ಆ ಭಾಗಕ್ಕೆ ಅವರು ಮನಸೋತು ಆ ಕಡೆ ಬಂದರು. ಏತಕ್ಕೆಂದು ನನಗೆ ಗೊತ್ತಿಲ್ಲ. ಆದರೆ, ನಮ್ಮ ಜೊತೆಯಲ್ಲಿ ಕಾಂಗ್ರೆಸ್‌ಗೆ ಬರಬೇಕೆನ್ನುವ ವಿಚಾರದಲ್ಲಿ ನಮ್ಮ ಶ್ರೀಯುತ ಪುಟ್ಟಣ್ಣನವರು ಸಹ ಕಾರಣ ಇರಬಹುದು ಎಂದು ಕಾಣುತ್ತದೆ. ಹೀಗಾಗಿ, ನಮ್ಮ ಜೊತೆ ಬಿಟ್ಟು ಹೊರಗಡೆ ಕರೆದುಕೊಂಡು ಹೋಗಲಿಕ್ಕೆ ಕಾರಣವಾಗಿದೆ. ಒಟ್ಟು 45 ವರ್ಷಗಳ ಕಾಲ ಈ ರಾಜ್ಯದಲ್ಲಿ ಪಕ್ಷಾತೀತವಾಗಿ ಈ ಒಂದು ಶಿಕ್ಷಣ ಕ್ಷೇತ್ರದಲ್ಲಿ ಜನಪ್ರತಿನಿಧಿಯಾಗಿ ಬಹುಶಃ ಇವತ್ತು ಸಹ ಎರಡು ಸದನದಲ್ಲಿ ತಮ್ಮ ಬಗ್ಗೆ ತಮ್ಮ ಅನುಪಸ್ಥಿತಿಯಲ್ಲೂ ಕೂಡ ನಿಮ್ಮ ಬಗ್ಗೆ ಯಾರೂ ಸಹ ಮಾತನಾಡದೇ ಇರತಕ್ಕಂತಹ ಯಾರಾದರೂ ಒಬ್ಬ ವ್ಯಕ್ತಿ ಇದ್ದರೆ ಅದು ತಾವುಗಳೇ ಆಗಿದ್ದೀರಿ. ಎಂತಹವರನ್ನು ಸಹ ಒಂದಲ್ಲಾ, ಒಂದು ವಿಚಾರದಲ್ಲಿ ಅಸಮಾಧಾನವನ್ನು, ಬೇಸರವನ್ನು ವ್ಯಕ್ತಪಡಿಸಿರುವುದನ್ನು ನಾವು ನೋಡಿದ್ದೇವೆ. ಆದರೆ, ನಿಮ್ಮ ವಿಚಾರ ಬಂದಾಗ ಬಹುಶಃ ಅದು ಯಾವುದೇ ಪಕ್ಷದವರಾದರೂ ಸಹ ಅಥವಾ ಯಾವುದೇ ಸದನದಲ್ಲಿ ಆಗಲಿ, ಮಂತ್ರಿಗಳಾಗಲಿ, ನಾನು ಎಲ್ಲಿಯೂ, ಯಾವತ್ತೂ ಸಹ ತಮ್ಮ ವಿಚಾರದಲ್ಲಿ ಅಸಮದಾನವನ್ನು ವ್ಯಕ್ತಡಿಸಿರುವುದನ್ನು ಅಥವಾ ಬೇಸರವನ್ನು ವ್ಯಕ್ತಪಡಿಸಿರುವುದನ್ನು ನಾನು ನೋಡಿರುವುದಿಲ್ಲ. ಬಹುಶಃ ಮಾನ್ಯ ಸದಸ್ಯರಾದ ನಮ್ಮ ರವಿಯವರು ಹೇಳಿದ ಹಾಗೆ 60 ವರ್ಷ ಈ ಸದನದ ಸದಸ್ಯರಾಗಿ ನೀವು ಮುಟ್ಟಬೇಕೆನ್ನುವುದು ನಮ್ಮೆಲ್ಲರ ಆಸೆ ಇದೆ. ಯಾವುದೇ ಕಾರಣಕ್ಕೆ ನೀವು ಅದನ್ನು ಮೊಟಕುಗೊಳಿಸಬಾರದು. 60 ವರ್ಷಗಳು ದಾಟಿದ ಮೇಲೆಯೇ ನೀವು ನಿಮ್ಮ ತೀರ್ಮಾನ ತೆಗೆದುಕೊಳ್ಳಬೇಕು. ಹೀಗಾಗಿ, ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ನಿಮ್ಮದು ಒಂದು ರೆಕಾರ್ಡ್ ತಲುಪಬೇಕು. ಮತ್ತು ನಿಮ್ಮಿಂದ ಅನೇಕರು ಜನ ಪ್ರತಿನಿಧಿಗಳಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ. ಮತ್ತೆ ಕುಟುಂಬದ ವಿಚಾರ ಬರಲಿ, ಸ್ನೇಹದ ವಿಚಾರ ಬರಲಿ, ಸಂಬಂಧ ಬರಲಿ, ರಾಜಕಾರಣ ಬರಲಿ, ಎಲ್ಲದಕ್ಕೂ ನೀವು ಒಂದು ದೊಡ್ಡ ಸಾಧನೆ ಎನ್ನುವುದಕ್ಕಿಂತ ಹೆಚ್ಚಿನದಾಗಿ ಬಹುಶಃ ನಿಮ್ಮನ್ನು ನೋಡಿ ಕಲಿಯುವಂತಹದ್ದನ್ನು ಪ್ರತಿಯೊಬ್ಬರಿಗೂ ಸಹ ಇದೆ. ನಾನು ಹೆಚ್ಚಿನದಾಗಿ ಹೇಳುವುದಕ್ಕಿಂತ ಹೆಚ್ಚಾಗಿ ಅತ್ಯಂತ ಹೆಚ್ಚಿನ ಪ್ರೀತಿಯನ್ನು ನಮ್ಮ ಅಣ್ಣನ ರೀತಿಯಲ್ಲಿ ನೋಡಿದ್ದೇವೆ. ತಮ್ಮ ಪ್ರೀತಿ ಇದೇ ರೀತಿಯಲ್ಲಿ ಇರಲಿ ಎಂದು ಕೇಳಿಕೊಂಡು ತಮ್ಮನ್ನು ಅಭಿನಂದಿಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೆ, ತಾವು 45 ವರ್ಷಗಳ ಈ ವಿಧಾನ ಪರಿಷತ್ತಿನ ಸದಸ್ಯತ್ವದ ಅವಧಿಯನ್ನು ಪೂರ್ಣಗೊಳಿಸಿರತಕ್ಕಂತಹ ಈ ಸಂತಸದ ಸಂದರ್ಭದಲ್ಲಿ ತಮ್ಮ ಹೃತ್ಪೂರ್ವಕವಾಗಿ ಅಭಿನಂದಿಸುವುದಕ್ಕೆ ಎಲ್ಲರೂ ತಮ್ಮ ಪ್ರೀತಿಯನ್ನು, ಗೌರವವನ್ನು, ಆಧರವನ್ನು ವ್ಯಕ್ತಪಡಿಸಿ ತಮ್ಮ ಬಗ್ಗೆ ವಿಶೇಷವಾಗಿರುವಂತಹ ಸ್ನೇಹಪರವಾದ ಮಾತುಗಳನ್ನು ತಮ್ಮ ಮೇಲೆ ಈಗಾಗಲೇ ಹೇಳಿದ್ದಾರೆ. ನನ್ನದು ಮತ್ತು ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರದ್ದು ಸುಮಾರು 52-53 ವರ್ಷದ ಒಡನಾಟದ ಸಂಬಂಧ ಇದೆ. ನಮ್ಮ ಸಂಪರ್ಕ ಎಂದರೆ ಮೊದಲನೇ 10-15 ವರ್ಷಗಳು ದಿವಸಕ್ಕೊಮ್ಮೆ ಮಾತನಾಡದೇ ಇರುವುದೇ ಕಡಿಮೆಯಾಗಿತ್ತು. ಅಷ್ಟೊಂದು ಸಂಪರ್ಕ ಮತ್ತು ಸಂಬಂಧದಲ್ಲಿ ಇದ್ದೆವು. ಅದೇ ಸಂಬಂಧವನ್ನು ಇವತ್ತಿನವರೆವಿಗೂ ನಾವು ಇಟ್ಟುಕೊಂಡಿದ್ದೇವೆ. ನಾವು ಈ 52-53 ವರ್ಷಗಳಲ್ಲಿ ಒಮ್ಮೆಯೂ ಸಹ ನಮ್ಮ ಬಸವರಾಜ ಹೊರಟ್ಟಿಯವರನ್ನು ಹೊಗಳಿಯೇ ಇಲ್ಲ. ಅವರ ಸನ್ಮಾನಕ್ಕೆ ನನ್ನ ಕರೆದರೂ ಸಹಿತ ನಾನು ಅವರನ್ನು ಹೋಗಳಿದವನಲ್ಲ. ಆ ರೀತಿಯ ಸ್ನೇಹ ನಮ್ಮದಾಗಿತ್ತು. ಆದರೆ, ಇವತ್ತು ನನಗೆ ಈ ಒಂದು ಸಂದರ್ಭದಲ್ಲಿ ಇಲ್ಲಿ ನಾನು ಇರುವುದು ಹಾಗೂ ನನಗೆ ಈ ಒಂದು ಅವಕಾಶ ಸಿಕ್ಕಿರುವುದು, ಅದರಲ್ಲೂ ನಾನು ಕೊನೆಯ ಭಾಷಣಕಾರನಾಗಿ ಮತ್ತು ಸರ್ಕಾರದ ಪರವಾಗಿಯೂ ತಮಗೆ ಅಭಿನಂದಿಸುವಂತಹ ಅವಕಾಶ ಸಿಕ್ಕಿರುವುದು ನಿಜವಾಗಿಯೂ ನನ್ನ ಸೌಭಾಗ್ಯವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಬಸವರಾಜ ಹೊರಟ್ಟಿಯವರು 1978 -79 ರಿಂದ ಬಹಳ ಕಠಿಣ ಜೀವನವನ್ನು ಕಳೆದಂತಹವರು. ಇವತ್ತು glamorous ಆಗಿ ಇನ್ನು ಹುಡುಗನ ರೀತಿಯಲ್ಲಿ ಕಾಣುತ್ತಾರೆ. ಹೋರಾಟ ಎಂದರೆ ಅದು ಎಂತಹ ಹೋರಾಟ? ಸತ್ಯಾಗ್ರಹ ಮಾಡುವುದರ ಸಲುವಾಗಿ ಅವರು ಉಪವಾಸ ಕುಳಿತಿದ್ದರು. ಆದರೆ, ಇತರೆ ಗೆಳೆಯರು ಕೂಡ ಊಟ ಮಾಡಿಸಲಿಕ್ಕೆ ಯಾರು ಗೆಳೆಯರು ಇಲ್ಲವೆನ್ನುವ ಕಾರಣಕ್ಕೆ ಇವರು ಸಹ ಅವರ ಜೊತೆ ಉಪವಾಸ ಕುಳಿತುಕೊಳ್ಳಬೇಕು. ಅವರು ಉಪವಾಸ, ಇವರು ಉಪವಾಸ. ಉಪವಾಸ ಬಿದ್ದು ಹೋರಾಟ ಮಾಡಿರುತ್ತಾರೆ. ತನ್ಮೂಲಕ ಶಿಕ್ಷಕರ ಸಂಘಟನೆ ಮಾಡಿ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾಗಿರುವಂತಹದ್ದು ಅವರನ್ನು ಈ ಒಂದು ಎತ್ತರಕ್ಕೆ ತಂದಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಬಹುಶಃ ಅವರಿಗೆ ಇನ್ನೂ ನೆನಪು ಇರಬಹುದು, ಅ Lamington High School ಹತ್ತಿರ ಆ ಬಾಲರೆಡ್ಡಿ ಎನ್ನುವವನ್ನು ಉಪವಾಸ ಕೂರಿಸಿದ್ದರು. ಅದು ಮುಂದೆ ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘಟನೆ ಹುಟ್ಟು ಹಾಕುವುದಕ್ಕೆ ಕಾರಣವಾಯಿತು. ಮುಂದೆ ಕೆಲವೇ ದಿವಸಗಳಲ್ಲಿ ಚುನಾವಣೆ ಬರತಕ್ಕಂತಹ ಎಲ್ಲಾ ಚಿಹ್ನೆಗಳು ಕಾಣುತ್ತಿದ್ದವು. ಚುನಾವಣೆಗೆ ನಿಲ್ಲಬೇಕೆಂದು ಬಯಸಿದವರಲ್ಲ. ಅಥವಾ ಆ ಸಂಘಟನೆ ಮಾಡುವ ಮುಂದೆ ಚುನಾವಣೆ ಮಾಡಬೇಕೆಂದು ಹೇಳಿ ಸಂಘಟನೆ ಮಾಡಲಿಲ್ಲ. ಆ ಸಮಯದಲ್ಲಿ ಎಂಥೆಂತಹ ದಿಗ್ಗಜರು ಇದ್ದರು ಎಂದರೆ, ಶ್ರೀ ಎಸ್.ಐ. ಶೆಟ್ಟರು ಎಂದು ಹೇಳಿ one who was more popular than ಶ್ರೀ

ಎಸ್.ಆರ್. ಬೊಮ್ಮಾಯಿ. ಜೊತೆಗೆ ಒಳ್ಳೆಯ ಶಿಕ್ಷಕರೂ ಕೂಡ ಆಗಿದ್ದರು. ಟ್ಯೂಷನ್ ಮಾಸ್ಟರ್ ಸಹಿತ ಇದ್ದರು. ಸಾಕಷ್ಟು ರೀತಿಯಲ್ಲಿ ತಮ್ಮದೇ ಆದಂತಹ ಪ್ರಭಾವವನ್ನು ಹೊಂದಿದ್ದರು. ಶ್ರೀಮಂತರು ಸಹ ಇದ್ದರು. ರಾಜಕೀಯವಾಗಿ ಬಹಳ ಎತ್ತರದಲ್ಲಿದ್ದರು. ನಾವು ಇವರನ್ನು ಚುನಾವಣೆಗೆ ನಿಲ್ಲಿ, ನಿಲ್ಲಿ. ನೀವು ನಿಲ್ಲಲೇ ಬೇಕೆಂದು ಒತ್ತಾಯ ಮಾಡುವಾಗ ಶೆಟ್ಟರು ಕಾಣುತ್ತಿದ್ದರು.

(ಮುಂದು)

(797) 19.08.2025 04.40 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):-**

ಶ್ರೀ ಎಸ್.ಐ.ಶೆಟ್ಟರ್ ಅವರ ಜೊತೆಗೆ ಸ್ಪರ್ಧೆ ಮಾಡುವಾಗ ಹೊಸದಾಗಿ ಚುನಾವಣೆಗೆ ನಿಲ್ಲುವ ವ್ಯಕ್ತಿಯು ಕುಬ್ಜವಾಗಿಯೇ ಕಾಣುತ್ತಾನೆ. ಆದರೆ ಆ ಶಿಕ್ಷಕರ ಸಂಘಟನೆ, ಹೋರಾಟ, ಹೋರಾಟದಲ್ಲಿ ಇವರು ಪಟ್ಟಿರುವಂಥ ಶ್ರಮ, ತೋರಿಸಿರತಕ್ಕಂಥ ಧೈರ್ಯ ಇವರನ್ನು ನಮ್ಮ Karnataka West Teachers Constituency ಚುನಾಯಿತರಾಗುವ ಹಾಗೆ ಮಾಡಿದೆ. ನೀವೆಲ್ಲರೂ ಮಾತನಾಡುತ್ತಿದ್ದೀರಿ. ಅವರು ಶತ್ರುರಹಿತ, ಯಾರ ವಿರೋಧವೂ ಇಲ್ಲ, ಎಲ್ಲರ ಸ್ನೇಹಿತರು. ಇಲ್ಲ, ಇಲ್ಲ. ಮೊದಲು ಅವರು ಎಷ್ಟು ಮಂದಿಯ ವಿರೋಧ ಎದುರಿಸಬೇಕಾಗಿ ಬಂದಿತು. ಆದರೆ ಗೌರವದಿಂದ ಎಲ್ಲಾ ವಿರೋಧವನ್ನು ಎದುರಿಸಿ ಒಂದು ಹಂತಕ್ಕೆ ಬೆಳೆದು ನಿಂತಾಗ he was working only for teachers some time. ಕೇವಲ ಶಿಕ್ಷಕರು ಮಾತ್ರ. ಅವನೇ ದೇವರು, ಅವನೇ ಗುರು, ಅವನೇ ನನಗೆ ಎಲ್ಲಾ ಎಂದು ಹೇಳಿ ಅವನ ಪರವಾಗಿ ಹೋರಾಟ ಮಾಡಿದರು. ಆ ಸಂದರ್ಭದಲ್ಲಿ interest clashes ಪ್ರಾರಂಭವಾಗುತ್ತದೆ. ಮ್ಯಾನೇಜ್‌ಮೆಂಟ್ ಒಂದು ಕಡೆ, ಶಿಕ್ಷಕರು ಒಂದು ಕಡೆ; ಕೆಲವು ಕಾಲ ಮ್ಯಾನೇಜ್‌ಮೆಂಟ್‌ನವರ ಪ್ರತಿರೋಧವನ್ನು ಎದುರಿಸಬೇಕಾಗಿ ಬಂದಿತು. ಅಷ್ಟಾಗಿಯೂ ಅವರು ಆ ಪರೀಕ್ಷೆಯನ್ನು ದಾಟಿ ಬಂದರು. ಈಗ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ತೆಗೆದುಕೊಂಡು ಅದನ್ನು ಮಾಡು, ಇದನ್ನು ಮಾಡು ಎಂದು ಹೇಳುತ್ತಾರೆ. ಆಗ ಶಾಸಕರಾಗಿ ಕಾಲಿಟ್ಟಾಗ ಒಂದು ವರ್ಷ, ಎರಡು ವರ್ಷವಲ್ಲ, ಸುಮಾರು 25 ವರ್ಷ – ಅವರು ಒಂದು ಚಾರ್ಟ್ ಅನ್ನು ಸಿದ್ಧ ಪಡಿಸಿಕೊಂಡಿದ್ದರು. ಈ ಫೈಲ್ ಯಾವ ಕಾರಕೂನನ ಬಳಿ ಹೋಯಿತು, ಯಾವ ಸೂಪರಿಂಟೆಂಡೆಂಟ್ ಹತ್ತಿರ ಹೋಯಿತು, ಯಾವ ಅಧೀನ ಕಾರ್ಯದರ್ಶಿಯ ಬಳಿ ಹೋಯಿತು? ಬೆಳಗ್ಗೆ 10-10.30ಕ್ಕೆ ಶಾಸಕರ ಭವನದ ಗಾಡಿ ತೆಗೆದುಕೊಂಡು ಹೊರಡುತ್ತಿದ್ದರು. ಗಾಡಿ ಇಲ್ಲ ಎಂದರೆ ಆಟೋದಲ್ಲಿ ಹೋಗುತ್ತಿದ್ದರು. ಪ್ರತಿಯೊಂದು ಟೇಬಲ್ ಬಳಿಗೆ ಹೋಗಿ ರಮಿಸುವವರಿಗೆ ರಮಿಸುತ್ತಿದ್ದರು. ಜಬರಿಸುವವರಿಗೆ ಜಬರಿಸುತ್ತಿದ್ದರು. ದೂರು ನೀಡಬೇಕೆನಿಸಿದರೆ ದೂರನ್ನೂ ಕೊಡುತ್ತಿದ್ದರು. ಕಾರಕೂನರ ಹಂತದಲ್ಲಿಯೇ ಅವನು ಬಹಳ ವಿರೋಧ ಮಾಡುತ್ತಿದ್ದ ಎಂದರೆ ಆ ಕಾರಕೂನನನ್ನು ಅಲ್ಲಿಂದ ತೆಗೆಸಿ ಎತ್ತಂಗಡಿ ಮಾಡಿಸುವವರೆಗೆ ಹಠಕ್ಕೆ ಬಿದ್ದು, ಶರತ್ತಿಗೆ ಬಿದ್ದು, ಶಿಕ್ಷಕರ ಕೆಲಸಗಳನ್ನು ಮಾಡುವ ಹಾಗೆ ಮಾಡಿದರು. ಶಿಕ್ಷಕರ ಮನೆಯಲ್ಲಿ ಶಿಕ್ಷಕ ಮಾತ್ರವಲ್ಲ, ಅವರ ಮಕ್ಕಳು-ಮೊಮ್ಮಕ್ಕಳು ಎಲ್ಲರೂ ಅವರ ಹಿಂಬಾಲಕರಾಗುವುದಕ್ಕೆ

ಸಾಧ್ಯವಾಯಿತು. ತಮ್ಮ ಪರಿಶ್ರಮದಿಂದ, ತಮ್ಮ ಶಕ್ತಿಯನ್ನು ತಮ್ಮ ಬಲವನ್ನು ಬೆಳೆಸಿಕೊಂಡರು. ಯಾವುದೇ ರಾಜಕೀಯದ ಬಲ ಅಥವಾ ವ್ಯಕ್ತಿಯ ಬಲ, ಪಕ್ಷದ ಬಲ, ಪಂಗಡದ ಬಲ ಅವರಿಗೆ ಸಿಕ್ಕಿತು, ಅದಕ್ಕೆ ಮೇಲೆ ಬಂದರು ಎಂದು ಅಲ್ಲವೇ ಅಲ್ಲ. Nobody can claim. Neither Janatha Dal (Secular) Party can claim, nor anybody can claim. BJP can claim that we have given him support, that's why he is this much, and he is that much ಎಂದು ಹೇಳುವುದಕ್ಕೆ ಯಾರಿಗೂ ಅವಕಾಶವಿಲ್ಲ. ಸ್ವಂತ ಬಲದ ಮೇಲೆ ಸಂಪೂರ್ಣವಾಗಿ ಎದ್ದು ನಿಂತವರು.

ನಾವೆಲ್ಲಾ ನೋಡುತ್ತೇವೆ. ರಾಜಕಾರಣದಲ್ಲಿ ಜಾತಿ ಬಲದ ಬಗ್ಗೆ ನಮಗೆಲ್ಲರೂ ವಿಶೇಷವಾಗಿರುವಂಥ ಅನುಭವವೂ ಇರುತ್ತದೆ ಹಾಗೂ ಅದರ ಬಗ್ಗೆ ಅಭಿಮಾನವೂ ಇರುತ್ತದೆ. ಹೊರಟ್ಟಿಯವರನ್ನು ಕೇಳಿ. ಈಗ ನಾವು ಇಲ್ಲಿರುವವರಿಗೆ ಒಂದು secret ballot ಮಾಡಿದ್ದೇವೆಂದರೆ ಅವರು ಯಾವ ಜಾತಿಯವರು ಎನ್ನುವುದು ಒಂದೇ ಪ್ರಶ್ನೆ. ಜಾತಿ, ಉಪಜಾತಿಗಳನ್ನು ಹಿಡಿದುಕೊಂಡು ಏನಿಲ್ಲವೆಂದರೂ ನಾಲ್ಕೈದು ಹೆಸರು ಬರುತ್ತದೆ. ಇವರು ಗಾಣಿಗೇರ, ಇವರು ಪಂಚಮಶಾಲಿ, ಇವರು ರೆಡ್ಡಿ ಎಂದು ಹಾಕುತ್ತಾರೆ. ಸಾರ್ವಜನಿಕ ಬದುಕಿನಲ್ಲಿ ಸುಮಾರು 60 ವರ್ಷ ಇದ್ದು, ಯಾರಿಗೂ ಏನೂ ತಿಳಿದಿಲ್ಲ ಎಂದರೆ ಜಾತ್ಯಾತೀತವಾಗಿ ಹೇಗೆ ಅವರು ರಾಜಕೀಯ ಬದುಕು ನಡೆಸಿದ್ದಾರೆ ಎಂಬುದನ್ನು ತಿಳಿಯಬಹುದು.

ಮಾತೆತ್ತಿದರೆ ಜಾತಿಯ ಮಾತನ್ನು ಹೇಳುತ್ತಾರೆ ಅಥವಾ ವಿರೋಧಿಗಳು ಅವರು ಈ ಜಾತಿಯವರು ಎಂದು ಹೇಳುತ್ತಾರೆ. ಆದರೆ ಜಾತಿಯೇ ಇನ್ನೂ confusion ನಲ್ಲಿದೆ ಅಂದರೆ ಎಷ್ಟು ಜಾತ್ಯಾತೀತವಾಗಿ ಅವರು ಕೆಲಸ ಮಾಡಿರಬಹುದು. ರಗಡು ಮಂದಿ ಬರುತ್ತಾರೆ. ನಾವು ನಿಮ್ಮ ಮಂದಿ ಎಂದು ಬರುತ್ತಾರೆ, ನಾವು ನಿಮ್ಮ ಸಮಾಜದವರೆಂದು ಬರುತ್ತಾರೆ. ಅವರಿಗಷ್ಟೇ ನಗುತ್ತಾರೆ. ನಕ್ಕರೆ ಅಷ್ಟಕ್ಕೆ ಮುಗಿಯಿತು. ಅವನು ಹೌದು/ಅಲ್ಲ ಇವು ಯಾವುವೂ ಪ್ರಶ್ನೆಯಲ್ಲ. ಇದು ಅವರ ಬಹಳ ದೊಡ್ಡ ಶಕ್ತಿ. ಅದೇ ಅವರ ದೊಡ್ಡತನ. ಜಾತಿಯ ಮೇಲೆ ಏನೂ ಮಾಡಿಲ್ಲ ಎನ್ನುವುದಕ್ಕಿಂತ ಹೆಚ್ಚು ರಾಜಕಾರಣದಲ್ಲಿ purity ಎನ್ನುವುದೇನು ಸಾಧ್ಯವಿದೆ?

ಸ್ನೇಹಿತರೆ, ನಾನು ಈ ವಿಧಾನ ಪರಿಷತ್ತಿನಲ್ಲಿ ಅವರೊಡನೆ ಕೆಲಸ ಮಾಡುವಾಗ ನಾವು ಬಹಳ ದೊಡ್ಡ ಸಾಧನೆಯೇನು ಮಾಡಿದ್ದೇವೆಂದರೆ ಪ್ರಾದೇಶಿಕ ಸಮಾನತೆಯನ್ನು ಕೊಡಿಸುವಲ್ಲಿ ನಾವು ಯಶಸ್ವಿಯಾದೆವು. ನ್ಯಾಯದ ಬಗ್ಗೆ ನಾವು ಕೂಗೆತ್ತಿದೆವು. ಒಮ್ಮೆ ಅವರು ಆಚೆ ಕಡೆ ಇರುತ್ತಿದ್ದರು, ನಾವು ಈಚೆ ಕಡೆ ಇರುತ್ತಿದ್ದೆವು. ವಿಧಾನ ಪರಿಷತ್ತಿನಲ್ಲಿ ಯಾವುದೇ ರಾಜಕೀಯ ವಿಷಯವಿರಲಿ, ಸಾಮಾಜಿಕ ವಿಷಯವಿರಲಿ ಬಂದಾಗ ಸಮಾಜಕ್ಕೆ ಒಳ್ಳೆಯದಾಗುವುದಕ್ಕೆ ಒಂದು ರೀತಿಯಲ್ಲಿ ಒಂದಾಗಿ ಹೋರಾಟ ಮಾಡಿದ್ದೇವೆ. ನಾವಿಬ್ಬರೇ ಅಲ್ಲ. ನಮ್ಮ ಕೂಡ ಅಂದು ಇದ್ದವರನ್ನು ನಾನು ಇವತ್ತು ನೆನಪು ಮಾಡಿಕೊಳ್ಳಬೇಕು. ಡಾ:ಎಂ.ಆರ್.ತಂಗಾ ಅವರನ್ನು ನೆನಪು ಮಾಡಿಕೊಳ್ಳುತ್ತೇನೆ. ಶ್ರೀ ಎಂ.ಪಿ.ನಾಡಗೌಡರನ್ನು ನೆನಪು ಮಾಡಿಕೊಳ್ಳುತ್ತೇನೆ. ಇವರೆಲ್ಲರೂ ಅಂದು ನಮ್ಮ ಜೊತೆಯಲ್ಲಿ ಸಾಕಷ್ಟು ಧ್ವನಿಗೂಡಿಸಿದ್ದರು. ನಾವು ಬೇರೆ ಬೇರೆ ಪಕ್ಷದಲ್ಲಿದ್ದರೂ ಸಹಿತ ಸಮಾಜಕ್ಕೆ ಒಳಿತಾಗುವುದರ

ಬಗ್ಗೆ, ಸರ್ಕಾರ ಒಂದು ನಿರ್ದಿಷ್ಟವಾದ ಕೆಲಸ ಮಾಡಲೇಬೇಕೆನ್ನುವಾಗ ಬಹಳ ವಿಶೇಷವಾಗಿರುವಂಥ ಚಾಕಚಕ್ಯತೆಯನ್ನು ತೋರಿಸಿ, ಜಾಣತನವನ್ನು ತೋರಿಸಿ ಈ ಸದನದಲ್ಲಿ ಆ ಕಾರ್ಯಕ್ರಮಗಳಾಗುವಂತೆ ಮಾಡಿದ್ದೆವು. ನಂಜುಂಡಪ್ಪ ಸಮಿತಿಯು ನೇಮಕವಾಗುವುದರ ಹಿಂದೆ ನಾವು 5 ವರ್ಷ ಮಾಡಿದಂತಹ ಪ್ರಾದೇಶಿಕ ಸಮಾನತೆಗಾಗಿ ಹೋರಾಟವು ಅಂತಿಮವಾಗಿ ಫಲಿತಾಂಶವನ್ನು, ಫಲಶ್ರುತಿಯನ್ನು ನೀಡಿತು. ಅದರ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದವರು ಮಾನ್ಯ ಬಸವರಾಜ ಹೊರಟ್ಟಿಯವರು ಎಂಬುದನ್ನು ನಾನು ಈ ಸಂದರ್ಭದಲ್ಲಿ ಒಪ್ಪಲೇಬೇಕು. ನನಗೆ ಬಹಳ ಖುಷಿ ಏಕಾಯಿತೆಂದರೆ ನಾನು ಯಾವಾಗ ಇತ್ತೀಚಿನ ದಿನಗಳಲ್ಲಿ ಈ ವಿಧಾನ ಪರಿಷತ್ತಿಗೆ ಬಂದಿರುತ್ತಿದ್ದೆನು. ನಾನು, ಅವರು ಹೆಚ್ಚು ಭೇಟಿಯಾಗುತ್ತಿದ್ದುದು ನಮ್ಮ ಕಿತ್ತೂರು ಎಕ್ಸ್‌ಪ್ರೆಸ್ ರೈಲಿನಲ್ಲಿ. ನಾನು ವಿಧಾನ ಪರಿಷತ್ತಿಗೆ ಬಂದು ಹೋಗಿದ್ದೇನೆಂದರೆ ನಾನು ಒಂದು ರೀತಿಯ ಅಸಮಾಧಾನವನ್ನೇ ವ್ಯಕ್ತ ಮಾಡುತ್ತಿದ್ದೆನು. ಏ.. ನೀವು ಅವರಿಗೆ ಹಿಂಗಂದ್ರಲ್ರೀ..; ಏ ಪೂಜಾರ, ಕೂಡು ಎಂದು ಬಿಟ್ರಲ್ರೀ, ನೀವು ಭಾಳ ಒರಟಲ್ಲ ಹೇಳಿದ್ರಿ ಬಿಡ್ರಿ ಎಂದು ಇದೇ ಮಾತನ್ನು ಅವರಿಗೆ ಹೇಳುತ್ತಿದ್ದೆನು. I was under the impression that you all have felt hurt by those words. Actually, he never intended that those words to be told. ಆದರೆ ಉತ್ತರ ಕರ್ನಾಟಕದ ಗ್ರಾಮೀಣ ಭಾಗದಿಂದ ಬಂದಿರತಕ್ಕಂಥ ಅವರು ಪ್ರಾಂಜಲ ಮನಸ್ಸಿನಿಂದ ಅಭಿವ್ಯಕ್ತಗೊಳಿಸುವ ಆ ನುಡಿಗಳು ನಮಗೆ ಯಾರಿಗೂ ನೋವು ಮಾಡಲಿಲ್ಲ. ಏ ನೀ ಕೂಡೋ ಅಂದರೂ, ಕೆಲವು ಸಂದರ್ಭಗಳಲ್ಲಿ ನೀ ಏನ.. ಎಂದು ಹೇಳಿ ಮುಂದಕ್ಕೆ ಸಾಕಷ್ಟು ಸಾಲುಗಳಿವೆ. ಆ ಶಬ್ದಗಳ ಬಳಕೆಯನ್ನು ಮಾಡಿಬಿಟ್ಟಿದ್ದರು. ಆದಾಗ್ಯೂ ಸಹಿತ ನೂರಕ್ಕೆ ನೂರರಷ್ಟು ಪಕ್ಷಾತೀತವಾಗಿ ಎಲ್ಲರ ಮನಸ್ಸನ್ನು ಗೆದ್ದಿದ್ದಾರೆ. ಸಿಟ್ಟಿನಿಂದ ನಾಲ್ಕು ಮಾತುಗಳನ್ನಾಡುವವರನ್ನು followers ಬಿಟ್ಟು ಹೋಗಿರುವುದನ್ನು ನಾವು ನೋಡಿದ್ದೇವೆ.

**(ಮುಂದು)**

(798) 19-08-2025 (4.50) ಕೆಜಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಹೆಚ್.ಪಾಟೀಲ್ (ಮುಂದು):-**

ಆದಾಗ್ಯೂ ಸಹಿತ ನೂರಕ್ಕೆ ನೂರರಷ್ಟು ಪಕ್ಷಾತೀತವಾಗಿ ಎಲ್ಲರ ಮನಸ್ಸನ್ನು ಗೆದ್ದುಕೊಂಡಿದ್ದಾರೆ. ಬರೀ ನಾಲ್ಕಾರು ಮಾತುಗಳನ್ನು ಸಿಟ್ಟಲ್ಲಿ ಮಾತನಾಡುತ್ತಾರೆ ಎಂದು ಹಿಂಬಾಲಕರು ಬಿಟ್ಟು ಹೋಗಿರುವುದನ್ನು ನಾವು ನೋಡಿದ್ದೇವೆ. ಆದರೆ, ಇಷ್ಟೆಲ್ಲಾ ಶಿಸ್ತನ್ನು ಪರಿಷತ್ತಿಗೆ ತಂದು, ಬಹಳ ಗಟ್ಟಿತನದಿಂದ ಉತ್ತರ ಕರ್ನಾಟಕ ಭಾಷೆ ಬಳಕೆ ಮಾಡಿಕೊಂಡು ನೀವು ಎಲ್ಲರ ಮನಸ್ಸು ಮತ್ತು ಹೃದಯದೊಳಗೆ ಎತ್ತರದ ಸ್ಥಾನದಲ್ಲಿ ಇರುವುದು ನನಗೆ ಅಭಿಮಾನ ತಂದಿದೆ. ಅವರು ಆ ಕುರ್ಚಿ ಮೇಲೆ ಕುಳಿತಿದ್ದಾರೆ ಎಂದಲ್ಲ. ಇವತ್ತಿನ ರಾಜಕಾರಣದಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಬಹಳ ಗಂಭೀರವಾಗಿ ನಮ್ಮ ದೃಷ್ಟಿ ಹರಿಸಬೇಕು. ರಾಜಕಾರಣದಲ್ಲಿ ಇದ್ದವರು ಹೇಗೇಗೆ ಇದ್ದಾರೆ. ಒಬ್ಬರು ಮುಖ್ಯಮಂತ್ರಿಗಳ ಪಕ್ಕದಲ್ಲಿ ನಿಂತುಕೊಂಡು ಒಂದು ಫೋಟೋ ತೆಗೆಸಿಕೊಂಡಿದ್ದಾನೆಂದರೆ ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ

ದೊಡ್ಡ ಬಾಂದಗಡೆ ಮಾಡಿಬಿಟ್ಟಿರುತ್ತಾನೆ. ಯಾರದೋ ಕಡೆಯಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಿಬಿಟ್ಟಿರುತ್ತಾನೆ. ಆದರೆ, ಇವರು ನಾಲ್ಕೈದು ಮುಖ್ಯಮಂತ್ರಿಗಳ ಜೊತೆಗೆ ಹೆಗಲಿಗೆ ಹೆಗಲು ಹಚ್ಚಿ, ಒಂಟಕ್ಷರದಲ್ಲಿ ಮಾತನಾಡಿಕೊಂಡು, ಅವರು-ಇವರು ಹೆಗಲ ಮೇಲೆ ಕೈ-ಹಾಕಿಕೊಂಡಿರುವಷ್ಟು ಸಂಪರ್ಕ-ಸಂಬಂಧವನ್ನು ರಾಜಕಾರಣದಲ್ಲಿ ಮಾಡಿಕೊಂಡು, ಪವರ್ ಕಾರಿಡಾರ್‌ನಲ್ಲಿ ಇಷ್ಟೊಂದು ಪ್ರಭಾವ ವಲಯ ಇರುವಾಗಲೂ ಸಹ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ರಿಯಲ್ ಎಸ್ಟೇಟ್ ಮನುಷ್ಯರಾಗಲಿಲ್ಲ, ಗಣಿ ಮಾಲೀಕರಾಗಲಿಲ್ಲ, ಎಕ್ಸೈಸ್ ಗುತ್ತಿಗೆದಾರರಾಗಲಿಲ್ಲ, ಪವರ್ ಬ್ರೋಕರ್ ಆಗಲಿಲ್ಲ. ನಾವು ನೋಡಿದಂತೆ ನಮಗಿಂತ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗಿಂತ 20 ವರ್ಷ ಲೇಟಾಗಿ ರಾಜಕಾರಣಕ್ಕೆ ಬಂದವರು, ನಾವು ಎಲ್.ಹೆಚ್. ಕಾರಿನಲ್ಲಿ ಹೋದರೆ ಅವರು ರಿಕ್ಷಾದಲ್ಲಿ ಬಂದಿಳಿಯುತ್ತಿದ್ದವರು, ಈಗ ದೊಡ್ಡ ಗಾಡಿಯನ್ನು ಬಳಸುತ್ತಿದ್ದಾರೆ. ರಾಜಕಾರಣ ಎಂದರೆ, ಹಣ ಮಾಡುವ ರಾಜಕಾರಣವನ್ನು ಕಾಲಿನಿಂದ ಒದ್ದು ಅದರಿಂದ ದೂರನಿಂತು ಶಿಕ್ಷಕರ ಸೇವೆ ಮಾಡಿದರು. ಅದಕ್ಕಾಗಿ ಅವರಿಗೆ ಇವತ್ತು ದೊಡ್ಡ ಗೌರವ ಸಂದಿದೆ. ಅವರೂ ಸಾವಿರ-ಎರಡು ಸಾವಿರ ಕೋಟಿ ರೂಪಾಯಿಗಳನ್ನು ಮಾಡಿಕೊಂಡಿದ್ದರೆ, ಅವರು ನಲವತ್ತೈದು-ನಲವತ್ತೆಂಟು ವರ್ಷಗಳು ಈ ಸದನದಲ್ಲಿ ಇರುವುದಕ್ಕೆ ಆಗುತ್ತಿರಲಿಲ್ಲ. ಅವರು ಈ ಸದನದಲ್ಲಿ ಇದ್ದರೂ ಸಹ, ಅವರಿಗೆ ಆತ್ಮತೃಪ್ತಿ ಇದೆ. ಮಾನ್ಯ ಹೆಚ್.ವಿಶ್ವನಾಥ್ ರವರೆ, he is most emotional man. ಅವರು ಎಷ್ಟು ಎಮೋಷನಲ್ ಎಂದರೆ ನಾಲ್ಕು ಮಾತನಾಡುವ ಮುನ್ನ ಅವರ ಕಣ್ಣಲ್ಲಿ ನೀರು ತುಂಬಿರುತ್ತದೆ. ಅವರು ನನ್ನ ತಂದೆಯವರ ವಿಚಾರ ಮಾತನಾಡುವಾಗ ಭಾರಿ ಭಾವೋದ್ವೇಗದಿಂದ ಮಾತನಾಡುತ್ತಿದ್ದರು. ನನ್ನ ತಂದೆಯವರು ಸಹ ಅವರ ಮೇಲೆ ಅಷ್ಟೇ ಪ್ರೀತಿಯನ್ನು ಹೊಂದಿದ್ದರು. ನಮಗೆಲ್ಲರೂ ಅವರು ಹೇಳಿದಂತೆ ಕೇಳಿ ಎಂದು ಹೇಳುತ್ತಿದ್ದರು, ಅವರು ಹೇಳಿದ್ದನ್ನೇ ಮಾಡುತ್ತೇನೆ ಎನ್ನುತ್ತಿದ್ದರು. This was the affection that he was getting and he got this type of affection from good many leaders of Karnataka politics. He is the most lucky man. ಅಂತಹ ಸುದೈವಿ.

ಅಂದಿನ ಹೋರಾಟದಲ್ಲಿ ಹತ್ತಾರು ವರ್ಷಗಳು ಬಹಳ ಕಠಿಣ ಸಂದರ್ಭಗಳನ್ನು ಎದುರಿಸಿದರು. ಅದನ್ನು ಹೊರತುಪಡಿಸಿ ಮುಂದಿನ ನಲವತ್ತು ವರ್ಷ ಬಹಳ ಸುದೈವಿಯಾಗಿ ಮೇಲೆ ಬಂದವರಾಗಿದ್ದಾರೆ. ಅವರನ್ನು ಯಾವುದಾದರೂ ಸಮಯದಲ್ಲಿ ಕುಳ್ಳಿರಿಸಿಕೊಂಡು ಕೇಳಬಹುದು, ಅವರು ಮೊದಲನೆಯ ಚುನಾವಣೆಯಲ್ಲಿ ಎಷ್ಟು ಖರ್ಚು ಮಾಡಿದರು, ಎರಡು, ಮೂರು, ನಾಲ್ಕು, ಐದು ಹಾಗೂ ಆರನೇ ಚುನಾವಣೆಯಲ್ಲಿ ಎಷ್ಟು ಖರ್ಚು ಮಾಡಿದರು ಎಂದು ಕೇಳಬಹುದು. ಆದರೆ, ಅವರು ಏಳನೇ ಮತ್ತು ಎಂಟನೆಯ ಚುನಾವಣೆಯಲ್ಲಿ ಮಾತ್ರ ಹೆಚ್ಚು ಖರ್ಚು ಮಾಡಿದರು. ಅಲ್ಲಿನವರೇ ಪೆಟ್ರೋಲ್ ಹಾಕಿಸುತ್ತಿದ್ದರು, ಅವರು ಯಾರ ಮನೆಗೆ ಹೋದರೂ ಅವರೇ ಅವಲಕ್ಕಿ ಮಾಡಿಕೊಡುತ್ತಿದ್ದರು, ಅವರೇ ತಿಂಡಿ ಕೊಟ್ಟು ಕಾಳಜಿ ಮಾಡುತ್ತಿದ್ದರು. ಈ ರೀತಿಯಾಗಿ ಚುನಾವಣೆಯನ್ನು ಎದುರಿಸಿದ್ದಾರೆ. ಗೆಳೆತನಕ್ಕೆ ಬಹಳ ಅರ್ಹರಾಗಿ ಬದುಕನ್ನು ನಡೆಸಿಕೊಂಡು ಬಂದವರಾಗಿದ್ದಾರೆ. ಒಬ್ಬರು ಶ್ರೀ ದೇಸಾಯಿ ಮಾಸ್ತರೆಂಬುವವರು ನನ್ನ ಗುರುಗಳು, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಗೆಳೆಯರು ಮತ್ತು ಮಾನ್ಯ

ಡಿ.ಆರ್. ಪಾಟೀಲ್ ಗೆಳೆಯರೂ ಆಗಿದ್ದಾರೆ. ಅವರ ಮೂಲಕ ಇವರು ಹಲವಾರು ಜನರನ್ನು ನೋಡುತ್ತಿರುತ್ತಾರೆ. ಅಂತಹದ್ದೇ ಸಂಬಂಧವನ್ನು ಶ್ರೀ ರಮೇಶ್ ಜಂಗಲ್ ರವರ ಜೊತೆ, ಶ್ರೀ ರಂಗಣ್ಣ ಗೌಡರ ಜೊತೆ, ಶ್ರೀ ಮೋಹನ್ ಗೌಡರ ಜೊತೆಗೆ ಸಂಬಂಧಗಳನ್ನು ಹೊಂದಿದ್ದಾರೆ. ಮಾನ್ಯ ಪೂಜಾರ್ ರವರಿಗೆ ತಿಳಿದಂತೆ ನಾನು ಹತ್ತಾರು ಹೆಸರುಗಳನ್ನು ಹೇಳಬಹುದು, ಆ ಹತ್ತಾರು ಹೆಸರುಗಳು ಮಾನ್ಯ ಪೂಜಾರ್ ರವರಿಗೆ ಗೊತ್ತಿದೆ. ಇಷ್ಟೆಲ್ಲಾ ಸಂಪರ್ಕ-ಸಂಬಂಧಗಳನ್ನು ಹೊಂದಿ, ಎಲ್ಲರ ಜೊತೆ ಸ್ನೇಹಿತರಾಗಿ, ಶಿಕ್ಷಕರ ಬಗ್ಗೆ ಆಸಕ್ತಿ ವಹಿಸಿ, ಅವರನ್ನು ಯಾವಾಗಲೂ ಕೈಬಿಡುವುದಿಲ್ಲ. ಇವತ್ತು ನಮ್ಮ ಉತ್ತರ ಕರ್ನಾಟಕದಲ್ಲಿ ಶಿಕ್ಷಕರು ಶೋಷಣೆ ಮುಕ್ತರಾಗಿದ್ದರೆ. ಅದಕ್ಕೆ ಮೂಲ ಕಾರಣ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಹೋರಾಟವಾಗಿರುತ್ತದೆ. ಶಿಕ್ಷಕರು ಅತ್ಯಂತ ಶೋಷಿತರಾಗಿದ್ದರು. ಆ ಕಾರಣಕ್ಕೆ Sri Basavaraja Shivalingappa Horatti is not just a leader of one Constituency teachers. ಶಿಕ್ಷಕರ ಕ್ಷೇತ್ರದಿಂದ ಬರುವವರೇ ಆಲೋಚನೆ ಮಾಡಬೇಕು, ಹಿಂದೆ ಯಾವ ಶಿಕ್ಷಕರು ಬರುತ್ತಿರಲಿಲ್ಲ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ವಿಧಾನ ಪರಿಷತ್ತಿಗೆ ಬಂದ ಮೇಲೆ ಮಾಧ್ಯಮಿಕ ಶಿಕ್ಷಕರ ಸಂಘಟನೆ ಮಾಡಿದ ಮೇಲೆ ಶಿಕ್ಷಕರ ಪ್ರತಿನಿಧಿಗಳು ಶಿಕ್ಷಕರ ಕ್ಷೇತ್ರದಿಂದ ಈ ಸದನಕ್ಕೆ ಬಂದರು ಎಂಬುದನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ನೆನಪು ಮಾಡಿಕೊಳ್ಳುತ್ತೇನೆ.

ಅಂತಹ ಪ್ರಭಾವಿ ರಾಜಕಾರಣಿಯಾಗಿ, ರಾಜಕಾರಣದ ಇತರೆ ವಿಷಯಗಳಿಗೆ ಹೋಗಲಿಲ್ಲ. ಕೇವಲ ಶಿಕ್ಷಣ, ಶಿಕ್ಷಕರು, ಶಿಕ್ಷಕರ ಕ್ಷೇತ್ರ, ಯುವಕರ ಕಲ್ಯಾಣದ ಬಗ್ಗೆ ಮಾತ್ರ ತಮ್ಮ ವ್ಯಾಪ್ತಿಯನ್ನು ನಿಗದಿಪಡಿಸಿಕೊಂಡು, ಸಂಪೂರ್ಣ ಯಶಸ್ವಿಯಾದರು. ಅವರು ಬಹಳ ಲಕ್ಕಿ ಎಂದು ಹೇಳಿದೆ. ಅವರ ತಾಯಿಯ ವಿಶೇಷ ಪ್ರೀತಿ-ಮಾರ್ಗದರ್ಶನ ಹಾಗೂ ಅವರು ಯಶಸ್ವಿಯಾಗಲು ಅವರ ಮನೆಯವರ ಮಾರ್ಗದರ್ಶನ ಮತ್ತು ತ್ಯಾಗವೂ ಕಾರಣವಾಗಿದೆ. ಎಲ್ಲಾ ರೀತಿಯಿಂದ most luckiest Member of Legislative Council is Mr. Basavaraja Shivalingappa Horatti. ಅವರ ಸೇವೆ ಇನ್ನೂ ಹೆಚ್ಚು ಕರ್ನಾಟಕಕ್ಕೆ ಸಿಗಲಿ, ಶಿಕ್ಷಣ ಕ್ಷೇತ್ರದಿಂದ ಮಾತ್ರವಲ್ಲದೇ ಒಟ್ಟು ರಾಜಕಾರಣಕ್ಕೆ ಅವರು ಒಲಿದು ಬರಬೇಕು. ಮಾನ್ಯ ವಿಶ್ವನಾಥ್‌ರವರೇ, ಮೊನ್ನೆ ನಡೆದ ಎಂ.ಪಿ. ಚುನಾವಣೆಯಲ್ಲಿ ಹೇಗಾದರೂ ಮಾಡಿ ಅವರನ್ನು ಎಂ.ಪಿ. ಅಭ್ಯರ್ಥಿಯನ್ನಾಗಿ ಮಾಡಬೇಕೆಂದು ಪ್ರಯತ್ನ ಮಾಡಿದೆವು. ಅದ್ಯಾಕೋ ಏನೋ ಆಗಲಿಲ್ಲ. ಒಟ್ಟು ರಾಜಕಾರಣಕ್ಕೆ ಅವರು ಒಪ್ಪಲಿಲ್ಲ ಎಂದು ಈ ಸಂದರ್ಭದಲ್ಲಿ ನಾನು ನೆನಪು ಮಾಡಿಕೊಳ್ಳುತ್ತೇನೆ. ಅವರಿಗೆ ಇನ್ನೂ ಬಹಳ ದೀರ್ಘ ಸೇವೆ ಮಾಡುವ ಎಲ್ಲಾ ಅವಕಾಶಗಳಿದ್ದು, ಇನ್ನೂ 10 ವರ್ಷ ಬೇಕಾದಂತೆ ರಾಜಕಾರಣ ಮಾಡಬಹುದಾಗಿದೆ. ಆ ರೀತಿಯ ರಾಜಕಾರಣವನ್ನು ಅವರು ಮಾಡಿ, ಜನರಿಗೆ ಅವರಿಂದ ಒಳ್ಳೆಯದು ಆಗಲಿ ಎಂದು ಬಯಸುತ್ತೇನೆ. ಈ ಅನ್ಯಾಯಗಳು ಆಗುವ ಕಡೆಗಳಲ್ಲಿ ಅವರದ್ದು ದೊಡ್ಡ ಧ್ವನಿಯಾಗಿದೆ. ಆ ಅನ್ಯಾಯಗಳ ವಿರುದ್ಧ ಅವರು ಧ್ವನಿ ಎತ್ತಲೇಬೇಕು. ಇದೇ ಸದನದಲ್ಲಿ ಅವರು ಮಾಡಿರುವ ಭಾಷಣಗಳು, ಘೋಷಣೆಗಳು, ಹೋರಾಟಗಳೆಲ್ಲವೂ ಇವೆ. ಕರ್ನಾಟಕದ ಯಾವುದೇ ಪ್ರದೇಶಗಳಲ್ಲಾದ ಅನ್ಯಾಯಗಳ ವಿರುದ್ಧ ಅವರ ಧ್ವನಿ ದೊಡ್ಡದಾಗಿ ಬರಲೇಬೇಕು. ಆಗ ಅವರೇನು ಸಂಪಾದನೆ ಮಾಡಿದ್ದಾರೆ, ಅದರ ಪೂರ್ಣ ಲಾಭ

ಕರ್ನಾಟಕಕ್ಕೆ ಆಗುತ್ತದೆ. ಅದು ಆಗಲಿ, ಅವರಿಗೆ ದೇವರು ಇನ್ನೂ ಹೆಚ್ಚಿನ ಶಕ್ತಿಯನ್ನು ದಯಪಾಲಿಸಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಈ ಸಂದರ್ಭದಲ್ಲಿ ನಾನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸತತವಾಗಿ 45 ವರ್ಷಗಳ ಕಾಲ ಶಾಸಕರಾಗಿ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನರ ಮನಸ್ಸಿನಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿರುವಂತಹ, ಶಿಕ್ಷಕರ ಜೀವನಾಡಿಯಾಗಿರುವ ಈ ಸುಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಮಂಜುನಾಥ ಭಂಡಾರಿಯವರು ಹಾಗೂ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಮಂಡಿಸಿರುವ ಅಭಿನಂದನಾ ನಿರ್ಣಯವನ್ನು ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ಆ ಭಗವಂತ ತಮಗೆ ಆರೋಗ್ಯ, ಆಯಸ್ಸ್ ದಯಪಾಲಿಸಲಿ ಎಂದು ಸರ್ಕಾರದ ಪರವಾಗಿ ಹಾಗೂ ಸದನದ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

(ಮುಂದು)

(799) 19-08-2025/5.00/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ನಾನು ಮತ್ತು ಶ್ರೀ ದಿನೇಶ್ ಗೂಳಿಗೌಡ ರವರು ತಮಗೆ ಅಭಿನಂದನೆಯನ್ನು ಸಲ್ಲಿಸಬೇಕೆಂದು ಮಾತನಾಡಬೇಕಾದರೆ, ಮತ್ತೆ ಇವತ್ತು ಬೆಳಗ್ಗೆ ತಮ್ಮ ಬಳಿ ಮಾತನಾಡಬೇಕಾದರೆ, ನನಗೆ ಎಲ್ಲೋ ಸ್ವಲ್ಪ ಅಂಜು ಮತ್ತು ಅಳುಕು ಇತ್ತು. ಆದರೆ, ಆ ವಿಷಯವನ್ನು ಪ್ರಸ್ತಾಪಿಸಿದ ಮೇಲೆ ನಮ್ಮ ಹಿರಿಯ ನಾಯಕರಾದಂತಹ ಮಾನ್ಯ ಬಿ.ಕೆ.ಹರಿಪ್ರಸಾದ್ ರವರು ಪ್ರಥಮವಾಗಿ ಮಾತನಾಡಿ, ತಮಗೆ ಅಭಿನಂದನೆಯನ್ನು ಸಲ್ಲಿಸಿದರು. ಬಹುಶಃ ನಾನು ಇಲ್ಲಿಗೆ ಬಂದ ನಂತರ ಇಷ್ಟೊಂದು ಜನ ಗೌರವಾನ್ವಿತ ಸದಸ್ಯರುಗಳು ಮತ್ತು ಸಚಿವರುಗಳು ಒಂದು ವಿಷಯದ ಬಗ್ಗೆ ಮಾತನಾಡಿದ್ದನ್ನು ನೋಡಿರಲಿಲ್ಲ. ಬಹುಶಃ ಇವತ್ತು ಎಲ್ಲರೂ ಸಹ ತಮ್ಮನ್ನು ಮತ್ತು ತಮ್ಮ 45 ವರ್ಷಗಳ ಸುದೀರ್ಘ ರಾಜಕೀಯ ಜೀವನ ಮತ್ತೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಇದಕ್ಕೆ ನನ್ನ ಮನವಿ ಏನೆಂದರೆ, ಇಷ್ಟು ಜನರು ಯಾರೆಲ್ಲಾ ಮಾತನಾಡಿದ್ದಾರೆ ಇದನ್ನು ವಿಧಾನ ಪರಿಷತ್ತು ಒಂದು ಪುಸ್ತಕದ ಮೂಲಕ ಮುಂದಿನ ಪೀಳಿಗೆಗೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಸದಸ್ಯರು ಸೇರಿಕೊಂಡು ಕರ್ನಾಟಕ ವಿಧಾನ ಪರಿಷತ್ತಿನಿಂದ ತಮಗೆ ಅಭಿನಂದನಾ ಸಮಾರಂಭವನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಎಲ್ಲರಿಗೂ ನಮಸ್ಕಾರಗಳು. ಇವತ್ತು ನನ್ನ ಜೀವನದಲ್ಲಿ ಅತ್ಯಂತ ಶ್ರೇಷ್ಠವಾದ ದಿನವೆಂದು ಭಾವಿಸಿದ್ದೇನೆ. ಈ ದೇಶದಲ್ಲಿ ಇಷ್ಟೊಂದು ಪ್ರೀತಿ, ವಿಶ್ವಾಸ ಎಲ್ಲೋ ಒಬ್ಬರಿಗೆ ಸಿಗುತ್ತದೆ. ಇಡೀ ಸದನ

ನನ್ನ ಬಗ್ಗೆ ಬಹಳ ಉತ್ತಮವಾದಂತಹ ರೀತಿಯಲ್ಲಿ ಪಕ್ಷಾತೀತವಾಗಿ ಮಾತನಾಡಿದ್ದಕ್ಕೆ, ನನಗೆ ಇವತ್ತು ಏನಾಗಿದೆ ಎಂದರೆ, ನಿಮ್ಮೆಲ್ಲರ ಮಾತು, ಪ್ರೀತಿ ಮತ್ತು ವಿಶ್ವಾಸದಿಂದ ನಾಳೆ ಸದನವನ್ನು ಹೇಗೆ ನಡೆಸಬೇಕೆಂದು ವಿಚಾರ ಮಾಡುತ್ತಿದ್ದೇನೆ. ಅಂದರೆ, ಯಾರಿಗೆ ಏನು ಅನ್ನಬೇಕು, ಏನು ಅನ್ನಬಾರದು ಎಂದು ಬರುತ್ತಿದೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದ ಹಾಗೆ ನಾನು ಬಿಜಾಪುರ ಜಿಲ್ಲೆಯವರು. ಬಿಜಾಪುರ ಜಿಲ್ಲೆಯಲ್ಲಿ ನಮ್ಮ ಭಾಷೆ ಇದೇ ರೀತಿ ಇದೆ. ನಾವು ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ನಾನು ಬಹಳ ಪ್ರಯತ್ನ ಮಾಡುತ್ತೇನೆ. ಒಂದು ಬಾರಿ ನನ್ನನ್ನು ಶ್ರೀ ಸಿ.ಟಿ.ರವಿಯವರು ಎಂಟು ಬಾರಿ ಗೆದ್ದಿರುವುದರ ಬಗ್ಗೆ ಗುಟ್ಟು ಹೇಳಿ ಎಂದು ಕೇಳಿದರು. ಆದರೆ, ಅದರಲ್ಲಿ ಏನೂ ಗುಟ್ಟು ಇಲ್ಲ. ಈಗ ಯಾವುದೇ ಶಿಕ್ಷಕರು ರಾತ್ರಿ 12.00 ಗಂಟೆಗೆ ಫೋನ್ ಮಾಡಿದರೂ ಸಹ ಅದನ್ನು attend ಮಾಡುವಂತಹ ಕೆಲಸವನ್ನು ಇವತ್ತಿನವರೆಗೂ ಮಾಡಿಕೊಂಡು ಬರುತ್ತಿದ್ದೇನೆಂದು ಹೇಳುತ್ತೇನೆ. ಆದುದರಿಂದ, ನನಗೆ ಆ ಎಲ್ಲಾ ಶಿಕ್ಷಕರು  ಬೆಂಬಲವನ್ನು ನೀಡಿದ್ದಾರೆ. ಮತ್ತೆ ನನ್ನ ವಿರುದ್ಧ ನಿಂತಹವರಿಗೂ ಸಹ ಅವರು ಏನು ಕೆಲಸ ಹೇಳುತ್ತಾರೋ ಮೊದಲಿಗೆ ಅವರ ಕೆಲಸ ಮಾಡಿಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇನೆ. ಅದೇ ರೀತಿ ಮಾಡಿಕೊಂಡು ಬಂದಿದ್ದೇನೆ. ನಾನು ಇಲ್ಲಿಗೆ ಬಂದ ನಂತರ 1981ನೇ ಇಸವಿಯಲ್ಲಿ ನವದೆಹಲಿಯಲ್ಲಿ ಒಂದು ಸಭೆಯನ್ನು ಕರೆದಿದ್ದರು. ಅಂದರೆ, "The role of the Legislator inside and outside the Legislature" ಎಂಬ ಸಮ್ಮೇಳನಕ್ಕೆ ಹೋಗಿದ್ದೆವು. ನಾನು, ಶ್ರೀ ಎಲ್.ಆರ್.ಶಿವರಾಮೇಗೌಡ, ಡಾ:ತಿಮ್ಮೇಗೌಡ ಮತ್ತು ಅಂದಿನ ವಿರೋಧ ಪಕ್ಷದ ನಾಯಕರಾದ ನರಸಿಂಹಯ್ಯನವರು ಎಲ್ಲರೂ ಹೋಗಿದ್ದೆವು. ಅಲ್ಲಿ ಪಶ್ಚಿಮ ಬಂಗಾಳದ ಶ್ರೀ ಮುಖರ್ಜಿ ಎಂಬುವವರು ಒಬ್ಬ ಚುನಾಯಿತ ವ್ಯಕ್ತಿ ಹೇಗೆ ಇರಬೇಕೆಂದು ಸುಮಾರು ಒಂದೂವರೆ ಗಂಟೆಗಳ ಕಾಲ ಮಾತನಾಡಿದರು. ಮೊಟ್ಟಮೊದಲಿಗೆ ನನಗೆ ಅವರ ಮಾತು ಬಹಳ impress ಆಯಿತು. ಸಭೆ ಮುಗಿಯುವವರೆಗೂ ಕಾಯ್ದುಕೊಂಡು ನಂತರ ಹೋಗಿ ಭೇಟಿಯಾದೆ. "Excuse me Sir, I am the newly elected MLC from Karnataka.  I wanted to discuss with you." ಎಂದಾಗ ಅವರು ಏನು ಹೇಳಿದರು ಎಂದರೆ, "No, I am busy. I will give you the address of my House. You come at 6.30 P.M. to my House. Whatever questions you want to ask, you can ask there only." ಎಂದರು. ಅದಕ್ಕೆ ಆಯಿತು ಎಂದು, ನಾವು ಅವರ ಮನೆಗೆ ಹೋದೆವು. ಅವರ ಮನೆಗೆ ಹೋದಾಗ ಮನೆಗೆ ಪ್ರವೇಶವಾಗುವಾಗ ಮನೆಯ ಮುಂದೆ ಒಂದು ಬೋರ್ಡ್ ಇತ್ತು. ಅದರಲ್ಲಿ " Those who are coming to me for their work, I will do it today only. Tomorrow I may not get the chance." ಎಂದು ಬರೆದಿದ್ದರು. ನಾನು ಅದನ್ನು ಇಂಗ್ಲಿಷ್‌ನಲ್ಲಿ ಬರೆದುಕೊಂಡು ಬಂದು ಅದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ, "ನನ್ನ ಹತ್ತಿರ ಸಹಾಯ ಕೇಳಲು ಬಂದಂತಹವರಿಗೆ ನಾನು ಇಂದೇ ಸಹಾಯ ಮಾಡುತ್ತೇನೆ. ನಾಳೆ ಸಹಾಯ ಮಾಡುವುದಕ್ಕೆ ಅವಕಾಶ ಇರುವುದಿಲ್ಲ" ಎಂದು  ನಮ್ಮ ಮನೆಯ ಮುಂದೆ ಬೋರ್ಡ್ ಹಾಕಿಕೊಂಡು ಅದೇ ರೀತಿ ನಡೆದುಕೊಂಡು ಬಂದಿದ್ದೇನೆ. ಇದು ಬಹಳ ಕಷ್ಟದ ಕೆಲಸ. ಮಾನ್ಯ ಸಿ.ಟಿ.ರವಿಯವರು

ಹೇಳಿದಂತೆ ಶೇಕಡಾ 99ರಷ್ಟು ಕೆಲಸ ಮಾಡಿದರೂ ಸಹ ಶೇಕಡಾ 1ರಷ್ಟನ್ನು ಮಾಡಿಲ್ಲವೆಂದರೆ, ಇದನ್ನು ಏಕೆ ಮಾಡಲಿಲ್ಲವೆಂದು ಕೇಳುವಂತಹ ಶಿಕ್ಷಕರು ಇದ್ದಾರೆ. ಶಿಕ್ಷಕರು ರಾತ್ರಿ 12.00 ಗಂಟೆಗೆ, 1.00 ಗಂಟೆಗೆ ಫೋನ್ ಮಾಡಿದ್ದಾರೆ. ಈಗ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಮಾನ್ಯ ಸದಸ್ಯರು ಸುಮಾರು ನಾಲ್ಕೂವರೆ ತಾಸುಗಳ ಕಾಲ ಮಾತನಾಡಿದ್ದಾರೆ. ನನಗೆ ಒಬ್ಬರು ಒಂದು ಬಾರಿ ರಾತ್ರಿ ಫೋನ್ ಮಾಡಿದ್ದರು. ಆಗ ನಾನು ನಿದ್ದೆಗಣ್ಣಿನಲ್ಲಿದ್ದೆ. ಆಗ ನನ್ನ ಬಳಿ landline phone ಇದ್ದಿತ್ತು. ನಮ್ಮ ತಾಯಿಯವರು ಫೋನ್ ಅನ್ನು ತಲೆದಿಂಬಿನ ಬಳಿ ಇಟ್ಟುಕೊಂಡು, ಯಾರ ಫೋನ್ ಬಂದರೂ ಸಹ ಕೊಡುತ್ತಿರಲಿಲ್ಲ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಿಂದ ಶ್ರೀ ರುದ್ರಪ್ಪ ಎಂಬುವವರು ಫೋನ್ ಮಾಡಿದ್ದರು. ಅವರು ಫೋನ್ ಮಾಡಿ ವಿಷಯ ತಿಳಿಸಿದಾಗ, ಒಂದು ತಾಸು ಬಿಟ್ಟು ಫೋನ್ ಮಾಡಬಾರದೆ, ನಾನು ವಾಕಿಂಗ್ ಹೋಗುವ ಸಮಯ ಎಂದು ಹೇಳಿದೆ. ಆಗ ಅವರು ಸರ್ ಈಗ ರಾತ್ರಿ ಎರಡು ಗಂಟೆ ಎಂದು ಹೇಳಿದರು. ಅದಕ್ಕೆ ನಾನು ಇಷ್ಟು ಹೊತ್ತಿನಲ್ಲಿ ಏಕೆ ಫೋನ್ ಮಾಡಿದ್ದೀಯ ಎಂದು ಕೇಳಿದೆ. ಅದಕ್ಕೆ ಅವರು 1978ನೇ ಇಸವಿಯಲ್ಲಿ ತಾವು ಶಿಕಾರಿಪುರಕ್ಕೆ ಬಂದಿದ್ದಿರಿ. ಆ ಸಮಯದಲ್ಲಿ ಸ್ವಾಮಿಗಳು ನಮ್ಮನ್ನು suspend ಮಾಡಿದ್ದರು, ಆಗ ಬಸ್ ತಪ್ಪಿತ್ತು. ಅದಕ್ಕೆ ರಾಣೇಬೆನ್ನೂರು ಬಸ್ ನಿಲ್ದಾಣದಲ್ಲಿ ಪೇಪರ್ ಹಾಸಿಕೊಂಡು ಮಲಗಿಕೊಂಡಿದ್ದೆ. ಆಗ ಮಳೆ ಬರುತ್ತಿತ್ತು. ಇವತ್ತು ಸಹ ಬಸ್ ತಪ್ಪಿತು. ನನಗೆ ತಮ್ಮ ನೆನಪು ಬಂತು. ಅದಕ್ಕೆ ತಮಗೆ thanks ಹೇಳುವುದಕ್ಕೆ ಫೋನ್ ಮಾಡಿದೆ ಎಂದು ಹೇಳಿದರು. ನಾನು ಹುಬ್ಬಳ್ಳಿ ಬಿಟ್ಟರೆ ಮೊಬೈಲ್ ಅನ್ನು ಯಾವಾಗಲೂ ಆನ್ ಮಾಡಿ ಇಟ್ಟಿರುತ್ತೇನೆ. ಅದೇ ರೀತಿ ಕೊಪ್ಪಳದಿಂದ ರಾತ್ರಿ ಒಂದು ಗಂಟೆಗೆ ಫೋನ್ ಮಾಡಿದ್ದರು. ಆಗ ಕತ್ತಲೆಯಲ್ಲಿ ಫೋನ್ ಅನ್ನು ತೆಗೆದುಕೊಂಡೆ. ಯಾರಪ್ಪ ಮಾತನಾಡುವುದು ಎಂದು ಕೇಳಿದೆ. ಅದಕ್ಕೆ ಅವರು " I am Basavaraj Horatti ex Education Minister, present MLC is speaking" ಎಂದು ಹೇಳಿದ. ಇವನು ಯಾರು, ಕನಸು ಬಿದ್ದಿದ್ದೆಯೋ ಎಂದು ಕೊಂಡೆ. ಆ ತಕ್ಷಣ ನಾನೇ ಮಾತನಾಡುತ್ತಿರುವುದು ಎಂದು ಹೇಳಿದೆ. ಅದಕ್ಕೆ ಅವರು, "Don't you know how to talk with ex Minister and present MLC? I am Basavaraj Horatti." ಎಂದು ಹೇಳಿದ. ಆಗ ನನಗೆ ಏನೂ ತಿಳಿಯಲೇ ಇಲ್ಲ. ರಾತ್ರಿ ಎರಡು ಗಂಟೆಯಾಗಿದ್ದರಿಂದ ಫೋನ್ ಇಡು ಎಂದು ಹೇಳಿದೆ. "Again you are talking the same thing." ಎಂದು ಫೋನ್ ಇಟ್ಟುಬಿಟ್ಟೆ. ಮತ್ತೆ ಬೆಳಗ್ಗೆ ಆರು ಗಂಟೆಗೆ ಅವರ ಕಡೆಯಿಂದ ಫೋನ್ ಬಂತು. ಅದರಲ್ಲಿ ಒಬ್ಬಳು ಹೆಣ್ಣು ಮಗಳು ಮಾತನಾಡಿದಳು. ಆಗ ಅವಳು ದಯಮಾಡಿ ಕ್ಷಮಾ ಮಾಡಿ ಸರ್. ನನ್ನ ಗಂಡ ಮಾಸ್ತರ್. ನಿನ್ನೆಯ ರಾತ್ರಿ ಕುಡಿದು ನನಗೆ ಹೊಡೆದಿದ್ದಾನೆ. ನಾನು ಫೋನ್‌ನಲ್ಲಿ ಮಾತನಾಡುವುದಕ್ಕೆ ಕೊಡಲಿಲ್ಲ. ಅವರಿಗೆ ಸುಮಾರು ಒಂಭತ್ತು ತಿಂಗಳಿನಿಂದ ಪಗಾರವಿಲ್ಲವೆಂದು ಹೀಗೆ ಆಗಿದೆ ಎಂದು ಹೇಳಿದರು. ನಾನು ಅದನ್ನು ಸಹಿತ ತೆಗೆದುಕೊಂಡು, ತಕ್ಷಣ ಫೋನ್ ಮಾಡಿ, ಮಧ್ಯಾಹ್ನ ಎರಡು ಗಂಟೆಯ ಒಳಗೆ ಅವರ ಸಮಸ್ಯೆಯನ್ನು ಬಗೆಹರಿಸಿ, ಅವನಿಗೆ ಪಗಾರ ಕೊಡಿಸುವಂತಹ ಕೆಲಸ ಮಾಡಿದೆ. ಅವರು ಇವತ್ತಿಗೂ ಸಹ ನನ್ನನ್ನು ನೆನಪಿಸಿಕೊಳ್ಳುವಂತಹ ಕೆಲಸವನ್ನು ಮಾಡಿದ್ದೇನೆ. ಹೀಗಾಗಿ ನಾನು ಇಲ್ಲಿಗೆ ಬಂದು 45 ವರ್ಷವಾಗಿದೆ. ಎಲ್ಲಾದರೂ ನನ್ನ ಕಣ್ಣು ಕಟ್ಟಿಬಿಟ್ಟರೆ ನಾನು ಸೀದಾ ವಿಧಾನ ಪರಿಷತ್ತಿಗೆ ಬರುತ್ತೇನೆ. ಅಂದರೆ,

ನನಗೆ ಅಷ್ಟೊಂದು ನೆನಪು ಇದೆ. ನಾನು ಸದನದ ಎಲ್ಲಾ ಕಡೆಗಳಲ್ಲಿ ಕುಳಿತುಕೊಂಡಿದ್ದೇನೆ. ಈ ರೀತಿಯ ಅವಕಾಶ ಎಲ್ಲರಿಗೂ ಸಿಗುವಂಥದ್ದಲ್ಲ. ಅದರ ಜೊತೆಗೆ ತಮ್ಮೆಲ್ಲರ ಪ್ರೀತಿ ವಿಶ್ವಾಸ ಎಷ್ಟು ಇದೆ ಎಂದರೆ, ಅದರ ಬಗ್ಗೆ ಏನೂ ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯ ವಿಶ್ವಾಸವನ್ನು ವ್ಯಕ್ತಪಡಿಸಿದಂತಹ ತಮ್ಮೆಲ್ಲರಿಗೂ ಅನೇಕಾನೇಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಕಾನೂನು ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ಮತ್ತು ಶ್ರೀ ಡಿ.ಆರ್.ಪಾಟೀಲ್ ರವರ ಜೊತೆ 1978ನೇ ಇಸವಿಯಿಂದ ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ. ನನ್ನ ಮೊದಲನೆಯ ಚುನಾವಣೆ 1980ನೇ ಇಸವಿಯಲ್ಲಿ ಕೇವಲ 12,000/- ರೂಪಾಯಿ ಖರ್ಚು ಮಾಡಿ ಗೆದ್ದಿದ್ದೇನೆ. ನಂತರ ಬರುತ್ತಾ ಬರುತ್ತಾ ಎಲ್ಲಾ ಸ್ನೇಹಿತರು ಬಂದರು. ಈಗ ಯಾರೇ ವಿರುದ್ಧವಿದ್ದರೂ ಸಹಿತ ಅವರ ಪರವಾಗಿ ಕೆಲಸ ಮಾಡುವಂತಹ ಕೆಲಸವನ್ನು ಮಾಡಿದ್ದೇನೆ. ಹೀಗಾಗಿ ಇವತ್ತಿನ ದಿನಮಾನಗಳಲ್ಲಿ ತಾಳ್ಮೆ ಬಹಳ ಬೇಕಾಗುತ್ತದೆ. ಇಲ್ಲಿಗೆ ಬೇರೆ ಬೇರೆ ಕ್ಷೇತ್ರಗಳಿಂದ ಬಂದಂತಹವರು ಇದ್ದಾರೆ. ಅವತ್ತಿನ ರಾಜಕಾರಣ ಬೇರೆ ರೀತಿ ಇತ್ತು. ಇವತ್ತಿನ ರಾಜಕಾರಣ ಬೇರೆ ರೀತಿ ಇದೆ. ಅವತ್ತು ನಾನು ಮೊದಲು ಇಲ್ಲಿಗೆ ಬಂದು oath ತೆಗದುಕೊಂಡಾಗ ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಮತಿ ಶ್ರೀ ಬಸವರಾಜೇಶ್ವರಿಯವರು ಸಭಾಪತಿಗಳಾಗಿದ್ದರು. ಆಗ oath ತೆಗೆದುಕೊಂಡೆವು. ತದನಂತರ ಜುಲೈ 3ನೇ ತಾರೀಖಿಗೆ ಶ್ರೀಮತಿ ಶ್ರೀ ಬಸವರಾಜೇಶ್ವರಿಯವರು ಸಹ ನಮ್ಮ ಹಾಗೆಯೇ ಮಾತನಾಡಿದರು. ಹೇ ತಮ್ಮ ಯಾರೋ ಇಬ್ಬರು ಬಂದಿದ್ದೀರಲ್ಲ ನೀವು ಮಾತನಾಡಿ ಎಂದು ಹೇಳಿದರು. ಆಗ ನಾನು ಎದ್ದು ಮಾತನಾಡಿದೆ. ಆಗ ಅವರು ಅಡ್ಡಿ ಇಲ್ಲ ಬಿಡಪ್ಪ, ಬಹಳ ಚೆನ್ನಾಗಿ ಮಾತನಾಡಿದ್ದೀಯಾ ಎಂದರು. ಅಲ್ಲಿಂದ ಇಲ್ಲಿಯವರೆವಿಗೆ ನಾನು ಹೇಳಿದ ಹಾಗೆ ಅನೇಕ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಈ ಸ್ಥಾನದಲ್ಲಿ ಕುಳಿತುಕೊಂಡಾಗ ಕೆ.ಆರ್.ನಗರದ ಶ್ರೀ ಕೃಷ್ಣ ರವರು ವಿಧಾನಸಭೆಯ ಸಭಾಧ್ಯಕ್ಷರಾಗಿದ್ದರು. ಆಗ ನಾನು ಶಿಕ್ಷಣ ಮತ್ತು ಕಾನೂನು ಇಲಾಖೆಯ ಮಂತ್ರಿಯಾಗಿದ್ದೆ. ಆಗ ನಾನು ಅವರಿಗೆ ಒಂದು ಚೀಟಿ ಕಳುಹಿಸಿದ್ದೆ. ಆಗ ನಾಲ್ಕೂವರೆಗೆ Human Rights Bill ಬಂದಿತ್ತು. ಆಗ ನಾನು ಸರ್ ಆರು ಗಂಟೆಗೆ ಒಂದು ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೇನೆ. ದಯಮಾಡಿ ಇದನ್ನು ನಾಳೆಗೆ ತೆಗೆದುಕೊಳ್ಳಿ ಎಂದು ಕೇಳಿದೆ. ಅದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಒಂದು ಗಂಟೆಗಳ ಕಾಲ ಮಾತನಾಡಿದರು. ಅದಕ್ಕೆ ಶ್ರೀ ಕೃಷ್ಣರವರು ಆ ಚೀಟಿಯ ಹಿಂದುಗಡೆ ಏನು ಬರೆದು ಕಳುಹಿಸಿದ್ದರು ಎಂದರೆ, ತಾವು ಶಿಕ್ಷಣ ಮತ್ತು ಕಾನೂನು ಮಂತ್ರಿಯಾಗಿದ್ದೀರಿ. ಸದನ ನಡೆಯುವಾಗ ಬೇರೆ ಕಡೆಯ ಕಾರ್ಯಕ್ರಮಕ್ಕೆ ಹೋಗಬಾರದು ಎಂಬ ಕನಿಷ್ಠ ಬುದ್ಧಿ ಇಲ್ಲವೆ ನಿಮಗೆ ಎಂದರು. ನೀವು ಶಿಕ್ಷಣ ಮಂತ್ರಿಯಾಗಿದ್ದಕ್ಕೆ ಇನ್ನಾದರೂ ಪಾಠವನ್ನು ಕಲಿಯಿರಿ ಎಂದು ಚೀಟಿ ಕಳುಹಿಸಿದರು. ನಾನು ಅಂತಹವರನ್ನು ಸಹ ನೋಡಿದ್ದೇನೆ. ನಾವು ಅವರಿಂದ ಸಹ ಬಹಳ ಕಲಿತಿದ್ದೇವೆ. ಏನಾದರೂ ಅನುಭವವಾಗಬೇಕಾದರೆ ಇಲ್ಲಿಗೆ ಬಂದಂತಹ ಜನ ಮಾತನಾಡುವಂಥದ್ದು. ಶ್ರೀ ಎಸ್.ವೆಂಕಟರಾಮನ್ ಎಂದು ಇದ್ದರು. ಅವರು ಮೂರೂವರೆ ತಾಸು ಇಡೀ ಜಗತ್ತಿನ ಲೇಬರ್ ಲೀಡರ್‌ಗಳ ಬಗ್ಗೆ ಮಾತನಾಡಿದರು. ಆಮೇಲೆ ಕಪಾಲಿ ಟಾಕೀಸಿನ ಮಾಲೀಕರಾಗಿದ್ದ ಶ್ರೀ ರಾಜಗೋಪಾಲ್ ರವರು ಮಾಲೀಕರಾಗಿದ್ದರೂ ಸಹ ಕಾರ್ಮಿಕರ ಬಗ್ಗೆ ಮಾತನಾಡಿದರು. ಶ್ರೀ ಎ.ಕೆ.ಸುಬ್ಬಯ್ಯನವರು

ಇದ್ದರು. ಇಲ್ಲಿ ಅನೇಕ ರೀತಿಯ ಚರ್ಚೆಗಳಾಗುತ್ತಿದ್ದವು. ನಾವು ಆ ಎಲ್ಲಾ ಚರ್ಚೆಗಳನ್ನು ಕೇಳಿದ್ದೇನೆ ಮತ್ತೆ ನೋಡಿದ್ದೇನೆ. ಅಧಿವೇಶನದಲ್ಲಿ ಬೆಳಗ್ಗೆ ನನ್ನ ಪ್ರಶ್ನೆ ಇರಲಿ ಅಥವಾ ಇಲ್ಲದೇ ಇರಲಿ, ಆಗ ಸದನ ಒಂಭತ್ತೂವರೆಗೆ ಇರುತ್ತಿತ್ತು. ನಾನು ಒಂಭತ್ತೂವರೆಗೆ ಸದನಕ್ಕೆ ಬಂದು ಕುಳಿತುಕೊಂಡರೆ, ಸದನ ಮುಗಿಯುವವರೆಗೆ ಎಲ್ಲೂ ಎದ್ದು ಹೋಗುತ್ತಿರಲಿಲ್ಲ. ಆ ರೀತಿ ಕಲಿತುಕೊಂಡು ಇಲ್ಲಿವರೆಗೆ ಬಂದಿದ್ದೇನೆ. ನಾನು 17 ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಅದರಲ್ಲಿ ಬಹಳ ಮಂದಿ ಮುಖ್ಯಮಂತ್ರಿಗಳನ್ನು ಸೂಕ್ಷ್ಮವಾಗಿ ನೋಡಿದ್ದೇನೆ. ಕೆಲವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಕೆಲವು ಕಡೆ ಬೈಯಿಸಿಕೊಂಡಿದ್ದೇನೆ. ಮತ್ತೆ ಕೆಲವು ಕಡೆಗಳಲ್ಲಿ ಹೊಗಳಿಸಿಕೊಂಡಿದ್ದೇನೆ. ನಾನು ಅವರೆಲ್ಲರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡು ಬಂದಿದ್ದೇನೆ. ನಾನು ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು, ಅವರ ಬಳಿ ಒಂದು ಕೆಲಸವಿತ್ತು. ಅದಕ್ಕೆ 31ನೇ ತಾರೀಖು ಕೊನೆಯ ದಿನಾಂಕವಾಗಿತ್ತು. ಅವತ್ತು ಅದು ಆಗದೇ ಇದ್ದಿದ್ದರೆ ಅವರ ನೌಕರಿ ಹೋಗುತ್ತಿತ್ತು. ಅವರು Conference Hall ನಲ್ಲಿ ಮೀಟಿಂಗ್ ಮಾಡುತ್ತಿದ್ದರು. ಒಳಗೆ ಯಾರನ್ನೂ ಸಹ ಬಿಡುತ್ತಿರಲಿಲ್ಲ. ಅಲ್ಲಿ ಅವರಿಗೆ ಹೇಳಿ ಹೋದ ನಂತರ ಅವರು ಏನು ಎಂದು ಕೇಳಿ, ಮೀಟಿಂಗ್ ಮುಗಿದ ಕೂಡಲೇ ಎಂದರು, ಆಗ ನಾನು ಐದೂವರೆ ಆಯಿತು ಎಂದರೆ, ಇವರ ಲೈಫ್ ಹೋಗುತ್ತದೆ ಎಂದು ಹೇಳಿದೆ. ಆಗ ಅವರು ಆಯಿತು ನಾನು ಸಹಿ ಮಾಡುತ್ತೇನೆ. ನೀವು ಏನಾದರೂ ಬರೆದುಕೊಳ್ಳಿ ಎಂದು ಹೇಳಿದರು. ಶ್ರೀ ಎಸ್.ಎಂ.ಕೃಷ್ಣರವರು ನನ್ನ ಕಡೆ ಬರೆಸಿದ್ದಾರೆಂದರೆ, ಇವತ್ತು ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. ಅದಕ್ಕೆಲ್ಲಾ ಮಾನ್ಯ ಸಿ.ಸಿ.ಪಾಟೀಲ್‌ರವರು ಸಾಕ್ಷಿ ಇದ್ದಾರೆ. ನಾನು ಅಂತಹ ಮುಖ್ಯಮಂತ್ರಿಗಳನ್ನು ಸಹ ನೋಡಿದ್ದೇನೆ. ಮತ್ತೆ ಬಹಳ ಪ್ರೀತಿ ವಿಶ್ವಾಸಗಳನ್ನು ಸಹ ಕಂಡಿದ್ದೇವೆ. ಹೀಗಾಗಿ, ಇಲ್ಲಿಯವರೆಗೆ ಈ ಸದನಕ್ಕೆ ಬರಬೇಕಾದರೆ ಎಲ್ಲರ ಪ್ರೀತಿ ವಿಶ್ವಾಸ ಇದೆ. ನಾನು ಒಂದು ಬಾರಿ ಜೋರು ಮಾಡುತ್ತೇವೆ. ಮತ್ತೊಂದು ಬಾರಿ ಪ್ರೀತಿ ಮಾಡುತ್ತೇನೆ.

(ಮುಂದು)

(೮೦೦) 19.08.2025 05.10 LL-KS (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು(ಮುಂದು):-**

ಹೀಗಾಗಿ ಒಟ್ಟಾರೆಯಾಗಿ, ವಿಧಾನ ಪರಿಷತ್ತು ನನಗೆ ಏನಾಗಿದೆಯೆಂದರೆ, ನನ್ನ ಜೀವನದಲ್ಲಿ ಮನೆಗಿಂತಲೂ ಇಲ್ಲಿಯೇ ಹೆಚ್ಚು ಇದ್ದೇನೆ. ನನ್ನ ಜೀವನದಲ್ಲಿ ಸುಮಾರು ಒಂದು ವರ್ಷ ಅಂದರೆ, ಹೆಚ್ಚು ಕಡಿಮೆ 12 ತಿಂಗಳು ನಾನು ರೈಲಿನಲ್ಲಿ ಪ್ರಯಾಣ ಮಾಡಿರುತ್ತೇನೆ. ಅಂದರೆ, ಪ್ರತಿ ತಿಂಗಳಿಗೆ ಕನಿಷ್ಠ 10 ದಿನಗಳು ನಾನು ರೈಲಿನಲ್ಲಿ ಪ್ರಯಾಣ ಮಾಡುತ್ತೇನೆ. ಹೀಗಾಗಿ, ಒಟ್ಟಾರೆಯಾಗಿ ಅಲ್ಲಿಂದ ಇಲ್ಲಿಗೆ ಶಿಕ್ಷಕರ ಕೆಲಸಗಳು ಮತ್ತು ಅವರಿಗೆ ಏನೇ ಸಮಸ್ಯೆಗಳು ಬಂದರೂ ಸಹ ನಾನು ಅದಕ್ಕೆ ಸ್ಪಂದಿಸಿರುತ್ತೇನೆ. ಅದಕ್ಕಾಗಿ ನಾನು ಹಲವಾರು ಬಾರಿ ಆಯುಕ್ತರ ಕಛೇರಿಗೆ, ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ಪ್ರಧಾನ ಕಾರ್ಯದರ್ಶಿಯವರ ಕಛೇರಿಗೆ ಅಥವಾ ಮಾನ್ಯ ಸಚಿವರ ಕೊಠಡಿಗಳಿಗೆ ಅವರು ಕೊಟ್ಟಂತಹ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಭೇಟಿ ಮಾಡಿ ಬರುತ್ತಿದ್ದೆನು. ಈ ರೀತಿ ಶಿಕ್ಷಕರ ಕೆಲಸ ಮಾಡಿದ್ದಕ್ಕಾಗಿ

ಬಹಳಷ್ಟು ಶಿಕ್ಷಕರು ನನ್ನ ಮೇಲೆ ಹೆಚ್ಚಿನ ನಂಬಿಕೆ, ಪ್ರೀತಿ ಮತ್ತು ವಿಶ್ವಾಸಗಳನ್ನು ಇಟ್ಟುಕೊಂಡಿರುತ್ತಾರೆ. ನಾನು West Teachers' Constituency ನಲ್ಲಿ ಸ್ಪರ್ಧಿಸುತ್ತಿದ್ದು, ಇವೊತ್ತಿನವರೆಗೂ ಚುನಾವಣೆ ಸಂದರ್ಭದಲ್ಲಿ ಯಾವುದೇ ಶಿಕ್ಷಕರು ನನ್ನಿಂದ ಒಂದು ಪೈಸೆ ಹಣವನ್ನು ಪಡೆದಿಲ್ಲ ಅಥವಾ ನನ್ನಿಂದ ಏನನ್ನೂ ಕೇಳಿರುವುದಿಲ್ಲ. ಹಾಗಾಗಿ, ಇವೊತ್ತಿನವರೆಗೂ ಅದೇ ಪ್ರೀತಿ ಮತ್ತು ವಿಶ್ವಾಸ ಇಟ್ಟುಕೊಂಡಿರುತ್ತಾರೆ. ಯಾವುದೇ ಶಿಕ್ಷಕರ ಕುಟುಂಬದಲ್ಲಿ ಹೆಚ್ಚು ಕಡಿಮೆ ಆದರೂ ಸಹ ನಾವು ನೆರವಿಗೆ ಧಾವಿಸುವಂತಹ ಕೆಲಸವನ್ನು ಮಾಡಿರುತ್ತೇವೆ. ಒಟ್ಟಾರೆಯಾಗಿ, ಒಂದು ಕುಟುಂಬದ ಸದಸ್ಯರ ರೀತಿ ನಾವು ಮತ್ತು ಶಿಕ್ಷಕರು ಬಂದಿರುತ್ತೇವೆ. ಹಾಗಾಗಿ, 8 ಬಾರಿ ನನ್ನನ್ನು ಆಯ್ಕೆ ಮಾಡಿ ವಿಧಾನ ಪರಿಷತ್ತಿಗೆ ಕಳುಹಿಸಿರುತ್ತಾರೆ. ಅದರ ಋಣವನ್ನು ತೀರಿಸುವುದಕ್ಕಾಗಿ ದಿನದ 24 ಗಂಟೆಯೂ ಕೂಡ ಕೆಲಸ ಮಾಡುವುದಕ್ಕೆ ನಾನು ತಯಾರಿರುತ್ತೇನೆ. ಆ ಹಿನ್ನೆಲೆಯಲ್ಲಿ ಇವೊತ್ತಿನ ದಿವಸ ಅನೇಕ ಸದಸ್ಯರು ಈ ಸದನದಲ್ಲಿ ಇದ್ದೀರಿ. ನಾನು ಈ ಸ್ಥಾನದಲ್ಲಿ ಕುಳಿತಾಗ ಕುತ್ತಿಗೆಗೆ ಬರುವಂತಹ ಸಮಸ್ಯೆಗಳು ಬಹಳ ಬಂದಿರುತ್ತವೆ. ಅದಕ್ಕೆ ಏನಾದರೂ ಮಾಡಿ, ಸಂಬಂಧಪಟ್ಟ ಸದಸ್ಯರನ್ನು ಸಮಾಧಾನ ಮಾಡಿ, ಬೈದು, ನಂತರ ಅವರನ್ನು ಕರೆದು, "ಈ ರೀತಿಯಾಯಿತು; ಬೇಜಾರು ಮಾಡಿಕೊಳ್ಳಬೇಡಿ" ಎಂದು ಹೇಳಿ, ಒಂದು ಕುಟುಂಬದ ರೀತಿ ನಾನು ಇಲ್ಲಿ ನಡೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಹಾಗೂ ಇತರರ ಒಂದು ಗ್ಯಾಂಗ್ ಇದೆ. ಅವರು ತೊಂದರೆ ಕೊಟ್ಟಷ್ಟು ನನಗೆ ಬೇರೆ ಯಾರೂ ತೊಂದರೆ ಕೊಟ್ಟಿರುವುದಿಲ್ಲ. ಆದರೂ ಸಹ, ಅವರೊಂದಿಗೆ ಪ್ರೀತಿ ವಿಶ್ವಾಸದಿಂದ ನಡೆದುಕೊಂಡಿರುತ್ತೇನೆ. ಈ ಹಿಂದೆ ಡಾ॥ ಹೆಚ್. ನರಸಿಂಹಯ್ಯರವರು ಸದನದಲ್ಲಿ ಮಾತನಾಡುವಾಗ, "ರೀ ಹೊರಟ್ಟಿಯವರೇ, ನೀವು ಯಾವಾಗಲೂ ಶಿಕ್ಷಕರ ಬಗ್ಗೆ ಮಾತ್ರ ಮಾತನಾಡುತ್ತೀರಿ. ಆದರೆ, ಶಿಕ್ಷಣದ ಬಗ್ಗೆ ಅಥವಾ ಮಕ್ಕಳ ಬಗ್ಗೆ ಮಾತನಾಡುವುದಿಲ್ಲ" ಎಂದು ಹೇಳಿದರು. ಅದಕ್ಕೆ ನಾನು, "ಹೌದು ಸರ್, ನಿಮ್ಮ ಮಾರ್ಗದರ್ಶನ ಬೇಕು, ನಾನು ಮಾತನಾಡುತ್ತೇನೆ" ಎಂದು ಹೇಳಿರುತ್ತೇನೆ.

ಇವೊತ್ತಿನ ಪರಿಸ್ಥಿತಿ ಹೇಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಅದೇನೆಂದರೆ, ಒಂದು ಬಾರಿ ಶಿಕ್ಷಕರು ಹುಲಿ ಮೇಲೆ ಪ್ರಬಂಧ ಬರೆಯಿರಿ ಎಂದು ಹೇಳುತ್ತಾರೆ. ಅದರಂತೆ, ಒಬ್ಬ ವಿದ್ಯಾರ್ಥಿ, ಹುಲಿಗೆ ನಾಲ್ಕು ಕಾಲು ಇರುತ್ತದೆ, ಬಾಲ ಇರುತ್ತದೆ, ಎರಡು ಕಣ್ಣುಗಳು ಇರುತ್ತವೆ ಎಂದು ಬರೆದಿದ್ದನು. ಅದಕ್ಕೆ ಅರ್ಧರ್ಧ ಮಾರ್ಕ್ಸ್ ಹಾಕಿ ಎಂದು ಹೇಳಿದ್ದರು. ಆದರೆ, ಒಬ್ಬ mischief ಮಾಡುವಂತಹ ವಿದ್ಯಾರ್ಥಿ ಹುಲಿ ಬದಲಾಗಿ ಇಲಿ ಎಂದು ಬರೆದಿದ್ದನು. ಅದಕ್ಕೆ ಒಬ್ಬ ಶಿಕ್ಷಕರು ಏನು ಮಾಡಿದರು ಎಂದರೆ, 'ಹುಲಿ' ಎಂಬ ಪದದಲ್ಲಿ 'ಲಿ' ಇದೆ. ಅದರಂತೆ, 'ಇಲಿ' ಎಂಬ ಪದದಲ್ಲಿ 'ಹು' ಬದಲಾಗಿ 'ಇ' ಇದೆ. ಜೊತೆಗೆ, 'ಲಿ' ಇದೆ ಎಂದು ಅದಕ್ಕೆ ಅರ್ಧ ಮಾರ್ಕ್ಸ್ ಕೊಟ್ಟಿದ್ದರು. ಈ ರೀತಿಯ ಶಿಕ್ಷಣ ವ್ಯವಸ್ಥೆ ನಮ್ಮಲ್ಲಿ ಇದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದರು.

ಇಲ್ಲಿ ಅನೇಕ ಜನ ಅಂದರೆ, ಶ್ರೀ ಗುಂಡೂರಾಯ ಶೆಟ್ಟಿಯಂತಹ ಬಿಜೆಪಿ ಸದಸ್ಯರು ಹಾಗೂ ಇತರೆ ಅನೇಕ ಸದಸ್ಯರು, stalwarts ಈ ಸದನದಲ್ಲಿ ಇದ್ದರು. ಜೊತೆಗೆ, ಅವರು ಒಂದು ಬಾರಿ ಸದನದ ಬೆಲ್ ಆಗಿ ಕುಳಿತರೆಂದರೆ, ಇಡೀ ಸದನ ಮುಗಿಯುವವರೆಗೂ ಯಾರು ಕೂಡ ಹೊರಗೆ ಹೋಗುತ್ತಿರಲಿಲ್ಲ. ಅಂತಹ ಜನ

ಅವೊತ್ತಿನ ಕಾಲಕ್ಕೆ ಇದ್ದರು. ಅವರಿಂದ ನಾವು ಅನೇಕ ರೀತಿಯಲ್ಲಿ ಬಹಳಷ್ಟು ಕಲಿತಿರುತ್ತೇವೆ. ಅವರು ಮಾಡಿದಂತಹ ಭಾಷಣಗಳು, ಅವರು ಹೇಳಿದಂತಹ ಕೆಲವು ಅಂಕಿ-ಸಂಖ್ಯೆಗಳು ನಮ್ಮ ಮುಂದೆ ಇನ್ನೂ ಇವೆ. ಅದಕ್ಕಾಗಿ ಅವರು ಬಹಳಷ್ಟು ಅಧ್ಯಯನ ಮಾಡಿಕೊಂಡು ಬರುತ್ತಿದ್ದರು. ಶೇಕಡ 99 ರಷ್ಟು ಶಾಸಕರೆಲ್ಲರೂ ಸಹ ಶಾಸಕರ ಭವನದಲ್ಲಿರುತ್ತಿದ್ದರು. ಸದನ ಪ್ರಾರಂಭವಾದಾಗ ಎಲ್ಲರೂ ಸಹ, ಅಜೆಂಡಾ ಪ್ರತಿಯನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದರು. ಸದನ ಮುಕ್ತಾಯವಾದ ನಂತರ, ಶಾಲೆ-ಕಾಲೇಜುಗಳು ಬಿಟ್ಟ ನಂತರ ವಿದ್ಯಾರ್ಥಿಗಳು ಯಾವ ರೀತಿ ಹೋಗುತ್ತಾರೋ, ಆ ರೀತಿ ಶಾಸಕರು ಹೋಗುತ್ತಿದ್ದರು. ಅಂದರೆ, ಸದನದ ಬಗ್ಗೆ ಅವರಿಗೆ ಅಷ್ಟೊಂದು ಪ್ರೀತಿ-ವಿಶ್ವಾಸ ಇರುತ್ತಿತ್ತು. ಒಂದು ಬಾರಿ ಶ್ರೀ ಜೆ.ಹೆಚ್. ಪಟೇಲರು ಮತ್ತು ಶ್ರೀ ಆರ್. ಗುಂಡೂರಾವ್‌ರವರು ಸದನದೊಳಗೆ ಬಯ್ದಾಡಿಕೊಂಡಿದ್ದರು. ಅಂದರೆ, ವಿಧಾನಸಭೆಯಲ್ಲಿ ಏಕವಚನದಲ್ಲಿ ಇಬ್ಬರೂ ಮಾತನಾಡಿದ್ದರು. ಅದನ್ನು ನೋಡಿ ಇಡೀ ಸದನ ಥಂಡ ಆಗಿತ್ತು. ಏಕೆಂದರೆ, ಅವರಿಬ್ಬರು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿದ್ದರು. ಕೊನೆಯದಾಗಿ, ಸದನ ಮುಕ್ತಾಯವಾದ ನಂತರ ಶ್ರೀ ಕೆಂಗಲ್ ಹನುಮಂತಯ್ಯ ಗೇಟ್ ಕಡೆ ಹೋಗುವ ಮುಂಚೆ ಶ್ರೀ ಗುಂಡೂರಾವ್‌ರವರು ಶ್ರೀ ಜೆ.ಹೆಚ್. ಪಟೇಲ್‌ರವರ ಹೆಗಲ ಮೇಲೆ ಕೈ ಹಾಕಿಕೊಂಡು ಇಬ್ಬರೂ ಮಾತನಾಡಿಕೊಂಡು ಹೋಗುತ್ತಿದ್ದರು. ಅಂದರೆ, ಅವೊತ್ತಿನ ದಿವಸ ರಾಜಕಾರಣ ಹೇಗಿತ್ತು ಎಂಬುದನ್ನು ನಾವು ನೋಡಬೇಕು. ಅದೇ ರೀತಿ, ಶ್ರೀ ಜಿ. ಮಾದೇಗೌಡ ಎಂಬ ಒಬ್ಬ ಮಿನಿಸ್ಟರ್ ಇದ್ದರು. ಜಂಟಿ ಅಧಿವೇಶನ ಆದಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕ ಭಾಗದ ಶಾಸಕರನ್ನು ಮೈಸೂರು ಕಡೆಗೆ ಪ್ರವಾಸ ಕರೆದುಕೊಂಡು ಹೋಗುತ್ತಿದ್ದರು. ಅವರು ಯಾವಾಗಲೂ ಕಾಲರ್ ಕೋಟ್ ಹಾಕುತ್ತಿದ್ದರು. ಆ ಸಂದರ್ಭದಲ್ಲಿ ಅಲ್ಲಿಗೆ ಶ್ರೀ ಗುಂಡೂರಾವ್‌ರವರು ಬಂದು, "ಏನ್ರೀ ಗೌಡ್ರೇ, ನೀವು ಮಧುಮಗ. ಅಲ್ಲಿ ಹೊರಗಡೆ ನಿಮ್ಮ ಬೀಗರು ನಿಂತಿದ್ದಾರೆ. ನಿಮ್ಮ ಕೋಟು ಏನು ಈ ರೀತಿ ಹರಿದಿದೆ" ಎಂದು ಕಾಲರ್ ಎತ್ತಿ ತೋರಿಸಿ ಹೇಳಿದರು. ಅದಕ್ಕೆ ಅವರು, "ನಮಗೆ ಏತಕ್ಕೆ ಬಿಡಿ ಸ್ವಾಮಿ, ನಾವು ರೈತರು" ಎಂದು ಹೇಳಿದರು. ನಾನು ಅದನ್ನು ಕಣ್ಣಾರೆ ನೋಡಿರುತ್ತೇನೆ. ಆಗ ಮಾನ್ಯ ಗುಂಡೂರಾವ್‌ರವರು ಒಬ್ಬರನ್ನು ಅಂಗಡಿಗೆ ಕಳುಹಿಸಿ, ಮುಂದಿನ ಅರ್ಧ ತಾಸಿನಲ್ಲಿ ಎರಡು ಸೂಟ್ ಅನ್ನು ತರಿಸಿ, ಮಾನ್ಯ ಮಧು ಮಾದೇಗೌಡರವರನ್ನು ತಮ್ಮ ಛೇಂಬರ್‌ಗೆ ಕರೆಯಿಸಿ, ಅವರಿಗೆ ಪ್ಯಾಂಟ್ ಮತ್ತು ಕೋಟು ಹಾಕಿಸಿ ಕಳುಹಿಸಿರುತ್ತಾರೆ. ಅಂತಹದ್ದನ್ನು ಸಹ ನಾನು ನೋಡಿರುತ್ತೇನೆ. ಅವೊತ್ತಿನ ದಿವಸದ ಪ್ರೀತಿ ವಿಶ್ವಾಸ ಇವೊತ್ತು ಇರುವುದಿಲ್ಲ. ರಾಜಕಾರಣ ಬದಲಾಗಿದೆ. ಅಂತಹ ಸಂದರ್ಭದಲ್ಲಿ ಮತ್ತು ಇಂತಹ ಸಂದರ್ಭದಲ್ಲಿಯೂ ಸಹ ನಾನು ಇದ್ದೇನೆ.

ನನಗೆ ತಂದೆ ಮತ್ತು ಮಕ್ಕಳು ಅಂದರೆ, ಎರಡು ತಲೆಮಾರಿನವರು ವೋಟು ಹಾಕಿರುತ್ತಾರೆ. ಅದನ್ನು ಇಟ್ಟುಕೊಂಡು ಹೋಗುವುದು ಬಹಳ ಕಷ್ಟದ ಕೆಲಸ. ಆ ಹಿನ್ನೆಲೆಯಲ್ಲಿ ಇವೊತ್ತಿನ ದಿವಸ ನನಗೆ ತೋರಿಸಿದಂತಹ ಪ್ರೀತಿ ಮತ್ತು ವಿಶ್ವಾಸಗಳನ್ನು ನಾನು ಎಂದಿಗೂ ಮರೆಯುವುದಿಲ್ಲ. ನಾವೆಲ್ಲರೂ ಸಹ ಒಂದು ಕುಟುಂಬದ ಸದಸ್ಯರ ರೀತಿ ಇರೋಣ. ನಾನು ಕೂಡ ಕೆಲವೊಮ್ಮೆ ಹೆಚ್ಚು ಕಡಿಮೆ ಹೇಳುತ್ತೇನೆ. ಏಕೆಂದರೆ, ನಾನೇನು ದೇವರಲ್ಲ.

ಕೆಲವೊಂದು ಬಾರಿ ನನ್ನಿಂದಲೂ ಸಹ ತಪ್ಪುಗಳು ಆಗುತ್ತಿರುತ್ತವೆ. ದಯಮಾಡಿ, ಕ್ಷಮಿಸಬೇಕು ಎನ್ನುವಂತಹ ಮಾತುಗಳನ್ನು ಬಹಳಷ್ಟು ಬಾರಿ ಹೇಳಿರುತ್ತೇನೆ. ಅದೇ ರೀತಿ ಈ ಸದನ ಇಡೀ ದೇಶಕ್ಕೆ ಮಾದರಿಯಾಗಿರುವಂತಹ ಸದನವಾಗಿದೆ. ಇದನ್ನು ನಾವೆಲ್ಲರೂ ಒಟ್ಟಾಗಿ ಮುಂದೆ ನಡೆಸಿಕೊಂಡು ಹೋಗೋಣ ಎನ್ನುವ ಮಾತನ್ನು ಹೇಳುತ್ತಾ, ಇಷ್ಟೊತ್ತಿನವರೆಗೂ ಅಂದರೆ, ಸುಮಾರು ನಾಲ್ಕೂವರೆ ಗಂಟೆಯಿಂದ ಐದು ಗಂಟೆಯವರೆಗೆ ಮಾತನಾಡಿರುತ್ತೀರಿ. ತಮಗೆಲ್ಲರಿಗೂ ಅನಂತ ಅನಂತ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**(ಈ ಹಂತದಲ್ಲಿ ಸದನದ ಎಲ್ಲಾ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಳಮೀಸಲಾತಿ ವಿಚಾರವನ್ನು ಪ್ರಸ್ತಾಪಿಸಲು ನಿನ್ನೆಯಿಂದಲೂ ಅವಕಾಶ ಕೇಳುತ್ತಿದ್ದೇವೆ. ಜೊತೆಗೆ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಇದೆ.

**ಸಭಾಪತಿಯವರು:-** ಈಗ ತೆಗೆದುಕೊಳ್ಳುತ್ತೇನೆ. ಇಂದಿನ ಕಾರ್ಯಸೂಚಿ ಪಟ್ಟಿಯಲ್ಲಿ ಆ ವಿಷಯ ಇದೆ. ಹಾಗಾಗಿ, ಅದನ್ನು ಮುಂದುವರೆಸುತ್ತೇನೆ.

## 11. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ.ಸ.:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025
3. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025
4. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2025
5. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2025
6. ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, 2025
7. ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2025
8. ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
9. ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025
10. ಕರ್ನಾಟಕ ದೇವದಾಸಿ (ಪ್ರತಿಬಂಧಕ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ವಿಧೇಯಕ, 2025

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ತಿಪ್ಪಣ್ಣಪ್ಪ ಕಮಕನೂರರವರದ್ದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯನ್ನು divert ಮಾಡಬಾರದೆಂದು ನಾವು ಈ ದಿನ ಬೆಳಗ್ಗೆ ಸುಮ್ಮನೆ ಕುಳಿತಿರುತ್ತೇವೆ. ಯಾವುದೇ ಸಾರ್ವಜನಿಕ ಮಹತ್ವದ ತುರ್ತು ವಿಷಯಗಳು ಈ ಬಾರಿ ಸದನದಲ್ಲಿ ಚರ್ಚೆಗೆ ಬಂದಿರುವುದಿಲ್ಲ. ಅನೇಕ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ನಾವು ನಿಲುವಳಿ ಸೂಚನೆ ಕೊಟ್ಟಾಗ ಎಲ್ಲವೂ ನಿಯಮ ೩೩೦ಕ್ಕೆ divert ಆಗುತ್ತಿವೆ. ನಾವು ಕಳೆದ ನಾಲ್ಕು ದಿವಸಗಳಿಂದ ನಮ್ಮ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದೇವೆ.

**ಸಭಾಪತಿಯವರು:-** ನಿಯಮ ೩೩೦ ರಡಿಯಲ್ಲಿ ಮೊದಲ ಎರಡು ವಿಷಯಗಳು ತಮಗೆ ಸಂಬಂಧಪಟ್ಟಿರುವ ವಿಷಯಗಳಾಗಿವೆ. ಅದರಂತೆ, ಗಮನ ಸೆಳೆಯುವ ಸೂಚನೆ ಮುಕ್ತಾಯವಾದ ತಕ್ಷಣವೇ ನಾನು ತಮ್ಮ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ ೩೩೦ ರಡಿಯಲ್ಲಿರುವ ನಮ್ಮ ವಿಷಯಗಳನ್ನು ಈಗ ಚರ್ಚೆಗೆ ತೆಗೆದುಕೊಳ್ಳಿ. ಅದಕ್ಕಾಗಿ, ನಾನು ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಇಲ್ಲ ಆಗುವುದಿಲ್ಲ.

**ಸಭಾಪತಿಯವರು:-** ಗಮನ ಸೆಳೆಯುವ ಸೂಚನೆಯಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸಚಿವರು ಹಾಗೂ ಮಾನ್ಯ ಸದಸ್ಯರು ಈಗ ಸದನದಲ್ಲಿ ಹಾಜರಿದ್ದಾರೆ. ಹಾಗಾಗಿ, ಅಜೆಂಡಾ ಪ್ರಕಾರ ಅವುಗಳನ್ನು ಮುಗಿಸೋಣ. ನಂತರ, ತಮಗೆ ನಾನು ಅವಕಾಶ ನೀಡುತ್ತೇನೆ.

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು.

## 12.ಗಮನ ಸೆಳೆಯುವ ಸೂಚನೆಗಳು (ಮುಂದುವರೆದಿದ್ದು)

**ಇ) ವಿಷಯ:- ಬೆಂಗಳೂರಿನಲ್ಲಿ ಸರ್ಕಾರದಿಂದ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಚಾಲುಕ್ಯ ವೃತ್ತದಲ್ಲಿರುವ ಜಗಜ್ಯೋತಿ ಬಸವೇಶ್ವರ ಪ್ರತಿಮೆಯ ಪಕ್ಕದಲ್ಲಿರುವ ಜವಾಹರಲಾಲ್ ನೆಹರೂ ಪ್ಲಾನಿಟೋರಿಯಂಗೆ ಹೊಂದಿಕೊಂಡಿರುವ ಜಾಗದಲ್ಲಿ ಸ್ಥಾಪಿಸುವ ಬಗ್ಗೆ**

- - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸರ್ಕಾರದಿಂದ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಚಾಲುಕ್ಯ ವೃತ್ತದಲ್ಲಿರುವ ಜಗಜ್ಯೋತಿ ಬಸವೇಶ್ವರ ಪ್ರತಿಮೆಯ ಪಕ್ಕದಲ್ಲಿರುವ ಜವಾಹರಲಾಲ್ ನೆಹರೂ ಪ್ಲಾನಿಟೋರಿಯಂಗೆ ಹೊಂದಿಕೊಂಡಿರುವ ಜಾಗದಲ್ಲಿ ಸ್ಥಾಪಿಸುವ ಬಗ್ಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ,

**ಉತ್ತರ :-**

ಹನ್ನೆರಡನೇ ಶತಮಾನದ ಸಾಮಾಜಿಕ, ಕ್ರಾಂತಿಯ ಹರಿಕಾರರಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರು ಒಬ್ಬರು. ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವದ ಅಂಬಿಗರ ಚೌಡಯ್ಯನವರು ನೇರ ನಿರ್ಭೀತ ನುಡಿಗಳಿಗೆ ಪ್ರಸಿದ್ಧರು. ಅಂಬಿಗರ ಚೌಡಯ್ಯ ಎಂಬ ಅಂಕಿತನಾಮದಿಂದಲೇ ವಚನಗಳನ್ನು ರಚಿಸಿರುತ್ತಾರೆ.

ಚಾಲುಕ್ಯ ವೃತ್ತದಲ್ಲಿರುವ ಜಗಜ್ಯೋತಿ ಬಸವೇಶ್ವರರ ಪ್ರತಿಮೆಯ ಪಕ್ಕದಲ್ಲಿರುವ ಜವಹಾರ್ ಲಾಲ್ ನೆಹರೂ ಪ್ಲಾನಿಟೋರಿಯಂಗೆ ಹೊಂದಿಕೊಂಡಿರುವ ಜಾಗದಲ್ಲಿ ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆ ಸ್ಥಾಪನೆಗೆ ಸಂಬಂಧಿಸಿದಂತೆ,

ಸರ್ಕಾರದ ಸುತ್ತೋಲೆ ಸಂಖ್ಯೆ ಕಸಂವಾಪ್ರ 564 ಕಸಧ 2012 ದಿ:11.06.2012ರಲ್ಲಿ ಸರ್ಕಾರದ/ ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಯನ್ನು ಸ್ಥಾಪಿಸುವುದನ್ನು ನಿರ್ಬಂಧಿಸಲಾಗಿದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ SLP(C) ಸಂಖ್ಯೆ 8519/2006ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:18-01-2013ರಂದು ನೀಡಿರುವ ತೀರ್ಪಿನಲ್ಲಿರುವ ಒಂದು ಅಂಶವು ಈ ಕೆಳಕಂಡಂತೆ ಇರುತ್ತದೆ.

> " ........ State Government shall not grant any permission for installation of any statue or construction of any structure in public roads, pavements, sideways and other public utility places".

> "......... ರಾಜ್ಯ ಸರ್ಕಾರವು ಸಾರ್ವಜನಿಕ ರಸ್ತೆ, ರಸ್ತೆಬದಿಯ ಸ್ಥಳಗಳು ಹಾಗೂ ಸಾರ್ವಜನಿಕ ಉಪಯುಕ್ತ ಸ್ಥಳಗಳಲ್ಲಿ ಪ್ರತಿಮೆಗಳ ಸ್ಥಾಪನೆ ಅಥವಾ ಯಾವುದೇ ರಚನೆಗಳ ನಿರ್ಮಾಣಕ್ಕೆ ಅನುಮತಿಯನ್ನು ನೀಡತಕ್ಕದ್ದಲ್ಲ........"

ಮೇಲ್ಕಂಡ ಸರ್ಕಾರದ ಸುತ್ತೋಲೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಯಲದ ತೀರ್ಪಿನನ್ವಯ ಸಾರ್ವಜನಿಕ ಸ್ಥಳದಲ್ಲಿ ಪ್ರತಿಮೆ ಸ್ಥಾಪನೆಗೆ ಅವಕಾಶವಿರುವುದಿಲ್ಲ.

ಸುಮಾರು 160 ಕ್ಕಿಂತ ಹೆಚ್ಚು ಶಿವಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗೆ ಶ್ರಮಿಸಿರುತ್ತಾರೆ. ಹಲವಾರು ಶಿವಶರಣರ ಪ್ರತಿಮೆಯನ್ನು ಸ್ಥಾಪಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಈ ಮಹಾನ್ ಚೇತನಗಳ ಶಿವಶರಣರ ಹೆಸರುಗಳನ್ನು ಒಂದೇ ಶಿಲೆಯಲ್ಲಿ ಕೆತ್ತಿಸಿ ಶಿಲಾಶಾಸನ ಮಾದರಿಯಲ್ಲಿ ಸ್ಥಾಪಿಸುವ ಕುರಿತು ಪರಿಶೀಲಿಸಲಾಗುವುದು.

ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರು, ಕಳೆದ ಎರಡೂವರೆ ವರ್ಷಗಳಲ್ಲಿ ಇದು ಮೂರನೇ ಬಾರಿ ಪ್ರಶ್ನೆಯನ್ನು ಕೇಳಿರುತ್ತಾರೆ. ವಿಧಾನಸೌಧದ ಸುತ್ತಮುತ್ತಲೂ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದಾಗ ಅದಕ್ಕೆ ಇಲಾಖೆಯವರು ಒಪ್ಪಿಗೆ ಕೊಡಲಿಲ್ಲ. ಅದಕ್ಕಾಗಿ, ನಾನು ವಿಚಾರ ಮಾಡಿರುವುದೇನೆಂದರೆ, ಬೇರೆ ಎಲ್ಲಾದರೂ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಸ್ಥಾಪಿಸೋಣವೆಂದು ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರ ಜೊತೆ ಮಾತನಾಡಿರುತ್ತೇನೆ. ಆದರೆ, ಅವರು

ಬೆಂಗಳೂರಿನಲ್ಲಿಯೇ ಪ್ರತಿಮೆ ಸ್ಥಾಪಿಸಬೇಕೆಂದು ಬಹಳ ಹಠ ಹಿಡಿದಿರುತ್ತಾರೆ. ಅದಕ್ಕೆ ನಾನು ಎರಡು-ಮೂರು ಸಲಹೆಗಳನ್ನು ಕೊಡುತ್ತೇನೆ. ಮೊದಲನೆಯದಾಗಿ, ನಿಜಶರಣ ಅಂಬಿಗರ ಚೌಡಯ್ಯನವರ ಹುಟ್ಟೂರಾದ ಚೌಡದಾನಪುರದಲ್ಲಿ ಒಂದು ದೊಡ್ಡ ಪ್ರತಿಮೆಯನ್ನು ಸ್ಥಾಪನೆ ಮಾಡೋಣ ಎಂದು ಸರ್ಕಾರದಲ್ಲಿ ಚಿಂತನೆ ಇದೆ. ಇಲಾಖೆಯವರು ಎರಡು-ಮೂರು ಕಡೆ ಪ್ರತಿಮೆ ಸ್ಥಾಪಿಸಬಹುದೆಂದು ಹೇಳಿರುತ್ತಾರೆ. ಅದು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುತ್ತದೆ. ಆ ಬಗ್ಗೆ ಸಂಬಂಧಪಟ್ಟ ಬಿ.ಬಿ.ಎಂ.ಪಿ. ಅಧಿಕಾರಿಗಳ ಜೊತೆ ಚರ್ಚೆ ಮಾಡಿರುತ್ತೇನೆ. ಅದಕ್ಕೆ ಅವರು, "ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶ ಇರುವುದರಿಂದ, ಅಲ್ಲಿ ಪ್ರತಿಮೆ ಸ್ಥಾಪಿಸಲು ಸ್ಥಳಾವಕಾಶ ನೀಡುವುದಕ್ಕೆ ಅವಕಾಶವಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ನಾನು ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತೇನೆ. ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಸ್ಥಾಪಿಸಲು ಒಟ್ಟು ಎರಡು-ಮೂರು ಜಾಗಗಳನ್ನು ಈಗಾಗಲೇ ಗುರುತಿಸಲಾಗಿರುತ್ತದೆ. ಅದರಂತೆ, ನಿಜಶರಣ ಅಂಬಿಗರ ಚೌಡಯ್ಯನವರ ಹುಟ್ಟೂರಾದ ಚೌಡದಾನಪುರದಲ್ಲಿ ಆಗಲಿ ಅಥವಾ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಆಗಲಿ, ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಯೋಚಿಸಿರುತ್ತೇವೆ. ಒಟ್ಟಾರೆಯಾಗಿ, ಪ್ರತಿಮೆ ಸ್ಥಾಪಿಸಲು ಎರಡು-ಮೂರು ಕಡೆಗಳಲ್ಲಿ ಜಾಗವನ್ನು ಗುರುತಿಸಿದ್ದು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಸ್ಥಾಪಿಸಲೇಬೇಕೆಂದು ಹಠ ಹಿಡಿದಿರುವುದರಿಂದ, ಉದ್ದೇಶಿತ ಎರಡು-ಮೂರು ಜಾಗಗಳ ಪೈಕಿ ಯಾವುದಾದರೂ ಒಂದು ಜಾಗದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ.

(ಮುಂದು)

(801) 19.08.2025 5.20 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಸುಮಾರು 50 ರಿಂದ 70 ಮಂದಿ ಶಾಸಕರು ಒಗ್ಗಟ್ಟಿನಿಂದ ಪಕ್ಷ ಭೇದ ಮರೆತು ಹಿಂದುಳಿದ ಸಮಾಜಕ್ಕೆ ಒಬ್ಬ ಶರಣರಲ್ಲಿಯೇ ಶರಣರಾದ ನಿಜಶರಣ ಅಂಬಿಗರ ಚೌಡಯ್ಯನ ಮೂರ್ತಿ ಸ್ಥಾಪನೆ ಮಾಡುವುದು ಪ್ರಸ್ತುತವಾಗಿದೆ ಎಂದು ಸಹಿ ಮಾಡುವುದರ ಮೂಲಕ ಜಿಲ್ಲಾಧಿಕಾರಿಯವರಿಗೆ ಹಾಗೂ ಸಂಬಂಧಪಟ್ಟ ಸಚಿವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೂ ಸಹ ಪ್ರಸ್ತಾವನೆ ಸಲ್ಲಿಸಿದ್ದೇವೆ. ಈ ಸಂಬಂಧ ತಾವು ಸಹ ಹಿಂದುಳಿದ ಸಮಾಜದವರಿಗೆ ಅನುಕೂಲವಾಗಲೀ ಎಂದು ಪತ್ರ ಬರೆದು, ಸಂಬಂಧಪಟ್ಟ ಸಚಿವರಿಗೆ ಹೇಳಿದ್ದೀರಿ. ನಮ್ಮ ಜಿಲ್ಲೆಯಲ್ಲಿ ನಾಳೆಯೇ ಬೇಕಾದರೆ ನಾವೇ ಸುಮಾರು ರೂ.25 ಲಕ್ಷಗಳನ್ನು ಖರ್ಚು ಮಾಡಿ, ನಿಜಶರಣ ಅಂಬಿಗರ

ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಕೊಳ್ಳುತ್ತೇವೆ. ಕರ್ನಾಟಕ ಸರ್ಕಾರದಿಂದ ಒಳ್ಳೆಯ ಸಂದೇಶ ಹೋಗಲಿ, ಹಿಂದುಳಿದ ಜನಾಂಗದವರಿಗೂ ಸಹ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಎತ್ತಿಹಿಡಿಯುತ್ತಾರೆ, ನಮಗೆ ಸಹಾಯ ಮಾಡುತ್ತಾರೆ ಎಂಬ ಭಾವನೆ ಬರಲಿ ಎಂಬ ಕಾರಣಕ್ಕೆ ಹೇಳುತ್ತಿದ್ದೇನೆ. ಏಕೆಂದರೆ, ಸುಮಾರು 75 ವರ್ಷಗಳಿಂದ ನಮ್ಮ ಸಮುದಾಯದವರು ನಿರಂತರವಾಗಿ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ಕೊಡುತ್ತಾ ಬಂದಿದ್ದಾರೆ. ಸುಮಾರು 75 ವರ್ಷಗಳ ಬಳಿಕ ಮೊಟ್ಟಮೊದಲ ಬಾರಿಗೆ ಈ ಸದನದ ಶಾಸಕನಾಗಿ ನಾನು ಆಯ್ಕೆಗೊಂಡಿದ್ದೇನೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಬೆಂಗಳೂರಿನ ವಿಧಾನಸೌಧದಲ್ಲಿ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರೂ ಒಳ್ಳೆಯದು. ಇಲ್ಲದಿದ್ದರೆ ಬೆಳಗಾವಿಯ ಸುವರ್ಣಸೌಧದಲ್ಲಿ ಪ್ರತಿಷ್ಠಾಪನೆ ಮಾಡಿದರೂ ಪರವಾಗಿಲ್ಲ. ಏಕೆಂದರೆ, ಹಿಂದುಳಿದ ಸಮಾಜದವರ ಆಸೆಯಾಗಿದ್ದು, ಬಹು ದಿನಗಳ ಬೇಡಿಕೆಯಾಗಿದೆ. ಹಾಗಾಗಿ, ಈ ವಿಚಾರವಾಗಿ ಮಾನ್ಯ ಸಚಿವರು ಹಠ ಮಾಡದೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಮಾತನಾಡಬೇಕು ಮತ್ತು ಸಭಾಪತಿಯವರ ಬಾಯಿಯಿಂದ ಹೇಳಿಸಬೇಕು. ಸದರಿ ವಿಚಾರವಾಗಿ ಬೆಳಗಾವಿಯಲ್ಲಿ ಮಾತನಾಡಿದ್ದೇವೆ. ಹಾಗೆಯೇ ಇದೇ ಸದನದಲ್ಲಿ ಎರಡು-ಮೂರು ಬಾರಿ ಚರ್ಚೆ ಮಾಡಿದ್ದೇವೆ. ಇಲ್ಲದಿದ್ದರೆ ನಮ್ಮ ಸಮುದಾಯದವರೆಲ್ಲರೂ ಹೋಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಲಕ್ಷಗಟ್ಟಲೆ ಜನರನ್ನು ಸೇರಿಸುವುದರ ಮೂಲಕ ಸತ್ಯಾಗ್ರಹ ಮಾಡಬೇಕಾಗುತ್ತದೆ. ಇದ್ದರಿಂದಾಗಿ ಕೆಟ್ಟ ಸಂದೇಶ ಹೋಗುತ್ತದೆ. ನಾನು ಆಡಳಿತ ಪಕ್ಷದಲ್ಲಿಯೇ ಇರುವುದರಿಂದ, ನಮ್ಮ ಸಮುದಾಯದವರೆಲ್ಲರೂ, 'ನಿಮಗೆ ಆ ರೀತಿ ಆಗಬಾರದೆಂದು, ಸರ್ಕಾರ ನಿಮ್ಮ ಮಾತೇ ಕೇಳುತ್ತಿಲ್ಲ ಹಾಗೂ ನಿಮಗೆ ಅನ್ಯಾಯವಾಗುತ್ತಿದೆ' ಎಂದು ಹೇಳುತ್ತಿದ್ದಾರೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಪ್ರತಿಷ್ಠಾಪನೆ ಮಾಡಲಿ.

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕೆಂಬುದು ಇದೆ. ಆದರೆ, ನಮ್ಮಲ್ಲಿ ಏನು ಹೇಳುತ್ತಿದ್ದಾರೆ, ಒಬ್ಬರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರೆ ಎಲ್ಲಾ ಶರಣರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕಾಗಬಹುದು. ಆಮೇಲೆ ಸುವರ್ಣಸೌಧದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆ ಮಾಡಲು ಜಾಗ ಸಿಗುವುದಿಲ್ಲ, ವಿಧಾನಸೌಧದಲ್ಲಿಯೂ ಮೂರ್ತಿಗಳ ಪ್ರತಿಷ್ಠಾಪನೆ ಮಾಡಲು ಸಿಗುವುದಿಲ್ಲ. ಆ ರೀತಿ

ಆಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ವಿಚಾರ ಮಾಡಿ ನೋಡೋಣ ಎಂದು ಹೇಳಿದ್ದಾರೆ. ಅದಕ್ಕಾಗಿ, ಇನ್ನೊಂದು plan ಅನ್ನು ಸಹ ಮಾಡಿದ್ದು, ಅದನ್ನು ಸಹ ಹೇಳಿದ್ದೆನು. ಅದೇನೆಂದರೆ, ನೂರಾರು ಶರಣರ ದೊಡ್ಡ ಕಂಬವನ್ನೇ ಸ್ಮಾರಕ ಟೈಪ್‌ನಲ್ಲಿ ಬೆಂಗಳೂರಿನ ವಿಧಾನಸೌಧ ಅಥವಾ ಬೆಳಗಾವಿಯ ಸುವರ್ಣಸೌಧದಲ್ಲಿ ನಿರ್ಮಾಣ ಮಾಡೋಣ ಎಂದು ಹೇಳಿದ್ದೆನು. ಆದರೆ, ಮಾನ್ಯ ತಿಪ್ಪಣ್ಣಪ್ಪ ಕಮಕನೂರುರವರೇ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲೇಬೇಕು ಎಂದು ಹಠ ತೊಟ್ಟಿದ್ದಾರೆ. ಈ ಸಂಬಂಧ ನಾನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಚರ್ಚೆ ಮಾಡಿ, ಬೆಳಗಾವಿಯ ಸುವರ್ಣ ವಿಧಾನಸೌಧ ಅಥವಾ ಹಾವೇರಿ ಜಿಲ್ಲೆಯಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವಂಥ ಕೆಲಸ ಮಾಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಹೊಸದಾಗಿ ಏನು ಸೃಷ್ಟಿ ಮಾಡುತ್ತಾರೆ. ದಯವಿಟ್ಟು ಅವರ ಮತಕ್ಷೇತ್ರದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಸ್ಥಾಪನೆ ಮಾಡಿದರೂ ನಾವೆಲ್ಲರೂ ಬೆಂಬಲ ಕೊಡುತ್ತೇವೆ. ನಮ್ಮ ಅಂಬಿಗರ ಚೌಡಯ್ಯನವರು 63 ಶರಣರಲ್ಲಿಯೇ ನಿಜಶರಣ ಎನ್ನುವಂಥ ಹೆಸರು ತೆಗೆದುಕೊಂಡಿದ್ದಾರೆ. ಬಸವಣ್ಣನವರ ಹೆಗ್ಗಲಿಗೆ ಹೆಗ್ಗಲು ಕೊಟ್ಟು,...

**ಸಭಾಪತಿಯವರು:-** ಮಾನ್ಯ ಸಚಿವರು ಈಗಾಗಲೇ ಮಾಡುತ್ತೇವೆ ಎಂದು ಹೇಳಿದ್ದಾರೆ ಅಲ್ಲವೇ?

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ವಿಧಾನಸೌಧ ಅಥವಾ ಸುವರ್ಣ ವಿಧಾನಸೌಧದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವಂಥ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಮಾಡುತ್ತಾರೆ ಬಿಡಿ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸುವರ್ಣ ವಿಧಾನಸೌಧದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತೇವೆ ಎಂಬುದನ್ನು ಮಾನ್ಯ ಸಚಿವರು ಹೇಳಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ಸಂಬಂಧ ವಿಚಾರ ಮಾಡಿ ತೀರ್ಮಾನವನ್ನು ತಿಳಿಸಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಈ ಸಂಬಂಧ ಚರ್ಚೆ ಮಾಡಿ, ಸುವರ್ಣ ವಿಧಾನಸೌಧದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಟಿ.ಎನ್.ಜವರಾಯಿಗೌಡ.

**(ಈ ಹಂತದಲ್ಲಿ ಮಾನ್ಯ ಟಿ.ಎನ್.ಜವರಾಯಿಗೌಡರವರು ಸದನದಲ್ಲಿ ಗೈರು ಹಾಜರಾಗಿದ್ದರು)**

**13. ನಿಯಮ-330ರ ಮೇರೆಗೆ**

**ಪರಿಶಿಷ್ಟ ಜಾತಿ ಅಡಿಯಲ್ಲಿ ಬರುವ ವಿವಿಧ ಸಮುದಾಯಗಳಿಗೆ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸುವ ವಿಚಾರದ ಕುರಿತು.**

----

**ಸಭಾಪತಿಯವರು:-** ನಿಯಮ 330ರಡಿಯಲ್ಲಿ ಪರಿಶಿಷ್ಟ ಜಾತಿ ಅಡಿಯಲ್ಲಿ ಬರುವ ವಿವಿಧ ಸಮುದಾಯಗಳಿಗೆ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸುವ ವಿಚಾರದ ಕುರಿತು ಚರ್ಚೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಅಡಿ ನನ್ನದೊಂದು ವಿಚಾರವು ಇದೆ.

**ಸಭಾಪತಿಯವರು:-** ತಾವು ಇರಲಿಲ್ಲ ಅಲ್ಲವೇ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲಿಗೂ ಹೋಗಿಲ್ಲ. ಇಲ್ಲಿಯೇ ಇದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿ ಒಳಮೀಸಲಾತಿ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದು ಈ ಸಂದರ್ಭದಲ್ಲಿ ಸೂಕ್ತವಲ್ಲ. ಏಕೆಂದರೆ, ಸಂಜೆ 7.00 ಗಂಟೆಗೆ ವಿಶೇಷವಾಗಿ ಸಚಿವ ಸಂಪುಟ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕರೆದಿದ್ದಾರೆ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ ಹಾಗೂ ಇತರರು ನಿಲುವಳಿ ಸೂಚನೆ ಅಡಿ ಈ ವಿಚಾರವಾಗಿ ಚರ್ಚೆ ಮಾಡಲು ಬರೆದುಕೊಟ್ಟಿದ್ದು, ಅದನ್ನು ನಿಯಮ 330 ರಡಿ ಕನ್ವರ್ಟ್ ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಕುರಿತು ನಾಲ್ಕು ದಿವಸಗಳ ಮುಂಚೆಯೇ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಹೇಳಿದ ಮಾತನ್ನು ಒಪ್ಪುತ್ತೇನೆ. ಇಂದು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವುದರಿಂದ ನಾಳೆ ಅವರಿಗೆ ಉತ್ತರವನ್ನು ನೀಡುತ್ತೇವೆ ಅಲ್ಲವೇ?

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಉತ್ತರ ನೀಡಲಿ. ಆದರೆ, ನಮಗೆ ಈಗ ಚರ್ಚೆಗೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟ ಸಭೆಯಲ್ಲಿ ಅವರ ತೀರ್ಮಾನ ಏನೂ ಬೇಕಾದರೂ ಆಗಲಿ, ಉತ್ತರ ಏನೂ ಬೇಕಾದರೂ ಕೊಡಲಿ. ಆದರೆ, ಇಂದು ನಾವು ಚರ್ಚೆಗೆ ಅವಕಾಶ ಕೇಳಿದ್ದು, ನಮಗೆ ಚರ್ಚಿಸಲು ಅವಕಾಶ ಕೊಡಿ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನು ಚರ್ಚೆಯೇ ಆಗಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ಕೊಡಲು ನಮ್ಮ ತಕರಾರು ಇಲ್ಲ. ಆದರೆ, ಈ ವಿಚಾರವಾಗಿ ಇಂದು ಸಂಜೆ 7 ಗಂಟೆಗೆ ಸಚಿವ ಸಂಪುಟ ಸಭೆ ಕರೆದಿರುವುದರಿಂದ ಅಲ್ಲಿ ಚರ್ಚಿಸಿ, ನಾಳೆ ಉತ್ತರ ನೀಡುತ್ತೇವೆ. ನಾವು ಕೊಡುವಂಥ ಸರ್ಕಾರದ ಹೇಳಿಕೆ ಮೇಲೆ ಚರ್ಚೆ ಪ್ರಾರಂಭಿಸಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆದಾಗ್ಯೂ ಒಂದು ಸಲ ಇಂದು ಚರ್ಚೆ ಮಾಡೋಣ ಎಂಬುದು ನಮ್ಮ ಅಭಿಪ್ರಾಯ. ಸರ್ಕಾರದ ಆದೇಶ ಏನು ಬರುತ್ತದೆ ಅದರ ಬಗ್ಗೆಯೂ ಚರ್ಚೆ ಮಾಡೋಣ. ಆದರೆ, ಇಲ್ಲಿಯವರೆಗೂ ಏನು ಕೇಳಿದ್ದೇವೆ ಅದು ಆಗಬೇಕು.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ಈಗ ಚರ್ಚೆ ಮಾಡಿ, ಇಲ್ಲದಿದ್ದರೆ ನಾಳೆ ಚರ್ಚೆ ಮಾಡಿ. ಎರಡು ದಿವಸಗಳಲ್ಲಿ ಒಂದು ದಿವಸ ಮಾತ್ರ ಚರ್ಚೆ ಮಾಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಲೇ ಚರ್ಚೆ ಮಾಡುತ್ತೇವೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಸದನದಲ್ಲಿಲ್ಲ. ವಿರೋಧ ಪಕ್ಷದವರಿಗೆ ಯಾರು ಉತ್ತರ ನೀಡುತ್ತಾರೆ?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟ ಸಭೆಯಲ್ಲಿ ಏನೆಂದು ತೀರ್ಮಾನ ಮಾಡುತ್ತಾರೆ ಎಂಬುದನ್ನು ಹೇಳಲಿ. ಒಳಮೀಸಲಾತಿ ಜಾರಿಗೆ ತರುತ್ತಾರೆಯೇ, ಇಲ್ಲವೇ ಎಂಬುದನ್ನು ಹೇಳಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಚರ್ಚೆ ಮಾಡಲು ಏತಕ್ಕೆ ಸಿದ್ಧರಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ದಲಿತ ವಿರೋಧಿಗಳು, ಒಳಮೀಸಲಾತಿ ವಿರೋಧಿಗಳು. ಈ ಒಳಮೀಸಲಾತಿ ಜಾರಿಗೆ ತರುವ ಬಗ್ಗೆ ಈಗಾಗಲೇ ಮಾತನಾಡಿ ಒಂದು ವರ್ಷಗಳಾಗಿವೆ. ಹಾಗಾಗಿ, ಆಡಳಿತ ಪಕ್ಷದವರು ಇದಕ್ಕೆ ವಿರೋಧಿಗಳೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಒಳಮೀಸಲಾತಿ ಚರ್ಚೆ ಬಗ್ಗೆ ಏತಕ್ಕೆ ಸಿದ್ಧರಿಲ್ಲ.

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಚಿವ ಸಂಪುಟ ಸಭೆ ಇರುವುದರಿಂದ ಈಗ ಚರ್ಚೆ ಮಾಡಿ ಪ್ರಯೋಜನಾ ಇಲ್ಲ ಎಂಬುದನ್ನು ಗಮನಕ್ಕೆ ತರುತ್ತಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಳಮೀಸಲಾತಿ ಚರ್ಚೆಗೆ ಆಡಳಿತ ಪಕ್ಷದವರ ವಿರೋಧ ಇದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚರ್ಚೆಗೆ ನಮ್ಮ ವಿರೋಧ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಮಾತನಾಡಲಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಒಳಮೀಸಲಾತಿ ಜಾರಿಗೆ ನಮ್ಮ ಸರ್ಕಾರ ಬದ್ಧವಾಗಿದೆ. ಇನ್ನು ಎರಡು ಗಂಟೆ wait ಮಾಡಿದರೆ ಅವರಿಗೆ ಉತ್ತರ ಸಿಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಬರೀ ಬಾಯಿ ಉಪಚಾರ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರನ್ನು ಕೇಳಿಕೊಳ್ಳಿ. ನಾವು ನಿಮ್ಮ ಪರವಾಗಿಯೇ ಹೇಳುತ್ತೇವೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮೂರು ವರ್ಷಗಳಿಂದ ಅವಕಾಶ ಕೇಳುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಒಂದು ನಿಮಿಷ ನನ್ನ ಮಾತನ್ನು ಕೇಳಿಸಿಕೊಳ್ಳಿ. ಸಚಿವ ಸಂಪುಟ ಸಭೆ ಇರುವುದರಿಂದ ಅಲ್ಲಿ ಏನು ಚರ್ಚೆಯಾಗುತ್ತದೆ ಆಗಲಿ. ಹಾಗೆಯೇ ವಿರೋಧ ಪಕ್ಷದ ಸದಸ್ಯರು ಏನು ಚರ್ಚೆ ಮಾಡುತ್ತಾರೆ ಮಾಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಒಳ್ಳೆಯ ಸಲಹೆ ಕೊಡಬಹುದು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿಗಳಲ್ಲಿ 101 ಜಾತಿಗಳಿವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ಕಾಯುತ್ತಾ ಇದ್ದೇನೆ. ನಾನು ಬೇಗ ಹೋಗಬೇಕೆಂದು ತಮಗೆ ಚೀಟಿ ಸಹ ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ಸದನದಲ್ಲಿ ಇಲ್ಲದೇ ಇದ್ದ ಪ್ರಯುಕ್ತ ತಮ್ಮ ವಿಚಾರವನ್ನು ಬಿಟ್ಟೆನು. ತಾವು ಸದನದಲ್ಲಿದ್ದೀರಿ ಎಂಬುದು ನನಗೇನು ಗೊತ್ತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿಯೇ ಇದ್ದೇನೆ. ಎಲ್ಲಿಗೆ ಹೋಗಿದ್ದೇನೆ? ದಯವಿಟ್ಟು ಇದೊಂದು ವಿಚಾರಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿಗಳಲ್ಲಿ 101 ಜಾತಿಗಳಿದ್ದು, ಒಳಮೀಸಲಾತಿ ಮಾಡತಕ್ಕಂಥ ವಿಚಾರದಲ್ಲಿ,...

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದೊಂದು ವಿಚಾರಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಇರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾಲ್ಕು ದಿವಸಗಳಿಂದ ಮುಂದೂಡುತ್ತಾ ಬಂದಿದ್ದೀರಿ. ಇದು ಸರಿಯಾದ ಕ್ರಮವಾಗಿಲ್ಲ. ಹಿಂದೆ ಬಂದ ವಿಚಾರವನ್ನೆಲ್ಲಾ ಚರ್ಚೆಗೆ ತೆಗೆದುಕೊಂಡು, ಈ ಒಳಮೀಸಲಾತಿ ವಿಚಾರವನ್ನು ಏನು ಮಾಡಬೇಕೆಂದು ಇದ್ದೀರಿ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಚರ್ಚೆ ಅವಕಾಶ ಕಲ್ಪಿಸುತ್ತಿದ್ದೇನೆ ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಜನರಿಗೆ ನ್ಯಾಯ ಸಿಗಬೇಕಲ್ಲವೇ? ತಮಗೆ ಗೌರವ ಸಮರ್ಪಣೆ ಮಾಡಬೇಕೆಂದು ಮಧ್ಯಾಹ್ನ ಹನ್ನೆರಡು ಮೂವತ್ತರಿಂದ ಸಂಜೆ ನಾಲ್ಕೂವರೆ, ಐದು ಗಂಟೆವರೆಗೂ ಅಭಿನಂದನೆ ಸಲ್ಲಿಸಿದ್ದರು. ಆದಾಗ್ಯೂ ನಾವು ಸುಮ್ಮನೆ ಕುಳಿತ್ತಿದ್ದೆವು. ಇದು ಸಹ ಒಂದು ತಂತ್ರಗಾರಿಕೆ ಎಂಬುದು ನನಗೆ ಗೊತ್ತಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಗಲಿ. ತಾವು ಒಳಮೀಸಲಾತಿ ವಿಚಾರವಾಗಿ ಮಾತನಾಡಿ. ಮಾನ್ಯ ಪುಟ್ಟಣ್ಣನವರೇ ತಮಗೆ ಸಂಬಂಧಿಸಿದ ಗಮನ ಸೆಳೆಯುವ ಸೂಚನೆಗೆ ಆಮೇಲೆ ಅವಕಾಶ ಕಲ್ಪಿಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬುದ್ಧಿವಂತಿಕೆಯಿಂದ ಮಾಡಿರುವಂಥ ಕೆಲಸ ಎಂಬುದು ನನಗೆ ಗೊತ್ತಿದೆ. ಆದರೆ, ತಮಗೆ

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಗೊತ್ತಿದೆ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಧಮ್ಕಿ ಹಾಕುತ್ತಿದ್ದಾರೆ.

**(ಗೊಂದಲ)**

**ಶ್ರೀ ಡಿ.ಟಿ.ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ತಂತ್ರಗಾರಿಕೆ ಎಂದು ನಮಗೆ ಹೇಳುತ್ತಾರೆ. ಆ ರೀತಿ ಮಾತನಾಡುವುದು ಸರಿಯಾಗಿಲ್ಲ. **(ಗೊಂದಲ)** ಅವರು ಈಗ ಮಾಡುತ್ತಿರುವುದು ತಂತ್ರಗಾರಿಕೆ ಅಲ್ಲವೇ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಆಂಧ್ರಪ್ರದೇಶದಲ್ಲಿ ಒಳಮೀಸಲಾತಿಯನ್ನು ಸೃಷ್ಟಿ ಮಾಡಿದ್ದರು. ಆಂಧ್ರಪ್ರದೇಶದಲ್ಲಿ One Man Commission ಮಾಡಿ, ಎ,ಬಿ,ಸಿ ಮತ್ತು ಡಿ ಎಂಬ ಗುಂಪುಗಳನ್ನು ಮಾಡಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿತ್ತು. ಆಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 'Scheduled Castes is not a caste…' 101 ಜಾತಿಗಳಿನಿವೇ, ಅವು ಒಂದು ಜಾತಿ ಆಗಿಲ್ಲ. 'Scheduled Castes is not a caste. Many castes brought under the schedule to give facilities or weightage to the community are called as Scheduled Castes.'

(ಮುಂದು)

(802) 19.08.2025/5.30/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಆ ಕಾರಣದಿಂದಾಗಿ ಅರ್ಟಿಕಲ್ 341 ಪ್ರಕಾರ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳುತ್ತದೆ;

"The state shall know legislative competence to enact the law for providing reservation or giving preferential treatment to a particular caste or castes by dividing sub classification or regrouping the castes, races or tribes enumerated as the Scheduled Castes in the notification under the article 341." ಅದನ್ನು ಏನು ಮಾಡುತ್ತದೆ ಎಂದರೆ ಹೊಡೆದು ಹಾಕಿಬಿಡುತ್ತದೆ. ಆ ಕಾರಣಕ್ಕಾಗಿ ಒಳ ಮೀಸಲಾತಿಗಳು ದೇಶದಲ್ಲಿ ಎಲ್ಲಿಯೂ ಜಾರಿಗೆ ಬರುವುದಿಲ್ಲ. ಆದಾದ ನಂತರ ಯಾರು ಇದಕ್ಕೆ ಒಳ ಮೀಸಲಾತಿ ಬೇಕು. ನನಗೆ ಅನ್ಯಾಯವಾಗಿದೆ ಎನ್ನುವಂತಹದ್ದನ್ನು ಹೋರಾಟದ ಮೂಲಕ ಕರ್ನಾಟಕದಲ್ಲಿ ಸುಮಾರು ಮೂರು ದಶಕಗಳ ಕಾಲ ತಮ್ಮ ಹೋರಾಟವನ್ನು ಮುಂದುವರೆಸಿಕೊಂಡು ಬಂದರು. ಅದನ್ನು ಆಧಾರಿಸಿ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರವಿದ್ದ ಕಾಲದಲ್ಲಿ One Man Commission ಮಾಡಿದ್ದು. ಅದನ್ನು ಮಾಡಿದ್ದಾದ ಮೇಲೆ ಹಲವು ವರ್ಷಗಳ ಕಾಲ ಅದಕ್ಕೆ ಕಚೇರಿ ಕೂಡ ಕೊಡಲಿಲ್ಲ ಮತ್ತು ಹಣ ಕೂಡ ಕೊಡಲಿಲ್ಲ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮಂಜುನಾಥ್ ಭಂಡಾರಿಯವರು ಪೀಠವನ್ನು ಅಲಂಕರಿಸಿದರು)**

ಶ್ರೀ ಸದಾಶಿವ ಆಯೋಗವನ್ನು ನೇಮಕ ಮಾಡಿ, ಶ್ರೀ ಸದಾಶಿವ ಆಯೋಗದ ಮೂಲಕ ಅದಕ್ಕೆ ಒಳಮೀಸಲಾತಿಯನ್ನು ಕಲ್ಪಿಸಬೇಕು ಎನ್ನುವ ಕಾರಣವನ್ನಿಟ್ಟು ಅವೊತ್ತಿನ ದಿವಸ ಅದಕ್ಕೆ ಒತ್ತು ಕೊಡಲಾಯಿತು. ಶ್ರೀ ಸದಾಶಿವ ಆಯೋಗ ವರದಿ ಕೊಡುವಷ್ಟರೊಳಗೆ ಹೆಚ್ಚು ಕಡಿಮೆ 2010-11 ಇಸವಿಯಾಗಿತ್ತು. ಆ ಕಾರಣದಿಂದಾಗಿ, ಹಾಗೇ ಮಾಡುವುದಕ್ಕಾಗಲಿಲ್ಲ. ನಂತರ ಬಂದ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಐದು ವರ್ಷಗಳ ಕಾಲ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಲ್ಲ. ಇದು ಹೀಗೆ ಮುಂದುವರೆಯುತ್ತಾ ಬರುತ್ತಿದ್ದರೆ, ಜನರ ಹೋರಾಟ ಬೀದಿ ಬೀದಿಗಳಲ್ಲಿ ಹೆಚ್ಚಾಯಿತು. ಆ ಕಾರಣದಿಂದಾಗಿ ಅದಕ್ಕೆ ಶಮನ ಕೊಡುವಂತಹ ಕೆಲಸ ಮಾಡಲೇಬೇಕಾಯಿತು. ತದ ನಂತರ ...

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶ್ರೀ ಸದಾಶಿವ ಆಯೋಗದ ವರದಿ ಯಾವಾಗ ಸಲ್ಲಿಕೆಯಾಯಿತು ಎಂಬುದನ್ನು ಕೇಳಿ. ಬಿ.ಜೆ.ಪಿ. ಸರ್ಕಾರದಲ್ಲಿ ಸಲ್ಲಿಕೆಯಾಯಿತು. ಅದನ್ನು ಜಾರಿಗೊಳಿಸಿದರಾ?

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾನು ಮಾತನಾಡುವಾಗ ಅವರು ಏಕೆ ಅಡ್ಡ ಬರುತ್ತಿದ್ದಾರೆ? ನಾನು ಮಾತನಾಡುವಾಗ ಸ್ವಲ್ಪ ಶಾಂತಿಯಿಂದ ಕೇಳಬೇಕು.

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸುಧಾಮ್ ದಾಸ್‌ರವರೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ತಾವು ತಾಳ್ಮೆಯಿಂದ ಕೇಳಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:-** ಪ್ರಸ್ತುತ ಪರಿಸ್ಥಿತಿ ಬಗ್ಗೆಯೂ ನೋಡಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅದರ ತಪ್ಪಿದ್ದರೇ ತಿದ್ದಿಕೊಳ್ಳೋಣ, ಸ್ವಲ್ಪ ತಾಳ್ಮೆ ಇರಬೇಕು.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:-** ನೇರ ಪ್ರಶ್ನೆ ಇರುವುದೇನೆಂದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ನ್ಯಾ॥ ನಾಗಮೋಹನ್ ದಾಸ್ ವರದಿ ಬಂದ ಮೇಲೆ

**(ಗೊಂದಲ)**

**ವೈಸ್ ಛೇರ್ಮನ್:-** ಅವರು ಮಾತನಾಡಿದ್ದನ್ನು ತಾವು ನೋಟ್ ಮಾಡಿಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಈ ಕಾರಣದಿಂದ ನಮ್ಮ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ಒಳ ಮೀಸಲಾತಿಯನ್ನು ಕಲ್ಪಿಸಬೇಕೆಂದು ಹೇಳಿ, ಆಗ ನಾಲ್ಕು ಗುಂಪುಗಳನ್ನಾಗಿ ಮಾಡಲಾಯಿತು. ಶ್ರೀ ಮಾಧುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ, ಅದೆಲ್ಲವನ್ನೂ ಮಾಡಿದ್ದೇವೆ. ಅದನ್ನು ಮಾಡುವಂತಹ ಸಂದರ್ಭದಲ್ಲಿ ಕುಲಶಾಸ್ತ್ರ ಅಧ್ಯಯನ ಯಾರದೂ ಕೂಡ ಆಗಿರಲಿಲ್ಲ. ಇವತ್ತು ಸರ್ಕಾರಗಳಿಂದ ಕೂಡ ಕುಲಶಾಸ್ತ್ರ ಅಧ್ಯಯನ ಆಗಿಲ್ಲ ಅಥವಾ ನೀವು ಯಾವ ಆಯೋಗವನ್ನು ನೇಮಕ ಮಾಡಿದ್ದೀರಿ, ಅದು ಕೂಡ ಕುಲಶಾಸ್ತ್ರ ಅಧ್ಯಯನ ಮಾಡಿಲ್ಲ. ನೂರೊಂದು ಜಾತಿಗಳಿವೆ ಎಂದು ನಾವು ಹೇಳುತ್ತೇವೆ. ನೂರೊಂದು ಜಾತಿಗಳನ್ನು categorize ಮಾಡುವಾಗ, ಕುಲಶಾಸ್ತ್ರ ಅಧ್ಯಯನ ಮಾಡಲಿಲ್ಲ ಎಂದರೆ, ನೀವು categorize ಮಾಡುವುದೇ ಕಷ್ಟ. ಅದನ್ನು ಮಾಡುವುದಕ್ಕಾಗುವುದಿಲ್ಲ. ಅದು ಏಕೆ ಎಂದರೆ ಕುಲಶಾಸ್ತ್ರ ಅಧ್ಯಯನ ಮಾಡಿದರೆ, ಅವರ ಸಂಸ್ಕೃತಿ, ಜೀವನ ವಿಧಾನ, ನಂಬಿಕೆಗಳು, ಸಾಮಾಜಿಕ ರಚನೆ ಇವೆಲ್ಲವೂ ಅದರಲ್ಲಿ ಅಧ್ಯಯನ ಮಾಡಬಹುದು. ಸಾಮಾಜಿಕ ರಚನೆ, ಆರ್ಥಿಕ ಜೀವನ ಮಟ್ಟ, ಧಾರ್ಮಿಕ ನಂಬಿಕೆಗಳು, ಭಾಷೆ ಮತ್ತು ಕಲೆ, ಸಾಮಾಜಿಕ ಅಭಿವೃದ್ಧಿ ಜನಾಂಗೀಯ ಸಂಘರ್ಷಗಳು ಬಂದಾಗ ಇವೆಲ್ಲವುಗಳನ್ನು ಮಾಡಿದ್ದರೆ ಮಾತ್ರ ನೀವು categorize ಮಾಡಬಹುದು. ಇಲ್ಲಿ ಮಾಡಿರುವುದೇನೆಂದರೆ, A-category, B-category, C-category and D-category ಇತ್ತು. ಈಗ E -category, ಅನ್ನು ಕೂಡ ಮಾಡಿದ್ದೀರಿ. ಆದರೆ ಅಲ್ಲಿ ಮಾಡಿರುವಂತಹ ಜಾತಿಗಳು ಯಾವ ಗುಂಪಿಗೆ ಹೋಗಬೇಕು ಎನ್ನುವುದು, ಯಾರು ಮಾಡಿದ್ದಾರೋ, ಅದು ಅವರಿಗೆ ಗೊತ್ತಿಲ್ಲ. ಆ ಕಾರಣದಿಂದ ತಪ್ಪುಗಳಾಗಿವೆ. ಆದರೂ ಕೂಡ ಸರ್ವೆ ಮಾಡಿ ಜಾತಿಗಣತಿ ಮಾಡಿದಿರಿ. ಟೌನ್‌ಗಳಲ್ಲಿ ಜಾತಿ ಗಣತಿ ಮಾಡುವಾಗ ಕೇವಲ ಶೇಕಡಾ 57 ರಷ್ಟು ಜಾತಿ ಗಣತಿ ಆಗಿರುವುದು ಎಂದು ಹೇಳಿ ಕೂಡ ಅಲ್ಲಿ ಇದೆ ಎಂದ ಮೇಲೆ ಅನೇಕರನ್ನು ನೀವು ಈ ಜಾತಿ ಗಣತಿಯೊಳಗಡೆ ತಂದಿಲ್ಲ. ಈ ರೀತಿ ಇನ್ನೂ ಇರಬೇಕಾದರೂ ಕೂಡ ಈಗ ಯಾವುದೋ ಒಂದು ಅಂಕಿ-ಅಂಶಗಳನ್ನು ಕೊಟ್ಟಿದ್ದೀರಿ. ಈಗ ಇರಬೇಕಾದರೂ ಕೂಡ ಏನಾಯಿತು? ಮೊದಲು ಒಬ್ಬರೋ ಇಬ್ಬರೋ ಗೊಂದಲಕ್ಕೆ ಸಿಕ್ಕಿ ಬೀದಿ ಬೀದಿಗಳಲ್ಲಿ ಹೋರಾಟ ಮಾಡುತ್ತಿದ್ದರು. ಈಗ ಇದು ಬಂದ ಮೇಲೆ ಐದು ಗುಂಪುಗಳಾದ ಮೇಲೆ ಯಾವ ಜಾತಿಗಳು ಕೂಡ ನೆಮ್ಮದಿಯಲ್ಲಿ ಇಲ್ಲ. ಎಲ್ಲಾ ಜಾತಿಗಳು ಕೂಡ ಹೋರಾಟ ಮಾಡುವುದಕ್ಕೆ ಹೊರಟಿವೆ. ಪ್ರತಿದಿನ ಹೋರಾಟ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಕೂಡ Freedom Park ನಲ್ಲಿ ಹೋರಾಟ ನಡೆಯುತ್ತಿದೆ. ನಿನ್ನೆ ಮೊನ್ನೆ ಹೋರಾಟ ನಡೆದಿದೆ. ಇಡೀ ರಾಜ್ಯದಲ್ಲಿ ಪ್ರತಿ ದಿವಸ ಹೋರಾಟ ನಡೆಯತ್ತಿದೆ. ನೀವು ಮನೆಯಲ್ಲಿ ಯಾರಿಗೂ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಿಡಲಿಲ್ಲ. ಅದನ್ನು ತಂದು ಈಗ ಬೀದಿಗೆ ಇಟ್ಟಿದ್ದೀರಿ. ಅದು ಈಗ ಇರಲಿ. ಮುಂದಿನ ದಿನಗಳಲ್ಲಿ ತೀರ್ಮಾನ ಬರುತ್ತದೆ ಎಂದು ಹೇಳಿದ್ದೀರಿ. ಆ ತೀರ್ಮಾನಗಳನ್ನು ಕಾದು ನೋಡೋಣ. ನನಗೆ ಪ್ರಶ್ನೆ ಅದು ಅಲ್ಲ. ಹೀಗಿರಬೇಕಾದರೆ, ನಮ್ಮ ಸರ್ಕಾರವಿದ್ದಾಗ ನಾಲ್ಕು ಗುಂಪುಗಳನ್ನಾಗಿ ಮಾಡಿ, "ಎ" ಗ್ರೂಪ್‌ಗೆ ಶೇಕಡಾ 6, "ಬಿ" ಗ್ರೂಪ್‌ಗೆ ಶೇಕಡಾ 5.5, "ಸಿ" ಗ್ರೂಪ್‌ಗೆ ಶೇಕಡಾ 4.5, "ಡಿ" ಗ್ರೂಪ್‌ಗೆ

ಶೇಕಡಾ 1 ರಷ್ಟನ್ನು ಕೊಟ್ಟೆವು. ಅದು ಕೊಟ್ಟಾದ ನಂತರ ಗೊಂದಲಗಳು ಸೃಷ್ಟಿಯಾಯಿತು. ಇದರ ಜೊತೆಗೆ ನಮಗೆ only recommendatory ಮಾತ್ರ ಇತ್ತು. ಏಕೆಂದರೆ, ಕೋರ್ಟ್‌ನಲ್ಲಿ ಕೇಸ್ ಇತ್ತು. ನಾವು recommend ಮಾಡಬಹುದಾಗಿತ್ತು. ಯಾರಿಗೆ ಎಂದರೆ 2001ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಆದೇಶ ಬರುತ್ತದೆ. ಆರ್ಟಿಕಲ್ 341 ಪ್ರಕಾರ ಇದನ್ನು ಕೇಂದ್ರ ಸರ್ಕಾರವಲ್ಲದೇ ಬೇರೆ ಯಾವುದೇ ಸರ್ಕಾರಗಳಿಗೆ ನಿಮಗೆ ಈ ರೀತಿ divide ಮಾಡುವುದು, regroup ಮಾಡುವುದಕ್ಕೆ ನಿಮಗೆ ಅವಕಾಶವಿಲ್ಲ ಎಂದು ಹೇಳುತ್ತದೆ. ಆ ಕಾರಣದಿಂದಾಗಿ ಏನು ಮಾಡುತ್ತಾರೆ ಎಂದರೆ, ನಾವು ತೀರ್ಮಾನ ತೆಗೆದುಕೊಂಡರೂ ಕೇಂದ್ರ ಸರ್ಕಾರಕ್ಕೆ ಮಾತ್ರ ಕೊಡುವುದಕ್ಕಾಯಿತು. ಅದನ್ನು ನಾವು ಜಾರಿಗೆ ತರುವುದಕ್ಕೆ ಆಗಲಿಲ್ಲ. ಕೇಂದ್ರ ಸರ್ಕಾರ ಹೇಳಿದ್ದೇನೆಂದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಸ್ ಇದೆ. ಇದರ ಬಗ್ಗೆ ನಾವು ನೋಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 01.08.2024 ರಂದು ತೀರ್ಮಾನವನ್ನು ಕೊಟ್ಟಿತು. ಆಯಾಯ ರಾಜ್ಯ ಸರ್ಕಾರಗಳೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನ್ಯಾಯ ಕೊಡಬೇಕು. ಅವರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದರೆ, ನೀವೇ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು ಎಂದು ತೀರ್ಪು ಬಂತು. Congress manifesto ನಲ್ಲಿ ಹಾಕಿರುವುದೇನೆಂದರೆ, ನಾವು ಅಧಿಕಾರಕ್ಕೆ ಬಂದ ಕೂಡಲೇ ಒಂದೇ ತಿಂಗಳಿನಲ್ಲಿ ಒಳ ಮೀಸಲಾತಿಯನ್ನು ಜಾರಿಗೆ ತರುತ್ತೇವೆ. ಅದನ್ನು ಜಾರಿಗೆ ತಂದರೆ ನಮಗೂ ಸಂತೋಷ. ಏಕೆಂದರೆ ಅದು ಜಾರಿಗೆ ತರಬೇಕು. ಇಷ್ಟು ದಿವಸ ಆಗಿರುವುದೇ ತಡ ಎನ್ನುವುದು ನಮ್ಮ ಮಾತಾಗಿದೆ. ಆ ಕಾರಣದಿಂದ ಅವರಾದರೂ ತರಬಹುದು ಎಂದು ನಾವು ಕೂಡ ಕಾಯುತ್ತಿದ್ದೇವೆ. ಕೋರ್ಟ್‌ನ ಆದೇಶ ಬಂದು ಈಗಾಗಲೇ ಆಗಸ್ಟ್ 1ನೇ ತಾರೀಖಿಗೆ ಒಂದು ವರ್ಷವಾಗಿದೆ. ಅದನ್ನು ಇದುವರೆವಿಗೂ ಜಾರಿಗೆ ತರಲಿಲ್ಲ. ಹರಿಯಾಣ ಸರ್ಕಾರ ಜಾರಿಗೆ ತಂದಾಯಿತು. ಈಗ ಬೇಕು ಎಂದು ನಮ್ಮ ಸರ್ಕಾರ ಹೇಳಿರುವುದು. ಹರಿಯಾಣ ರಾಜ್ಯದವರಿಗೆ ಯಾವ empirical data ಇತ್ತು, ತೆಲಂಗಾಣ ರಾಜ್ಯದಲ್ಲಿಯೂ ಕೂಡ ಕಾಂಗ್ರೆಸ್ ಸರ್ಕಾರವೇ ಇದೆ. ಅವರು ಯಾವ ಡಾಟಾದ ಮೇಲೆ ಮಾಡಿದರು ಎಂದರೆ 2011 ಡಾಟಾದ ಮೇಲೆ ಮಾಡಿದರು. ಆಂಧ್ರ ಪ್ರದೇಶ ರಾಜ್ಯವು 2011 ಡಾಟಾದ ಮೇಲೆ ಮಾಡಿದ್ದಾರೆ. ಈಗ ಪಂಜಾಬ್ ರಾಜ್ಯದಲ್ಲಿ ಕೂಡ ಆಗಿದೆ. ಈಗ ಎಲ್ಲಾ ಕಡೆಗಳಲ್ಲಿ ಆಗುತ್ತಿದೆ. ವಿಶೇಷವಾಗಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇದನ್ನು ಮಾಡಿದ್ದಾರೆ. ಇದು ಮಾಡಿದರೂ ನಮ್ಮದೇನೂ ಅಭ್ಯಂತರವೇನಿಲ್ಲ. ಮಾಡದಲೇ ಇದನ್ನು ಮಾಡಬಹುದಾಗಿತ್ತು. ಏಕೆಂದರೆ ಡಾಟಾ ಸಿಗುತ್ತಿತ್ತು. ಈಗ ನಮ್ಮ ಸರ್ಕಾರವಿರುವಾಗ ಯಾವ ಡಾಟಾದ ಮೇಲೆ ಮಾಡಿದ್ದು? ನಾವು 2011ರ ಡಾಟಾದ ಮೇಲೆ ಮಾಡಿದ್ದು. ಅದರ ಪ್ರಕಾರನೇ ಹೋಗುವುದಾದರೆ, 2015ರಲ್ಲಿ ಇದೇ ರೀತಿ census ಮಾಡಲಾಯಿತು. ಆಗ ರಾಜ್ಯದಲ್ಲಿ ಗುಲ್ಲು ಎದ್ದಿದ್ದು ಎಂದರೆ ಪರಿಶಿಷ್ಟ ಜಾತಿಯೇ ನಂಬರ್ ಒನ್. ಅವರ ಜನಸಂಖ್ಯೆ 1 ಕೋಟಿ 8 ಲಕ್ಷ ಇದೆ ಎಂದು ಬಂತು. ಅದು ಸೋರಿಕೆಯಾದ ಅಂಶಗಳು ಅವೊತ್ತಿನ ದಿನ ಬಂತು. ಅದು ಬಂದಾದ ಮೇಲೆ ಅವರೇ ನಂಬರ್ ಒನ್. ಕಳೆದ ನಾಲ್ಕು ತಿಂಗಳಿನಲ್ಲಿ ಒಂದು ಸುದ್ಧಿ ಬಂತು. ಈಗ ಅತಿ ಹೆಚ್ಚು ಜನಸಂಖ್ಯೆ ಮುಸಲ್ಮಾನರೇ ಎಂದು ಬಂತು.

ಇದು ಯಾವುದೂ ಕೂಡ ಪ್ರಶ್ನೆಯಲ್ಲ. 2013-14ರಲ್ಲಿ ಅವೊತ್ತಿನ ದಿವಸ 1 ಕೋಟಿ 8 ಲಕ್ಷ ಜನಸಂಖ್ಯೆ ಇದ್ದಿದ್ದು, ಒಂದು ವರ್ಷಕ್ಕೆ ಶೇಕಡಾ 2 ರಷ್ಟು ಎಂದು ಹೇಳಿ, ನಾವು ಇದನ್ನು add ಮಾಡುತ್ತಾ ಹೋದರೆ, ಆ ಜನಸಂಖ್ಯೆಯ ಪ್ರಕಾರ 1 ಕೋಟಿ 38 ಲಕ್ಷ ಜನಸಂಖ್ಯೆಯಾಗಬೇಕು. ಈಗ 1 ಕೋಟಿ 6 ಲಕ್ಷ ಜನಸಂಖ್ಯೆ ಅಷ್ಟೇ ಇದರಲ್ಲಿ ಬಂದಿರುವುದು. ಹಾಗಾದರೆ ಜನಸಂಖ್ಯೆ ಹೆಚ್ಚಾಗಲಿಲ್ಲವೇ? ಅವರೆಲ್ಲರೂ ಎಲ್ಲಿ ಹೋದರು?

(ಮುಂದು)

(803) 19.08.2025 5.40 TCH-MD (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು)**

ಅಂದರೆ ನೀವು ಆ ಅಂಕಿ-ಅಂಶಗಳ ಪ್ರಕಾರವೇ ಕೊಡುತ್ತಿರುವುದು. ಹಾಗಾದರೆ 2011ರ ಮೇಲೆ ಕೊಡುವುದಾಗಿದ್ದರೆ ಸರ್ಕಾರ ಇಷ್ಟು ವಿಳಂಬ ಮಾಡುವ ಅವಶ್ಯಕತೆ ಇರಲಿಲ್ಲ. ಇವತ್ತಿನ ದಿವಸ ಜನ ಬೀದಿ ಬೀದಿಯಲ್ಲಿ ಅಲೆಯುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ನಾವು ಮಾಡತಕ್ಕಂಥ ಸಂದರ್ಭದಲ್ಲಿ, ನಮ್ಮಲ್ಲೂ 2011 empirical data ಇತ್ತು, ನಾವು ಅದರ ಮೇಲೆಯೇ ಮಾಡಿದ್ದೆವು. ಆದರೆ ಈಗ ಆಗಿರುವುದು ಏನೆಂದರೆ, ಪರಿಶಿಷ್ಟ ಜಾತಿಗಳಲ್ಲಿ ಯಾವ group‌ಗೆ ಯಾವ ಜಾತಿಗಳನ್ನು ಸೇರಿಸಬೇಕೆನ್ನುವ ಗೊಂದಲವಿದೆ. ಇದುವರೆಗೂ ನಾವು right ಸಮುದಾಯವಾದ ಛಲವಾದಿ ಅಥವಾ ಹೊಲೆಯ ಎಂದು ಹೇಳುತ್ತೇವೆ. ಅವರು ಹೋರಾಟವನ್ನು ಮಾಡುತ್ತಿರಲಿಲ್ಲ. ಈಗ ಅವರು ಬೀದಿ ಬೀದಿಯಲ್ಲಿ ಹೋರಾಟ ಮಾಡುವುದಕ್ಕೆ ಶುರು ಮಾಡಿದ್ದಾರೆ. ಮಾದಿಗ ಸಮುದಾಯದವರು ಕೂಡ ಇನ್ನೊಂದು ಕಡೆ ಹೋರಾಟ ಮಾಡುತ್ತಿದ್ದಾರೆ. ಬೇರೆ ಬೇರೆಯವರೆಲ್ಲರೂ ಹೋರಾಟಕ್ಕೆ ಇಳಿದಿದ್ದಾರೆ ಏಕೆ? ಈ confusion create ಮಾಡಿದವರು ಯಾರು? ಈ ಅಂಕಿ-ಅಂಶಗಳು ಏಕೆ ಸರಿಯಾಗಿ ಇವರಿಗೆ ಇರಲಿಲ್ಲ? ಇದು ಪ್ರಶ್ನೆಯಾಗಿರುವುದು. ನೀವು ಮಾಡುವಾಗ Group-A ಗೆ ಸೇರಿಸಬೇಕಾದವರನ್ನು Group-B ಗೆ ಹಾಕಿದ್ದೀರಿ. Group-B ಸೇರಿಸಬೇಕಾದವರನ್ನು Group-C ಗೆ ಹಾಕಿದ್ದೀರಿ.. ಅದು ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಈ ಮೂರನ್ನೂ ಈಗ Group-E ಮಾಡಿದ್ದಾರೆ. ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಇವು ಜಾತಿಗಳೇ ಅಲ್ಲ. ಇವುಗಳಿಗೆ ಮೂಲ ಜಾತಿಗಳಿವೆ. ಆದರೆ confusion ಏನು? Maharaja of Mysuru ರವರು 1925ರಲ್ಲೇ reservation ಜಾರಿಗೆ ತಂದರು. ಆ ಕಾಲದಲ್ಲೇ ಅವರು ಕೆಲವು ಜಾತಿಗಳನ್ನು ಆಂಧ್ರ ಪ್ರದೇಶದಿಂದ ಬಂದಿರತಕ್ಕಂಥ ಆ ಜನಾಂಗಗಳು ಆದಿ ಆಂಧ್ರ, Dravidian culture ನಿಂದ ಬಂದಿರತಕ್ಕಂಥ ಜನರು ಆದಿದ್ರಾವಿಡ ಮತ್ತು ಮೂಲನಿವಾಸಿಗಳು ಆದಿಕರ್ನಾಟಕ ಎಂದು 3 group ಮಾಡುತ್ತಾರೆ ಅಷ್ಟೇ. ಆದರೆ ಇವು ಜಾತಿಗಳಲ್ಲ. ಆದರೆ ಇವತ್ತಿದಿವಸ ಆ group ಗೆ ಜೀವ ಕೊಟ್ಟು ಅವುಗಳೇ ಜಾತಿಗಳಾಗಿವೆ. ನನ್ನ ಅಣ್ಣ ತಮ್ಮಂದಿರಾದ ಮಾದಿಗ ಸಮುದಾಯದವರಿಗೆ ನಾನು

ಬಹಳ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರು ಒಂದು ತೀರ್ಮಾನಕ್ಕೆ ಬಂದರು. 'ನಾವು ಯಾವುದೇ ಉಪ ಜಾತಿಯನ್ನು mention ಮಾಡುವುದು ಬೇಡ, ಎಲ್ಲವನ್ನೂ ಮಾದಿಗ' ಎಂದು ಬರೆಯಬೇಕು ಎಂದು ತೀರ್ಮಾನ ತೆಗೆದುಕೊಂಡರು. ಆ ತೀರ್ಮಾನ ತೆಗೆದುಕೊಂಡಿದ್ದರಿಂದ ಸಣ್ಣಪುಟ್ಟ ಜಾತಿಗಳನ್ನು ಕೂಡ ಒಂದರಲ್ಲೇ ಬರೆಸಿದರು. ಅವರಿಗೆ ಒಂದು awareness ಬಂದಿತ್ತು. ಅವರಿಗೆ ಒಂದು ತಾಪ ಇತ್ತು. ಇದನ್ನು ಒಂದೇ ಮಾಡಬೇಕೆಂದು ಅವರಿಗೆ ಜೀವನದಲ್ಲಿ ಒಂದು ಜಿಗುಪ್ಸೆ ಇತ್ತು. ಅವರಲ್ಲೂ ಕೂಡ ಆದಿಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ಇದೆ. ಬಲಗೈನವರಲ್ಲೂ ಇತ್ತು ಮತ್ತು ಎಡಗೈನವರಲ್ಲೂ ಕೂಡ ಇತ್ತು. ಅದಕ್ಕೆ ಅವರು ಒಂದು ಬಾರಿ ತೀರ್ಮಾನ ತೆಗೆದುಕೊಂಡು ಇಡೀ ರಾಜ್ಯದಲ್ಲಿ ಅವರು ಪ್ರಚಾರ ಮಾಡಿ ಒಂದು ಕಡೆ ಬರೆಸಿದರು. ಆದರೆ right ನವರು ಕೂಡ ಇದ್ದರು. ಆ right ನವರು ಆ ರೀತಿ ಮಾಡುವುದಕ್ಕೆ ಹೋಗಲಿಲ್ಲ. ಮೊದಲು ಸುಮಾರು 7 ಲಕ್ಷದಿಂದ 8 ಲಕ್ಷ ಇದ್ದಂತಹ ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಈಗ ಅದು 4 ಲಕ್ಷಕ್ಕೆ ಬಂದಿದೆ. ಏಕೆಂದರೆ ಆ ಸಮುದಾಯಕ್ಕೆ ಸೇರಿರತಕ್ಕಂಥವರೆಲ್ಲಾ ತಮ್ಮ ಮೂಲ ಜಾತಿಯಲ್ಲಿ ಬರೆಸಿಕೊಂಡರು. ಉಳಿದವರು ಬರೆಯಲೇ ಇಲ್ಲ. ಈಗ ಅವರನ್ನು Group-E ಮಾಡಿಬಿಟ್ಟರು. ಅದಕ್ಕೆ ಶೇ.1 ತಂದಿದ್ದಾರೆ. Confusion ಆಗಿದ್ದು ಇಲ್ಲೇನೆ. ಆಮೇಲೆ ಪರೆಯನ್, ಪರೆಯ, ಮೊಗೇರ ಮತ್ತು ಮುಂಡಾಳ ಇವೆಲ್ಲಾ right ನಲ್ಲಿ ಬರತಕ್ಕಂಥ ಜಾತಿಗಳು. ಆದರೆ ಈ ಆಯೋಗದಲ್ಲಿ ಕುಳಿತವರಿಗೆ ಅದು ಗೊತ್ತೇ ಇಲ್ಲ. ಅದಕ್ಕೆ ಅವರು ಅದನ್ನು ಬೇರೆ ಮಾಡಿ left ನಲ್ಲಿ ಹಾಕಿಬಿಟ್ಟರು. ಸಹಜವಾಗಿ ಈಗ ಅವರ ಜನಸಂಖ್ಯೆ ಸುಮಾರು 6 ಲಕ್ಷ ಹೆಚ್ಚಳವಾಯಿತು. ಇದು ಹೆಚ್ಚಾದ ನಂತರ ಅವರಿಗೆ ಶೇ.6. ಇನ್ನು ಉಳಿದವರಿಗೆ ಶೇ.5, ಶೇ.4, ಶೇ.1 ಮತ್ತು ಶೇ.1 ಎಂದು ಪ್ರಾರಂಭವಾಯಿತು. ನಮ್ಮ ಜನಸಂಖ್ಯೆಯನ್ನೇ ಕಡಿಮೆ ಮಾಡಿಬಿಟ್ಟರು ಎಂದು ಜನರಲ್ಲಿ ಗೊಂದಲ ಶುರುವಾಯಿತು. ಈ ಕಾರಣದಿಂದ ನಮಗೆ percentage ಕಡಿಮೆಯಾದರೂ ಚಿಂತೆ ಇಲ್ಲ. ಆದರೆ ಈಗ ಜನಸಂಖ್ಯೆಯಲ್ಲಿ ನಾವು ಕಡಿಮೆ ಎಂದು ತೋರಿಸುವುದು ಬೇಡ ಎಂದು rightನವರೆಲ್ಲಾ ಹೋರಾಟಕ್ಕೆ ಬಂದಿದ್ದಾರೆ. ಮೇಲ್ನೋಟಕ್ಕೆ ನೋಡುವುದಾದರೆ ರಾಜ್ಯದಲ್ಲಿ right ಸಮುದಾಯದ ಸಂಖ್ಯೆ ಹೆಚ್ಚಿದೆ. ಎರಡನೆಯದು ನಮ್ಮ ಮಾದಿಗ ಸಮುದಾಯ ಇದೆ. ಆಮೇಲೆ ಇಲ್ಲಿ 3 group ಇದೆ. ಅದರಲ್ಲಿ ಏನಿದೆಯೆಂದರೆ . . .

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು baseless ಮಾಹಿತಿಯನ್ನು ಹೇಳಿದರೆ ಕಷ್ಟವಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, Don't disturb me please.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಚರ್ಚೆ ನಡೆಯುತ್ತಿದೆ. ಮಾನ್ಯ ಸಚಿವರಿಗೆ ನೀವು ಮಾತನಾಡಲೇಬಾರದು ಎಂದು ಹೇಳಿದರೆ ಚರ್ಚೆಗೆ ಏನು ಅರ್ಥ ಇರುತ್ತದೆ? There should be a clarification in an issue which you are going to tell. ಇದರಿಂದ ಜನಕ್ಕೆ ತಪ್ಪು ಸಂದೇಶ ಹೋಗುವುದಿಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ರವರೇ, ಈಗ ತಾವು ನನ್ನ flow ಅನ್ನು cut ಮಾಡಬೇಡಿ. ಒಂದುವೇಳೆ ನಿಮಗೆ ಅನುಮಾನ ಇದ್ದರೆ ಆಮೇಲೆ ಕೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಹೇಳಲೇಬಾರದು ಎಂದು ಹೇಳಿದ್ದಕ್ಕೆ ಹೇಳಿದೆನು ಅಷ್ಟೇ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರ ಸರದಿ ಬಂದಾಗ ಹೇಳಲಿ. ನಾನೇನು ಬೇಡವೆಂದು ಹೇಳುವುದಿಲ್ಲ. ಅವರದೇ ಸಂಖ್ಯೆಯಲ್ಲಿ No.1 ಎಂದು ಇಟ್ಟುಕೊಳ್ಳಿ. ನನಗೆ ಏನಾಗಬೇಕಿದೆ. ಆದರೆ ಇದು ಈ ರೀತಿ ಬಂದಿತ್ತು. ನಾನು ಹೇಳುವುದೇನೆಂದರೆ, ಪರಿಶಿಷ್ಟ ಜಾತಿಗಳಲ್ಲಿ Left & Right ಎರಡೂ ಒಂದೇ. Concept of reservation ಏನಿದೆ, ಅದು untouchability ಮತ್ತು ಕಾಲಾಂತರದಲ್ಲಿ ಅವರು ತುಳಿತಕ್ಕೆ ಒಳಗಾಗಿದ್ದರಿಂದ ಅವರು ಕೂಡ ಬೇರೆ ರೀತಿಯಲ್ಲಿ ಅಭಿವೃದ್ಧಿಯಾಗಲೀ, ಅವರು ಕೂಡ ಮೇಲೆ ಬರಲಿ ಎಂಬ ಕಾರಣಕ್ಕಾಗಿ ಕೊಟ್ಟಿರತಕ್ಕಂಥ ಮೀಸಲಾತಿ. ಇವರಿಬ್ಬರೂ ಕೂಡ ಅಣ್ಣ-ತಮ್ಮಂದಿರೆ. ಅದರಲ್ಲಿ ಏನೂ ಭೇದಭಾವ ಇಲ್ಲ. ಆದರೆ ಎಲ್ಲೋ ನಮಗೆ ಅನ್ಯಾಯ ಆಗಿದೆ ಎಂದು ಕೆಲವರು ಒತ್ತಿ ಹೇಳುವುದಕ್ಕೆ ಪ್ರಾರಂಭ ಮಾಡಿದರು. ಇದರ ಮಧ್ಯೆ touchable ಎಂದು ಭೋವಿ, ಲಂಬಾಣಿ, ಕೊರಚ ಮತ್ತು ಕೊರಮ ಜಾತಿಗಳನ್ನು ಸೇರಿಸಲಾಗಿದೆ. ಅವರಲ್ಲೂ ಬಡವರಿದ್ದಾರೆ. ಆ ಕಾರಣದಿಂದ ಆ ಒಂದು ಕಾಲಘಟ್ಟದಲ್ಲಿ ಎಲ್ಲರೂ ಒಪ್ಪಿಕೊಂಡು ಸುಮಾರು 101 ಜಾತಿಗಳಾಯಿತು. ಆದರೆ ಇಷ್ಟು ಜಾತಿಗಳು ಇದ್ದರೂ ಕೂಡ ಇದು ಮೂರೇ. ಮಾದಿಗ ಸಮುದಾಯದ ಒಂದು ವೃಂದ, ಬಲ ಸಮುದಾಯದ ಒಂದು ವೃಂದ ಮತ್ತು touchable ಒಂದು ವೃಂದ. ಇವು 3 ಬರಬೇಕು. ಆದರೆ ಇಲ್ಲಿ ಯಾವಾಗ ಕುಲಶಾಸ್ತ್ರ ಅಧ್ಯಯನ ಆಗಿಲ್ಲವೋ ಇವರನ್ನು ಮೂಲ ಜಾತಿಗಳಿಗೆ ಅವರನ್ನು ಸೇರಿಸುವುದಕ್ಕೆ ಸಾಧ್ಯವಾಗಿಲ್ಲ. ಇದು confusion ಇರತಕ್ಕಂಥದ್ದು. ಇಂಥದ್ದು ಇರುವಾಗ ನೀವು ಎಲ್ಲರಿಗೂ ಸರಿಯಾದ ನ್ಯಾಯವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕುಲಶಾಸ್ತ್ರ ಅಧ್ಯಯನವನ್ನು ಸರ್ಕಾರವಾಗಲೀ, ಆಯೋಗವಾಗಲೀ ಮಾಡಬೇಕಾಗಿತ್ತು. ಮಾಡುವುದರಲ್ಲಿ ತಪ್ಪಾಗಿದೆ. ಹೀಗಾಗಿ, ಯಾವ ಗುಂಪಿಗೆ ಯಾರನ್ನು ಸೇರಿಸಬೇಕು ಎನ್ನುವುದು ತಪ್ಪಾಗಿರುವುದರಿಂದ ಕೆಲವು ಜಾತಿಗಳನ್ನು ಎಲ್ಲಿ ಸೇರಿಸಬೇಕಾಗಿತ್ತು ಅಲ್ಲಿ ಸೇರಿಸಿಲ್ಲ. ಬೇರೆ ಬೇರೆ ಕಡೆ ಹಂಚಿ ಹೋಗಿದೆ. ಆದ್ದರಿಂದ ನಮ್ಮ ಸಂಖ್ಯೆ ಕಡಿಮೆಯಾಗಿದೆ ಎನ್ನತಕ್ಕಂಥ ದುಗುಡ ಎಲ್ಲರಲ್ಲೂ ಪ್ರಾರಂಭವಾಗಿದೆ. ಈ ಕಾರಣದಿಂದಾಗಿ ಏನು ಮಾಡಬೇಕಾಗಿತ್ತು ಎಂದರೆ ಇದನ್ನು ಸರಿಯಾದ ಅಂಕಿ ಅಂಶಗಳಿಂದ ಮಾಡಬೇಕಾಗಿದೆ. ಇದು ಎಲ್ಲಿ ಸಿಗುತ್ತದೆ? ನಮ್ಮ ದೇಶದಲ್ಲಿ 1871ರಲ್ಲಿ census ಆಯಿತು. 1871 ರಿಂದ 1931 ರವರೆಗೆ ಪ್ರತಿಯೊಂದು ಜಾತಿಗಳನ್ನು ಕೂಡ ಜಾತಿಯ ಹೆಸರಿನಲ್ಲೇ census ನಲ್ಲಿ ನಮಗೆ ನಮೂದು ಮಾಡಲಾಗಿದೆ. ಈಗಲೂ ಅದರ percentage ಅನ್ನು

ತೆಗೆದುಕೊಂಡರೆ ಎಲ್ಲರ ಸಂಖ್ಯೆಗಳು ಸಿಗುತ್ತದೆ. ಅದಾದ ನಂತರ, 1941ರ census ನಿಂದ ಹಿಡಿದು ಇಲ್ಲಿಯವರೆಗೆ ಜಾತಿ census ನಡೆದಿಲ್ಲ. ಆದರೆ ಈ ಬಾರಿ ಜಾತಿ census ಮಾಡುತ್ತೇವೆಂದು, ಕೇಂದ್ರ ಸರ್ಕಾರ census ಮೂಲಕ ಮಾಡಿಸುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಈ ಹೇಳಿಕೆ ಕೊಟ್ಟಿರುವ ಕಾರಣ ನಮಗೆ empirical data ಬಹುಶಃ ಅದರಲ್ಲಿ ಸಿಗುತ್ತಿತ್ತು. ಅದು accuracy ಇತ್ತು. ಏಕೆಂದರೆ ಕೇಂದ್ರ ಸರ್ಕಾರದವರು census ಮಾಡಿಸಿದಾಗ ನಿಮಗೆ ಯಾರಿಗೂ ಕೂಡ ಇವರು ನಮಗೆ ಬೇಕಾದವರು, ಅವರು ನಮಗೆ ಬೇಕಾದವರು ಎಂದು ಇರುವುದಿಲ್ಲ. ಏಕೆಂದರೆ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಜಾತಿಗಳಿವೆ. ಆದರೆ ನಾವು ಇಲ್ಲಿ ಮಾಡಿದಾಗ ಏನಾಗುತ್ತದೆಂದರೆ, ಇವರಿಗೆ ಸ್ವಲ್ಪ ಒತ್ತು ಕೊಡಬೇಕು. ಇವರೇ ನಮ್ಮ voter. ಈ ಭಾಗದಲ್ಲಿ ನಾನು ಹುಟ್ಟಿದ್ದೆ ಎಂದು ಹೇಳುವುದಿಲ್ಲ. ಈ ರೀತಿಯ ಭಾವನೆಗಳು ಬರಬಹುದು. ಆದರೆ ಕೇಂದ್ರ ಸರ್ಕಾರದ ವಿಚಾರದಲ್ಲಿ ಆ ರೀತಿ ಬರುವುದಿಲ್ಲ. ಅದಕ್ಕೆ ಅಲ್ಲಿ ನಮಗೆ empirical data ಸಿಗುತ್ತದೆ ಅಥವಾ ಅಲ್ಲಿಯವರೆಗೆ ಕಾಯಬೇಕಾಗಿತ್ತು. ಇಲ್ಲದಿದ್ದರೆ 2011ರ empirical data ಮೇಲೆ ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ. ಏಕೆಂದರೆ ಈ ಸರ್ಕಾರಕ್ಕೆ ಮಾಡಲೇಬೇಕು ಎನ್ನುವ ಒಂದು ಉದ್ದೇಶ ಇದ್ದಿದ್ದರೆ ಅವೊತ್ತೇ ಮಾಡಬಹುದಾಗಿತ್ತು, ಇನ್ನೊಂದು ಬೇಕಾಗಿರಲಿಲ್ಲ. ಏಕೆಂದರೆ, ಬಿ.ಜೆ.ಪಿ. ಸರ್ಕಾರ ಇದನ್ನು ಮಾಡಿತ್ತು. ಹೆಚ್ಚು-ಕಡಿಮೆ ಒಪ್ಪಿಗೆ ಕೂಡ ಆಗಿತ್ತು. ಆದರೆ ಆಗ ಚುನಾವಣೆ ಹತ್ತಿರ ಬಂದಿತ್ತು. ಆ ಚುನಾವಣೆ ಹತ್ತಿರ ಬಂದಾಗ ಕೆಲವರೆಲ್ಲಾ ನೋಡಿ, ನಿಮ್ಮ ಜನಸಂಖ್ಯೆ ಜಾಸ್ತಿ ಇದೆ; ನಿಮ್ಮದನ್ನು ಕಡಿಮೆ ಮಾಡಿಬಿಟ್ಟಿದ್ದಾರೆ ಎಂದು ಚುನಾವಣಾ ಕಾರಣಕ್ಕಾಗಿ ಹಬ್ಬಿಸಿದರು. ಇದು ಗೊಂದಲವನ್ನು ಸೃಷ್ಟಿ ಮಾಡಿತ್ತು. ಚುನಾವಣಾ ಸಂದರ್ಭಕ್ಕೆ ಗೊಂದಲ ಸೃಷ್ಟಿಯಾದಾಗ ಅದನ್ನು ಯಾರು ಏನೂ ಮಾಡುವುದಕ್ಕೆ ಆಗಲಿಲ್ಲ. ಆ ಗೊಂದಲದಿಂದ ನಮ್ಮ ಪಾರ್ಟಿಗೆ ಪೆಟ್ಟು ಆಯಿತು. ಅದು ಏನಾದರೂ ಇರಲಿ. ಆದರೆ ಮುಂದೆ ಬಂದಂತಹ ಸರ್ಕಾರ, ಅದು ಯಾವುದೇ ಸರ್ಕಾರ ಬಂದಿರಲಿ. ತಕ್ಷಣವೇ ಅದನ್ನು ಜಾರಿಗೆ ತರಬಹುದಾಗಿತ್ತು. ಈಗ 1 ವರ್ಷವಾದರೂ ಕೂಡ ಅದನ್ನು ಜಾರಿಗೆ ತಂದಿಲ್ಲ.

**(ಮುಂದು)**

(804)19.8.2025/5.50/ಎಂ.ಎಂ-ಎ.ಕೆ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಹೀಗಿದ್ದರೂ ಕೂಡ ಅವತ್ತು ನಮ್ಮ ಮೇಲೆ ಬಂದ ಆಪಾದನೆ ಏನೆಂದರೆ, ಮೀಸಲಾತಿ ಇರುವುದೇ ಶೇ.15. 17 ಪರ್ಸೆಂಟ್ ಮೇಲೆ ನೀವು ಹೇಗೆ ಮಾಡುತ್ತೀರಿ? ಇದು ನಮ್ಮ ಮೇಲೆ ಬಂದ ಆಪಾದನೆ. ಇದಕ್ಕೆ value ಇಲ್ಲ, ಇದರಿಂದ ಏನೂ ನಡೆಯುವುದಿಲ್ಲ, ಇದು ಬಿದ್ದು ಹೋಗುತ್ತದೆ. ಈ ಅಪಪ್ರಚಾರ ಶುರುವಾಯಿತು. ಆದರೆ ಈ ಸರ್ಕಾರ ಅಥವಾ ಈ ಆಯೋಗ ಯಾವ ಆಧಾರದ ಮೇಲೆ ಮಾಡುತ್ತಿದೆ? ಯಾವ ಪರ್ಸೆಂಟೇಜ್ ಮೇಲೆ ಮಾಡುತ್ತಿದೆ? 17 ಪರ್ಸೆಂಟ್ ಅಲ್ಲವೇ? ಪರಿಶಿಷ್ಟ ಜಾತಿಗಳ 17 ಪರ್ಸೆಂಟ್ ಮೀಸಲಾತಿ ಮೇಲೆ ಮಾಡುತ್ತಿದೆ.

ಹಾಗಾದರೆ ನೀವು ನಮ್ಮ ಮೇಲೆ ಅಪಪ್ರಚಾರ ಮಾಡಿದ್ದೇಕೆ? ಈಗ ನನಗೆ ಸರ್ಕಾರದ ಕಡೆಯಿಂದ ಉತ್ತರ ಬೇಕು. ನೀವು 15 ಪರ್ಸೆಂಟ್ ಮೇಲೆ ನಿಲ್ಲುತ್ತೀರಾ ಅಥವಾ 17 ಪರ್ಸೆಂಟ್ ಮೇಲೆ ನಿಲ್ಲುತ್ತೀರಾ? ಏಕೆಂದರೆ, ನಾವು ಪರಿಶಿಷ್ಟ ಜಾತಿ ವರ್ಗಗಳಿಗೆ ಕೂಡ 17 ಪರ್ಸೆಂಟ್ ಮಾಡಿದ್ದೇವೆ. ನಮ್ಮ ಜನಸಂಖ್ಯೆಗೆ ಆಧಾರವಾಗಿ ನಮಗೆ ಮೀಸಲಾತಿಯನ್ನು ಹೆಚ್ಚಿಸಬೇಕೆಂದು ಸುಮಾರು 50 ವರ್ಷಗಳ ಹೋರಾಟ ನಡೆದಿತ್ತು. ನಮ್ಮದು 17 ಪರ್ಸೆಂಟ್, 18 ಪರ್ಸೆಂಟ್ ಇದ್ದರೂ ಕೂಡ ನಮಗೆ 15 ಪರ್ಸೆಂಟ್ ಕೊಡಲಾಗುತ್ತಿತ್ತು. ಎಸ್.ಟಿ. ಗಳಿಗೆ ಅವರು ಶೇ.7ರಷ್ಟಿದ್ದರೂ ಅವರಿಗೆ ಕೇವಲ ಶೇ.3 ಕೊಡಲಾಗುತ್ತಿತ್ತು. ಎರಡನ್ನೂ ಕೂಡ ನಾವು 17 ಪರ್ಸೆಂಟ್ ಎಸ್.ಸಿ.ಗಳಿಗೆ, 7 ಪರ್ಸೆಂಟ್ ಎಸ್.ಟಿ.ಗಳಿಗೆ ಮಾಡಿದ್ದು ನಮ್ಮ ಸರ್ಕಾರ. ಇಷ್ಟೆಲ್ಲಾ ಮಾಡಿದಾಗ ಗೊಂದಲ ಹುಟ್ಟಿಸಿ ಇಲ್ಲ 17 ಪರ್ಸೆಂಟ್ ಇಲ್ಲ 15 ಪರ್ಸೆಂಟ್ ಇದೆ ಎಂದು ಮಾಡಿದವರು ಯಾರು? ಇಷ್ಟೆಲ್ಲಾ ಮಾಡಿ, ಹಾಗಾದರೆ ಈಗ 17 ಪರ್ಸೆಂಟ್ ಹೇಗೆ ಬಂತು? It is a base which was created by the BJP government. ಅದೇ ಆದೇಶದ ಮೇಲೆಯೇ ನೀವು ಇವತ್ತು ಮಾಡುತ್ತಿರುವುದು. ಅಂದ ಮೇಲೆ ನಮ್ಮ ಮೇಲೆ ನೀವೇನು ಆಪಾದನೆ ಹೊರಿಸಿದ್ದಿರೋ ಅದು ಸುಳ್ಳು ಹಬ್ಬಿಸಿದ್ದಿರಿ ಎನ್ನುವುದು ಇಲ್ಲಿ ಖಾತರಿಯಾಗುತ್ತಿದೆ. ಮಿಗಿಲಾಗಿ ಅಲ್ಲಿ ಕೊಟ್ಟದ್ದು 6 ಪರ್ಸೆಂಟ್, 5½ ಪರ್ಸೆಂಟ್, 4½ ಪರ್ಸೆಂಟ್ ಹಾಗೂ 1 ಪರ್ಸೆಂಟ್ ಇತ್ತು. ಅದು ಸಾಲದೆಂದು confusion create ಮಾಡಿ, ಈಗ 'ಎ' ಗ್ರೂಪ್‌ಗೆ 6 ಪರ್ಸೆಂಟ್ ತಾನಾಗಿಯೇ ಇದೆ. 'ಬಿ' ಗ್ರೂಪ್‌ಗೆ 5½ ಪರ್ಸೆಂಟ್ ಇದ್ದುದನ್ನು 5 ಪರ್ಸೆಂಟ್ ಮಾಡಿದಿರಿ. ಇದು ಅನ್ಯಾಯವಲ್ಲವೇ? 'ಸಿ' ಗ್ರೂಪ್‌ಗೆ 4½ ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟ್ ಮಾಡಿದಿರಿ. ಅವರಿಗೆ ಅನ್ಯಾಯವಲ್ಲವೇ? 1 ಪರ್ಸೆಂಟ್ ಇದ್ದುದನ್ನು 1 ಪರ್ಸೆಂಟ್ ಮಾಡಿದಿರಿ, ಮತ್ತೆ ಎರಡನ್ನೂ 0.5 ಮತ್ತು 0.5 ತೆಗೆದು 5ನೇ ಗ್ರೂಪ್ ಕ್ರಿಯೇಟ್ ಮಾಡಿದಿರಿ. ಇದರಲ್ಲಿ ನೀವು ಮಾಡಿದ್ದೇನೆಂದರೆ, ಬೆಟ್ಟ ಅಗೆದಿದ್ದೀರಿ. ಇಲಿಯನ್ನೇ ಹಿಡಿಯುತ್ತಿರುವುದು. ಇಲ್ಲಿ ಹೊಸದೇನೂ ಇಲ್ಲ. ಆ ಕಾರಣದಿಂದ ಜನಸಂಖ್ಯೆಗೆ ಅನುಗುಣವಾಗಿ ಕೊಡಬೇಕಾಗಿರುವ ಮೀಸಲಾತಿ ವಿಚಾರದಲ್ಲಿ ಸೆನ್ಸಸ್ ಸರಿಯಾಗಿ ಆಗಿಲ್ಲ. ಸೆನ್ಸಸ್ ಸಮಯದಲ್ಲಿ ಎಷ್ಟು ಗೊಂದಲವಾಯಿತೆಂದರೆ, ಸುಮಾರು 5-6 ಬಾರಿ ಇನ್ನೂ 15 ದಿವಸ, ಒಂದು ತಿಂಗಳು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳುತ್ತಲೇ ಇದ್ದರು. ನನ್ನ ಮನೆಯಲ್ಲಿಯೇ ಗೋಡೆ ಮೇಲೆ ಮಾತ್ರ ಚೀಟಿ ಇತ್ತು. ನಮ್ಮ ಮನೆಯೊಳಗಡೆ ಬಂದವರೂ ಇಲ್ಲ, ಕೇಳಿದವರೂ ಇಲ್ಲ. ಆನ್‌ಲೈನ್‌ನಲ್ಲಿ ಮಾಡಲು ಹೇಳಿದರು, ಆನ್‌ಲೈನ್‌ನಲ್ಲಿ ಆಗಲೇ ಇಲ್ಲ. ನಮ್ಮಂತಹವರಿಗೇ ಹೀಗಾದರೆ ಹಳ್ಳಿಗಾಡು ಪ್ರದೇಶಗಳಲ್ಲಿರುವ ಜನರಿಗೆ ಆನ್‌ಲೈನ್ ಎನ್ನುವುದೇ ಗೊತ್ತಿಲ್ಲ. ಆಫ್‌ಲೈನ್ ಸಹ ಗೊತ್ತಿಲ್ಲ. ಅವರೆಲ್ಲಿ ಇದರಲ್ಲಿ ಭಾಗವಹಿಸಿದ್ದಾರೆ? ಒಟ್ಟಾರೆ ಪರಿಶಿಷ್ಟ ಜಾತಿಯ ಜನಸಂಖ್ಯೆ ಎಷ್ಟಿರಬೇಕೋ ಅಷ್ಟಿಲ್ಲ. ಅದರಿಂದಾಗಿ ಇದು ಒಂದು ರೀತಿ ಅವಾಸ್ತವಿಕವಾಗಿದೆ. ನಾನು ಕೇಳುವುದೇನೆಂದರೆ, ಎಲ್ಲರಿಗೂ ನ್ಯಾಯ ಸಿಗಬೇಕು. ಮಾದಿಗ ಸಮಾಜಕ್ಕೂ, ಬಲಗೈನವರಿಗೆ, ಅಲೆಮಾರಿಗಳಿಗೆ, touchable castes ಯಾರಿದ್ದಾರೆ ಅವರಿಗೂ ಸಿಗಬೇಕು. ಎಲ್ಲರನ್ನೂ ಕೂರಿಸಿ ಮುಖಂಡರುಗಳನ್ನು ಕರೆದು ಮಾಡಬಹುದಾಗಿತ್ತು. ಇಲ್ಲವೆಂದರೆ, ಒಂದು ಗುಂಪಿಗೆ ಸೇರಿಸುವಂತಹ ಸಂದರ್ಭದಲ್ಲಿ ನೀವು ಯಾರನ್ನಾದರೂ ಕರೆದು ಕೇಳಬೇಕಲ್ಲವೇ? 101 ಜಾತಿಗಳಿವೆ, ಆ 101

ಜಾತಿಗಳ ಕೆಲವು ಮುಖಂಡರುಗಳಿರುತ್ತಾರೆ. ಅವರನ್ನು ಕರೆದು 'ನಿಮ್ಮ ಸಂಸ್ಕೃತಿ ಏನು, ನಿಮ್ಮ ಆರ್ಥಿಕ ಪರಿಸ್ಥಿತಿ ಎಂಥದ್ದು, ನಿಮ್ಮ ಪದ್ಧತಿಗಳೇನಿದೆ, ನೀವು ಯಾವ ಗುಂಪಿಗೆ ಬರುವಂತಹವರು? ನಿಮ್ಮನ್ನು ಎಲ್ಲಿಗೆ ಸೇರಿಸಬೇಕು'? ಎಂದು ಕೇಳಿದ್ದೀರಾ? ಏನೂ ಇಲ್ಲ. ನೀವು ಎಲ್ಲೋ ಒಂದು ಕಡೆ ಕುಳಿತುಕೊಳ್ಳುತ್ತೀರಿ, ನೀವು ಗುಂಪುಗಳನ್ನು ಮಾಡಿಕೊಳ್ಳುತ್ತೀರಿ, ಯಾರದ್ದೋ ತಂದು ಅದಕ್ಕೆ ತುರುಕಿಬಿಡುತ್ತೀರಿ. ಹೀಗೆ ಮಾಡುವುದರಿಂದ ನೀವು ಯಾರಿಗೆ ನ್ಯಾಯ ಕೊಡುತ್ತೀರಿ? ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಯಾವಾಗಲೂ ಕೂಡ ಸಮಾನರ ಜೊತೆಯಲ್ಲಿ ಸಮಾನರನ್ನು ಸೇರಿಸುವುದರಿಂದ ಅಲ್ಲಿ ಅವರಿಗೆ ಅನ್ಯಾಯವಾಗುವುದಿಲ್ಲ. ಎಲ್ಲಿ ಅಸಮಾನರ ಜೊತೆಯಲ್ಲಿ ಸಮಾನರು ಇಲ್ಲದಿದ್ದಾಗ ಅವರನ್ನು ತೆಗೆದುಕೊಂಡು ಹೋಗಿ ಸೇರಿಸುತ್ತೇವೋ ಅಲ್ಲಿ ಹೊಂದಾಣಿಕೆಯಾಗುವುದಿಲ್ಲ. ಆ ಕಾರಣದಿಂದ ಇವತ್ತು ನೀವು ಈ ಗ್ರೂಪ್‌ಗಳಲ್ಲಿ ಏನೇ announce ಮಾಡಿದರೂ ಕೂಡ ಇದು ಅನೂರ್ಜಿತ. ಜನರಿಗೆ ತೃಪ್ತಿಯಾಗುವುದಿಲ್ಲ. ಇದು ಜಾತಿ ಜಾತಿಗಳ ಮಧ್ಯೆ ಕಂದಕಗಳನ್ನು ಏರ್ಪಡಿಸುವಂತಹ ವ್ಯವಸ್ಥೆಯಾಗಿಬಿಡುತ್ತದೆ. ಆ ಕಾರಣದಿಂದ ಇವತ್ತಿನವರೆಗೆ ಆಯೋಗ ಏನು ತೀರ್ಮಾನ ತೆಗೆದುಕೊಂಡಿದೆ, ಈಗ ಸರ್ಕಾರ ಆ ವರದಿಯನ್ನು ತೆಗೆದುಕೊಂಡರೂ ಕೂಡ ಯಾವುದೇ ರೀತಿಯ ಕ್ರಮ ಜರುಗಿಸದೇ, ಇದು ಒಪ್ಪಿಗೆಯಾಗಿದೆ, ಒಪ್ಪಿಗೆಯಾಗಿಲ್ಲ ಎಂದು ಹೇಳಿಲ್ಲ. Confusion ಇದ್ದದ್ದು ಮತ್ತಷ್ಟು confusion ಆಗಿ ಇವತ್ತು ಜನ ಬೀದಿ ಬೀದಿಗಳಲ್ಲಿ ಒಬ್ಬೊಬ್ಬರೂ ಹೋರಾಟ ಮಾಡುವಂತಹ, ಮಾನಸಿಕವಾಗಿ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಇರುಸುಮುರುಸಾಗುವಂತಹ ಪರಿಸ್ಥಿತಿಯನ್ನು ನಾವು ಎದುರಿಸಬೇಕಾದಂತಹ ಪರಿಸ್ಥಿತಿ ಬಂದಿದೆ. ಈ ಕಾರಣದಿಂದ ಸರ್ಕಾರ ಆ ಕಾಲದಲ್ಲಿ ನಮ್ಮ ಮೇಲೆ ಏನೆಲ್ಲಾ ಆಪಾದನೆಗಳನ್ನು ಮಾಡಿತು ಈಗ ನೀವು ಅದೇ ತರಹದ ಹೆಚ್ಚಿನ ತಪ್ಪುಗಳನ್ನು ಮಾಡುತ್ತಿದ್ದೀರಿ. Vote bank ಗಾಗಿ ದಾರಿ ತಪ್ಪಿಸಿ ನಮ್ಮ ಮೇಲೆ ಗೂಬೆ ಕೂರಿಸಿದಿರಿ. ಇವತ್ತು ನೀವು ಮಾಡಿದ್ದೇನು? ಅವತ್ತು ನಾಲ್ಕು ಗ್ರೂಪ್ ಮಾಡಿದ್ದರು. ನಾಲ್ಕು ಗ್ರೂಪ್‌ಗಳನ್ನು ಬಿಟ್ಟು ಐದನೆಯ ಗ್ರೂಪ್ ಹುಟ್ಟಿದ್ದೆಲ್ಲಿ? ಎಕೆ, ಎಡಿ, ಎಎ ಅಂದರೆ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ. ಅವು ಜಾತಿಗಳಲ್ಲವೇ? ಈಗ ಯಾವ ಜಾತಿಗಳಿಗೆ ಅವರು ಸೇರಬೇಕಾಗಿತ್ತೋ ಎಡಗೈನವರೂ ಇದ್ದರು, ಬಲಗೈನವರೂ ಇದ್ದರು. ಈಗ ಎಡಗೈನವರು ಬುದ್ಧಿವಂತಿಕೆಯಿಂದ ಅಲ್ಲಿ ಬರೆಸಿದ್ದರಿಂದ ಅಲ್ಲಿ ಗಣನೀಯವಾಗಿ ಸಂಖ್ಯೆ ಕಡಿಮೆಯಾಯಿತು. ಅವರೆಲ್ಲಾ ಮಾದಿಗ ಎಂದು ಬರೆಸಿಬಿಟ್ಟರು. ಸಂತೋಷ, ಅದೇ ರೀತಿ ಇನ್ನು ಉಳಿದವರನ್ನು ಕೂಡ ನೀವು ಬಲಗೈ ಸಮುದಾಯಕ್ಕೆ ಸೇರಿಸಬೇಕಾಗಿತ್ತು. ಜಾತಿ ಪ್ರಮಾಣಪತ್ರಗಳನ್ನು ಕೊಡುವಂತಹ ಸಂದರ್ಭದಲ್ಲಿ ಹೇಗೆ ಮಾಡುತ್ತೀರಿ? ಗ್ರೂಪ್‌ಗಳನ್ನು ಸೇರಿಸಿಬಿಟ್ಟಿರಿ. ಆದಿ ಕರ್ನಾಟಕ ಜಾತಿಯಲ್ಲ. ಅದರ ಮೂಲ ಜಾತಿ ಕೆಲವರು ಮೂಲ ಜಾತಿಗೆ ಹೋಗಿದ್ದಾರೆ, ಇನ್ನು ಕೆಲವರು ಮೂಲ ಜಾತಿಗೆ ಹೋಗಿಲ್ಲ. ನೀವೇನಾದರೂ ಜಾತಿ ಪ್ರಮಾಣಪತ್ರ ಕೊಟ್ಟರೆ ಮತ್ತೆ ಅವರು ಅಲ್ಲಿಯೇ ಕುಳಿತುಕೊಳ್ಳುತ್ತಾರೆ. ಅವರಿಗೆ ನ್ಯಾಯ ಎಲ್ಲಿ ಸಿಗುತ್ತದೆ? ಅಲೆಮಾರಿಗಳು, ಸಣ್ಣ ಸಣ್ಣ ಜಾತಿಗಳು. ಇವತ್ತು ಅಲೆಮಾರಿಗಳಲ್ಲಿ 59 ಜಾತಿಗಳಿವೆ. ಅದರಲ್ಲಿಯೂ ಕೂಡ 'ಮಾಲ' ಬಲಗೈ ನಲ್ಲಿ ಬರುತ್ತದೆ. 'ಮಾಲ ಸನ್ಯಾಸಿ' ಬಲಗೈ ನಲ್ಲಿ ಬರುವುದಿಲ್ಲ ಅದನ್ನು ಬೇರೆ ಕಡೆಗೆ ಗ್ರೂಪ್ ಮಾಡುತ್ತೀರಿ. ಆದರೆ ಮಾಲ ಎನ್ನುವುದು ಅಲ್ಲಿಯೇ

ಇರುತ್ತದೆ. 'ಹೊಲೆಯ' ಎನ್ನುವುದು ಬಲಗೈ ನಲ್ಲಿ ಬರುತ್ತದೆ. 'ಹೊಲೆಯ ಸನ್ಯಾಸಿ' ಎಂದು ಇದೆ. ಅದನ್ನು ಮಾತ್ರ ಹೊಲೆಯ ಎಂದಿದ್ದರೂ ಕೂಡ ಬೇರೆಯದ್ದಕ್ಕೆ ಸೇರಿಸುತ್ತೀರಿ. ನಿಮಗೆ ಅದಕ್ಕೆ ಆಧಾರವೇನು? ಇವತ್ತು ಈ ವರದಿಯೇ ಅವಾಸ್ತವಿಕವಿದೆ. ಇದು ಕೆಲವು ಕಡೆ ಕುಳಿತು ಇದನ್ನು ಇದೇ ರೀತಿ ಮಾಡಬೇಕು, ಇದೇ ರೀತಿ ಗೊಂದಲ ಸೃಷ್ಟಿಸಬೇಕೆಂದು ಕೆಲವುದರಲ್ಲಿ ಮಾಡಿದ್ದಾರೆ. ಇದನ್ನು ನಾವು ಒಪ್ಪತಕ್ಕದ್ದಲ್ಲ. ನಮಗೆ ಪ್ರತಿಯೊಬ್ಬರಿಗೂ ನ್ಯಾಯ ಸಿಗಬೇಕು. ಅವರಿಗೆ ಮೀಸಲಾತಿ ಪ್ರಮಾಣ ಜಾಸ್ತಿ ಸಿಗಬೇಕು, ಇವರಿಗೆ ಕಡಿಮೆ ಸಿಗಬೇಕೆಂದಲ್ಲ. ಜನಸಂಖ್ಯೆಗನುಗುಣವಾಗಿ ಆಯಾ ಜಾತಿಗಳನ್ನು ಆಯಾ ಗುಂಪುಗಳಿಗೆ ಸೇರಿಸಿ ನ್ಯಾಯ ಕೊಡಿಸಬೇಕಾಗಿದೆ. ಸರ್ಕಾರ ಆ ಕೆಲಸವನ್ನು ಮಾಡುವುದು ಬಿಟ್ಟು ಇವತ್ತು ಗೊಂದಲ ಸೃಷ್ಟಿಸಿ ಕೇವಲ ನಮ್ಮ ಮೇಲೆ ಮಾತ್ರ ಗೂಬೆ ಕೂರಿಸಿದರು. ಏಕೆಂದರೆ, ಚುನಾವಣೆ ಹತ್ತಿರ ಬಂದಿತ್ತು. ಆದರೆ ಇವತ್ತು ನೀವು ಮಾಡಿರುವಂತಹದ್ದು ಏನು? ಯಾವ ರೀತಿಯಲ್ಲಿ ಹೊಸದಾಗಿ ಒಳ್ಳೆಯದು ಮಾಡಿದ್ದೀರಿ? ಅದಕ್ಕೆ ಸರ್ಕಾರದ ಬಳಿ ಉತ್ತರ ಇಲ್ಲ. ಆ ಕಾರಣದಿಂದ ಇದರಲ್ಲಿ ಸಮೀಕ್ಷೆ ಸಂಪೂರ್ಣವಾಗಿ ಆಗಬೇಕು. ಇನ್ನೊಂದು ದುರ್ದೈವದ ಸಂಗತಿಯೇನೆಂದರೆ, ಅನೇಕ ಹುದ್ದೆಗಳು ಖಾಲಿ ಇವೆ. ನಮ್ಮಲ್ಲಿ ಅನೇಕ ಯುವಕರಿದ್ದಾರೆ, ಇದೇನಾದರೂ ಆಗಿದ್ದಿದ್ದರೆ ಅನೇಕರು ಕೆಲಸಕ್ಕೆ ಸೇರುತ್ತಿದ್ದರು. 2-3 ವರ್ಷಗಳಿಂದ appointments ಇಲ್ಲ, ನಿಲ್ಲಿಸಿಬಿಟ್ಟಿದ್ದಾರೆ. ಈಗ ಒಂದು ವರ್ಷದಿಂದ ಕೋರ್ಟ್ ಆದೇಶ ಬಂದ ಮೇಲೆ ಯಾರಿಗೂ ಇಲ್ಲ, ಪರಿಶಿಷ್ಟ ಜಾತಿಗಳಿಗೆ, ವರ್ಗಗಳಿಗೆ ಮಾತ್ರವಲ್ಲ ಸರ್ವರಿಗೂ ಕೂಡ ಯಾವುದೇ; ಮಂತ್ರಿಗಳು ಉತ್ತರ ಕೊಡುವಾಗ ಒಳಮೀಸಲಾತಿ ಆಗಿಲ್ಲ, ಆದ ತಕ್ಷಣ ನಾವು announcement ಮಾಡುತ್ತೇವೆ ಎಂದು ಹೇಳುತ್ತಾರೆ. Okay, ಪರಿಶಿಷ್ಟ ಜಾತಿಗಳಿಗೆ, ವರ್ಗಗಳ ಜನರಿಗೆ 40 ವರ್ಷವಾದ ಮೇಲೆ ಸರ್ಕಾರಿ ಕೆಲಸಕ್ಕೆ ಹೋಗುವುದಕ್ಕೆ ಅರ್ಹರಾಗುವುದಿಲ್ಲ.

(ಮುಂದು)

(805) 19.08.2025 6.00 ಹೆಚ್‌ವಿ.ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈಗ ಒಂದು ವರ್ಷದಿಂದ ಕೋರ್ಟ್ ಆದೇಶ ಬಂದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರವಲ್ಲ ಎಲ್ಲ ಜಾತಿ ಜನಾಂಗದವರಿಗೂ ಯಾವುದೇ ರೀತಿಯ ಸರ್ಕಾರಿ ಹುದ್ದೆಗಳಿಗೆ ನೇಮಕಾತಿಗಳು ನಡೆಯುತ್ತಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ "ಒಳ ಮೀಸಲಾತಿ ಆಗಿಲ್ಲ. ಆದ ಕೂಡಲೇ ನಾವು ನೇಮಕಾತಿ ಮಾಡಿಕೊಳ್ಳುತ್ತೇವೆ" ಎಂದು ಹೇಳುತ್ತಾರೆ. ಹೀಗೆ ಕಳೆದ 2-3 ವರ್ಷಗಳಿಂದ ನಡೆದುಕೊಂಡು ಬಂದಿದೆ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸರ್ಕಾರಿ ಹುದ್ದೆಗಳಿಗೆ ನೇಮಕ ಹೊಂದಲು ಗರಿಷ್ಠ ವಯೋಮಿತಿ 40 ವರ್ಷಗಳಾಗಿವೆ. 40 ವರ್ಷಗಳಾದ ಮೇಲೆ ಸರ್ಕಾರಿ ಕೆಲಸಕ್ಕೆ ಅವರು ಅರ್ಹರಾಗುವುದಿಲ್ಲ. ಈಗಾಗಲೇ ಅವರುಗಳಿಗೆ ಸುಮಾರು 3 ವರ್ಷಗಳು ಲಾಸ್ ಆಗಿದೆ. ಇದನ್ನು ಯಾರು ಕಟ್ಟಿಕೊಡುತ್ತಾರೆ? ಈಗ ಸರ್ಕಾರ ಮೂರು ವರ್ಷಗಳನ್ನು ಹೆಚ್ಚುವರಿಯಾಗಿ ನೀಡಬೇಕಾಗಿದೆ. ಮೂರು ವರ್ಷಗಳಲ್ಲಿ

ಅವರುಗಳಿಗೆ ಆಗಿರುವಂತಹ ನಷ್ಟವನ್ನು ಸರ್ಕಾರ ಕಟ್ಟಿಕೊಡಬೇಕಾಗುತ್ತದೆ. ಸರ್ಕಾರ ಈ ಕ್ರಮ ತೆಗೆದುಕೊಳ್ಳದಿದ್ದರೆ, ಅವರ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ತಾವೇ ಊಹಿಸಿಕೊಳ್ಳಬೇಕಾಗಿದೆ. ಒಳ ಮೀಸಲಾತಿಯ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ ಎನ್ನುವ ಕಾರಣಕ್ಕಾಗಿ ಶಿಕ್ಷಕರ, ವೈದ್ಯರ ಇಂಜಿನಿಯರ್‌ಗಳ ಮತ್ತು ಇನ್ನಿತರೆ ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡಿಕೊಳ್ಳುತ್ತಿಲ್ಲ. ಬರೀ ಈ ರೀತಿಯ ಸಬೂಬನ್ನು ಹೇಳುತ್ತಲೇ ಇವರು ಇಲ್ಲಿ ಕುಳಿತುಕೊಳ್ಳುವುದಾದರೆ, ಏತಕ್ಕೋಸ್ಕರ ಬೇಗ ತೀರ್ಮಾನ ಮಾಡುವುದಕ್ಕೆ ಆಗುತ್ತಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೋರ್ಟ್‌ನ ಆದೇಶ ಬಂದ ಮೇಲೂ ಜನರು ಹೋರಾಟ ಮಾಡಬೇಕಾಗಿದೆಯೇ? ಒಳ ಮೀಸಲಾತಿ ಎನ್ನುವುದು ಸಂಕೀರ್ಣ ಸ್ಥಿತಿಯಲ್ಲಿದೆ. ಕುಲಶಾಸ್ತ್ರ ಅಧ್ಯಯನದ ಪ್ರಕಾರ ಈಗಲೂ ಒಂದೇ ವಾರದಲ್ಲಿ ಇದನ್ನು ಪರಿಹರಿಸಬಹುದಾಗಿದೆ. ಆಯಾಯ ಜಾತಿಗಳ ಸಂಘಟನೆಗಳ ಮುಖಂಡರುಗಳು ಕರೆದು ನಿಮ್ಮ ಜಾತಿಗೆ ಮೂಲ ಜಾತಿ ಯಾವುದು? ನಿಮ್ಮ ಮೂಲ ಜಾತಿಯನ್ನು ಡಿಕ್ಲೇರ್ ಮಾಡಿಕೊಳ್ಳಿ ಎಂದು ಹೇಳಬಹುದು. ಅವರು ಡಿಕ್ಲೇರ್ ಮಾಡಿಕೊಂಡ ಮೇಲೆ ಯಾರು ಎಲ್ಲಿಗೆ ಸೇರಬೇಕು ಅಲ್ಲಿಗೆ ಸೇರಿಸಬಹುದು. ಒಂದು ವೇಳೆ ಎ.ಕೆ., ಎ.ಡಿ., ಮತ್ತು ಆದಿ ಆಂಧ್ರ ಈ ಜಾತಿಗಳ ನಡುವೆ ಗೊಂದಲವಿದ್ದರೆ, ಅದನ್ನು ಮತ್ತೊಮ್ಮೆ ಕ್ಲಿಯರ್ ಮಾಡಿಕೊಳ್ಳಬಹುದು.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಸಚಿವ ಸಂಪುಟ ಸಭೆಯಲ್ಲಿ ಎಷ್ಟೇ ಶೇಕಡವಾರು ಘೋಷಣೆ ಮಾಡಿದ್ದರೂ it is not permanent. ಏಕೆಂದರೆ, ಸರ್ಕಾರದ empirical data ದಲ್ಲಿ ಏನಾದರೂ ತಪ್ಪಿದ್ದರೆ, ಜನಗಣತಿ ಇಲಾಖೆಯವರು ಪುನಃ ಜಾತಿ ಗಣತಿಯನ್ನು ಮತ್ತೊಮ್ಮೆ ಮಾಡಿದರೆ, ಅದರಲ್ಲಿ ಏನಾದರು ವ್ಯತ್ಯಾಸ ಬಂದರೆ, ಪುನಃ ಗೊಂದಲ ಪ್ರಾರಂಭವಾಗುತ್ತದೆ. ಇದೆಲ್ಲದಕ್ಕಿಂತ ಮಿಗಿಲಾಗಿ ಸರ್ಕಾರ ಗ್ರೂಪ್‌ಗಳನ್ನು ರಚನೆ ಮಾಡುತ್ತದೆ. ಈ ಗ್ರೂಪ್‌ನಲ್ಲಿ ಪ್ರಬಲ ವರ್ಗದವರ ಮಧ್ಯೆ ಸಣ್ಣ ವರ್ಗದವರನ್ನು ಅಲ್ಲಿಗೆ ಸೇರಿಸಿದಾಗ, ಮತ್ತೊಮ್ಮೆ ಅವರಿಗೆ ಅನ್ಯಾಯವಾಗುತ್ತದೆ. ಎ ಗ್ರೂಪ್, ಬಿ ಗ್ರೂಪ್ ಎನ್ನುವುದು ಜಾತಿಯ ಮೇಲೆ ಹೋಗುತ್ತದೆ. ಅಲ್ಲಿಯೂ ಕೂಡ ಅವರಿಗೆ ಅನ್ಯಾಯವಾಗುತ್ತದೆ. ಈ ಅನ್ಯಾಯಗಳನ್ನು ಸರಿಪಡಿಸಬೇಕಾದರೆ, ಅವರ ಮೂಲ ಜಾತಿಗಳಿಗೆ ಅವರನ್ನು ಕಳುಹಿಸಿ, ಆ ಮೂಲ ಜಾತಿ ಒಂದೇ ಜಾತಿಯ ಗುಂಪು ಎನ್ನುವ ರೀತಿ ಮಾಡಿ, ಅವರಿಗೆ ಸವಲತ್ತುಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದಾಗ ಮಾತ್ರ ಅವರಿಗೆ ನ್ಯಾಯ ಒದಗಿಸಿಕೊಟ್ಟಂತಾಗುತ್ತದೆ. ಇಲ್ಲದಿದ್ದರೆ, ಅನ್ಯಾಯ ಮಾಡುವುದಕ್ಕಾಗಿಯೇ ಈ ಸರ್ಕಾರ ಹೊರಟಿದೆ ಎನ್ನುವುದನ್ನು ಯಾರು ಬೇಕಾದರೂ ಹೇಳಬಹುದಾಗಿದೆ. ಆದ್ದರಿಂದ 2011ನೇ ಇಸವಿಯ empirical data ಆಧಾರವಾಗಿಟ್ಟುಕೊಂಡು ಒಳ ಮೀಸಲಾತಿಯನ್ನು ಮಾಡಬಹುದಾಗಿತ್ತು. ಇವತ್ತು ನೂರಾರು ಕೋಟಿ ರೂಪಾಯಿಗಳಷ್ಟು ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಈ ಆಯೋಗಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ. ಇದಕ್ಕಾಗಿ ಪ್ರತ್ಯೇಕವಾದ ಹಣವನ್ನು ಸರ್ಕಾರ ಕೊಟ್ಟಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸುಮಾರು 42 ಸಾವಿರ ಕೋಟಿ ರೂಪಾಯಿಗಳನ್ನು ನೀಡಿದ್ದೇವೆಂದು ಈ ಸರ್ಕಾರ ಹೇಳಿದೆ. ಇದರಲ್ಲಿ ಶೇಕಡಾ 50ರಷ್ಟು ಹಣ ಇಲಾಖೆಗಳಿಗೆ ಹೋಗುತ್ತಿದೆಯೇ ಹೊರತು ಯಾರ ಕೈಯನ್ನು ಸೇರುತ್ತಿಲ್ಲ.

ಉಳಿದಿರುವಂತಹ 21 ಸಾವಿರ ಕೋಟಿ ರೂಪಾಯಿಗಳನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಳ್ಳಬಾರದು. ಗ್ಯಾರಂಟಿಗಳು ಎಲ್ಲ ಜಾತಿ ವರ್ಗದವರಿಗೂ ಸೇರಿದೆ, ನನಗೂ ಫ್ರೀ, ನಿನಗೂ ಫ್ರೀ ಎನ್ನುವುದಾದರೆ, ದಲಿತರಿಗೆ ಏತಕ್ಕೋಸ್ಕರ ಫ್ರೀ ಇಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಅವರಿಗೆ ಮೀಸಲಾಗಿಟ್ಟಿರುವ ಹಣದಲ್ಲಿಯೇ ದಲಿತರಿಗೆ ಗ್ಯಾರಂಟಿ ಕೊಡುವುದಾದರೆ, ಅದು ಗ್ಯಾರಂಟಿ ಆಗುವುದಿಲ್ಲ. ಅದು ವಂಚನೆಯಾಗುತ್ತದೆ ಎನ್ನುವ ಮಾತನ್ನು ನಾನು ನೂರು ಬಾರಿ ಹೇಳಿದ್ದೇನೆ. ಈ ರೀತಿ ಮಾಡುವುದಾದರೆ, ಎಲ್ಲರಿಗೂ ಖಜಾನೆಯಿಂದ ಕೊಡುವಂತೆ ದಲಿತರಿಗೂ ಕೊಡಬೇಕಾಗಿತ್ತು. ಕಾಂಗ್ರೆಸ್ ಪಕ್ಷ ದಲಿತರಿಗೆ ಮಾಡದೇ ಇರುವಂತಹ ಮೋಸವೇ ಇಲ್ಲ. ಬೇಕಾದಷ್ಟು ಮೋಸ ಮಾಡುತ್ತಿದೆ. ದಲಿತರು ಸಹ ಬುದ್ಧಿವಂತರಾಗಿದ್ದಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ದಲಿತರ ಅಭಿವೃದ್ಧಿಗಾಗಿ ವ್ಯಯ ಮಾಡುವುದಕ್ಕೆ ಬದಲಾಗಿ ಈ ರೀತಿ ಬೇರೆಬೇರೆ ರೀತಿಯಲ್ಲಿ ದುಂದು ವೆಚ್ಚವನ್ನು ಈ ಸರ್ಕಾರ ಮಾಡುತ್ತಿದೆ. 2011ರ ಅಂಕಿಅಂಶದ ಆಧಾರದ ಮೇಲೆ ಆಂಧ್ರಪ್ರದೇಶ ತೆಲಂಗಾಣ, ಹರಿಯಾಣ, ಈ ರಾಜ್ಯದವರು ಒಳಮೀಸಲಾತಿಯನ್ನು ಮಾಡಿದ ರೀತಿಯಲ್ಲಿಯೇ ನಮ್ಮ ರಾಜ್ಯದವರು ಮಾಡಿದ್ದರೆ, ಹಣ ಉಳಿತಾಯವಾಗುತ್ತಿತ್ತು; ಅದು ಆ ಜನರ ಅಭಿವೃದ್ಧಿಗಾಗಿ ವಿನಿಯೋಗವಾಗುತ್ತಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸುಮಾರು 6-7 ಅಭಿವೃದ್ಧಿ ನಿಗಮಗಳು ಇವೆ. ಎಲ್ಲಿಯೂ ಯಾವುದೇ ರೀತಿಯ ಅಭಿವೃದ್ಧಿ ಎನ್ನುವುದನ್ನು ಆಗುತ್ತಿಲ್ಲ. ಯಾವ ನಿಗಮಕ್ಕೂ ಮೂರು ಕಾಸು ಹೋಗುತ್ತಿಲ್ಲ. ಸುಮಾರು 42 ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಗದವರಿಗಾಗಿ ಮೀಡಲಾಗಿಟ್ಟಿದ್ದೇವೆಂದು ಕೇಳುತ್ತಾರೆ, ಆದರೆ, 500 ಕೋಟಿ ರೂಪಾಯಿಗಳು ಸಹ ಈ ನಿಗಮಗಳಿಗೆ ಹೋಗಿಲ್ಲ. ಈ ರೀತಿಯ ಅನ್ಯಾಯವನ್ನು ಈ ಸರ್ಕಾರ ಮಾಡುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಒಳಮೀಸಲಾತಿ ಕ್ರಮಬದ್ಧವಾಗಿ ಆಗಬೇಕಾದರೆ, ಒಂದು ಜಾತಿಯ ಗುಂಪಿಗೆ ಮತ್ತೊಂದು ಜಾತಿಯನ್ನು ಸೇರಿಸುವುದು ಒಬ್ಬರನ್ನು ಎತ್ತಿ ಕಟ್ಟುವುದು ಒಬ್ಬರನ್ನು ತುಳಿಯುವುದು ಈ ರೀತಿಯ ತಾರತಮ್ಯವನ್ನು ಕಾಂಗ್ರೆಸ್ ಸರ್ಕಾರ ಮಾಡಬಾರದು ಎನ್ನುವ ಮನವಿಯನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಒಳಮೀಸಲು ವಿಚಾರದ ಬಗ್ಗೆ ದೇಶದಲ್ಲಿ ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಈ ಹಿಂದೆ ಒಂದೆರಡು ದಶಕಗಳ ಹಿಂದೆ ಒಳಮೀಸಲಾತಿಯ ಬಗ್ಗೆ ಇಷ್ಟೊಂದು ಚರ್ಚೆ ನಡೆಯುತ್ತಿರಲಿಲ್ಲ. ಈಗ ಬಹಳಷ್ಟು ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಆಂಧ್ರಪ್ರದೇಶ, ಕರ್ನಾಟಕ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಹೋರಾಟಗಳು ನಡೆದ ಹಿನ್ನೆಲೆಯಲ್ಲಿ ಐತಿಹಾಸಿಕವಾಗಿರುವ ರೀತಿಯಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಬಂದಿದೆ. ಈ ಸಂದರ್ಭದಲ್ಲಿ ನಮ್ಮ ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು.

ಸನ್ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿಯ ಪರವಾಗಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಅನ್ನು ಸಲ್ಲಿಸುತ್ತದೆ. ಆದ್ದರಿಂದ ಒಳ ಮೀಸಲಾತಿಯ ಪರವಾಗಿ ಅಫಿಡವಿಟ್ ಅನ್ನು ಸಲ್ಲಿಸಿದ ನಮ್ಮ ದೇಶದ ಪ್ರಪ್ರಥಮ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರರ್ಥ ಏನೆಂದರೆ, ಒಳ ಮೀಸಲಾತಿಯಿಂದ ಮಾತ್ರ ಸಾಮಾಜಿಕ ನ್ಯಾಯ ಸಿಗುವುದಕ್ಕೆ ಸಾಧ್ಯ......

**ವೈಸ್ ಛೇರ್ಮನ್:-** ಮಾನ್ಯ ಎನ್.ರವಿಕುಮಾರ್‌ರವರೇ, ಪ್ರಪ್ರಥಮ ಪ್ರಧಾನಮಂತ್ರಿಗಳಲ್ಲ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿರುವ ಪ್ರಪ್ರಥಮ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ(ಅಬಕಾರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುವುದಕ್ಕೆ ಬದಲಾಗಿ ಕಾನೂನೇ ತರಬಹುದಾಗಿತ್ತು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷಕ್ಕೆ ಅವಕಾಶಗಳಿದ್ದರೂ ಸಹ ಏತಕ್ಕೋಸ್ಕರ ಅವರು ಕಾನೂನು ತರಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದಿಂದ ಅನೇಕ ಜನ ಪ್ರಧಾನಮಂತ್ರಿಗಳಾಗಿ ಹೋಗಿದ್ದಾರೆ. ಅವರುಗಳು ಏತಕ್ಕೋಸ್ಕರ ಕಾನೂನು ತರಲಿಲ್ಲ?

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್(ಕಾರ್ಮಿಕ ಸಚಿವರು);-** ಸನ್ಮಾನ್ಯ ಸಭಾಪತಿಯವರೇ, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಶೇಕಡಾ 10 ಮಾಡಿರುವುದರ ಬಗ್ಗೆಯೂ ಚರ್ಚೆ ಆಗಲಿ. Economic reconstruction ಎಂದು 10% reservation...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ, ಮಾನ್ಯ ರವಿಕುಮಾರ್‌ರವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ ಮೇಲೆ ತಾವು ಉತ್ತರವನ್ನು ಕೊಡಿ. ಮಾನ್ಯ ಸುಧಾಮದಾಸ್‌ರವರೇ ಮತ್ತು ಶ್ರೀ ವಸಂತಕುಮಾರ್‌ರವರೇ, ನಿಮ್ಮ ಹೆಸರನ್ನು ಬರೆದುಕೊಂಡಿದ್ದೇನೆ. ಆಮೇಲೆ ಮಾತನಾಡಿ. ಅವರಿಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್:-** ಸನ್ಮಾನ್ಯ ಸಭಾಪತಿಯವರೇ, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೇವಲ ಮೂರೇ ದಿನದಲ್ಲಿ ತರಲಾಯಿತು. ದೇಶದಲ್ಲಿ ಎಲ್ಲಿಯೂ ಚರ್ಚೆ ಆಗಲಿಲ್ಲ. ಎಲ್ಲಿಯೂ ಹೋರಾಟವಾಗಲಿಲ್ಲ, ಯಾರನ್ನೂ ಕೇಳಲಿಲ್ಲ. ರಾತ್ರೋ ರಾತ್ರಿ ಆ ಕಾನೂನನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತ್ತು.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ, ಅವರು ಮಾತನಾಡುತ್ತಿದ್ದಾರೆ, ಮಾತನಾಡಲಿ ತಮಗೆ ಅವಕಾಶವನ್ನು ಕೊಟ್ಟಾಗ ತಾವು ಆ ಬಗ್ಗೆ ಮಾತನಾಡಿ. ಮಾನ್ಯ ಎನ್.ರವಿಕುಮಾರ್ ಒಬ್ಬರು ಮಾತನಾಡಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಮೀಸಲಾತಿ ವಂಚಿತರಾಗಿರುವ ಬಡವರಿಗೆ ಮೀಸಲಾತಿ ನೀಡಿರುವುದು ಅನ್ಯಾಯವೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ, ಹಾಗಾದರೆ, ಬಡವರಿಗೆ ಮೀಸಲಾತಿ ಕೊಡಬಾರದೇ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಿ.ಟಿ.ರವಿಯವರೇ, ನಿಮ್ಮ ಪಕ್ಷದ ಸದಸ್ಯರೇ ಮಾತನಾಡುತ್ತಿರುವಾಗ ಮಧ್ಯೆ ತಾವು ಮಾತನಾಡುವುದು ಸರಿಯಲ್ಲ.

**ಶ್ರೀ ಸಂತೋಷ್ ಎಸ್.ಲಾಡ್:-** ಸನ್ಮಾನ್ಯ ಸಭಾಪತಿಯವರೇ, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇಕಡಾ 10ರಷ್ಟು ಮೀಸಲಾತಿಯನ್ನು ಯಾರಿಗೆ ಕೊಡುತ್ತಿದ್ದಾರೆ? ಅದರ ವ್ಯಾಪ್ತಿಗೆ ಬಡವರು ಬರುತ್ತಾರೆಯೇ? ಅದರ ಬಗ್ಗೆ ಚರ್ಚೆ ಆಗಲಿ.

**(ಗೊಂದಲ)**

**Sri C.T. RAVI:** Irrespective of caste…

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್:-** ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಆದಾಯ ಮಿತಿಯನ್ನು 12 ಲಕ್ಷ ರೂಪಾಯಿಗಳೆಂದು ಕೇಂದ್ರ ಸರ್ಕಾರ ನಿಗದಿ ಮಾಡಿದೆ. 12 ಲಕ್ಷ ರೂಪಾಯಿಗಳಷ್ಟು ಆದಾಯ ಇರುವವರು ಆರ್ಥಿಕವಾಗಿ ಹಿಂದುಳಿದವರೇ? ನಮ್ಮ ದೇಶದ ತಲಾ ಆದಾಯ 2 ಲಕ್ಷ ರೂಪಾಯಿಗಳಿಲ್ಲ. 12 ಲಕ್ಷ ರೂಪಾಯಿಗಳು ವೀಕರ್ ಸೆಕ್ಷನ್‌ನಾ?

**(ಗೊಂದಲ)**

(ಮುಂದು)

(೮೦6) 19.8.2025 6.10 ಪಿಕೆ:ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮೀಸಲಾತಿಯನ್ನು ತಂದದ್ದು ಬಾಬಾ ಸಾಹೇಬ್ ಅಂಬೇಡ್ಕರ್‌ರವರು . . .

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್:-** ಅದನ್ನು ಇಂಪ್ಲಿಮೆಂಟ್ ಮಾಡಿದ್ದು ನಾವು, ಜವಾಹರ್‌ಲಾಲ್ ನೆಹರುಯವರು . . . **(ಗೊಂದಲ)** ನಮ್ಮ ಸರ್ಕಾರ ಇದ್ದಾಗ ಇದನ್ನು ಜಾರಿಗೆ ತರಲಾಯಿತು.

**ಶ್ರೀ ಎ. ವಸಂತ್ ಕುಮಾರ್:-** ಕೋರ್ಟ್‌ಗೆ ಇವರು ಅಫಿಡೆವಿಟ್ ಕೊಟ್ಟಿದ್ದಾರೆ ಎಂದು ಹೇಳಿದರು. ಅಫಿಡೆವಿಟ್‌ನಲ್ಲಿ ಏನಿದೆ ಎನ್ನುವುದನ್ನು ಹೇಳಬೇಕು.

**(ಗೊಂದಲ)**

**ವೈಸ್ ಛೇರ್ಮನ್:-** ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಗಳೆ, ಸುಪ್ರೀಂ ಕೋರ್ಟ್‌ನವರು ಅಫಿಡೆವಿಟ್ ಕೊಡಿ ಎಂದು ಕೇಳಿದ ಮೇಲೆ ಇವರು ಅಫಿಡೆವಿಟ್ ಕೊಟ್ಟರು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಪ್ರಧಾನ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುವುದು ತಪ್ಪೇ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಪ್ರಧಾನ ಮಂತ್ರಿಗಳ ಹೆಸರನ್ನು ತೆಗೆದುಕೊಂಡರೆ ಇವರ ಬುಡಕ್ಕೆ ಏಕೆ ಬೆಂಕಿ ಬೀಳುತ್ತದೆ?

**(ಗೊಂದಲ)**

**ಶ್ರೀ ಸಂತೋಷ್ ಎಸ್ .ಲಾಡ್:- (ಗೊಂದಲ)** ನೀವು ಬಾಬಾ ಸಾಹೇಬರನ್ನು ಒಪ್ಪಿಕೊಂಡಿರಲಿಲ್ಲ.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್:-** ಮಾನ್ಯ ಸಭಾಪತಿಗಳೆ, . . . **(ಗೊಂದಲ)**

**ವೈಸ್ ಛೇರ್ಮನ್:-** ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ನೀವು ಮಧ್ಯದಲ್ಲಿ ಎದ್ದುನಿಂತು ಏಕೆ ಮಾತನಾಡುತ್ತಿದ್ದೀರಿ? ಮಾನ್ಯ ರವಿಕುಮಾರ್‌ರವರು ಮಾತನಾಡುತ್ತಿದ್ದಾರೆ. ಅವರು ವಿಷಯವನ್ನು ಮಂಡಿಸಲು ಸಮರ್ಥರಿದ್ದಾರೆ; ಹಾಗಿರುವಾಗ ಎಲ್ಲರೂ ಏಕೆ ನಿಂತು ಮಾತನಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಕೇಶವ ಪ್ರಸಾದ್:-** ಮಾನ್ಯ ಸಭಾಪತಿಗಳೆ, ಈ ವಿಷಯದಲ್ಲಿ ನಮಗಿಂತ ಹೆಚ್ಚು ಸರ್ಕಾರದ ಜವಾಬ್ದಾರಿ ಇರುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ನೀವು ನೇರವಾಗಿ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ನಾನು ನೇರವಾಗಿ ವಿಷಯದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಸುತ್ತಿ ಬಳಸಿ ಮಾತನಾಡುತ್ತಿಲ್ಲ.

**ಶ್ರೀ ಎ.ವಸಂತ ಕುಮಾರ್:- (ಗೊಂದಲ)** ಸದನದಲ್ಲಿ ಸುಮ್ಮನೆ ಪುಕ್ಕಟೆ ಪ್ರಚಾರ ಮಾಡುವಂತಹ ಕೆಲಸ ಮಾಡಬೇಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಇವತ್ತು ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನ ಮಾಡುತ್ತಾರೋ ನೋಡೋಣ. ನಾಳೆ ಎಲ್ಲಾ ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಬರುವುದನ್ನು ನಾವು ನೋಡುತ್ತೇವೆ. ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಶಿಕ್ಷಕರ ಹುದ್ದೆ, ಪೊಲೀಸ್ ಇಲಾಖೆಯಲ್ಲಿ ಮತ್ತು ಇತರ ಎಲ್ಲಾ ಇಲಾಖೆಗಳಲ್ಲೂ ಸಾಕಷ್ಟು ಹುದ್ದೆಗಳು ಖಾಲಿ ಇವೆ. ಅವುಗಳ ನೇಮಕಾತಿ ಆಗಬೇಕು ಎಂದರೆ ಒಳಮೀಸಲಾತಿ ನೀತಿಯನ್ನು ಸರ್ಕಾರ ಬೇಗ ಘೋಷಣೆ ಮಾಡಬೇಕು, ಅದನ್ನು ಜಾರಿಗೊಳಸಬೇಕೆಂದು ರಾಜ್ಯಾದ್ಯಂತ ಕಾಯುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದಿಂದ ಕೆಲವು ಸ್ಪಷ್ಟೀಕರಣ ಪಡೆಯಲು ಈ ಕುರಿತು ಚರ್ಚೆ ಮಾಡುತ್ತಿದ್ದೇವೆ. ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್ (ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಗಳೆ, 4 ವರ್ಷ ನೀವೇ ಅಧಿಕಾರದಲ್ಲಿದ್ದಿರಿ. ಆಗ ನಿಮಗೆ ಒಳಮೀಸಲಾತಿ ಬಗ್ಗೆ ನೆನಪು ಆಗಲಿಲ್ಲವೇ? 2018ರಲ್ಲಿ ಟಾಮ್ ಟಾಮ್ ಹೊಡೆದಿರಿ. ಪತ್ರಿಕೆಗಳ ಒಂದು ಪೇಜ್ ತುಂಬಾ ಜಾಹೀರಾತುಗಳನ್ನು ಕೊಟ್ಟಿರಿ.. . . .

**(ಗೊಂದಲ)**

**ಶ್ರೀ ಎ.ವಸಂತ ಕುಮಾರ್:-** ಮಾನ್ಯ ಸಭಾಪತಿಗಳೆ, ಇವರು ಒಳಮೀಸಲಾತಿ ಪರವಾಗಿದ್ದಾರೋ ಅಥವಾ ವಿರುದ್ಧವಾಗಿದ್ದಾರೋ ತಿಳಿಸಲಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ . . .

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರು ಈಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅವರು ಈಲ್ಡ್ ಆಗದೇ ತಾವು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಇವರು ಯಾರ ಪರ ಎನ್ನುವುದನ್ನು ಮೊದಲು ತಿಳಿಸಲಿ. ಅಡ್ಡಗೋಡೆಯ ಮೇಲೆ ದೀಪ ಇಡುವ ಹಾಗೆ ನಡೆದುಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ನಾನು ಮೀಸಲಾತಿ ಪರ ಇದ್ದೇವೆ. **(ಗೊಂದಲ)** ನೆಹರುರವರು ಮೀಸಲಾತಿ ವಿರುದ್ಧವಾಗಿ ಪತ್ರ ಬರೆದಿದ್ದರು. ಹಾಗಾಗಿ ನೀವು ಮೀಸಲಾತಿ ವಿರೋಧಿಗಳಾಗಿದ್ದೀರಿ. ನಾವು ಮೀಸಲಾತಿ ಪರವಾಗಿದ್ದೇವೆ. ಅದಕ್ಕಾಗಿ ಘೋಷಣೆ ಮಾಡಿದ್ದೇವೆ. ಎರಡೂವರೆ ವರ್ಷಗಳಾಗುತ್ತಿದ್ದರೂ ನಿಮ್ಮ ಕೈಯಿಂದ ಇನ್ನೂ ಮಾಡುವುದಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಎಸ್.ರವಿ:-** ನೀವು ಮಂಡಲದ ಪರವಾಗಿದ್ದೀರೋ; ಕಮಂಡಲದ ಪರವಾಗಿದ್ದೀರೋ? .

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ನಾವು ರೈತರ ಪರವಾಗಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಪುಟ್ಟಣ್ಣನವರು, ನೀವು ಯಾರ ಪರ ಎಂದು ಕೇಳಿದರು. ನಾವು ಮೀಸಲಾತಿ ಪರವಾಗಿದ್ದೇವೆ, ಒಳಮೀಸಲಾತಿ ಪರವಾಗಿದ್ದೇವೆ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎ. ವಸಂತ ಕುಮಾರ್:-** ಹಾಗಾದರೆ ಈ ಚರ್ಚೆ ಏಕೆ? ಈ ನಾಟಕ ಏಕೆ?

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್:-** ರಾಜ್ಯಸಭಾ ಸದಸ್ಯರಾಗಿದ್ದ ಶ್ರೀ ರಾಮ ಜೋಯಿಸ್‌ರವರು ಸುಪ್ರೀಂ ಕೋರ್ಟ್‌ನಲ್ಲಿ ಮೀಸಲಾತಿ ವಿರುದ್ಧ ಅರ್ಜಿ ಸಲ್ಲಿಸಿದ್ದರು. **(ಗೊಂದಲ)** ಅದರ ಬಗ್ಗೆ ನೀವು ಮಾತನಾಡುತ್ತೀರಾ? . . .

**ಶ್ರೀ ಸಿ.ಟಿ.ರವಿ:- ನೀವು** ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಸೋಲಿಸಿದಿರಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ಕಾಂಗ್ರೆಸ್‌ನವರು ಮೀಸಲಾತಿ ಪರ ಇದ್ದಾರೆಯೇ ಹೊರತು, ಬಿಜೆಪಿಯವರು ಅಲ್ಲ. **(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ ದಯವಿಟ್ಟು ಕುಳಿತುಕೊಳ್ಳಿ. ಹೇಳಿದ ಮಾತನ್ನು ನೀವು ಕೇಳಬೇಕು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಮಾತನಾಡಬಾರದೆಂದು ಈ ರೀತಿ ಮಧ್ಯದಲ್ಲಿ ಮಾತನಾಡಿ ಷಡ್ಯಂತ್ರ ಮಾಡುತ್ತಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:-** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ ನೀವು ಮಾತನಾಡಿ. ಟ್ರ್ಯಾಕ್ ತಪ್ಪದೇ ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ನಾನು ಮಾತನಾಡಲು ಪ್ರಾರಂಭ ಮಾಡಿದ್ದೇನೆ ಮತ್ತು ಟ್ರ್ಯಾಕ್ ಬಿಟ್ಟು ಹೋಗದೆ ಮಾತನಾಡುತ್ತೇನೆ. ನನ್ನನ್ನು ಟ್ರ್ಯಾಕ್‌ನಿಂದ ತಪ್ಪಿಸಲು ಸಾಧ್ಯವಿಲ್ಲ.

(ಮುಂದು)

(807) 19-8-2025 6.20 ಡಿಎಸ್-ಆರ್‌ಎನ್ (ವೈಸ್‌ಛೇರ್ಮನ್ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):-**

ಆಂಧ್ರ ಪ್ರದೇಶದಲ್ಲಿ, ತೆಲಂಗಾಣದಲ್ಲಿ ಜಾರಿಗೆ ತಂದಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ವಿಳಂಬ ಏಕೆ ಎನ್ನುವುದಕ್ಕೆ ಸರ್ಕಾರ ಉತ್ತರ ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಏಕೆ ವಿಳಂಬ ಧೋರಣೆ ಮಾಡುತ್ತಿದ್ದಾರೆ? ವಿಳಂಬ ಧೋರಣೆ ಏಕೆ ಎನ್ನುವುದಕ್ಕೆ ನಾನು ಸ್ಪಷ್ಟವಾಗಿ ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ನೀವೇ ರಚನೆ ಮಾಡಿರುವಂತಹ ಸಮಿತಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ರವಿಕುಮಾರ್‌ರವರೇ, ತೆಲಂಗಾಣದಲ್ಲಿ ಕಾಂಗ್ರೆಸ್‌ನವರೇ ಮಾಡಿರುವಂಥದ್ದು. **(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಂತೋಷ್ ಲಾಡ್‌ರವರೇ, ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಉತ್ತರ ಕೊಡಿ. **(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಎಂ.ಬಿ.ಪಾಟೀಲ್‌ರವರೇ, ಮಾನ್ಯ ಪುಟ್ಟಣ್ಣರವರೇ ಮಾನ್ಯ ರವಿಕುಮಾರ್‌ರವರಿಗೆ ಮಾತನಾಡುವುದಕ್ಕೆ ಬಿಡಿ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಅವರು ಎಲ್ಲೂ ಮಾಡಲಿಲ್ಲ. ನಾವು ಮಾಡಿದ ಮೇಲೆ ಕಾಪಿ ಮಾಡಿಕೊಂಡು ಒಂದು ಕಡೆ ಹರಿಯಾಣದಲ್ಲಿ ಮಾಡಿದ್ದಾರೆ. ಅದು ಬಿಟ್ಟರೆ ಅವರು ಇಡೀ ದೇಶದಲ್ಲಿ ಎಲ್ಲೂ ಮಾಡಲಿಲ್ಲ. ಅವರು ಮೀಸಲಾತಿಯ ವಿರೋಧಿಗಳು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಒಳ ಮೀಸಲಾತಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ, ನೀವು ಈ ಕಡೆ ಇದ್ದಾಗ ಚೆನ್ನಾಗಿದ್ದಿರಿ, ಏಕೆ ಅಲ್ಲಿಗೆ ಹೋಗಿ ಸಿಕ್ಕಿಹಾಕಿಕೊಂಡಿದ್ದೀರಿ? ಈಗ ನೀವು ಗರ್ಭಗುಡಿಯಿಂದ ಆಚೆ ಹೋಗಿದ್ದೀರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ನಾನು ಈಗ ನಿಮ್ಮ ರೀತಿ ಒದ್ದಾಡುತ್ತಿಲ್ಲ. ಈಗ ನಾನು ಫ್ರೀ ಬರ್ಡ್ ಆಗಿದ್ದೇನೆ. **(ಗೊಂದಲ)**

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ:-** ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮನ್ನು ಗರ್ಭಗುಡಿ ಒಳಗಡೆ ಬಿಡುವುದಿಲ್ಲ. ನೀವು ಹೊರಗಡೆ ನಿಲ್ಲಬೇಕು.

**(ಗೊಂದಲ)**

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, ಶಿಷ್ಟಾಚಾರದ ಪ್ರಕಾರ ಈ ದೇಶದ ರಾಷ್ಟ್ರಪತಿಯವರನ್ನು ಹೊಸ ಪಾರ್ಲಿಮೆಂಟ್ ಉದ್ಘಾಟನೆಗೆ ಕರೆದುಕೊಂಡು ಹೋಗಿಲ್ಲ. ಅವರು ಎಸ್.ಟಿ. ಜನಾಂಗದ ಮಹಿಳೆ ಎನ್ನುವ ಕಾರಣಕ್ಕಾಗಿ ಅವರನ್ನು ಹೊಸ ಪಾರ್ಲಿಮೆಂಟ್ ಉದ್ಘಾಟನೆಗೆ ಕರೆದುಕೊಂಡು ಹೋಗಿಲ್ಲ. ಇವರು ಮೀಸಲಾತಿ ಪರವಾಗಿದ್ದಾರೆಯೇ?

**ವೈಸ್ ಛೇರ್ಮನ್:-** ಮಾನ್ಯ ಸಂತೋಷ್ ಲಾಡ್‌ರವರೇ, ಅವರು ಮಾತನಾಡಲಿ, ತಾವು ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ನಾರಾಯಣಸ್ವಾಮಿಯವರೇ, ನೀವು ಈ ರೀತಿ ಮಾತನಾಡಲಿ ಎಂದು ನಿಮ್ಮನ್ನು ಇಟ್ಟುಕೊಂಡಿದ್ದಾರೆ. ನಾನು ಸುಳ್ಳು ಹೇಳುತ್ತಿಲ್ಲ, ನಾನು ಸತ್ಯವಾಗಿರುವುದನ್ನೇ ಹೇಳುತ್ತಿದ್ದೇನೆ. ಸತ್ಯವನ್ನೇ ನುಡಿಯುತ್ತಿದ್ದೇನೆ. (ಗೊಂದಲ)

**ಡಾ॥ ಎಂ.ಆರ್.ಸೀತಾರಾಂ:-** ನೀವೆಲ್ಲಾ ಮೀಸಲಾತಿ ವಿರೋಧಿ ಜನ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಏಕೆ ವಿಳಂಬ ಧೋರಣೆ ಮಾಡುತ್ತಿದೆ ಎನ್ನುವುದಕ್ಕೆ ಅನೇಕ ಕಾರಣಗಳಿವೆ. ನಾನು ಉದಾಹರಣೆಗೆ ಹೇಳುತ್ತೇನೆ, ಡಾ॥ ನಾಗಮೋಹನ್ ದಾಸ್‌ರವರ ಸಮಿತಿಯನ್ನು ರಚನೆ ಮಾಡಿದವರು ಯಾರು? ಇದೇ ನಮ್ಮ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ರಚನೆ ಮಾಡಿದೆ. ಅದಕ್ಕೆ ಕಾಂಗ್ರೆಸ್ ಪಕ್ಷದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ರಚನೆ ಮಾಡಿರುವಂತಹ ಡಾ॥ ನಾಗಮೋಹನ್ ದಾಸ್ ಸಮಿತಿಯವರಿಗೆ ಪೂರ್ತಿ ಸಹಕಾರವನ್ನು ಸರ್ಕಾರ ಕೊಡಬೇಕಾಗಿತ್ತು. ಡಾ॥ ನಾಗಮೋಹನ್ ದಾಸ್ ಸಮಿತಿಯವರು ಎಲ್ಲಾ ಇಲಾಖೆಗಳಿಗೆ ಡಾಟಾಗಳನ್ನು ಕೊಡಬೇಕೆಂದು ಒಂದು ಸಲ ಅಲ್ಲ, ಎರಡು ಸಲ ಪತ್ರ ಬರೆದಿದ್ದಾರೆ. ಇದುವರೆಗೂ 15 ಇಲಾಖೆಗಳಿಂದ ಡಾಟಾಗಳು ಡಾ॥ ನಾಗಮೋಹನ್ ದಾಸ್‌ರವರಿಗೆ ಸಿಕ್ಕಿಲ್ಲ. ಇವತ್ತು ಸಚಿವ ಸಂಪುಟ ಸಭೆ ಇದೆ. ಸುಮಾರು ಒಟ್ಟು ಇಲಾಖೆಗಳಲ್ಲಿ 15 ಇಲಾಖೆಗಳಿಂದ ಅವರಿಗೆ ಡಾಟಾಗಳೇ ಸಿಕ್ಕಿಲ್ಲ. ಅವರು ಅಂಗಲಾಚಿ ಬೇಡಿಕೊಂಡರೂ ಡಾಟಾ ಸಿಕ್ಕಿಲ್ಲ. ಒಂದೊಂದು ಇಲಾಖೆಗೂ ಎರಡು ಪತ್ರಗಳನ್ನು ಬರೆದಿದ್ದಾರೆ. ಡಾಟಾ ಸಿಕ್ಕಿಲ್ಲ. ಇವತ್ತು ಸಚಿವ ಸಂಪುಟ ಸಭೆ ಇದೆ, ನಾಳೆ ವರದಿ ಬರಲಿ. 1951ನೇ ಇಸವಿಯಲ್ಲಿ ಲೋಕಸೇವಾ ಆಯೋಗ ರಚನೆಯಾಗುತ್ತದೆ. ಲೋಕಸೇವಾ ಆಯೋಗದಿಂದ ಯಾವ ಡಾಟಾವನ್ನು ತೆಗೆದುಕೊಂಡಿದ್ದಾರೆ? ಡಾ॥ ನಾಗಮೋಹನ ದಾಸ್ ರವರ ಸಮಿತಿ ಲೋಕಸೇವಾ ಆಯೋಗದಿಂದ ಡಾಟಾವನ್ನು ತೆಗೆದುಕೊಂಡಿದೆಯೇ?

ಡಾಟಾವನ್ನು ತೆಗೆದುಕೊಂಡಿದ್ದರೆ ಯಾವ್ಯಾವ ಜಾತಿಗೆ ಯಾವ್ಯಾವ ಮೀಸಲು ಹುದ್ದೆಗಳು ಎಷ್ಟೆಷ್ಟು ಪ್ರಮಾಣದಲ್ಲಿ ಸಿಕ್ಕಿದೆ? ಕೆ.ಎ.ಎಸ್., ಐ.ಎ.ಎಸ್., ಐ.ಪಿ.ಎಸ್. ತೆಗೆದುಕೊಳ್ಳಿ. ಆಮೇಲೆ ಎಲ್ಲಾ ವರ್ಗದ ಹುದ್ದೆಗಳನ್ನು ತೆಗೆದುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಕೇಂದ್ರ ಸರ್ಕಾರದಿಂದ ಜನಗಣತಿಯನ್ನು ಮಾಡುತ್ತಿದ್ದಾರೆ. ಅವರಿಗೆ ತಾಕತ್ ಇದ್ದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವನ್ನು ಆ ಜನಗಣತಿಯಲ್ಲಿ ಸೇರಿಸುವುದಕ್ಕೆ ಹೇಳಿ ನೋಡೋಣ?

(ಗೊಂದಲ)

**ವೈಸ್ ಛೇರ್ಮನ್:-** ಮಾನ್ಯ ಎಂ.ಬಿ.ಪಾಟೀಲ್‌ರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ ಪ್ರಶ್ನೆಯನ್ನು ಕೇಳುತ್ತೇನೆ. ನಾನು ಈ ವಿಚಾರವನ್ನು ಹೇಳಿದ್ದಕ್ಕೆ ನೀವು ಕೇಂದ್ರ ಸರ್ಕಾರದಲ್ಲಿ ತಂದುಬಿಡಿ ಎಂದು ಹೇಳುತ್ತಾರಲ್ಲಾ ಇದು ಉತ್ತರವೇ? ನಮ್ಮ ಕಡೆಯಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆಯೇ? ಇದು ಮಾನ್ಯ ಎಂ.ಬಿ.ಪಾಟೀಲ್‌ರವರ ಉತ್ತರವೇ?

**ಶ್ರೀ ಎಂ.ಬಿ.ಪಾಟೀಲ್:-** ನೀವು ಮಾನ್ಯ ನರೇಂದ್ರ ಮೋದಿಯವರನ್ನು, ಮಾನ್ಯ ಅಮಿತ್ ಶಾ ರವರನ್ನು ಅಭಿನಂದಿಸುವಾಗ ಎಲ್ಲಿ ಹೋಗಿತ್ತು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಂದೆ ನನ್ನ 5-6 ಪ್ರಶ್ನೆಗಳಿವೆ. ಕರ್ನಾಟಕ ರಾಜ್ಯದಲ್ಲಿ ಅದು ಎಲ್ಲಾ ಇಲಾಖೆಗಳನ್ನು ಸೇರಿಕೊಂಡು ಎಷ್ಟು ಮೀಸಲಾತಿ ಹುದ್ದೆಗಳಿವೆ, ಯಾವ್ಯಾವ ಜಾತಿಗಳಿಗೆ ಎಷ್ಟೆಷ್ಟು ಸಿಕ್ಕಿವೆ, ಯಾವ್ಯಾವ ಜಾತಿಗಳಿಗೆ ಎಷ್ಟೆಷ್ಟು ಪ್ರಾತಿನಿಧ್ಯ ಸಿಕ್ಕಿದೆ? ಇವೆಲ್ಲದರ ಆಧಾರದ ಮೇಲೆ ಯಾವ್ಯಾವ ಜಾತಿಗಳು ಎಷ್ಟೆಷ್ಟು ಪ್ರಮಾಣದಲ್ಲಿ ಹಿಂದುಳಿದಿವೆ, ಆ ಒಂದು ಆಧಾರವನ್ನು ತೆಗೆದುಕೊಂಡು, ಡಾಟಾವನ್ನು ತೆಗೆದುಕೊಂಡು ಸಾಮಾಜಿಕ ನ್ಯಾಯವನ್ನು ಕೊಡಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,....

**ವೈಸ್ ಛೇರ್ಮನ್:-** ಮಾನ್ಯ ಪುಟ್ಟಣ್ಣರವರೇ, ಅವರು ಮಾತನಾಡಲಿ, ನೀವು ಅಮೇಲೆ ಮಾತನಾಡಿ.

**(ಗೊಂದಲ)**

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಪುಟ್ಟಣ್ಣರವರೇ, ಮಾನ್ಯ ರವಿಕುಮಾರ್‌ರವರಿಗೆ ಮಾತನಾಡುವುದಕ್ಕೆ ಬಿಡಿ. ನೀವು ಅಮೇಲೆ ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಗುಜರಾತ್‌ನಲ್ಲಿ ಏನು ಮಾಡಿದರು ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಪುಟ್ಟಣ್ಣರವರೇ, ಆಮೇಲೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಮಾತನಾಡಿ, ಈಗ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣರವರು ಕಳೆದ ಬಾರಿಯೂ ಕೂಡ ಇಡೀ ಅಧಿವೇಶನವನ್ನು ಹಾಳು ಮಾಡಿದರು. ಪೀಠ ಅವಕಾಶ ಕೊಟ್ಟರೆ ಗುಜರಾತ್‌ರವರನ್ನು ಕರೆಯಿಸಿ ಇಲ್ಲಿ ನಿಲ್ಲಿಸಿ ಅವರಿಗೆ ಉತ್ತರ ಕೊಡಿಸೋಣ.

**ಶ್ರೀ ಎಸ್.ರವಿ:-** ಅವರನ್ನು ಕರೆದುಕೊಂಡು ಬರುವುದೇನು ಬೇಡ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಆದರೆ ಇಲ್ಲಿ ಪದೇಪದೇ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಮನಸ್ಸು ಮಾಡಿದರೆ ಎಲ್ಲಾ ಡಾಟಾಗಳನ್ನು ತರಿಸಿಕೊಳ್ಳಬಹುದು.

**ಶ್ರೀ ಪುಟ್ಟಣ್ಣ:-** ನಾನು ಮಾಹಿತಿಗೋಸ್ಕರ ಕೇಳಿದೆ. ನಿಮಗೆ ಪೂರ್ತಿಯಾಗಿ ಸರಕು ಕೊಟ್ಟಿದ್ದಾರಲ್ಲಾ ಅದನ್ನು ತಿಳಿದುಕೊಳ್ಳೋಣವೆಂದು ಕೇಳಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಡಾ॥ ನಾಗಮೋಹನ್ ದಾಸ್ ಸಮಿತಿ ರಚನೆಯಾಗುವುದಕ್ಕಿಂತ ಮುಂಚೆ ನಾವು ಸರ್ಕಾರ ರಚನೆಯಾಗಿ ಕೆಲವೇ ತಿಂಗಳುಗಳಲ್ಲಿ ಒಳ ಮೀಸಲಾತಿಯನ್ನು ಜಾರಿಗೊಳಿಸುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ಈಗ ಸರ್ಕಾರ ರಚನೆಯಾಗಿ ಎರಡು ವರ್ಷಗಳಿಗಿಂತ ಜಾಸ್ತಿಯಾಗಿದೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಹರಿಯಾಣ ಸರ್ಕಾರ, ಆಂಧ್ರ ಪ್ರದೇಶದ ಎನ್‌ಡಿಎ ಸರ್ಕಾರ, ತೆಲಂಗಾಣ ಸರ್ಕಾರ, ಈ ಮೂರು ಸರ್ಕಾರಗಳು ಒಳ ಮೀಸಲಾತಿಯನ್ನು ಜಾರಿಗೆ ತಂದಿವೆ. ನಾವು ಒಳ ಮೀಸಲಾತಿಯನ್ನು ಅಧಿಕಾರಕ್ಕೆ ಬಂದ 2-3 ತಿಂಗಳುಗಳಲ್ಲಿ ಜಾರಿಗೊಳಿಸುತ್ತೇವೆಂದು ಇವರು ಯಾರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರಲಿಲ್ಲ. ಆದರೆ, ನಮ್ಮ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ 3 ತಿಂಗಳುಗಳಲ್ಲಿ ಜಾರಿಗೊಳಿಸುತ್ತೇವೆಂದು ಹೇಳಿ, ಈಗ ಎರಡು ವರ್ಷಗಳಾದರೂ ಕೂಡ ಜಾರಿಗೆ ತರಲಿಲ್ಲ.

**ಶ್ರೀ ಪುಟ್ಟಣ್ಣ:-** ಗುಜರಾತ್ ಬೇರೆ ದೇಶದಲ್ಲಿ ಇದೆಯೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಏನು ತೊಂದರೆ? ಎಲ್ಲೋ ಒಂದು ಕಡೆ ನನಗನಿಸುತ್ತಿದೆ, ಡಾ॥ ನಾಗಮೋಹನ್ ದಾಸ್‌ರವರಿಗೆ ಸಂಪೂರ್ಣ ಸಹಕಾರ ಸಿಕ್ಕಿಲ್ಲ. ಎಲ್ಲಾ ಟಿ.ವಿ.ಗಳಲ್ಲಿ, ಪತ್ರಿಕೆಗಳಲ್ಲಿ ಬಂದಿದೆ.

(ಮುಂದು)

(೪೦೪) 19/08/2025 6:30 ಎಸ್‌ಪಿಆರ್/ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್(ಮುಂದು):-**

115 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಮಾಡಿರುವ ಸರ್ವೆ ಸರಿಯಾಗಿಲ್ಲ. ಮನೆಗಳಲ್ಲಿ ಚೀಟಿಗಳನ್ನು ಅಂಟಿಸಿ ಬಂದಿದ್ದಾರೆ. ಇದು ಎಲ್ಲಾ ಟಿ.ವಿ. ಮತ್ತು ಪೇಪರ್‌ಗಳಲ್ಲಿ ವರದಿಯಾಗಿದ್ದು, ಅದನ್ನು ನಾವು ನೋಡಿದ್ದೇವೆ. ಈಗ ನಾನು ಮೂರನೆಯ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಜಾರಿಗೊಳಿಸಲಾಗಲಿಲ್ಲ. ಇದಕ್ಕೆ ಇರುವ ತೊಂದರೆ ಏನು? ಅದನ್ನು ಹೇಳಬೇಕೆಂದು ನಾನು ಕೇಳುತ್ತೇನೆ. ಶ್ರೀ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ....

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು ಈ ಮೊದಲು ಆಡಳಿತದ ಪಕ್ಷದಲ್ಲಿದ್ದರು; ನಂತರದಲ್ಲಿ ಅವರನ್ನು ವಿರೋಧ ಪಕ್ಷದ ಸ್ಥಾನಕ್ಕೆ ತೆಗೆದುಕೊಂಡು ಹೋಗಲಾಯಿತು; ಈ ಕಾರಣಕ್ಕಾಗಿ ಅವರನ್ನು ಅಭಿನಂದಿಸಬೇಕು.

**ವೈಸ್ ಛೇರ್ಮನ್:-** ಮಾನ್ಯ ಪುಟ್ಟಣ್ಣನವರೇ, ಸುಮ್ಮನಿರಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾನು ಹೇಳಿದೆ ಅಷ್ಟೇ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಹಿಂದೆ ಶ್ರೀ ಸಿದ್ಧರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ನಾವು ಒಳಮೀಸಲಾತಿಯ ವರ್ಗೀಕರಣ ಮಾಡುವುದಕ್ಕೆ...., ನಾವು 17 ಪ್ರತಿಶತದಿಂದ ವರ್ಗೀಕರಣವನ್ನು ಮಾಡಿದ್ದೆವು. ಯಾವ ಯಾವ ಸಮುದಾಯಕ್ಕೆ ಎಷ್ಟೆಷ್ಟು ಎಂದು ನಾನು ಹೇಳುತ್ತೇನೆ. ಈ ಹಿಂದೆ ಇವರೇ ಆ 17 ಪ್ರತಿಶತ ಮೀಸಲಾತಿಗೆ ವಿರೋಧ ಮಾಡಿದ್ದರು. ಭಾರತದ ಸಂವಿಧಾನದ ಪ್ರಕಾರ ಕೇವಲ 15 ಪ್ರತಿಶತ ಎಸ್.ಸಿ. ಸಮುದಾಯಕ್ಕೆ ಇದೆ. ಆದರೆ ನಾವು ಇದನ್ನು 17 ಪ್ರತಿಶತಕ್ಕೆ ಹೆಚ್ಚಳ ಮಾಡಿದ್ದೇವೆ. ಹೀಗಾಗಿ ಎಸ್.ಸಿ. ಸಮುದಾಯದವರಿಗೆ 15 ಪ್ರತಿಶತದಿಂದ 17 ಪ್ರತಿಶತಕ್ಕೆ; ಹಾಗೂ ಎಸ್.ಟಿ. ಸಮುದಾಯಕ್ಕೆ 3 ಪ್ರತಿಶತದಿಂದಾಗಿ 7 ಪ್ರತಿಶತದವರೆಗೆ ಮೀಸಲಾತಿಯನ್ನು ನೀಡಿದ್ದೇವೆ. ಹೀಗಾಗಿ ನಾನು ಶ್ರೀ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಈಗ ನಾನು ಸರ್ಕಾರಕ್ಕೆ ಕೇಳಬಯಸುವುದೇನೆಂದರೆ,...

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಶ್ರೀ ರವಿಕುಮಾರ್ ರವರನ್ನು ಹೇಗೆ ಮಾಡಿದ್ದಾರೆ? ಬಹಳಷ್ಟು ಅಂಕಿ-ಅಂಶಗಳನ್ನು ಇಟ್ಟುಕೊಂಡು ಅವರು ಮಾತನಾಡುತ್ತಿದ್ದಾರೆ. ಆದರೆ ಅವರನ್ನು ಮೂಲೆಗೆ ತಳ್ಳಿದ್ದಾರೆ. ಇದನ್ನು ನೋಡಿ ನನಗೆ ಹೊಟ್ಟೆ ಉರಿಯುತ್ತಿದೆ. ಇವರ ಮೇಲೆ ಎಂತಹ ಷಡ್ಯಂತ್ರ ಮಾಡಿದ್ದಾರೆ. ನಾವುಗಳೆಲ್ಲರೂ ಅವರ ಪರವಾಗಿ ಇದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಸಾಮಾಜಿಕದ ನ್ಯಾಯದ ಪರವಾಗಿ ಇರುವ, ಡಾ॥ ಬಿ.ಆರ್.ಅಂಬೇಡ್ಕರ್ ರವರ ಪರವಾಗಿ ಇರುವ, ಒಳ ಮೀಸಲಾತಿ ಪರವಾಗಿ ಇರುವ ಭಾರತೀಯ ಜನತಾ ಪಕ್ಷದ ಶ್ರೀ ಬಸವರಾಜ ಬೊಮ್ಮಾಯಿ ರವರು, ಶ್ರೀ ಮಾಧುಸ್ವಾಮಿ ರವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಿದ್ದರು.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ(ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೆ, ಶ್ರೀ ಮಾಧುಸ್ವಾಮಿ ರವರ ವರದಿಯು ಅನ್ಯಾಯವಾಗಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಅದರಲ್ಲಿ ಶ್ರೀ ಮಾಧುಸ್ವಾಮಿ ರವರು ನಾಲ್ಕು ಅಂಶಗಳನ್ನು ತಿಳಿಸಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಇವರು ಸದಾಶಿವ ಆಯೋಗವು ನೀಡಿರುವ ವರದಿಯನ್ನು ಏಕೆ ತಿರಸ್ಕರಿಸಿದರು? ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಎನ್ನುವುದರ ಬಗ್ಗೆಯೂ ಸಹ ತಿಳಿಸಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನೀವು ನಾಳೆಯ ಬೆಳಗ್ಗೆ ಮಾತನಾಡಿ; ಆಗ ನಿಮಗೆ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, **(ಗೊಂದಲ)** ಏನು ಮಾಡುವುದಕ್ಕೆ ಬರುತ್ತದೆ ಎನ್ನುವುದು ನಿಮಗೆ ಗೊತ್ತಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಾವು ಸರ್ಕಾರದ ಪರವಾಗಿ ಇದ್ದೇವೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ನೀವು ವಿರೋಧ ಪಕ್ಷದವರು ಯಾವ ಸಮಸ್ಯೆ ಹಾಗೂ ಯಾವ ಸಮಾಜದ ಪರವಾಗಿದ್ದಾರೆ ಎಂಬುದು ತಿಳಿಸಲಿ.

**(ಗೊಂದಲ)**

**ಶ್ರೀ ಎ.ವಸಂತ ಕುಮಾರ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಅವರಿಗೆ ಸಂಪೂರ್ಣ ಸಹಕಾರ ಕೊಡುತ್ತದೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ನಾವು ಮಾಡಿದ್ದೇವೆ ಎಂದು ಅವರು ಹೇಳುತ್ತಾರೆ; ಹೀಗಾಗಿ ಅವರು ಏನು ಮಾಡಿದ್ದಾರೆ ಎನ್ನುವುದನ್ನು ತಿಳಿಸಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಶ್ರೀ ಮಾಧುಸ್ವಾಮಿ ರವರ ನೇತೃತ್ವದ ಸಮಿತಿಯು ನಾಲ್ಕು ಅಂಶಗಳನ್ನು ಹೇಳಿದೆ. ಮಾದಿಗ ಜಾತಿಗಳಿಗೆ ಶೇಕಡಾ 6; ಹೊಲೆಯ ಜಾತಿಗಳಿಗೆ ಶೇಕಡಾ 5.5; ಬೋವಿ, ಲಂಬಾಣಿ, ಕೊರಮ, ಕೊರಚ ಸಮುದಾಯಗಳಿಗೆ ಶೇಕಡಾ 4.5 ಹಾಗೂ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಶೇಕಡಾ 1. ಒಟ್ಟಾರೆಯಾಗಿ ಶೇಕಡಾ 17 ಆಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಅವರು ಮಾಡಿದ್ದಾರೆ; ಆಗ ಕೇಂದ್ರದಲ್ಲಿಯೂ ಸಹ ಅವರದ್ದೇ ಪಕ್ಷದ ಸರ್ಕಾರವು ಇತ್ತು. ಹೀಗಾಗಿ ಇಬ್ಬರಿಗೂ ಶಹಭಾಸ್‌ಗಿರಿಯನ್ನು ಕೊಡುತ್ತೇವೆ. **(ಗೊಂದಲ)** ಆಗ ಅಫಿಡವಿಟ್ ಅನ್ನು ಹಾಕಿದರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಆಗ ಜಾರಿಗೆ ಬರುವಾಗ...,

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಆಗ ಡಬಲ್ ಇಂಜಿನ್ ಸರ್ಕಾರವಿತ್ತು.

**(ಗೊಂದಲ)**

**ವೈಸ್ ಛೇರ್ಮನ್:-** ಹೀಗೆ ಪ್ರತಿಯೊಂದಕ್ಕೂ ಮಧ್ಯದಲ್ಲಿ ಮಾತನಾಡಬೇಡಿ. ಅವರು ಮಾತನಾಡುತ್ತಾರೆ; ಹೀಗಾಗಿ ನೀವುಗಳು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಚುನಾವಣೆಗಾಗಿ ...,

**(ಗೊಂದಲ)**

**ಶ್ರೀ ಹೆಚ್.ಪಿ.ಸುಧಾಮ ದಾಸ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಮೀಸಲಾತಿಯ ವಿರೋಧಿಯಾಗಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಈ ನಾಲ್ಕೂ ಅಂಶಗಳನ್ನು ಸೇರಿಸಿದರೆ, ಎಸ್.ಸಿ. ಸಮುದಾಯಕ್ಕೆ ಒಟ್ಟು 17 ಪ್ರತಿಶತ ಆಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಶ್ರೀ ರವಿಕುಮಾರ್ ರವರೇ, ನೀವು ಮಾತನಾಡುವುದು ಸರಿಯೋ ಅಥವಾ ವಿರೋಧ ಪಕ್ಷದ ನಾಯಕರು ಮಾತನಾಡುವುದು ಸರಿಯೋ? ನಿಮ್ಮಲ್ಲೇ ಗೊಂದಲಗಳಿವೆ. ಆ ಗೊಂದಲಗಳನ್ನು ನಿವಾರಿಸಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ....

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಚುನಾವಣೆಗೋಸ್ಕರ...

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಅವರು ಶೇಕಡಾ 6 ರಷ್ಟು ನೀಡಿದ್ದೇವೆ; ಅದು ಸರಿಯಾಗಿದೆ ಎಂದು ಹೇಳುತ್ತಾರೆ. ನೀವಿಬ್ಬರು ಮಾತನಾಡಿಕೊಂಡು ಯಾರದ್ದು ಸರಿಯಾಗಿದೆ ಎನ್ನುವುದನ್ನು ಕ್ಲಿಯರ್ ಮಾಡಿ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೆ, ಶ್ರೀ ತಿಮ್ಮಾಪೂರ ರವರು ಹೇಳಿರುವುದಕ್ಕೆ ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅವರು ಚುನಾವಣೆಯಲ್ಲಿ....,

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಹೇಳುವುದನ್ನು ಶ್ರೀ ರವಿಕುಮಾರ್ ರವರು ಕೇಳಬೇಕು. ಇದು ಗಮನ ಸೆಳೆಯುವ ಸೂಚನೆಯ ಕಲಾಪವಾಗಿದ್ದು, ಇದಕ್ಕೆ ನಿಗದಿತ

ಸಮಯಾವಕಾಶವಿದೆ. ಈ ವಿಚಾರವಾಗಿ ಈಗಾಗಲೇ ಒಂದೂ ಕಾಲು ಗಂಟೆಗಳಷ್ಟು ಸಮಯವಾಗಿದೆ. ಸಾಮಾನ್ಯವಾಗಿ ಅರ್ಧ ಅಥವಾ ಮುಕ್ಕಾಲು ಗಂಟೆಗಳ ಅವಧಿಯಲ್ಲಿ ನಾವು ನಿಯಮ 330 ರಡಿ ಚರ್ಚೆಯು ಮುಗಿದುಹೋಗುತ್ತದೆ. ಹೀಗಾಗಿ ಇವರಿಗೆ ಇನ್ನೂ ಎಷ್ಟು ಸಮಯಾವಕಾಶ ಬೇಕು ಎನ್ನುವುದನ್ನು ಹೇಳಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನನಗೆ ಇನ್ನೂ ಒಂದೂವರೆ ಗಂಟೆಗಳ ಸಮಯಾವಕಾಶ ಬೇಕು.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಅವರಿಗೆ ಮಾತನಾಡಲು ಅವಕಾಶವನ್ನು ನೀಡಿದರೆ ಅವರು ಮಾತನಾಡುತ್ತಾರೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಅವರು ಒಂದೂ ಕಾಲು ಗಂಟೆಯಿಂದ ಮಾತನಾಡುತ್ತಿದ್ದು, ಇನ್ನೂ ಎಷ್ಟು ಸಮಯ ಬೇಕು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಇಡೀ ರಾಜ್ಯ ಮತ್ತು ಕೋಟ್ಯಾಂತರ ಜನರು ಇದನ್ನು ನೋಡುತ್ತಿದ್ದಾರೆ. ಹೀಗಾಗಿ ದಯಮಾಡಿ ತಾವು ಇನ್ನೂ ಸಮಯಾವಕಾಶವನ್ನು ನೀಡಬೇಕು.

**ವೈಸ್ ಛೇರ್ಮನ್:-** ನಿಮಗೆ ಇನ್ನೂ ಎಷ್ಟು ಸಮಯ ಬೇಕು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಕಳೆದ ನಾಲ್ಕು ದಿನಗಳಿಂದ ಬಕ ಪಕ್ಷಿಗಳಂತೆ ಸಮಯವನ್ನು ಕೇಳುತ್ತಲೇ ಇದ್ದೇನೆ. ನನಗೆ ಇನ್ನೂ ಒಂದು ಗಂಟೆಗಳ ಸಮಯಾವಕಾಶ ಬೇಕು.

**ವೈಸ್ ಛೇರ್ಮನ್:-** ನಿಮ್ಮನ್ನು ಹೊರತುಪಡಿಸಿ, ಇನ್ನೂ ನಾಲ್ಕು ಜನರು ಮಾತನಾಡುವವರಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಮಗೆಲ್ಲರಿಗೂ ಸೇರಿ ಇನ್ನೂ ಒಂದೂವರೆ ಗಂಟೆ ಸಮಯಾವಕಾಶ ಬೇಕು. **(ಗೊಂದಲ)** ಈ ವಿಷಯವನ್ನು ನಾವು ಕಳೆದ ನಾಲ್ಕು ದಿನಗಳಿಂದ ಹೇಳುತ್ತಿದ್ದೇವೆ. ಇದನ್ನು ನಾವು ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಇಡೀ ರಾಜ್ಯದಲ್ಲಿ ....

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನನ್ನದೊಂದು ಆಶಯವಿದೆ. ಶ್ರೀ ರವಿ ಕುಮಾರ್, ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ ರವರುಗಳು ಇಷ್ಟೆಲ್ಲಾ ಮಾತನಾಡುತ್ತಾರೆ, 2033 ಕ್ಕಾದರೂ ಬಿ.ಜೆ.ಪಿ. ಸರ್ಕಾರವು ಅಧಿಕಾರಕ್ಕೆ ಬಂದರೆ, ಅವರನ್ನು ಮಂತ್ರಿ ಮಾಡಬೇಕು. **(ಗೊಂದಲ)** ಇವರುಗಳು ಇಷ್ಟೆಲ್ಲಾ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಇಂಟರ್ನಲ್ ರಿಪೇರ್‌ಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ಮಾಡಿಸಿರುವ ಸರ್ವೆಯಂತೆ ಇವತ್ತಿನ ದಿವಸ ಚುನಾವಣೆ ನಡೆದರೂ ಸಹ ಭಾರತೀಯ ಜನತಾ ಪಕ್ಷವೇ ಅಧಿಕಾರಕ್ಕೆ ಬರುತ್ತದೆ ಎಂದು ನಿಮ್ಮ ಪಕ್ಷದ ಸರ್ವೆ ಹೇಳುತ್ತಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಆ ರೀತಿಯಾದ ವರದಿ ಯಾವುದೂ ಇಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀ ಪುಟ್ಟಣ್ಣನವರೇ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎ.ವಸಂತ ಕುಮಾರ್:-** ಮಾನ್ಯ ಸಭಾಪತಿಯವರೆ, ಅವರು ಮಂತ್ರಿಗಳಾಗುತ್ತಾರೆ ಎಂದು ಬಹಳ ಉತ್ಸಾಹದಲ್ಲಿದ್ದಾರೆ.

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ಶ್ರೀ ರವಿಕುಮಾರ್ ರವರೇ, ಯಾವ ಮುಖ ಇಟ್ಟುಕೊಂಡು ಚುನಾವಣೆಯನ್ನು ಮಾಡುತ್ತಾರೆ ಎಂದು ಹೇಳಬೇಕು.

**ವೈಸ್ ಛೇರ್ಮನ್:-** ಶ್ರೀ ಶ್ರೀನಿವಾಸ್ ಮತ್ತು ಶ್ರೀ ಪುಟ್ಟಣ್ಣ ರವರೇ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾವು ಅವರನ್ನು ಹೊಗಳುತ್ತಿದ್ದೇನೆ. ಅವರು ಖುಷಿ ಪಡಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಎರಡು ತಿಂಗಳಿನಲ್ಲಿ ವರದಿಯನ್ನು ನೀಡಲು ಸೂಚಿಸಲಾಗಿತ್ತು.

**ವೈಸ್ ಛೇರ್ಮನ್:-** ಶ್ರೀ ರವಿಕುಮಾರ್ ರವರೇ, ನೀವು ಬೇಗ ಮುಗಿಸಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನ್ಯಾಯಮೂರ್ತಿ ನಾಗಮೋಹನ್ ದಾಸ್ ರವರು ದಿನಾಂಕ 04/08/2025 ಕ್ಕೆ ವರದಿ ನೀಡಿ, ಜನಸಂಖ್ಯೆ ಹಾಗು ಹಿಂದುಳಿದಿರುವಿಕೆಯ ಆಧಾರದ ಮೇಲೆ ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. ಐದು ಜಾತಿಗಳಿಗೆ ಎಷ್ಟು ಶೇಕಡಾವಾರು ಮೀಸಲಾತಿಯನ್ನು ಕೊಟ್ಟಿದ್ದಾರೆ ಎಂದು ಕೇಳುತ್ತೇನೆ. ನಾನು ಈಗ ಶ್ರೀ ಮಾಧುಸ್ವಾಮಿ ರವರ ಸಮಿತಿಯು ನೀಡಿರುವ ಮೀಸಲಾತಿಯ ಮಾಹಿತಿಯನ್ನು ಹೇಳಿದ್ದೇನೆ. (ಮುಂದು)

(809)19-08-2025/6-40/bkp-vk (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):-**

ನ್ಯಾಯಮೂರ್ತಿ ನಾಗಮೋಹನ್ ದಾಸ್ ಕಮಿಟಿ ಏನು ಹೇಳಿದೆ, ಅದು ಎಲ್ಲಾ ಪೇಪರ್‌ಗಳಲ್ಲಿ ಮತ್ತು ಟಿ.ವಿಗಳಲ್ಲಿ ಬಂದಿದೆ. ಅದರ ಪ್ರಕಾರ ಹೇಳುವುದಾದರೆ ಆ ಕಮಿಟಿಯ ವರದಿಯನ್ನು ಅವರು ಒಪ್ಪಿಕೊಳ್ಳುತ್ತಾರೋ ಬಿಡುತ್ತಾರೋ ಅದು ನನಗೆ ಗೊತ್ತಿಲ್ಲ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಕಮಿಟಿ ಏನು ಹೇಳಿದೆ ಎಂದರೆ ಮಾದಿಗ ಸಮುದಾಯಕ್ಕೆ 6% ಶ್ರೀ ಜೆ.ಸಿ. ಮಾದುಸ್ವಾಮಿಯವರು ಸಹ 6% ಎಂದು ಹೇಳಿದ್ದಾರೆ. ಹಿಂದುಳಿದ ಹೊಲೆಯ ಸಮುದಾಯಕ್ಕೆ ಶ್ರೀ ಜೆ.ಸಿ. ಮಾದುಸ್ವಾಮಿಯವರ ಕಮಿಟಿ 5.5% ಎಂದು ಹೇಳಿದ್ದು, ಇವರು 5% ಎಂದು ಹೇಳುತ್ತಿದ್ದಾರೆ. ಭೋವಿ, ಲಂಬಾಣಿ, ಕೊರಚ, ಕೊರಮ ಸಮುದಾಯಗಳಿಗೆ 4%. ಶ್ರೀ ಜೆ.ಸಿ. ಮಾಧುಸ್ವಾಮಿಯವರ ಕಮಿಟಿ 4.5% ಎಂದು ಹೇಳಿದೆ. ಅತ್ಯಂತ ಹಿಂದುಳಿದ ಅಸ್ಪೃಶ್ಯ ಸಮುದಾಯಗಳಿಗೆ ಶೇಕಡ 1%. ಶ್ರೀ ಜೆ.ಸಿ. ಮಾಧುಸ್ವಾಮಿಯವರ ಕಮಿಟಿಯು ಸಹ 1% ಎಂದು ಹೇಳಿದ್ದಾರೆ. ಮೂಲ ಜಾತಿಗಳ ತಿಳಿಯಪಡಿಸದಿರುವ ಆದಿ ದ್ರಾವಿಡ, ಆದಿ ಕರ್ನಾಟಕ ಜಾತಿಗಳಿಗೆ ಶೇಕಡ 1%. ಇವರು 5 ವರ್ಗಗಳನ್ನು ಮಾಡಿದ್ದಾರೆ. ನಾವು 4 ವರ್ಗಗಳನ್ನು ಮಾಡಿದ್ದೇವೆ. ಈಗ ಪ್ರಶ್ನೆ ಏನೆಂದರೆ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಕಮಿಟಿ ರಚನೆಯನ್ನು ನೀವು ಒಪ್ಪಿಕೊಳ್ಳುತ್ತೀರಾ? ಇವರು ಏನು ಹೇಳಿದ್ದಾರೆ, ಇದನ್ನು ನೀವು ಒಪ್ಪಿಕೊಳ್ಳುತ್ತೀರಾ? ಒಪ್ಪಿಕೊಳ್ಳುತ್ತಿರಾ ಎನ್ನುವುದಾದರೆ, ಸರ್ಕಾರದವರು ಒಪ್ಪಿಕೊಳ್ಳುತ್ತೇವೆಂದು ಹೇಳಬೇಕು. ಎರಡನೆಯದಾಗಿ, ಮಾನ್ಯ ಸಿದ್ದರಾಮಯ್ಯನವರು 17% ಎಂದು ಹೇಗೆ ವರ್ಗೀಕರಣ ಮಾಡಿದ್ದಾರೆ?

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಗಂಭೀರವಾಗಿ ಹೇಳುತ್ತಿದ್ದೇನೆ. ನನಗೆ ಮಾತನಾಡಲು ಒಂದು ನಿಮಿಷ ಅವಕಾಶವನ್ನು ಕೊಡಬೇಕು.

**ಶ್ರೀ ಎನ್.ರವಿಕುಮಾರ್:-** ಇದನ್ನು 17% ಎನ್ನುವುದರ ಬದಲಿಗೆ 15% ಎಂದು ಹೇಳಬೇಕಾಗಿತ್ತು. ಹಾಗಾಗಿ, ನಾನು ಇವತ್ತು ಏನು ಹೇಳುತ್ತಿದ್ದೇನೆಂದರೆ

**ಶ್ರೀ ಎಂ.ಬಿ.ಪಾಟೀಲ್:-** ಇವತ್ತು ಇವರು 17% ಎಂದು ಇವರು ಏನು ಹೇಳುತ್ತಿದ್ದಾರೆ, ಇದು 50% exceed ಆಗುತ್ತದೆ. ಒಂದನೆಯದಾಗಿ, ಇವರು ಮಾಡಲಿಲ್ಲ. ಇಲ್ಲಿ ಇವರು ಇದನ್ನು ಅಡಾಪ್ಟ್ ಮಾಡಿಕೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, Schedule 9 ನಲ್ಲಿ above 50 percent reservation ಕ್ರಾಸ್ ಆಗುತ್ತಿತ್ತು. ಅಲ್ಲಿ Schedule 9 ಸೇರಿಸಬೇಕಾಗಿತ್ತು. ಏತಕ್ಕೆ ಮಾಡಲಿಲ್ಲ ಎನ್ನುವುದನ್ನು ಶ್ರೀಯುತ ಎನ್. ರವಿಕುಮಾರ್‌ರವರು ಹೇಳಬೇಕು. ನೀವು ಏತಕ್ಕೆ ಮಾಡಲಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ನಾರಾಯಣ ಸ್ವಾಮಿ(ವಿರೋಧ ಪಕ್ಷದ ನಾಯಕರು):-** ನೀವು ಚುನಾವಣಾ ದೃಷ್ಟಿಯಿಂದ ಮಾಡಿದ್ದೀರಿ. ಇದು ಚುನಾವಣೆ ಗಿಮಿಕ್ಕು ಆಗಿದೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ,

**ವೈಸ್ ಛೇರ್ಮನ್:-** ಶ್ರೀಮಾನ್ ಎಂ.ಬಿ. ಪಾಟೀಲ್ ರವರೆ, ಕುಳಿತುಕೊಳ್ಳಿ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, 17% ಮೀಸಲಾತಿಯನ್ನು ನಾವು ಮಾಡಿದ್ದೇವೆ.

**ಶ್ರೀ ಛಲವಾದಿ ನಾರಾಯಣ ಸ್ವಾಮಿ:-** 17% ಮೀಸಲಾತಿಯನ್ನು ನೀವು ಮಾಡಿದ್ದಲ್ಲ, ನಾವು ಮಾಡಿದ್ದೇವೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, I have a Point of Order.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ನಾಗರಾಜು ಅವರದ್ದು ಏನು ಪಾಯಿಂಟ್ ಆಫ್ ಆರ್ಡರ್ ಎಂದು ಓದಿ ಹೇಳಲಿಕ್ಕೆ ಹೇಳಿ.

**ವೈಸ್ ಛೇರ್ಮನ್:-** ಸ್ವಲ್ಪ ಎಲ್ಲರೂ ಸಿರಿಯಸ್ ಆಗಿ ಇರಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನನ್ನದು ಬಹಳ ಮುಖ್ಯವಾದ ಎರಡು ವಿಷಯಗಳಿವೆ ಏನೆಂದರೆ,

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ರವಿಕುಮಾರ್‌ರವರು ಮಾತನಾಡುತ್ತಾ ಅದರ ಬಗ್ಗೆ ಹೇಳುತ್ತಿದ್ದರು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ನಾಗರಾಜು ಅವರದ್ದು ಏನು ಪಾಯಿಂಟ್ ಆಫ್ ಆರ್ಡರ್ ಎಂದು ಓದಿ ಹೇಳಲಿಕ್ಕೆ ಹೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್ ಅನ್ನು ಓದುತ್ತೇನೆ.

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀಯುತ ನಾಗರಾಜ್ ರವರೇ, ತಾವು ಸ್ವಲ್ಪ ಸಿರಿಯಸ್ ಆಗಿ ಇರಬೇಕು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, I have raised an objection in this matter. ನನಗೆ ಮಾತನಾಡಲಿಕ್ಕೆ ಸಮಯವನ್ನು ಕೊಡಬೇಕು.

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀಯುತ ನಾಗರಾಜು ರವರೆ, ಈ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದ್ದರೆ ಹೇಳಿ, ಇಲ್ಲದಿದ್ದರೆ ಸುಮ್ಮ-ಸುಮ್ಮನೆ ಈ ರೀತಿಯಲ್ಲಿ ಹೇಳುವುದು ಸರಿಯಾಗುವುದಿಲ್ಲ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಇದರ ಬಗ್ಗೆ ಓದಿ ಹೇಳುತ್ತೇನೆ. This is completely indiscipline. I have a Point of Order.

**ವೈಸ್ ಛೇರ್ಮನ್:-** ಶ್ರೀಯುತ ನಾಗರಾಜು ರವರೆ,

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಅವರು ಯಾವ ಒಂದು ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದಾರೆಂದರೆ 15%, 17% ಮೀಸಲಾತಿ ಮಾಡಿದ್ದೇವೆಂದು ಏನು ಅವರು ಹೇಳುತ್ತಿದ್ದಾರೆ, ಅದಕ್ಕೆ constitution amendment ಅನ್ನು ತಂದಿದ್ದಾರೆಯೇ? ಅದರ ಬಗ್ಗೆ ಹೇಳಲಿಕ್ಕೆ ಹೇಳಿ. ಅವರು ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಈ ರೀತಿಯಲ್ಲಿ ಇವರು ಸುಳ್ಳುಗಳನ್ನು ಹೇಳುತ್ತಿದ್ದಾರೆ. ಈ ರೀತಿಯಲ್ಲಿ ದುಂಡಾವರ್ತಿ ಮಾಡುತ್ತಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:-** ನೋಡಿ, ಈಗ ಕ್ಯಾಬಿನೆಟ್ ಮೀಟಿಂಗ್ ಇದೆಯಂತೆ. ಸಚಿವರುಗಳು ಅಲ್ಲಿಗೆ ಹೋಗಬೇಕಂತೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಹಾಗಾದರೆ, ಈ ಬಗ್ಗೆ ಮಾತನಾಡಲಿಕ್ಕೆ ನಾಳೆ ಅವಕಾಶವನ್ನು ಕೊಡಿ. ನಾಳೆ ಈ ಚರ್ಚೆಯನ್ನು ಮುಂದುವರಿಸಿ.

**ಶ್ರೀ ಆರ್.ಬಿ ತಿಮ್ಮಾಪೂರ:-** ಕ್ಯಾಬಿನೆಟ್ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗಲಿಕ್ಕೆ ಈಗ ಅವಕಾಶ ಮಾಡಿಕೊಡಿ.

**(ಗೊಂದಲ)**

**ವೈಸ್ ಛೇರ್ಮನ್:-** ಕ್ಯಾಬಿನೆಟ್ ಮೀಟಿಂಗ್ ಇರುವ ಕಾರಣ ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 10-00 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:20ನೇ ಆಗಸ್ಟ್ 2025ರ ಬುಧವಾರದಂದು ಬೆಳಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)**